KUMARAVARMA, LILAVATI, CHARITA

ANANDA RAY

A, 013172

M. Chidananda Murthy

RÁMAVARMA-LÍLÁVATHI CHARITRE

(SHAKESPEARE'S ROMEO AND JULIET.)

TRANSLATED INTO KANARESE

By

A. ANANDA RAV,

Advocate of the Honorable Chief Court of Mysore and a Municipal Commissioner in the City of Mysore.

MYSORE:

PRINTED AT THE BRANCH GOVERNMENT PRESS,

1889.

ಈ ಗ್ರಂಥವು

ಶ್ರೀಮನ್ಮಹಾರಾಜರವರ ಮಂತ್ರಾಲೋಚಕ ಸಭಿಕರಾಗಿದ್ದ

ಸ್ವರ್ಗಸ್ಥರಾದ,

ರಾಯಬಹದ್ದೂರ್ ಪೂರ್ಣ ಕೃಷ್ಣರಾವ್

ಎಂ. ಆರ್. ಏ. ಎಸ್. ಯವರ

ಜ್ಞಾಪಕಾರ್ಥವಾಗಿ

ಅವರ ಭಾವಮೈದುನನಾದ

ಗ್ರಂಥಕರ್ತನಿಂದ

ಬಹು ಕೃತಜ್ಞತಾ ಗೌರವ ವಿಶ್ವಾಸ ಪೂರ್ವಕವಾಗಿ

ಅರ್ಪಿಸಲ್ಪಟ್ಟಿತು.

ಪೀಠಿಕೆ.

ಈಗ್ಗೆ ಆರು ಏಳು ವರ್ಷಂಗಳ ಕೆಳಗೆ ಈ ರಾಜಧಾನಿಯಲ್ಲಿ ಪುರಾತನ ನಾಟಕ ಗ್ರಂಥಗಳ ಭಾಷಾಂತರವು ಪ್ರಾಶಸ್ತ್ಯಕ್ಕೆ ಬಂದು, ನಾಟಕಶಾಲೆಗಳ ವಿಷಯದಲ್ಲಿಯೂ ಬಹು ಪ್ರೋತ್ಸಾಹಂಗಳುಂಟಾದವು. ಇದಕ್ಕೆ ನಮ್ಮ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಯಸ್. ಐ. ಯವರ ಔದಾರ್ಯ ಪ್ರೋತ್ಸಾಹಂಗಳೇ ಮುಖ್ಯ ಕಾರಣಂಗಳು. ಈ ವಿಷಯದಲ್ಲಿ ಅತ್ಯಂತ ವಿಧೇಯರಾದ ಅಸ್ಮದಾದಿ ಪ್ರಜೆಗಳು ಆ ಶ್ರೀಮನ್ಮಹಾಸ್ವಾಮಿಯವರ ವಿಷಯದಲ್ಲಿ ಕೃತಜ್ಞರಾಗಿರುವ ರೀತಿಯನ್ನು, ಸೂಚಿಸಲು ನನ್ನಿಂದ ಅಸಾಧ್ಯವಾಗಿರುವದು.

ಯೂರೋಪ್ ಖಂಡದಲ್ಲೆಲ್ಲಾ ಪ್ರಖ್ಯಾತನಾಗಿರುವ ಷೇಕ್ಸಪಿಯರ್ ಎಂಬ ಹೂಣ ಕವಿಶ್ರೇಷ್ಠನ ನಾಟಕಂಗಳಲ್ಲಿ ಕೆಲವನ್ನು ಕರ್ಣಾಟಕ ಭಾಷಾಂತರವನ್ನು ಮಾಡಿ ಆಡುವದಕ್ಕೆ ಉಪಯೋಗಿಸಿದರೆ, ಅದರಿಂದ ಜನಗಳಿಗೆ ಪರಮಾನಂದ ಉಂಟಾಗಬಹುದೆಂದು, ಆ ಕಾಲದಲ್ಲಿ ನನಗೆ ತೋರಿದ್ದರಿಂದ, "ರೋಮಿಯೊ ಅಂಡ್ ಜೂಲಿಯಟ್" ಎಂಬ ನಾಟಕಕ್ಕೆ ನಾನು ಕರ್ಣಾಟಕ ಭಾಷಾಂತರವನ್ನು ಮಾಡಿ, ಆಗ ಇಲ್ಲಿದ್ದ ಒಂದು ನಾಟಕಸಭೆಯವರಿಗೆ ಕೊಟ್ಟೆನು. ಆ ರಾಮವರ್ಮ ಲೀಲಾವತೀ ಚರಿತ್ರವೆಂಬ ನಾಟಕದ ಆಟವು, ನಾನು ಊಹಿಸಿದ್ದಕ್ಕಿಂತಲೂ ಅತ್ಯಧಿಕವಾಗಿ ಜನಗಳ ನೇತ್ರಶ್ರೋತ್ರಾನಂದ ಸಂದಾಯಕವಾದುದು. ಆ ನಾಟಕವನ್ನು ಆಡಿದಾಗಲೆಲ್ಲಾ ಆ ನಾಟಕಶಾಲೆಯು ಜನಗಳಿಂದ ನಿಬಿಡೀಕೃತವಾಗಿಯೇ ಇತ್ತು; ಈ ನಾಟಕ ಸಂಘದವರು ಕೆಲವು ಭಾಗಗಳನ್ನು ಬಿಟ್ಟು ತಮಗೆ ಅನುಕೂಲವಾದ ರೀತಿಯಲ್ಲಿ ಮಾಡಿಕೊಂಡಿದ್ದರು. ಈಗ್ಗೆ ಎರಡು ಮೂರು ತಿಂಗಳುಗಳ ಹಿಂದೆ, ನನ್ನ ಆಪ್ತಸ್ನೇಹಿತರುಗಳು ಕೆಲವರು ಈ ನಾಟಕವನ್ನು ಅಚ್ಚು ಹಾಕಿಸಬೇಕೆಂದು ನನಗೆ ಪ್ರೇರಿಸಿದರು. ಪೂರ್ವದಲ್ಲಿ ನಾನು ಭಾಷಾಂತರಗೊಳಿಸಿದ್ದ ಪುಸ್ತಕವು ನನಗೆ ದೊರೆಯದೇ ಹೋದ ಕಾರಣ, ಪುನಃ ಮೊದಲಿನಿಂದಲೇ ಭಾಷಾಂತರವನ್ನು ಮಾಡಬೇಕಾಯಿತು. ನನಗಿದ್ದ ವ್ಯವಧಾನ ಕಾಲದಲ್ಲಿ ಆ ಕೆಲಸವನ್ನು ನೆರವೇರಿಸಿ ಇರುವೆನು.

ಈ ಗ್ರಂಥಕರ್ತೃವಾದ ನನಗೆ, ವ್ಯಾಕರಣಾನುಸಾರ ಕರ್ಣಾಟಕ ಭಾಷಾ ಪಾಂಡಿತ್ಯವು ಸಾಲದಾಗಿ ಇದ್ದದ್ದರಿಂದ, ಅರಮನೆಯ ವಿದ್ವಾಂಸರಾದ ವೆ॥ ಜಯರಾಯಾಚಾರ್ಯರವರ ಸಹಾಯವನ್ನು ಅಪೇಕ್ಷಿಸಿದೆನು; ಇವರಾದರೊ ಈಗ ಕೇವಲ ಪ್ರಸಿದ್ಧನಾಗಿರುವ ಶ್ರೀಚಾಮರಾಜೇಂದ್ರ ಕರ್ಣಾಟಕ ನಾಟಕ ಸಭೆಗೆ ಕೆಲವು ನಾಟಕಗಳನ್ನು ಮಾಡಿ

ಕೊಟ್ಟಿರುವರು. ಇವರು ನನ್ನ ಕೋರಿಕೆಯನ್ನು ನೆರವೇರಿಸುವ ವಿಷಯದಲ್ಲಿ ತೋತ್ಸಾಹದೊಡನೆ ಸಹಾಯವನ್ನು ಮಾಡಿರುವರು.

ನನ್ನ ಭಾಷಾಂತರಾಭಿಪ್ರಾಯಕ್ಕೆ ಸ್ವಲ್ಪವೂ ನ್ಯೂನಾಧಿಕವಿಲ್ಲದಂತೆ, ಕಂದ ಪದಗಳನ್ನೂ ಮಾಡಿರುವದಲ್ಲದೆ, ನನ್ನ ಭಾಷಾಂತರವನ್ನೂ ತಿದ್ದಿ ಪರಿಷ್ಕರಿಸಿ ಇರು ಈ ನಾಟಕಕ್ಕೆ ಉಚಿತವಾಗಿಯೂ, ಸ್ಥಳ ರಸಾನುಗುಣಂಗಳಾಗಿಯೂ ಇರುವ ಮಟ್ಟುಗಳನ್ನು ನನಗೆ ಸ್ನೇಹಿತರಾಗಿರುವ ಇಬ್ಬರು ಅರಸುಗಳು, ಹೇಳಿ ಸಹಾಯ ಮಾಡಿರುತ್ತಾರೆ.

ಈ ಪುಸ್ತಕವು ಓದತಕ್ಕವರಿಗೂ, ಪಾಠಶಾಲಾ ವಿದ್ಯಾರ್ಥಿಗಳಿಗೂ ಉಪಯೋ ರ್ಹವಾಗುವಂತಲ್ಲದೆ, ನಾಟಕದವರಿಗೂ ಉಪಯೋಗವಾಗಿರುವಂತೆ, ಪುಟದ ಕೆ ಯಲ್ಲಿ ಹಾಡುಗಳನ್ನೂ ಸೇರಿಸಿ ಛಾಪಿಸಲ್ಪಟ್ಟಿರುವದು. ಎರಡು ಹೂವುಗಳ ಮಧ್ಯದ ರುವ ಮಾತುಗಳ ಅಭಿಪ್ರಾಯವು, ಗೀಟಿನ ಕೆಳಗೆ ಇರುವ ಹಾಡಿನಲ್ಲಿ ಗರ್ಭಿತವಾಗಿರು ನಾಟಕದವರು ಹೂವುಗಳ ಮಧ್ಯದಲ್ಲಿ ಇರುವ ಮಾತುಗಳನ್ನು ಬಿಟ್ಟು, ಅವಕ್ಕೆ ಲಾಗಿ ಅದೇ ಗುರುತುಳ್ಳ ಪುಟದ ಕೆಳಭಾಗದಲ್ಲಿರುವ, ಪದಗಳನ್ನು ಉಪಯೋಗಿಸ ತಕ್ಕದ್ದು. ಪದಗಳ ಪಾರ್ಶ್ವಭಾಗದಲ್ಲಿ, ಮಟ್ಟು ಇಂಥಾದ್ದೆಂದು ಬೇಗ ಸ್ಫೂ ಬರುವದಕ್ಕೋಸ್ಕರ, ರೂಢಿಯಾದ ಪೂರ್ವದ ಮಟ್ಟಿನ ಆದಿ ಭಾಗವು ಸೂಚಿಸಲ್ಪ

ಇಂಗ್ಲೀಷು ಜನಗಳಿಗೆ ಮಾತ್ರವೇ ಸಹಜಂಗಳಾದ ಅಭಿಪ್ರಾಯಂಗಳಿರುವ ಭಾ ಳನ್ನು, ಶ್ಲೇಷಾರ್ಥಸೂಚಕ ವಾಕ್ಯಭಾಗವನ್ನು ಮಾತ್ರವೆ ಬಿಟ್ಟು, ಉಳಿದ ಸಕಲಾ ಭಾಷಾಂತರಗೊಳಿಸಲ್ಪಟ್ಟಿರುತ್ತೆ. ಮತ್ತು ಇದರಲ್ಲಿ ಇಂಗ್ಲೀಷು ಜನಗಳಲ್ಲಿ ಮಾತ್ರ ಯಾಗಿರುವ ದೃಷ್ಟಾಂತಗಳಿಗೆ ಬದುಲಾಗಿ ನಮ್ಮ ಜನಗಳಲ್ಲಿ ರೂಢಿಯಾಗಿರುವ ದೃಷ ಗಳು ಬರೆಯಲ್ಪಟ್ಟಿರುವವು. ಸಂಸ್ಕೃತನಾಟಕ ನಿರ್ವಹಣ ಸಂಧಿಯನ್ನು "ಮಧ ಸಮಾಪಯೇತ್" ಎಂದಿರುವದ್ದರಿಂದ, ಶೋಕರಸ ಕಾಲದಲ್ಲಿಯೇ ನಿರ್ವಹಣವನ್ನು ಸಂಸ್ಕೃತ ನಾಟಕದಲ್ಲಿಯೂ ಮಾಡಿಯಿಲ್ಲ; ಆದಕಾರಣ "ಟ್ರ್ಯಾಜಡಿ" ಎಂಬ ನಾಟ ನಮ್ಮಲ್ಲಿಲ್ಲವೆಂದು ಹೇಳಬಹುದು. ಆದ್ದರಿಂದ ನಮ್ಮ ಪದ್ಧತಿಗೆ ಅನುಸಾರವಾಗಿ ನ ನಿರ್ವಹಣ ಸಂಧಿಯ ಅಂತ್ಯಭಾಗದಲ್ಲಿ, ಒಂದು ಸ್ಥಾನವನ್ನು ಹೊಸದಾಗಿ ಸೇರಿಸಿ ಇರು ಆ ಸ್ಥಾನದಲ್ಲಿ ಪೂಜ್ಯಪಾದ ಯೋಗೀಶ್ವರನ ಪ್ರಾರ್ಥನೆಗೆ ಪ್ರತ್ಯಕ್ಷನಾದ ಶ್ರೀ ವಿ ರಾಮವರ್ಮನ ಅನುರಾಗಕ್ಕೂ, ಲೀಲಾವತಿಯ ಪಾತಿವ್ರತ್ಯ, ಅಚಂಚಲಾನುರಾಗ ಮೆಚ್ಚಿ, ಸತ್ತಿದ್ದ ಆ ದಂಪತಿಗಳನ್ನು ಬದುಕಿಸಿ, ಅದೃಶ್ಯನಾಗುವನೆಂದು ಹೇಳಿರ ಮತ್ತು ನಾಟಕದ ಆದಿಭಾಗದಲ್ಲಿ ನಾಂದಿ ಸೂಚ್ಯಾರ್ಥ ಸೂಚನಾದಿಗಳನ್ನು, ಹೇ ಕ್ಕಾಗಿ ಪ್ರಸ್ತಾವನೆ ಎಂಬ ಒಂದು ಸ್ಥಾನವನ್ನು ಸೇರಿಸಿ ಇರುತ್ತೇನೆ.

ಈ ಎರಡು ಸ್ಥಾನಗಳೂ, ಇಂಗ್ಲೀಷು ನಾಟಕಕ್ಕೆ ವಿರೋಧವಿಲ್ಲದಂತೆ, ಆದ್ಯಂತ ಭಾಗಗಳಲ್ಲಿ ಸೇರಿಸಲ್ಪಟ್ಟವೆ. ಮುಖ್ಯವಾಗಿ, ಇಂಗ್ಲೀಷು ನಾಟಕದಲ್ಲಿರುವ ಅಭಿಪ್ರಾಯವನ್ನು ಬಿಡದೆಯೇ, ನಮ್ಮ ಜನಗಳು ಒಪ್ಪುವ ರೀತಿಯಲ್ಲಿ ಭಾಷಾಂತರವನ್ನು ಮಾಡಿರುತ್ತೇನೆ.

ಇದೇ ನನ್ನ ಮೊದಲನೆಯ ಪ್ರಯತ್ನವಾಗಿರುವ ಕಾರಣ, ಗುಣಜ್ಞರಾದ ವಾಚಕರೆಲ್ಲರೂ, ದಯವಿಟ್ಟು ಇದರಲ್ಲಿರಬಹುದಾದ ತಪ್ಪುಗಳನ್ನು ನನಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಇದಕ್ಕೆ ಷೇಕ್ಸಪಿಯರ್ ಕವಿಯು ಹಾಮ್ಲೆಟ್ ಎಂಬ ನಾಟಕದಲ್ಲಿ ಹೇಳಿರುವ ವಾಕ್ಯವನ್ನು ವಾಚಕರಿಗೆ ಜ್ಞಾಪಕಕ್ಕೆ ಕೊಡುವೆನು, ಏನೆಂದರೆ? “ಅವರ (ನನ್ನ) ಯೋಗ್ಯತೆಯು ಕಡಿಮೆಯಾದಷ್ಟೂ, ನಿಮ್ಮ ಔದಾರ್ಯವು ದಯಾಳುತ್ವವು ಅಧಿಕ ಶ್ಲಾಘ್ಯವಾಗುವದು”

ಇಂಗ್ಲಿಷ್‌ನಾಟಕವನ್ನೇ ಓದಿ ಅದರ ಭಾವವನ್ನು ತಿಳಿಯಲು ಅವಕಾಶವಿಲ್ಲದ ನನ್ನ ಸಹೋದರರಾದ, ಏತತ್ಕರ್ಣಾಟಕ ದೇಶೀಯರಾದ ಸ್ತ್ರೀಪುರುಷರಿಗೆ ಭಾಷಾಂತರವನ್ನು ಓದುವದ್ದರಿಂದ, ಆ ಕವಿವರ್ಯನು ಅತ್ಯಾಶ್ಚರ್ಯಕರ ಸಾಮರ್ಥ್ಯಶಾಲಿಯೆಂತಲು, ಅನ್ಯಾದೃಶ ಕವಿತಾಕಲನನಿಪುಣನೆಂತಲೂ, ಮತ್ತು ಯಾವ ಪಶ್ಚಿಮದೇಶದಿಂದ ನಾವು ಶಿಲ್ಪಶಾಸ್ತ್ರವನ್ನೂ ರಾಜ್ಯಭಾರ ಕ್ರಮವನ್ನೂ ಬಹಳವಾಗಿ ಕಲಿತು, ಪ್ರಯೋಜನವನ್ನು ಹೊಂದಿರುತ್ತೇವೆಯೊ, ಅಂಥಾ ದೇಶದಲ್ಲಿ ಈಗ್ಗೆ ಇನ್ನೂರು ವರುಷಗಳ ಹಿಂದೆ ಒಬ್ಬ ಅಭಿನವಕಾಳಿದಾಸನಿದ್ದನೆಂದು ತಿಳಿವಂತೆ, ಆದರೆ ಆಗ್ಗೆ ನನ್ನ ಶ್ರಮವೆಲ್ಲಾ ಸಫಲವಾಗುವದು.

ನನ್ನ ಸ್ನೇಹಿತರಾದ ರೆವರೆಂಡ್ ಮಿ॥ ಹೊಳ್ಡ್ಸವರತ್ ಎಮ್. ಎ., ಯವರು ದಯವಿಟ್ಟು, ನನಗೆ ತಿಳಿಹಿಸಿದ ರೀತಿಯಾಗಿ, ಷೇಕ್ಸಪಿಯರ್ ಮಹಾಕವಿಯ ಚರಿತ್ರೆಯನ್ನು ಸಂಕ್ಷೇಪವಾಗಿ ಬರೆದು ಇರುತ್ತೇನೆ.

ಶ್ರೀ॥ ವೆ॥ ಜಯರಾಯಾಚಾರ್ಯರವರು ನನ್ನ ಈ ಪ್ರಯತ್ನವನ್ನು ನೆರವೇರಿಸುವದರಲ್ಲಿ ತೆಗೆದುಕೊಂಡಿರುವ ಶ್ರಮಕ್ಕೂ ಮಾಡಿರುವ ಸಹಾಯಕ್ಕೂ ನಾನು ಎಷ್ಟು ಕೃತಜ್ಞನಾಗಿದ್ದರೂ ಸ್ವಲ್ಪವಾಗಿದೆ. ನನ್ನ ಪ್ರಯತ್ನವು ಸಫಲವೇ ಆದರೆ, ಇವರೂ ನನ್ನಂತೆಯೇ ಮುಖ್ಯಭಾಗಿಗಳಾಗಿ ಇರುತ್ತಾರೆ.

ನನ್ನ ಮಿತ್ರರಾದ ನನ್ನ ನಾಮಧೇಯವುಳ್ಳ ಮ॥ ರಾ॥ ಟಿ. ಆನಂದರಾಯರವರು, ಮ॥ ರಾ॥ ರಾಯಬಹದ್ದೂರ್ ದರಬಾರ್‌ಭಕ್ಷಿ ಎ. ನರಸಿಂಹೈಯಂಗಾರ್ರವರೂ ಸಹ, ಮಾಡಿರುವ ಸಹಾಯಗಳನ್ನು ನಾನು ಕೃತಜ್ಞತ್ವ ಪೂರ್ವಕವಾಗಿ ಸ್ಮರಿಸುತ್ತಿರುವೆನು.

ಮೈಸೂರು,
೧-೧೦-೯೯,

ಅ. ಆನಂದರಾವ್.

ಷೇಕ್ಸಪಿಯರ್ ಚರಿತ್ರಸಂಗ್ರಹ.

ಕೇವಲ ಹೀನಸ್ಥಿತಿಯಲ್ಲಿರುವವನೂಕೂಡ, ಸ್ವಸಾಮರ್ಥ್ಯದಿಂದ ಬಹಳ ಒಳ್ಳೇ ಪದವಿಗೆ ಬರುವವಕ್ಕೆ ಅವಕಾಶವು ತನ್ನ ಜನಗಳಿಗೆ ಇರುವದೇ ಒಂದು ಮುಖ್ಯವಾದ ಶ್ರೇಯ ಗುಣವೆಂದು ಇಂಗ್ಲೆಂಡ್ ದೇಶದವರು ಹೇಳುತ್ತಾರೆ.

ಈ ರೀತಿಯಾದ ಇವರ ಹೇಳಿಕೆಯು, ಸತ್ಯವಾದ್ದೆನ್ನುವದಕ್ಕೆ, ವಿಲಿಯಂ ಷೇಕ್ಸ ಪಿಯರ್ ಎನ್ನುವವನ ಚರಿತ್ರೆಗಿಂತಲೂ, ಪ್ರಸಿದ್ಧವಾದ ಉದಾಹರಣೆಯು, ಇನ್ಯಾವದೂ ಇಲ್ಲವೆಂತಲೇ ಹೇಳಬೇಕು. "ಮಿಡಲ್‌ಕ್ಲಾಸ್" ಎನ್ನುವ ೨ನೇ ತರಗತಿಯ ಜನಗಳಲ್ಲಿ ಸೇರಿದ ಒಬ್ಬ ಹುಡಗನಾದ ಈತನು ಅಪ್ರಸಿದ್ಧವಾದ ಒಂದು ಹಳ್ಳಿಯಲ್ಲಿ ಹುಟ್ಟಿದ್ದರೂ, ಆ ರಾಜ್ಯದ ವಿದ್ವಾಂಸರಲ್ಲಿ ಪ್ರಥಮನೆಂದು ಎಲ್ಲರೂ ಒಪ್ಪುವ ಸ್ಥಿತಿಯನ್ನು ಹೊಂದಿದನು.

ಬಹು ಹೀನಸ್ಥಿತಿಯಿಂದಲೇ ವಿದ್ವಾಂಸತ್ವಸಿಂಹಾಸನವನ್ನೇರಿ, ಸಮಸ್ತ ಭೂಮಂಡಲ ದಲ್ಲಿಯೂ ಕವಿಶ್ರೇಷ್ಠನೆಂದು ಕೀರ್ತಿಯನ್ನು ಪಡೆದು ಇರುತ್ತಾನೆ.

ಕೇವಲ ಬಡವರಾಗಿರತಕ್ಕವರೂ ಕೂಡಾ, ಸುಲಭ ಕ್ರಯಕ್ಕೆ ತೆಗೆದುಕೊಳ್ಳ ಬಹುದಾದ ಈತನ ಗ್ರಂಥವು ಓದುವ ವರಿಗೆ, ಈತನ ಚರಿತ್ರೆಯು, ಕಷ್ಟಪಡತಕ್ಕ ವರಿಗೆ ಐಶ್ವರ್ಯವೂ, ಯಶಸ್ಸು ಕೈವಶವಾಗುವದೆಂದು ಪ್ರೋತ್ಸಾಹವನ್ನು, ಆ ಕವಿಯಲ್ಲಿ ಅಭಿಮಾನ, ಮರ್ಯಾದೆ, ಆಶ್ಚರ್ಯಗಳನ್ನು ಹುಟ್ಟಿಸದೆ ಇರಲಾರದು.

ಕೈಚೀಲಗಳನ್ನು ಮಾಡಿ, ವಿಕ್ರಯಿಸುತಿದ್ದ ಜಾನ್ ಷೇಕ್ಸಪಿಯರೆಂಬ, ಒಬ್ಬ ನು, ವಾರ್‌ವಿಕ್‌ಷೈರಿನಲ್ಲಿ ಆವನ್ ನದೀತೀರದ ಸ್ಟ್ರಾಟ್‌ಫೋರ್ಡ್ ಎಂಬ ಮನೋಹರ ವಾದ ಗ್ರಾಮದಲ್ಲಿ ಇದ್ದನು. ಈತನು ತಕ್ಕ ಮಟ್ಟಿಗೆ ಸರಿಯಾದ ಸ್ಥಿತಿಯಲ್ಲಿಯೇ ಇದ್ದನೆನ್ನುವದಕ್ಕೆ ಅನೇಕ ದೃಷ್ಟಾಂತಗಳಿವೆ. ಇವನು, ಕ್ರಿಸ್ತಶಕ ೧೫೫೭ನೇ ಸಂವತ್ಸ ರದಲ್ಲಿ, ರಾಬರ್ಟ್ ಆರ್ಡನ್ ಎಂಬಾತನ, ದ್ವಿತೀಯ ಪುತ್ರಿಯಾದ, ಮೇರೀ, ಎಂಬವಳನ್ನು ಮದುವೆ ಮಾಡಿಕೊಂಡನು. ಈಕೆಯು, ನಗದು ಹಣವನ್ನು, ಭೂಸ್ಥಿತಿಯನ್ನೂ "ಸ್ನಿಟರ್ ಫೀಲ್ಡ್" ಎಂಬಲ್ಲಿ ಒಂದು ಮನೆಯನ್ನು ಮದುವೆಯ ಕಾಲದಲ್ಲಿ, ತನ್ನ ತಂದೆ ಯಿಂದ ಬಳಿವಳಿಯಾಗಿ ಹೊಂದಿದಳು. ೧೫೫೮ನೇ ಸೆಪ್ಟಂಬರಲ್ಲಿ, ಒಬ್ಬ ಪುತ್ರಿಯನ್ನು ಈ ದಂಪತಿಗಳು ಪಡೆದು ಆ ಮಗುವಿಗೆ "ಜೋನ್" ಎಂದು ಹೆಸರಿಟ್ಟರು. ೬೨ನೇ ಸಂವತ್ಸರದಲ್ಲಿ 'ಮಾರ್ಗರೆಟ್' ಎಂದು ಹೆಸರಿಟ್ಟ, ಒಂದು ಹೆಣ್ಣು ಮಗುವು ಹುಟ್ಟಿತು. ಈ ಇಬ್ಬರು ಮಕ್ಕಳೂ ಬಾಲ್ಯದಲ್ಲಿಯೇ ತೀರಿಹೋದರು. ಈ ಮಕ್ಕಳು ಹೋದ ವ್ಯಸನ ಪರಿಹಾರಕ್ಕಾಗಿ, ಈ ದಂಪತಿಗಳಿಗೆ, ದೇವರು, ಇಂಗ್ಲೀಷ್ ಜನಗಳಲ್ಲೆಲ್ಲಾ ಕೇವಲ

ಪ್ರಸಿದ್ಧನಾಗಿಯೂ, ಯಶಸ್ವಿಯಾಗಿಯೂ ಆಗತಕ್ಕ ಒಬ್ಬ ಮಗನನ್ನು, ೧೫೬೪ನೇ ಸಂವತ್ಸರದಲ್ಲಿ, ದಯಪಾಲಿಸಿದನು. ವಿಲಿಯಂ ಷೇಕ್ಸ್‌ಪಿಯರ್ ಹುಟ್ಟಿದದಿನ ಖಂಡಿತ ವಾಗಿ ಗೊತ್ತಾಗುವದಿಲ್ಲ. ಆದರೆ, ಕೆಲವು ದೃಷ್ಟಾಂತಗಳಿಂದ ೧೫೬೪ನೇ ವರ್ಷದ ಎಪ್ರೈಲ್ ೨೬ರಲ್ಲಿ ಹುಟ್ಟಿದನೆಂದು ಹೇಳಬಹುದು.

ಈತನು ಹೆ೯ಲೀ ಸ್ಟ್ರೀಟ್, ಎಂಬ ಬೀದಿಯಲ್ಲಿರುವ ಸಾಧಾರಣವಾದ ಮನೆಯಲ್ಲಿ ಹುಟ್ಟಿದನು. ಈ ಮನೆಯನ್ನು ನೋಡುವದಕ್ಕಾಗಿ ಅನೇಕ ವಿದ್ವಾಂಸರು, ಪ್ರಸಿದ್ಧ ಪುರುಷರುಗಳು, ಸಮಸ್ತ ದೇಶಗಳಿಂದಲೂ ಈಗಲೂ ಬರುತ್ತಾರೆ. ಪೂರ್ವದಲ್ಲಿ ಬಂದ ವರೆಲ್ಲರೂ, ಗೋಡೆಯಮೇಲೆ ಪೆ೯ಸಲ್‌ನಿಂದ ತಮ್ಮ ಹೆಸರುಗಳನ್ನು ಬರೆಯುತ್ತಿದ್ದರು. ಈಗ ಅದಕ್ಕಾಗಿಯೇ ಒಂದು ಪುಸ್ತಕವನ್ನು ಇಟ್ಟು ಇದಾರೆ.

ವಿಲಿಯಂ ಷೇಕ್ಸ್‌ಪಿಯರ್ ಹುಟ್ಟಿದ ಎರಡು ತಿಂಗಳೊಳಗಾಗಿಯೆ, ಮಹಾವ್ಯಾಧಿ ಪ್ರಾರಂಭವಾಗಿ, ಆ ಊರಿನಲ್ಲಿದ್ದ ೧೪೦೦ ಜನಗಳಲ್ಲಿ, ೬ರಲ್ಲಿ ೧ ಭಾಗಕ್ಕಿಂತಲೂ ಹೆಚ್ಚಾಗಿ ಮೃತಪಟ್ಟರು. ಈ ಮಗುವಿನ ಭವಿಷ್ಯದ್ಯಶಸ್ಸು, ಆಗ ಜನಗಳಿಗೆ ಗೊತ್ತಿರುವ ಪಕ್ಷಕ್ಕೆ, ಈ ಮಗುವನ್ನು ಸಂರಕ್ಷಿಸಬೇಕೆಂದು, ಅದರ ಮಾತಾ ಪಿತೃಗಳು ಹ್ಯಾಗೆ ಸದಾ, ದೇವರನ್ನು ಪ್ರಾರ್ಥಿಸುತ್ತಿದ್ದರೊ, ಹಾಗೆಯೇ ಸಮಸ್ತರೂ ಪ್ರಾರ್ಥಿಸುತ್ತಿದ್ದರೆನ್ನುವದರಲ್ಲಿ ಸಂದೇಹ ವೇನು? ಈ ಮಗುವನ್ನು ದೇವರು ಆಗ ಸಂರಕ್ಷಿಸಿ, ಯಶಸ್ಸನ್ನು ಕೊಟ್ಟನು. ಈ ಹುಡು ಗನ ಎರಡನೆಯ ವರ್ಷದಲ್ಲಿ ಒಬ್ಬ ತಮ್ಮನು ಹುಟ್ಟಿದನು. ತರುವಾಯ ಒಬ್ಬ ತಂಗಿಯು ಜನಿಸಿದಳು. ಇವರೆಲ್ಲರೂ ಆಡುವದಕ್ಕೆ, ವಿಸ್ತಾರವಾಗಿಯು ಮನೋಹರವಾಗಿಯು ಒಂ ದು ಸ್ಥಳವು ಇತ್ತು. ಈ ಬಾಲ್ಯದಲ್ಲಿಯೇ ಷೇಕ್ಸ್‌ಪಿಯರ್ ನಾಟಕದಲ್ಲಿ ಅಭಿರುಚಿ ಹೊಂದಿ ದನೆಂದು ಹೇಳಬಹುದು. ಏಕೆಂದರೆ, ನಾಟಕದ ಕಂಪನೀಯವರು "ಸ್ಟ್ರಾಟಫರ್ಡಿಗೆ" ಬಂದು ಆಡಿದಾಗ್ಯೆ ಈ ಹುಡುಗನು ತನ್ನ ಮಾತಾ ಪಿತೃಗಳೊಡನೆ ಕೆಲವಾವರ್ತಿಯು, ಅ ವನ ಚಿಕ್ಕಮ್ಮನಾದ "ಜೋ೯" ಎಂಬವಳ ಜೊತೆಯಲ್ಲಿಯು ಹೋಗಿ ಆಟಗಳನ್ನು ನೊಡಿ, ತದಾರಭ್ಯ, ನಾಟಕದಲ್ಲಿ ಅಭಿರುಚಿಯನ್ನು ಹೊಂದಿರಬಹುದೆಂದು ಯೋಚಿಸಬಹುದು.

ಏತನ್ಮಧ್ಯೇ ಇವನ ತಂದೆಯಾದ ಜಾ೯ ಷೇಕ್ಸ್‌ಪಿಯರ್ ಕ್ರಮೇಣ ಧನಿಕನಾಗು ತ್ತಲು, ತಮ್ಮ ಸ್ಥಳದಲ್ಲಿ ಬಹುಮಾನಿತನಾಗಿಯೂ, ಇದ್ದನೆಂದು ಗೊತ್ತಾಗುತ್ತೆ.

ಆರ್ವನಲ್ಲಿ "ಫ್ರೀ ಗ್ರಾಮರ್ ಸ್ಕೂಲ್" ಎಂಬ ಧರ್ಮದ ಪಾಠಶಾಲೆಯು ಇತ್ತು. ಇಲ್ಲಿ ಮೊಧಲು ವಿದ್ಯಾಭ್ಯಾಸಕ್ಕೆ ಏಳು ವರುಷ ವಯಸ್ಸಿನ, ವಿಲಯಂ ಷೇಕ್ಸ್‌ಪಿಯರ್ ಹೋಗಿ, ವಿದ್ಯವನ್ನು ಕಲಿತನು. ಈ ಹುಡಗನ ಚಟುವಟಿಕೆಯು, ವರ್ಚಸ್ಸು ಚಿಕ್ಕ ವಯಸ್ಸಿನಲ್ಲಿ ಯೇ ಕಾಣಬರುತ್ತಿರಬಹುದು. ತಂದೆಯು ಇಂಥಾ ತನ್ನ ಪುತ್ರನಿಗೆ, ಸಾಧ್ಯವಾದ ಮಟ್ಟಿಗೂ ಚೆನ್ನಾಗಿ ವಿದ್ಯವನ್ನು ಹೇಳಿಸಬೇಕೆಂದು ತಾತ್ಪರ್ಯ ಪಟ್ಟದ್ದು ಏನಾಶ್ಚರ್ಯ?

ಜಾರ್ಜ್ ಷೇಕ್ಸ್‌ಪಿಯರ್‌ಗೆ ಬರಿಯುವದಕ್ಕೆ ಬರುತ್ತಿರಲಿಲ್ಲ. ತನ್ನ ರುಜುವಿಗೆ ಗುರುತು ಹಾಕುತ್ತಿದ್ದನು.

ಈ ವಿದ್ಯಾಶಾಲೆಯು, ಅದರ ಪಕ್ಕದಲ್ಲಿಯೆ ಇದ್ದ ಒಂದು ಗುಡಿಯು, ಪೂರ್ವದಲ್ಲಿ ಹ್ಯಾಗೆ ಇತ್ತೋ ಅದೇಸ್ಥಿತಿಯಲ್ಲಿ ಈಗ್ಗೆ ಕೆಲವು ವರ್ಷಗಳ ವರಿಗೆ ಇದ್ದವು. ಈ ಸ್ಕೂಲಿನಲ್ಲಿ ವಿಲಿಯಂ ಸುಮಾರು ಏಳು—ಎಂಟು ವರುಷಗಳು, ಓದಿ ಲಾಟಿನ್, ಗ್ರೀಕ್ ಎಂಬ ಶ್ರೇಷ್ಠವಾದ ಪುರಾತನ ಭಾಷೆಗಳಲ್ಲಿ ಸಾಧಾರಣವಾದ ಪರಿಚಯವನ್ನು ಹೊಂದಿದಂತೆ ಗೊತ್ತಾಗುತ್ತೆ.

ಈ ಸ್ಕೂಲಿಗೆ ಇದಿರಾಗಿಯೆ, ಸರ್ ಹ್ಯೂಕ್ಲಾಫ್ಟರ್ಟ ಎನ್ನುವವರ ದೊಡ್ಡ ಮನೆಯು ಒಂದು ಇತ್ತು. ಈ ಮನೆಯನ್ನು ಸಂಪಾದಿಸಬೇಕೆಂಬ ಆಸೆಯು, ವಿಲಿಯಂಗೆ ಬಾಲ್ಯಾರಭ್ಯ, ಇತ್ತು. ಈ ಆಸೆಯು ವ್ಯರ್ಥವಾಗಲಿಲ್ಲ. ಸ್ವಸಾಮರ್ಥ್ಯದಿಂದಲೂ, ಜಾಣತನದಿಂದಲೂ, ವಿವೇಕದಿಂದಲೂ, ತಾನು ಬಾಲ್ಯಾರಭ್ಯ ಪಡಿಯಬೇಕೆಂದು ಅಪೇಕ್ಷಿಸಿದ್ದ ಮನೆಯನ್ನು ಸಂಪಾದಿಸಿ, ಅದರಲ್ಲಿಯೇ ಮೃತಿಪಟ್ಟನು. ಪಾಠಶಾಲೆಯಲ್ಲಿ ಕಲಿತ ವಿದ್ಯೆಯು ಈತನ ಪ್ರಾಢಿಮೆಗೆ ತುಂಬಾ ಸಾಧಕವಾಗಲಿಲ್ಲ.

ನೋಡಿದ ಕೂಡಲೇ ಇತರರ ಗುಣದುರ್ಗುಣಗಳನ್ನು ತಿಳಿದುಕೊಳ್ಳತಕ್ಕ ಅನ್ಯಾದೃ ಪ್ರತಿಭೆಯು, ವಿಚಿತ್ರವಾದ ಜ್ಞಾಪಕಶಕ್ತಿಯು, ಇತರ ಕವಿಯಿಂದಾಗಲಿ, ಶಾಸ್ತ್ರಜ್ಞರಿಂದಾಗಲಿ, ಚರಿತ್ರಕರ್ತರಿಂದಲೇ ಆಗಲಿ, ತೋರ್ಪಡಿಸಲ್ಪಡದೆ ಇರುವ, ಈತನ ಜನಾನುರಾಗವು, ಬಹಳವಾಗಿತ್ತು. ಈತನ ಮನಸ್ಸು " ಫೋಟೋಗ್ರಾಫ್ " ಎಂಬ ಚಿತ್ರಪಠ ತೆಗೆಯುವದರಲ್ಲಿ ಉಪಯೋಗಿಸುವ " ಕ್ಯಾಮೆರಾ " ಕ್ಕೆ ಸದೃಶವಾಗಿತ್ತು. ಈ ಸಣ್ಣ ಪೆಟ್ಟಿಗೆಯಲ್ಲಿರುವ ಕನ್ನಡಿಯ ಮೇಲೆ ಅದರ ಇದಿರಿನಲ್ಲಿರುವ ಸಕಲ ವಸ್ತುಗಳ ಆಕಾರವು ಹ್ಯಾಗೆ ನಿಂತುಹೋಗಿ, ಬೇಕಾದಾಗ್ಗೆ ಆ ಬಿಂಬಗಳನ್ನು ವೃದ್ಧಿಪಡಿಸಿ, ಮನುಷ್ಯನ ಆಕೃತಿಯನ್ನು ತೋರ್ಪಡಿಸುವಂತೆ, ಈತನ ಮನಸ್ಸಿನಲ್ಲಿ ನೋಡಿದ ವಸ್ತು ಮತ್ತು ಜನಗಳ ಗುಣ, ದುರ್ಗುಣಸ್ವಭಾವ ಮುಂತಾದ್ದು ನಿಂತುಹೋಗಿ, ಬೇಕಾದಾಗ್ಗೆ ಉಪಯೋಗಿಸಿಕೊಂಡು ಅವುಗಳ ಚಿತ್ರವನ್ನು ವೃದ್ಧಿಪಡಿಸಿ ತನ್ನ ಬರೆವಣಿಗೆಯಿಂದ ವ್ಯಕ್ತಪಡಿಸುತ್ತಿದ್ದನು. ಸ್ಕೂಲಿಗೆ ಉಲ್ಲಾಸದಿಂದಲೇ ಹೋಗಿ, ಎಲ್ಲವನ್ನೂ ಬಹಳ ಅಪೇಕ್ಷೆಯಿಂದ ಕಲಿತುಕೊಂಡದ್ದಲ್ಲದೆ ಆಟಗಳಲ್ಲಿಯೂ, ಮೊದಲನೆಯವನೇ ಆಗಿದ್ದನೆಂದು ಊಹಿಸಬೇಕು.

ಷೇಕ್ಸ್‌ಪಿಯರ್ ಬಾಲ್ಯದಲ್ಲಿಯೇ ನಾಟಕಗಳನ್ನು ನೋಡುತ್ತಿದ್ದನೆಂದು ಮೊದಲೇ ಹೇಳಿದ್ದೆವಷ್ಟೆ. ಇವೆ ಅಲ್ಲಾ, ಈತನ ಊರಿಗೆ ೧೦ ಮೈಲಿಗಳಲ್ಲಿ " ಅರಲ್ ಆಫ್ ಲೀಷ್ಟರ್ " ಎಂಬ ದೊಡ್ಡ ಮನುಷ್ಯನು ವಾಸ ಮಾಡುತ್ತಿದ್ದನು. ಈ ದೊಡ್ಡ ಮನುಷ್ಯನು, ಆಗ ರಾಣಿಯವರಾಗಿದ್ದ " ಎಲಿಸಬತ್ " ವಿಶ್ವಾಸಾನುರಾಗಗಳನ್ನು ಹೊಂದಿದ್ದಾಗಿ

ನಾರ್ತ ಇದೆ. ಇವನು ಕೇವಲ ರಾಜ ಶ್ರೀಯಿಂದ "ಕೆನಿಲ್‌ವರ್ತ್" ಎಲ್ಲಿ ವಾಸಿಸುತ್ತಿದ್ದನು. ಈ ದೊಡ್ಡ ಮನುಷ್ಯರನ್ನು ನೋಡುವದಕ್ಕಾಗಿ "ಸ್ಟ್ರಾಟ್‌ಫರ್ಡ್" ಬೀದಿಗಳ ಮಾರ್ಗವಾಗಿ ಹೋಗುತ್ತಿದ್ದ, ಸರದಾರರುಗಳು, ಅವರಪತ್ನಿಯರು, ಪುತ್ರಿಯರು, ಸೈನಿಕರು, ವಿದ್ವಾಂಸರು ಮೊದಲಾದವರೂ, ಈ ಚುಟಿಯಾದ, ಹುಡುಗ ಷೇಕ್ಸ್‌ಪಿಯರ್‌ನ, ದೃಷ್ಟಿಗೆಗೆ ಬೀಳದೆ ಇರಲಾರರು. ಹುಡುಗನಾದರೋ, ಸಮಸ್ತವನ್ನು ನೋಡಿದಕೂಡಲೆ ಗ್ರಹಣ ಮಾಡುವಶಕ್ತಿಯು, ಪದಾರ್ಥ ಅಥವ ಜನಗಳಲ್ಲಿರುವ ವಿಶೇಷಗಳನ್ನೂ ತಿಳಿದುಕೊಳ್ಳುವ ಶಕ್ತಿಯು, ತಡೆಯುವದಕ್ಕೆ ಅಸಾಧ್ಯವಾದ, ಹಾಸ್ಯಭಾವವು ಉಳ್ಳವನಾಗಿಯು, ನೇತ್ರಾನಂದಕರನಾಗಿಯು, ಉತ್ಸವಾದಿಗಳನ್ನು ನೋಡುವದರಲ್ಲಿ ಆಸಕ್ತಿ ಉಳ್ಳವನಾಗಿಯೂ ಇದ್ದನು ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಎಲ್ಲಾ ಆಟಗಳಲ್ಲಿ ನಿಸ್ಸೀಮನಾಗಿಯು, ಅತಿ ಚುರಕಾಗಿ ಇದ್ದ ಈ ಹುಡುಗನು ವಿಶೇಷಗಳೇನಾದರು ನಡೆದರೆ, ಅಂಥಾ ಸ್ಥಳಕ್ಕೆ ೧೦-೧೨ ಮೈಲುದೂರ ಹೋಗುತ್ತಿದ್ದನೆನ್ನುವದು ಆಶ್ಚರ್ಯವೇನೂ ಅಲ್ಲಾ. ಇವನ ತಂದೆಯು ಇವನಲ್ಲಿ ಕೇವಲವಾಗಿ ಪ್ರೀತಿಮಾಡುತ್ತಿದ್ದದ್ದರಿಂದ, ಇವನ ಬುದ್ಧಿಶಾಲಿಯಾದ ಮಗನನ್ನು ಸಂದರ್ಭಗಳು ದೊರೆಕಿದಾಗೆಲ್ಲಾ, ವಿಶೇಷೋತ್ಸವಾದಿಗಳನ್ನು ನೋಡುವದಕ್ಕೆ ಕರೆದುಕೊಂಡು ಹೋಗದೆ ಇರುತ್ತಿರಲಿಲ್ಲ. ಸುಂದರಾಕಾರವುಳ್ಳ, ಷೇಕ್ಸ್‌ಪಿಯರಿನ ಎಂಟನೇ ವರುಷದಲ್ಲಿ ರಾಣಿ "ಯೆಲಿಸಬತ್" "ಚಾರ್ಲಿಕೋಟ್" ಎಂಬಸ್ಥಳದಲ್ಲಿ "ಸರ್ ಥಾಮಸ್ ಲ್ಯೂಸೀ" ಎಂಬಾತನಿಗೆ ಭೇಟಿ ಕೊಟ್ಟಾಗ್ಗೆ, ಷೇಕ್ಸ ಪಿಯರ್ ತಂದೆ ಹೋಗಿದ್ದನು. ವಾರ್‌ವಿಕ್ಕಿಗೆ ರಾಣಿಯವರ ಸವಾರಿ ದಯಮಾಡಿದ್ದಾಗ್ಗೆ, ಅವರ ಆಗಮನಕ್ಕಾಗಿ, ರಾಜಾರ್ಹವಾದ ಸನ್ನಾಹಗಳನ್ನು ಮಾಡಿದ್ದರು. ಇದು ಸುತ್ತುಲೂ ಇದ್ದ ಸ್ಥಳಗಳಲ್ಲಿ ಬಹಳ ಉತ್ಸಾಹವನ್ನು ಉಂಟುಮಾಡಿತ್ತೆನ್ನುವದಕ್ಕೆ ಸಂದೇಹವಿಲ್ಲ. ಷೇಕ್ಸ್‌ಪಿಯರ್ ಇರತಕ್ಕ ಊರಿಗೆ ೨ ಮೈಲಿಗಳ ದೂರದಲ್ಲಿರುವ "ಈಚಿಂಗ್‌ಟನ್" ಎಂಬ ಸ್ಥಳದಲ್ಲಿ ಮಿ|| ಯಡ್ವರ್ಡ್‌ಫಿಷರ್ ಮನೆಗೆ ರಾಣಿಯವರ ಸವಾರಿ ದಯಮಾಡಿದಾಗ್ಗೆ, ಮಾರ್ಗದ ಉಭಯ ಪಾರ್ಶ್ವಗಳಲ್ಲಿಯು, ಸಮಿಪ ಗ್ರಾಮದಲ್ಲಿರತಕ್ಕವರು, ಮಹಾರಾಜ್ಞಿಯವರನ್ನು ಅವರ ಮರ್ಯ್ಯಾದಾರ್ಥವಾಗಿ ಸಿದ್ಧಪಡಿಸಿದ್ದ, ಉತ್ತಮವಾದ ಸನ್ನಾಹಗಳನ್ನೂ ನೋಡುವದಕ್ಕೆ ಬಹಳ ಜನಗಳು ಸೇರಿದ್ದರು ಈ ಉತ್ಸವವನ್ನು ನೋಡುವದಕ್ಕಾಗಿ, ಸ್ಕೂಲಿನಲ್ಲಿ ಓದುತ್ತಿರುವ ದೊಡ್ಡಹುಡುಗರು ಹೋಗದೆ ಇರುತ್ತಿದ್ದರೆ? ಷೇಕ್ಸ್‌ಪಿಯರ್ ಹೋಗಿ ಆ ಸಂಭ್ರಮದ ನಡವಳಿಕೆಗಳನ್ನು ತಿಳಿದುಕೊಂಡು ಬಂದಿರಬಹುದು. ೧೫೭೫ನೇ ಇಸ್ವಿಯಲ್ಲಿ ಅದೇ ರಾಣಿಯವರು, ಕೆನಿಲ್‌ವರ್ತಗೆ ಹೋಗಿದ್ದಾಗಲೂ ಷೇಕ್ಸ್‌ಪಿಯರ್ ಹೋಗಿ ಅಲ್ಲಿ ನಡೆದ ವಿಶೇಷ ಸಂಭ್ರಮಗಳನ್ನು ನೋಡದೆಯೋ ಮನೇಯಲ್ಲಿಯೇ ಇದ್ದನೆಂದು ಊಹಿಸುವದಕ್ಕೆ ಆಗುವದಿಲ್ಲ.

ಜಾನ್ ಷೇಕ್ಸ್‌ಪಿಯರ್ ಹೆನ್‌ಲೀ ಬೀದಿಯಲ್ಲಿ ಎರಡು ಮನೆಗಳನ್ನು ಖರೀದೀಗೆ ತೆಗೆದಕೊಂಡಾರಭ್ಯ, ಇವರ ಅದೃಷ್ಟವು ಕಡಮೆ ಯಾಗುತ್ತಾ ಬಂದಿದ್ದದ್ದಾಗಿ ತಿಳಿದುಬರುತ್ತೆ

ಈತನನ್ನು ಅಲ್‌ಡರ್‌ಮೆನ್ ಎಂಬ ಸಂಬಳವಿಲ್ಲದ ಮರ್ಯಾದಾಕಾರ್ಯದಲ್ಲಿ ನೇಮಿಸಿದಾರಭ್ಯ ಇದಕ್ಕಾಗಿ ಅವನು ಇಟ್ಟುಕೊಳ್ಳಬೇಕಾದ, ಪದವಿಯು ದ್ರವ್ಯ ಸಾಧ್ಯವಾಗಿದ್ದದ್ದರಿಂದ ಬಹಳ ಬಡತನಕ್ಕೆ ಬಂದನು. ತನ್ನ ಕೆಲಸಗಳನ್ನು ಸರಿಯಾಗಿ ನೋಡಿಕೊಳ್ಳದೆ ಈತನಿಗೆ ೧೫೭೭ನೇ ಇಸವಿಯಲ್ಲಿ ಜುಲ್ಮಾನೆ ಆದಂತೆ ತಿಳಿಯುತ್ತೆ. ಇದೇರೀತಿಯಲ್ಲಿ ಕ್ರಮೇಣ ಹೀನಸ್ಥಿತಿಗೆ ಬಂದು, ಕೊನೆಯಲ್ಲಿ ತನ್ನ ಹೆಂಡತಿಗೆ ಸೇರಿದ ಕೆಲವು ಆಸ್ತಿಗಳನ್ನು ಮಾರಿದ್ದು ಅಲ್ಲದೆ, ಕೆಲವು ಋಣವನ್ನೂ ಮಾಡಿದನು. ಈರೀತಿಯಲ್ಲಿ ಋಣದಿಂದ ಭಾಧಿತನಾಗಿದ್ದ ತಂದೆಗೆ ಆಗ್ಯೆ ೧೬ ವರುಷಗಳ ವಯಸ್ಕನಾದ, ಷೇಕ್ಸಪಿಯರ್‌ಗೆ, ಈ ಸಂಸಾರವನ್ನು ಕಾಪಾಡುವದಕ್ಕಾಗಿ ಏನಾದರೂ ಮಾಡಪೇಕೆಂಬ ಅವಶ್ಯಕತೆ ಉಂಟಾಯಿತು. ಸಹಜವಾದ ಸ್ಥಿತಿಯಲ್ಲಿ ಇರುವನಾದರೆ ಈ ವಯುಸ್ಸಿನಲ್ಲಿ ಸ್ಕೂಲನ್ನು ಬಿಟ್ಟು "ಯೂನಿವರ್ಸಿಟಿ" ಎಂಬ ವಿದ್ವತ್ಸಭೆಯನ್ನು ಸೇರುತ್ತಿದ್ದನು. ಆದರೆ ಬಡವನಾದ ವರ್ತಕನ ಮಗನಿಗೆ ಈ ಆಸೆಯು ಯಾಕೆ? ಹೀಗೆ "ಯೂನಿವರ್ಸಿಟೀ" ಗೆ ಹೋಗಲು ವಿಲಿಯಂ ಅಪೇಕ್ಷಿಸಿದ್ದಾಗಿಯೂ ತಿಳಿಯುವದಿಲ್ಲ.

ಆ ಗ್ರಾಮದಲ್ಲಿ ತನಗೆ ದೊರಕಬಹುದಾದಂಥಾ ಕೆಲಸಗಳನ್ನು ಮಾಡಿದನು. ಸ್ಕೂಲಮಾಸ್ಟರ್ ಆಗಿದ್ದನೆಂದು ವಾರ್ತೆಯಿದೆ.

ಮಲೋನ್ ಎಂಬಾತನು ಷೇಕ್ಸಪಿಯರ್ ಒಬ್ಬ ಲಾಯರಿಗೆ ಗುಮಾಸ್ತನಾಗಿ ಇದ್ದನೆಂದು ಹೇಳುತ್ತಾನೆ. ಹೀಗೆ ಊಹಿಸುವದಕ್ಕೆ, ಈ ಷೇಕ್ಸಪಿಯರ್ ಮಾಡಿರುವ ಗ್ರಂಥಗಳಲ್ಲಿ, ಲಾಕ್ಕೆ ಸಂಬಂಧಪಟ್ಟ ಅನೇಕ ಮಾತುಗಳು ಇರುವದೇ ಕಾರಣವಾಗಿ ಅವನು ಹೇಳುತ್ತಾನೆ. ಇಂಥಾ ಕಾರಣದಿಂದ ಊಹಿಸುವ ಪಕ್ಷಕ್ಕೆ, ಈ ಷೇಕ್ಸಪಿಯರ್, ಸೋಲ್ಜರ್‌ಯಾನೆ ಸಿಪಾಯಿ, ನಾವಿಕ, ವೈದ್ಯ, ಪಾದ್ರಿ, ಅಲ್ಲದೇ ಇತರ ವಿಧವಾದ ಎಲ್ಲಾ ಕಾರ್ಯಗಳನ್ನೂ ಮಾಡಿದನೆಂತ ಹೇಳಬಹುದು; ಏಕೆಂದರೆ, ಇವನ ಗ್ರಂಥಗಳಲ್ಲಿ ಈ ಎಲ್ಲಾ ವಿಷಯುಗಳಲ್ಲಿಯೂ ತನಗೆ ವೈದುಷ್ಯವಿರುವಂತೆ ತೋರಿಸಿರುತ್ತಾನೆ.

ಯಾವ ಕೆಲಸವನ್ನೇ ಇವನು ಮಾಡಿರಲಿ, ಇದು ಚನ್ನಾಗಿಯೆ ಮಾಡಿದನು ಎನ್ನುವವಿಷಯದಲ್ಲಿ ನಿಸ್ಸಂದೇಹವೇ ಸರಿ. ಆರೋಗ್ಯಶಾಲಿಯಾಗಿಯೂ, ಸದಾ ಸಂತೋಷಚಿತ್ತನಾಗಿಯೂ, ಚಟುವಟಿಕೆ ಉಳ್ಳವನಾಗಿಯೂ, ಇದ್ದ ಇವನು ಯಾವಕೆಲಸವನ್ನೂ ಅಶ್ರಾರ್ಥವಾಗಿ ಮಾಡಿರಲಾರನು. ಈ ಕೆಲಸಗಳ ಮಧ್ಯೆ ಯೌವನಸ್ಥರಿಗೆ ಸಹಜವಾದ, ಅನುರಾಗವನ್ನು ಮರೆಯಲಿಲ್ಲ. "ಸ್ಟ್ರಾಟಫರ್ಡ್" ಸಮೀಪದಲ್ಲಿ "ಷಾಟರಿ" ಎಂಬ ಸ್ಥಳದಲ್ಲಿ ಆನಿಹಾತ್ವೆ ಎಂಬಾಕಿಯು ಇದ್ದಳು. ಈ ಪುಣ್ಯವತಿಯು ಷೇಕ್ಸಪಿಯರ್‌ನ ಅನುರಾಗಕ್ಕೆ ಪಾತ್ರಳಾದಳು. ಈಕೆಗೆ ೨೬ ವಯುಸ್ಸು, ಆತನಿಗೆ ೧೮ ವಯುಸ್ಸು ಆಗಿದ್ದದ್ದರಿಂದ ವಯುಸ್ಸಿನ ತಾರತಮ್ಯವನ್ನು ಈ ದಂಪತಿಗಳು, ತಮ್ಮ ಸುಖಕ್ಕೆ ಬಾಧಕವನ್ನಾಗಿ ಎಣಿ

ಸಲಿಲ್ಲ. ಆಕೆಯು ಈತನಿಗೆ "ಲೀಲಾವತಿ" ಯಾಗಿದ್ದದ್ದರಿಂದ, ಇವಳಲ್ಲಿ ಅತ್ಯಂತಾನುರಾಗ ಉಳ್ಳವನಾಗಿದ್ದನು. ಈಕೆ ವಾಸಮಾಡುತ್ತಿದ್ದ ಮನೆಯು, ಈಗ ೨೦೦ ವರುಷಗಳು ಕಳೆದಾಗ್ಯು, ಇನ್ನೂ ಆದೇ ಸ್ಥಿತಿಯಲ್ಲಿ ಇರುತ್ತೆ.

ರಿಚರ್ಡ್ ಹಾತ್ವೆ ಎಂಬವನು ಈಕೆಯ ತಂದೆಯು ವ್ಯವಸಾಯಸ್ಥನಾಗಿ, ತಕ್ಕಮಟ್ಟಿಗೆ ಐಶ್ವರ್ಯವಂತನಾಗಿದ್ದನು. ಇವನು ಬರೆದು ಇಟ್ಟಿದ್ದ ಮರಣಶಾಸನದಲ್ಲಿ, ತನ್ನ ಜ್ಯೇಷ್ಠ ಪುತ್ರನು ಅವನ ತಂಗಿಯರ ಮತ್ತು ಸಹೋದರರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಬರೆದು ಇದ್ದರೀತಿಯಾಗಿ, ಆನಿಹಾತ್ವೆ ಎಂಬವಳು, ಷೇಕ್ಸಪೀಯರ ಮದುವೆ ಆಗುವದಕ್ಕಾಗಿ, "ವಿನ್‌ಸೆಸ್ಟರ್" ಬಿಷಪ್ ರವರಿಗೆ, ಈ ಮದುವೆಯಿಂದ ಏನಾದರೂ ಅವರಿಗೆ ನಷ್ಟವು ಸಂಭವಿಸುವ ಪಕ್ಷಕ್ಕೆ, ತಾನು ಆ ನಷ್ಟಕ್ಕೆ ಗುರಿಯಾಗಿತ್ತೇನೆಂದು, ೧೫೮೨ನೇ ಇಸವಿಯ ೨೮ನೇ ನವೆಂಬರ್ ತಿಂಗಳಲ್ಲಿ, ರಿಚರ್ಡಹಾತ್ವೆ ಎಂಬವನ ಜ್ಯೇಷ್ಠಪುತ್ರನು ಒಡಂಬಡಿಕೆ ಬರೆದುಕೊಟ್ಟನು. ಇದರಿಂದ ಮದುವೆ, ಆಕಾಲದಲ್ಲಿ ಆಯಿತೆಂದು, ಊಹಿಸಬೇಕಾಗಿದೆ.

ಇಂಥಾ ಗೃಹಕ್ಕೆ ಷೇಕ್ಸಪಿಯರ್ ತನ್ನ ಹೆಂಡತಿಯನ್ನು ಕರೆದುಕೊಂಡು ಹೋದನೆಂ ಹೇಳಲಾಗುವದಿಲ್ಲ. ಇವನ ತಂದೆಯು ದಿನೇದಿನೇ ಬಡತನಕ್ಕೆ ಬಂದನು. ಈ ದಂಪ ಗಳು ಸೌಖ್ಯದಲ್ಲಿರುವದಕ್ಕೆ ಆನಿಹಾತ್ವೆಯ, ಸಹೋದರನು ಸಹಾಯ ಮಾಡಿರಬಹು ಲ್ಲದೆ ಷೇಕ್ಸಪಿಯರ್ ತಕ್ಕಮಟ್ಟಿಗೆ ಸಂಪಾದಿಸುತ್ತಲೇ ಇರಬಹುದು.

ಇವರಿಗೆ ೧೫೮೫ನೇ ಜನವರಿ ತಿಂಗಳಲ್ಲಿ, ಅವಳಿ ಮಕ್ಕಳು ಆದವು ತಂದೆಯು ದಿನೇದಿನೇ ಬಡವನಾಗುತ್ತಾ ಬಂದು, ಸ್ವಲ್ಪ ಹಣಕ್ಕೆಲ್ಲಾ ಕೋರ್ಟುಗಳಲ್ಲಿ ದಾವಾ ಮಾಡಿಸಿಕೊಳ್ಳುತ್ತಿದ್ದನು. ಷೇಕ್ಸಪಿಯರ್ ೧೫೦೦ ಪ್ರಜೆಗಳು ಉಳ್ಳ ಸಣ್ಣಗ್ರಾಮದಲ್ಲಿ, (ಗ್ರಾಮದಲ್ಲಿರುವ ಕೊಂಚಜನಕ್ಕೆ ಮಾತ್ರ ಬರೆಯುವದು ಓದುವದು ಬರುತ್ತಿತ್ತು.) ಯಾವಕೆಲಸ ಸಿಕ್ಕಿದರೂ ಮಾಡುತ್ತಾ ಕಾಲಕ್ಷೇಪವನ್ನು ಮಾಡುತ್ತಿದ್ದನು ಕೊನೆಗೆ ಬಂದು ಸಂಗತಿ ನಡೆದುದು. ಇದು ಷೇಕ್ಸಪಿಯರ್ ಭವಿಷ್ಯತ್ ಕೀರ್ತಿಗೆ ಮಾರ್ಗದರ್ಶಿಯಾಯಿತು. ಏನಂದರೆ, ಇವನ ತಂದೆಯ ಚರಸ್ಥಿತಿಗಳೆಲ್ಲಾ ಜಪ್ತಿಯಾಗಿ ಜುಮಾಡುವದಕ್ಕೆ ಕೋರ್ಟು ಉದ್ಯೋಗಸ್ಥರು ಬಂದಾಗ್ಗೆ, ಜಾನ್ ಷೇಕ್ಸಪಿಯರ್‌ಗೆ ವದೂ ಆಸ್ತಿ ಇಲ್ಲವೆಂದು ಬರೆದುಕೊಂಡು ಹೋದರು. ಸ್ವಲ್ಪ ವರ್ಷಗಳ ಮು ಸಾಖ್ಯವಾಗಿರುವದಕ್ಕೆ ಮನೆಯತುಂಬಾ ಇಟ್ಟಿದ್ದ ಸಾಮಾನುಗಳು, ಒಂದೊಂದ ಉದರಂ ಭರಣಾರ್ಥವಾಗಿ ಮಾರಲ್ಪಟ್ಟು ಏನೂ ಇಲ್ಲದಂತೆ ಆದವು. ವಾರಂಟು ಬರುತ್ತಲೇ ಇದ್ದದ್ದರಿಂದ, ಈ ಹೀನಭಾಗ್ಯನು ಕಣ್ಣುಮರೆಯಾಗಿದ್ದನು. ಸ್ವಲ್ಪ ನಂತರ ಸಿವಲ್ ಜೈಲಿಗೂ ಕಳುಹಿಸಲ್ಪಟ್ಟನು.

ಇವೆಲ್ಲಾ ತಡೆಯುಲಾರದೆ, ಮೂರು ಮಕ್ಕಳ ತಂದೆಯಾಗಿಯೂ, ಇಪ್ಪತ್ತೊಂದು ವರುಷ ವಯಸ್ಸಿನವನು ಆದ, ನಮ್ಮ ಈ ಕವಿಶ್ರೇಷ್ಠನು, ಜೀವನೋಪಾಯಕ್ಕಾಗಿ ಸ್ವಗ್ರಾಮವನ್ನು ಬಿಟ್ಟು ಲಂಡರ್ ಪಟ್ಟಣಕ್ಕೆ ಹೋದನು

ಯೌವನಸ್ಥನಾದ ಇವನು ತನ್ನ ಮನಸ್ಸಿನಲ್ಲಿ ಏನೋ ಒಂದು ಉದ್ದೇಶ್ಯವನ್ನು ನಿಶ್ಚಯಿಸಿಯೇ, ಲಂಡರ್‌ಗೆ ಹೋಗಿರಬೇಕು.

ಗ್ರಂಥಗಳನ್ನು ಮಾಡುವದೇ ಜೀವನೋಪಾಯವಾಗಿಯು, ಸರಸ್ವತಿಯನ್ನೇ ಇಷ್ಟ ದೇವತೆಯನ್ನಾಗಿಯು, ಭಾವಿಸಿ ತಾತ್ಕಾಲಕ್ಕೆ ನಾಟಕಶಾಲೆಯಿಂದ ಜೀವನೋಪಾಯ ವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿರಬೇಕು.

'ಬ್ಲಾಕ್‌ಫೆರ್ಸ್' ಎಂಬ ನಾಟಕಶಾಲೆಗೆ ಮೊದಲು ಹೋದನು. ಆ ನಾಟಕ ಶಾಲೆಯು, ಬರ್‌ಬೇಜ ಎಂಬವನದಾಗಿತ್ತು. ಇವನು ಸರಿಯಾದ ಒಂದು ಕಂಪನೀ ಮಾಡಿದನು. ಈ ಕಂಪನಿಯಲ್ಲಿ ಷೇಕ್ಸಪಿಯರ್ ಸಾಧಾರಣನಾದ ಒಬ್ಬನಾಗಿ ಸೇರಿದನು. ಅತಿಜಾಗ್ರತೆಯಲ್ಲಿಯೇ ಈತನ ಯೋಗ್ಯತೆಯು, ಬಾರ್‌ಬೇಜಿಗೆ ಗೊತ್ತಾಗಿ ಆಡುವ ನಕ್ಕೆ ಸರಿಯಾಗಿಲ್ಲದೇ ಇದ್ದ, ಕೆಲವು ನಾಟಕಗಳನ್ನು ಸರಿಮಾಡುವಂತೆಯೂ, ಹೊಸ ದಾಗಿ ಬರೆಯುವಂತೆಯೂ, ಈತನಿಗೆ ನೇಮಿಸಿದನು.

ನಮ್ಮಲ್ಲಿ ಭೋಜರಾಜನಕಾಲವು, ಪ್ರಸಿದ್ಧರಾದ ವಿದ್ವಾಂಸರಿಗೂ, ಕವಿಗಳಿಗೂ, ಹ್ಯಾಗೆ ಪ್ರಖ್ಯಾತಿಪ್ರದವಾಗಿತ್ತೋ, ಅದೇ ರೀತಿಯಾಗಿ ಇಂಗ್ಲೆಂಡಿನಲ್ಲಿ ರಾಣಿ "ಎಲಸಬೆತ್" ಆಳ್ವಿಕೆಯು ಪ್ರಸಿದ್ಧಿಯನ್ನು ಹೊಂದಿತ್ತು. ಆ ಕಾಲದಲ್ಲಿಯೇ ಉತ್ತಮಗಳಾದ ನಾಟ ಕಗಳು ನಿರ್ಮಿತವಾದವು.

ಷೇಕ್ಸಪಿಯರ್ ಲಂಡರ್ ಪಟ್ಟಣದಲ್ಲಿದ್ದ ಹದಿನೆಂಟು ವರ್ಷಗಳ ವರಿಗೆ, ಆಪಟ್ಟಣದಲ್ಲಿ ಸುಮಾರು ೧೦-೧೫ ನಾಟಕಶಾಲೆಗಳು, ಸಂಪೂರ್ಣ ಕೆಲಸದಲ್ಲಿ ಇದ್ದವೆಂದು ತಿಳಿದುಬರುತ್ತೆ.

ಷೇಕ್ಸಪಿಯರ್ ಬ್ಲಾಕಫೇರ್ಸ್ ನಾಟಕಶಾಲೆಗೆ ಸೇರಿದ ೨-೩ ವರ್ಷಗಳ ಒಳಗಾ ಗಿಯೇ, ಕೆಲವರು ನಾಟಕಸಂಬಂಧಗಳಾದ ಗ್ರಂಥಗಳನ್ನು ಬರೆದು ಪ್ರಸಿದ್ಧಿಗೆ ಬಂದರು. ಇವರಲ್ಲಿ ಕೇವಲ ಮುಖ್ಯರಾದ (ಜಾರ್ಜ್‌ಪೀಲ್), (ರಾಬರ್ಟ್‌ಗ್ರೀನ್), (ಕ್ರಿಸ್ಟಫರ್‌ಮಾರ್ಲೋ) ಇವರು ಮೂವರು ಕವಿಗಳು ಅವಿವೇಕ, ಸ್ವೇಛಾವಿಹಾರಿಗಳಾಗಿ ಪಾನದಿಂದ, ಅಕಾಲ ಮೃತ್ಯುವನ್ನು ಹೊಂದಿದರು.

ಷೇಕ್ಸಪಿಯರ್ ಕೇವಲ ಸನ್ಯಾಸ ವ್ರತವನ್ನು ಆಚರಿಸದೆ ಇದ್ದರೂ, ಈ ದುರದೃಷ್ಟಶಾಲಿಗಳ ಜತೆಯಲ್ಲಿ ಕೆಲವು ವೇಳೆಗಳಲ್ಲಿ ಸೇರಿದ್ದರೂ, ಅತಿಯಾಗಿ ಯಾವದಕೂ

ಹೋಗದೆ, ತನ್ನ ಯಶಸ್ಸನ್ನೂ ಕ್ಷೇಮವನ್ನೂ ಕಾಪಾಡಿಕೊಂಡು, ಬಹು ವಿವೇಕದಿಂದ ಇದ್ದು, ಬಹು ಕಷ್ಟಪಟ್ಟು ಕೆಲಸಗಳನ್ನು ಮಾಡುತ್ತಾ, ಇತರರಿಂದ ಸಂಪಾದಿಸಿ ಇಟ್ಟಿದ್ದ, ಕಲ್ಲು ಮಣ್ಣಿನಿಂದ ಮಿಶ್ರವಾದ ಭಂಗಾರವನ್ನು, ಕಲ್ಮಷವಿಲ್ಲದಂತೆ ಶ್ರೇಷ್ಠವಾಗಿಮಾಡಿದಂತೆ ಒಳ್ಳೇ ಹೊಸನಾಟಕಗಳನ್ನು ಬರೆದು, ಆ ನಾಟಕಗಳಲ್ಲಿ ಉಚಿತವಾಗಿಯು ತನಗೆ ಪ್ರಯೋಜನಕರವಾಗಿಯು ಇದ್ದ ಪಾತ್ರಗಳನ್ನು ತಾನೇ ವಹಿಸಿ, ಆಡುತ್ತಿದ್ದನು.

ಯಾಯಾವನಾಟಕಗಳನ್ನು ಯಾಯಾವಾಗ ಬರೆದನೋ ಗೊತ್ತಾಗದೇ ಇದ್ದರೂ "ದಿ ಟೂ ಜೆಂಟ್ಲ್‌ಮೆನ್ ಆಫ್ ವೆರೊನಾ" ಮತ್ತು "ಲವ್ಸ್ ಲೇಬರ್‌ಲಾಸ್ಟ" ಎಂಬ ನಾಟಕಗಳನ್ನು ಮೊದಲು ಬರೆದನೆಂದು ಹೇಳಬಹುದು.

ಈತನು ದಿನೇದಿನೇ ಹೊಂದುತ್ತಿದ್ದ ಅಭಿವೃದ್ಧಿಯು, ನಿರಾಕ್ಷೇಪವಾದ ನಡತೆಯು (ಗುಣವು) ಶ್ರೇಷ್ಠವಾದ ಬುದ್ಧಿಯು, ಆಗಲೇ ತಲೆದೋರಿಸುತ್ತಿದ್ದವು. ಕೆಟ್ಟ ನಡತೆಯುಳ್ಳ ಈತನ ಸಮಕಾಲೀನರು, ಇವನನ್ನು ನೋಡಿ ಸೈರಿಸಲಾರದೆ, ಹೊಟ್ಟೆಕಿಚ್ಚು ಪಡುತ್ತಿದ್ದರು. ಒಬ್ಬನು ತಾನು ಸಾಯುವದಕ್ಕೆ ಪೂರ್ವ, ಷೇಕ್ಸ್‌ಪಿಯರ್‌ಗೆ ಬಹಳ ಮನಃ ಖೇದಉಂಟಾಗುವಂತೆ, ಕೆಲವು ಬರೆವಣಿಗೆಗಳನ್ನು ಬರೆದನು. ಇದರಿಂದ ಷೇಕ್ಸ್‌ಪಿಯರ್ ಬಹಳ ಸಂಕಟಪಟ್ಟನು. ಆದರೆ ಇದರ ಪರಿಹಾರಾರ್ಥವಾಗಿ, ಅನೇಕ ಸ್ನೇಹಿತರುಗಳು ಈ ಕವಿಶ್ರೇಷ್ಠನಿಗೆ ಹಿತವನ್ನು ಮಾಡುತ್ತಿದ್ದರು.

ಅರಲ್ ಸಾತಾಂಪರ್ಟ್ ಅರಲ್ ಪೆಂಬ್ರೊಕ್, ವಾಲ್ಟರ್ ರೆಲೆ ಎಂದು ಪ್ರಸಿದ್ಧರಾದವರು, ಈತನು ಇದ್ದ ನಾಟಕಶಾಲೆಗೆ ಹೋಗುತ್ತಾ, ಈ ಷೇಕ್ಸ್‌ಪಿಯರ್‌ಗೆ ಬಹು ಸ್ನೇಹಿತರಾಗಿದ್ದರು.

೧೫೯೩ನೇ ವರುಷದಲ್ಲಿ "ಅಡೋನಿಸ್ ವೀನಸ್" ಎಂಬ ಗ್ರಂಥವನ್ನು ಬರೆದು ಸಾತ್ಯಾಂಪರ್ಟ್ ಅರಲ್‌ರವರಿಗೆ ಸಮರ್ಪಿಸಿದನು. ಇದನ್ನು, ತನ್ನ ಬುದ್ಧಿಜನಿತವಾದ ಮೊದಲನೆಯಗ್ರಂಥವೆಂದು ಷೇಕ್ಸ್‌ಪಿಯರ್ ಬರೆದು ಇರುತ್ತಾನೆ. ಇದು ಬಹಳವಾಗಿ ಖರ್ಚಾಗಿ ಈತನು ಜೀವಿತನಾಗಿರುವಷ್ಟರಲ್ಲಿಯೇ ಸಾಲ್ಕಾವರ್ತಿ ಛಾಪಿಸಲ್ಪಟ್ಟಿತು. ಈ ಗ್ರಂಥದಿಂದ ತಮಗೆ ಉಂಟಾದ ಸಂತೋಷಕ್ಕಾಗಿ, ೧೦,೦೦೦ ಸಾವಿರ ರೂಪಾಯಿಗಳ ವರಿಗೂ, ಸಾತ್ಯಾಂಪರ್ಟ್‌ರವರು, ಷೇಕ್ಸ್‌ಪಿಯರ್‌ಗೆ ಬಹುಮಾನಾರ್ಥವಾಗಿ ಕೊಟ್ಟಿದ್ದರಿಂದ ಗ್ಲೋಬ್ ಥಿಯೇಟರ್‌ನಲ್ಲಿ ಒಂದು ಹಿಸ್ಸೆ ಪಡೆಯುವದಕ್ಕೆ ಅನುಕೂಲಿಸಿದಂತೆ ಗೊತ್ತಾಗುತ್ತೆ.

ಈ ಸಾತ್ಯಾಂಪರ್ಟ್ ಅರಲ್ ಮತ್ತು ಹರ್ ಬರ್ಟರು ಇವರುಗಳ ಸಂಗಡ ಷೇಕ್ಸ್‌ಪಿಯರ್ ಬಹಳ ಸ್ನೇಹವಾಗಿದ್ದನೆನ್ನುವದರಲ್ಲಿ, ಯಾವ ಸಂದೇಹವೂ ಇಲ್ಲಾ. ಇವ

ರುಗಳ ಸ್ನೇಹದಿಂದ ಒಳ್ಳೇ ಪುಸ್ತಕಕೋಶಗಳನ್ನು ನೋಡುವದಕ್ಕು, ಓದುವದಕ್ಕೂ, ಅವಕಾಶವಾಯಿತು. ಇದರಿಂದ ಬಹು ಪ್ರಯೋಜನವನ್ನೂ ಪಡೆದರು.

ಹದಿನಾಲ್ಕು ಪಙ್ತಿಗಳು ಉಳ್ಳಪ್ರಾಸದಿಂದ ಕೂಡಿದ ಕಾವ್ಯಕ್ಕೆ "ಸಾನ್ನೆಟ್ಸ್" ಎಂಬ ಹೆಸರು. ಈ "ಸಾನ್ನೆಟ್ಸು" ಗಳನ್ನು ಆನೇಕವಾಗಿ ಮಾಡಿಧಾನೆ. ಕೆಲವು "ಸಾನ್ನೆಟ್ಸ್" ಗಳು ಅತ್ಯಂತ ಶ್ರಾವ್ಯವಾಗಿಯು, ಬುದ್ಧಿಪ್ರದವಾಗಿಯು, ಬಹು ಪ್ರಸಿದ್ಧಿಯನ್ನು ಹೊಂದಿವೆ. ಇವುಗಳನ್ನು ಬರೆಯುವಕಾಲದಲ್ಲಿಯೇ, ಇತರ ಶ್ರೇಷ್ಠರಾದ ಕವಿಗಳಿಗೂ ಮತ್ತು ವಿದ್ಯಾವಂತರಿಗೂ, ಆಕಾಲದಲ್ಲಿ ಸಹಜವಾಗಿದ್ದ ಕಷ್ಟವು, ನಿರಾಶತ್ವವು, ಈ ಪ್ರಪಂಚದ ನಡೆವಳಿಕೆಗಳಲ್ಲಿ ಅಸಹ್ಯವು, ದಾರಿದ್ರ್ಯವೂ, ಷೇಕ್ಸಪಿಯರ್ ಅನುಭವವಲ್ಲಿದ್ದವು. ಇಂಥಾ ಅನುಭವಗಳು ಕೆಲವರನ್ನು ಸರ್ವಸಂಗ ಪರಿತ್ಯಾಗಿಗಳನ್ನಾಗಿ ಮಾಡಿ, ಯೋಗಿಗಳಾಗುವಂತೆಯೂ ಮಾಡಿರುವವು ಇನ್ನು ಕೆಲವರು ಇಂಥಾ ದುರ್ದಶೆಗಳನ್ನು ಜೈಸಿ, ವಿದ್ವಾಂಸರಾಗಿಯು, ಕವಿಶ್ರೆಷ್ಠರಾಗಿಯು, ಶೂರರಾಗಿಯು, ಆಗಿರುವರು. ಈರೀತಿಯಲ್ಲಿ, ಈ ಕಷ್ಟಗಳನ್ನೆಲ್ಲಾ ಜೈಸಿದವರಲ್ಲಿ ಷೇಕ್ಸಪಿಯರ್ ಒಬ್ಬನಾಗಿದಾನೆ. ಈತನು ಸದಾ ಸಂತೋಷಯುಕ್ತನಾಗಿ, ಶ್ರದ್ಧೆಯಿಂದ ಕೆಲಸವನ್ನು ಮಾಡಿ, ಲಕ್ಷ್ಮೀ ಕಟಾಕ್ಷಕ್ಕೆ ಪಾತ್ರನಾಗಿ ಸುಖದಿಂದ ವಾಸಮಾಡುತ್ತಿದ್ದನು. ಲಂಡನ್ನಲ್ಲಿ ಇದ್ದ ಹನ್ನೆರಡು ವರುಷಗಳ ತರುವಾಯ, ತನಗಿಂತಲೂ ಹತ್ತು ವರುಷ ಚಿಕ್ಕಪ್ರಾಯಉಳ್ಳ, ಬೆನ್‌ಜಾನ್ಸನ್ ಎಂಬವನ ಪರಿಚಯವಾಯಿತು. ಇವರಿಬ್ಬರು ಬಹಳವಾಗಿ ಸ್ನೇಹಿತರಾದರು. ಷೆಕ್ಸಪಿಯರ್ ವಿಷಯವಾಗಿ ಈತನು ಈರೀತಿಯಾಗಿ ಬರೆದಿರುತ್ತಾನೆ.—"ಆರಾಧಿಸುವಷ್ಟು ಪ್ರೀತಿಯನ್ನು ಈತನಲ್ಲಿ (ಷೇಕ್ಸಪಿಯರ್‌ಲ್ಲಿ) ಮಾಡುತ್ತಿದ್ದೆನು."

ಲಂಡನ್ನಿಂದ ಪ್ರತಿವರ್ಷವು "ಸ್ಟ್ರಾಟ್ಫರ್ಡ್" ಗೆ ಹೋಗುತ್ತಿದ್ದನೆಂದು ತಿಳಿದು ಬರುತ್ತೆ. ಮಾತಾಪಿತೃಗಳನ್ನು ಉದಾಸೀನಮಾಡದೆ, ಅವರಿಗೆ ತಕ್ಕ ಸಹಾಯವನ್ನು ಮಾಡಿದನು, ಮತ್ತು ಬಹಳ ದಿವಸಗಳಿಂದಲೂ, ಅಪೇಕ್ಷೆ ಪಡುತ್ತಿದ್ದ, ಮರ್ಯಾದೆಗಳನ್ನು ತಂದೆಗೆ, ತಾನು ಬಹಳತೊಂದರೆಪಟ್ಟು: ಸಂಪಾದಿಸಿಕೊಟ್ಟನು. ಈ ಮರ್ಯಾದೆ ಏನೆಂದರೆ, ದೊಡ್ಡ ಮನುಷ್ಯರುಗಳು ಉಪಯೋಗಿಸಿಕೊಳ್ಳಬಹುದಾದ "ಕೋಟಾಫ್ ಆರಮ್ಸ್" ಎಂಬ ಬಿರುದಾಂಕಿತವು. ಇದಕ್ಕೆ ಎರಡು ವರುಷಗಳ ಪೂರ್ವವೇ ತನ್ನ ಊರಿನಲ್ಲಿರುವ, ಕ್ಲಾಪರ್ಟನ್ರಿಗೆ ಸೇರಿದ್ದ, ಮನೆಯನ್ನು ಖರೀದಿಗೆ ತೆಗೆದುಕೊಂಡನು. ಇದನ್ನು ವೃದ್ಧಿಪಡಿಸಿ ಆಗ ತನ್ನ ಹೆಂಡತಿ ಹೆಣ್ಣುಮಕ್ಕಳುಗಳನ್ನು ಅಲ್ಲಿ ಇರಿಸಿದನು. ಈತನ ಮಗನು ಒಂದುವರುಷಕ್ಕೆ ಮೊದಲೇ ತೀರಿಹೋಗಿದ್ದನು. ತನ್ನ ತಾಯಿಗೆ ತೌರುಮನೆಯಿಂದ ಬಂದಿದ್ದ ತಂದೆಯ ಕಷ್ಟಕಾಲದಲ್ಲಿ ಕಳೆದುಕೊಂಡಿದ್ದ ಆಸ್ತಿಗಳನ್ನು ತಿರುಗಿ ಷೇಕ್ಸಪೆಯರ್ ಬರಮಾಡಿಕ್ಕೊಂಡು, ತಂದೆಗೆಕೊಟ್ಟನು.

ಲಂಡನ್‌ಪಟ್ಟಣದಲ್ಲಿ ಸಕಾಲಕಿರಾದ ಇತರರು ಎಲ್ಲರಿಗಿಂತಲೂ, ಹೆಚ್ಚಾದ ಪ್ರಸಿದ್ಧಿಯನ್ನು ಹೊಂದಿ, ತನ್ನ ವಿವೇಕದಿಂದ ದ್ರವ್ಯವನ್ನು ಹಾಳುಮಾಡದೆ, ಶೇಖರಿಸಿ ಐಶ್ವರ್ಯ

ವಂತನಾಗಿ ಇದ್ದನು. ಈತನು ಲಂಡನ್‌ಪಟ್ಟಣದಲ್ಲಿರುವಾಗ್ಗೆ ಅನೇಕ ನಾಟಕಗಳನ್ನು ಬರೆದನು. ಇದುವರಿಗೆ (ಗ್ಲೊಬಥಿಯೇಟರ) ಮತ್ತು (ಬ್ಲಾಕ ಫೆರ್ಸ್) ಥಿಯೋಟರಲ್ಲಿ, ಹಿಸ್ಸೇದಾರನಾದನು. ಕೆಲವು ಮನೆಗಳನ್ನು ಖರೀದಿಗೆ ತೆಗೆದುಕೊಂಡು, ತನ್ನ ಜನ್ಮ ಭೂಮಿಯಾದ (ಸ್ಟ್ರಾಟಫರ್ಡ್) ಬಳಿ ಕೇವು ಭೂಸ್ಥಿತಿಯನ್ನೂ ಸಂಪಾದಿಸಿದನು. ತನ್ನ ಹೆಂಡತಿಯ ಊರಾದ (ಷ್ರಾಟರಿ) ಬಳಿಯಲ್ಲಿಯೂ ಕೆಲವು ಭೂಮಿಯನ್ನು ಮಾಡಿದನು. ಜೀವನಕ್ಕೆ ಮಾರ್ಗವಿಲ್ಲದೆ ಬಹು ಕಷ್ಟಪಡುತ್ತಿದ್ದ, ಈ ಮಹಾತ್ಮನು, ಅನೇಕ ಸ್ನೇಹಿತ ರುಗಳನ್ನು, ಮರ್ಯಾದೆಯನ್ನು, ಕೀರ್ತಿಯನ್ನು, ಐಶ್ವರ್ಯವನ್ನು, ತನ್ನ ಶ್ರೇಷ್ಠವಾದ ಬುದ್ಧಿ ಬಲದಿಂದಲೇ, ಸ್ವಲ್ಪಕಾಲವಾದ ಹದಿನೆಂಟು ವರುಷಗಳಲ್ಲಿ ಸಂಪಾದಿಸಿದನು.

೧೬೧೪ನೇ ಸಂವತ್ಸರದಲ್ಲಿ ಲಂಡನ್‌ಪಟ್ಣವನ್ನು ಬಿಟ್ಟು (ಸ್ಟ್ರಾಟ್‌ಪರ್ಡ್)ಗೆ ಹೋದನು. ಈತನ ತಂದೆಯು, ಇದಕ್ಕೆ ಒಂದು ವರುಷ ಮುಂಚೆಯೇ ಮೃತಪಟ್ಟನು. ಇದರಿಂದ, ಆತನ ಮರ್ಯಾದೆಗೆಲ್ಲಾ ಇವನು ಅರ್ಹನಾದನು. ಸಹೋದರರು ಸಹೋದರಿಯರು ಎಲ್ಲರೂ ಮೃತರಾಗಿ, ಒಬ್ಬ ಸಹೋದರಿ (ಜೋನ್) ಎಂಬಾಕೆಮಾತ್ರ ಉಳಿದು ಇದ್ದಳು. (ನ್ಯೂಪ್ಲೇಸ್) ಎಂಬ ಮನೆಯಲ್ಲಿ ವಾಸಮಾಡುವದಕ್ಕೆ ಪ್ರಾರಂಭ ಮಾಡಿದಾಗ, ಸೂಸನ್ ಎಂಬ ಮೂರುವರ್ಷದ ಮಗಳು, ಜೂಡಿತ್, ಎಂಬ ಹತ್ತೊಂಭತ್ತು ವರ್ಷಗಳ ಪುತ್ರಿ ಇಬ್ಬರು ಮಾತ್ರ ಇದ್ದರು. ಇಲ್ಲಿಗೆ ಬಂದ ತರುವಾಯವೂ, ಗ್ರಂಥನಿರ್ಮಾಣವನ್ನೂ ಬಿಡದೆಯೇ ಇದ್ದು ಲಂಡನ್ ಪಟ್ಟಣದಲ್ಲಿಯೂ ಸ್ಟ್ರಾಟಪರ್ಡನಲ್ಲಿಯೂ, ಹೆಚ್ಚಾಗಿಆಸ್ತಿಗ ಳನ್ನು ಸಂಪಾದಿಸಿದನು.

೧೬೧೬ನೇ ವರುಷದಲ್ಲಿ ಈ ಅಸ್ಸಾದೃಶನಾದಕವಿಯು ಸ್ವರ್ಗಸ್ಥನಾದನು. ಈತನ ದೇಹವು "ಸ್ಟ್ರಾಟಫರ್ಡಚರ್ಚು" ಎಂಬ ಗುಡಿಯ ಬಳಿಯಲ್ಲಿ ಸಮಾಧಿಸಲ್ಪಟ್ಟು ಇರುತ್ತೆ. ಇಂಗ್ಲೀಷು ಭಾಷೆಯು ಭೂಮಂಡಲದಲ್ಲಿ ಎಲ್ಲೆಲ್ಲಿ ವ್ಯಾಪಿಸಿರುವದೋ ಅಂಥಾ ಸಮಗ್ರಪ್ರ ದೇಶಗಳಲ್ಲಿಯೂ, ಷೇಕ್ಸಪಿಯರ್ ಹೆಸರು ಪ್ರಸಿದ್ಧವಾಗಿದೆ. ಈತನಿಂದ ವಿರಚಿತವಾಗಿರುವ ಅನೇಕಗ್ರಂಥಗಳು, ನೀತಿಬೋಧಕವಾಗಿಯು, ಮನೋಹರವಾಗಿಯೂ, ಪಂಡಿತ ಪಾಮರ ರಂಜಕವಾಗಿಯೂ ಇರುವದಲ್ಲದೇ, ಮನುಷ್ಯಸ್ವಭಾವವನ್ನು ಚೆನ್ನಾಗಿ ವ್ಯಕ್ತ ಪಡಿಸ ತಕ್ಕವುಗಳಾಗಿವೆ.

ಈ ಕವಿಶ್ರೇಷ್ಠನು ಮಾಡಿದ ಅನೇಕ ನಾಟಕಗಳಲ್ಲಿ ವ್ಯಸನಕರವಾಗಿ ಪೂರೈ ಸುವ "ಟ್ರಾಜೆಡಿ" ಎಂಬವುಗಳಲ್ಲಿ ಒಥೆಲ್ಲೊ, ಹಾಮ್ಲೆಟ್ ಮತ್ತು ರೋಮಿಯೊ ಅಂಡ್ ಜೂಲಿಯಟ್ ಇವೇ ಮುಖ್ಯವಾದವು. ಕಾಮೆಡೀ ಅಥವಾ ಸಂತೋಷದಿಂದ ನಿರ್ವಹಣವಾ ಗುವ ನಾಟಕಗಳಲ್ಲಿ ಮರ್ಚೆಂಟಾಫ ವೆನಿಸ್ ಮೊದಲಾದವೇ ಮುಖ್ಯವಾದವುಗಳಾಗಿವೆ.

DRAMATIS PERSONÆ.

ಪಾತ್ರಗಳು.

English Names.	ಕನ್ನಡದ ಹೆಸರುಗಳು,
Prince of Verona.	ವಾರಣಾವತಿಯ ಧೊರೆ.
PARIS, *a young Nobleman, Kinsman to the Prince.*	ಪೇಶಲಾಂಗ ಧೊರೆಯ ನೆಂಟ.
MONTAGUE, CAPULET, } *Heads of two Houses, at variance with each other.*	ಮಾಧುರ ಕಾಪಿಲ } ಪರಸ್ಪರ ವಿರೋಧವಂಶದ ಮುಖ್ಯಸ್ಥರು.
An old Man, Kinsman to Capulet.	ಒಬ್ಬ ವೃದ್ಧನು, ಕಾಪಿಲನಸಂಬಂಧಿ.
ROMEO, *Son to* Montague.	ರಾಮವರ್ಮ, ಮಾಧುರನ ಮಗ.
MERCUTIO, *Kinsman to the Prince, and Friend to* Romeo.	ಮದನ, ಧೊರೆಯ ಸಂಬಂಧಿ ಮತ್ತು ರಾಮವರ್ಮನ ಸ್ನೇಹಿತ.
BENVOLIO, *Nephew to* Montague, *and Friend to* Romeo.	ಜೇಹಾರಿ, ಮಾಧುರನ ಸೋದರಳಿಯ ಮತ್ತು ರಾಮವರ್ಮನ ಸ್ನೇಹಿತ.
TYBALT, *Nephew to Lady* Capulet.	ತ್ರಿವಿಕ್ರಮ, ಕಾಪಿಲನ ಹೆಂಡತಿಯ ಸೋದರಳಿಯ.
Friar LAWRENCE, *a Fransciscan.*	ಪೂಜ್ಯಪಾದ, ಒಬ್ಬ ಯೋಗಿ.
Friar JOHN, *of the same Order.*	ಅಗ್ನಿಮಿತ್ರ, ಪೂಜ್ಯಪಾದನ ಶಿಷ್ಯ.
BALTHAZAR, *Servant to* Romeo.	ಬಾಲಚಂದ್ರ ರಾಮವರ್ಮನ ಸೇವಕ.
SAMPSON, AND GREGORY, } *Servants to* Capulet.	ಸಂತ, ಗ್ರೈವೇಯಕ, } ಕಾಪಿಲನ ಸೇವಕರು.
PETER, *Another servant to* Capulet.	ಪೀವರಾಂಗ, ಕಾಪಿಲನ ಮತ್ತೊಬ್ಬ ಸೇವಕ
ABRAHAM, *Servant to* Montague.	ಪಿಕಪಿಂಗ, ಮಾಧುರನ ಭೃತ್ಯ.
An Apothecary.	ವೈದ್ಯನು.

English Names.	ಕನ್ನಡದ ಹೆಸರುಗಳು.
Three Musicians.	ವಾದ್ಯಗಾರರು.
Page to Paris ; *Page to* Mercutio ; *an Officer.*	ಪೇಶಲಾಂಗನ ಸೇವಕ, ಮದನನ ಸೇವಕ, ಒಬ್ಬ ಉದ್ಯೋಗಸ್ಥ.
Lady MONTAGUE.	ಕಲಾವತಿ, ಮಾಧುರನ ಹೆಂಡತಿ.
Lady CAPULET.	ಲಲಿತಾಂಗಿ, ಕಾಪಿಲನ ಹೆಂಡತಿ.
JULIET, *Daughter to* Capulet.	ಲೀಲಾವತಿ, ಕಾಪಿಲನ ಮಗಳು.
Nurse to Juliet.	ಧಾತ್ರಿ, ಲೀಲಾವತಿಯನ್ನು ಸಾಕಿದವಳು.
Citizens of Verona ; *Male and Female relations of both Houses, Maskers, Guards, Watchmen, and Attendants.*	ವಾರಣಾವತೀ ಪಟ್ಟಣದ ಜನಗಳು, ಉಭಯ ವಂಶದವರ ಕಡೇಯವರ ಹೆಂಗಸರು, ಗಂಡಸರು, ಕಾವಲುಗಾರರು, ಮತ್ತು ಪರಿಜನಗಳು.
CHORUS.	ಕೋಕಿಲ.
SCENE, *during the greater part of the play, in* VERONA ; *once (in the fifth Act,) at* MANTUA.	ಸ್ಥಾನ.-ಬಹುಶಃ ವಾರಣಾವತೀ ಪಟ್ಟಣದಲ್ಲಿಯೇ ೫ನೆಯ ಅಂಕದಲ್ಲಿ, ಒಂದು ಸಾರಿಮಾತ್ರ ಮಾಹಿಷ್ಮತೀಪಟ್ಟಣದಲ್ಲಿ.

ನಾಟಕದವರ ವಿಷಯದಲ್ಲಿ ಷೇಕ್ಸಪೀಯರ್ ಮಾಡಿರತಕ್ಕ ನಿಬಂಧನೆ.

ಹೇಳತಕ್ಕ ವಾಕ್ಯಗಳನ್ನು ನಾನು ಉಚ್ಚರಿಸಿದಂತೆಯೇ ಮೃದುವಾಗಿಯು, ಅಕ್ಷರಸ್ಖಾಲಿತ್ಯವಿಲ್ಲದಂತೆಯು, ಸ್ಪಷ್ಟವಾಗಿಯೂ, ಉಚ್ಚರಿಸಿರಿ; ಆಟಗಾರರಾದ ನಿಮ್ಮಲ್ಲಿ ಕೆಲವರು ಮಾಡುವಂತೆ ಕವಿವಾಕ್ಯಂಗಳನ್ನು ನೀವು ನುಂಗಿಕೊಳ್ಳುವಪಕ್ಷಕ್ಕೆ ಆ ವಾಕ್ಯಗಳನ್ನು ನಿಮ್ಮಿಂದ ಹೇಳಿಸುವದಕ್ಕಿಂತಲೂ, ಪಟ್ಟಣದಲ್ಲಿ ಸಾರುವ ದಂಡಿಯವನಿಂದಲಾದರೂ ಡಂಗುರವನ್ನು ಹಾಕಿಸಲು ಇಚ್ಛೈಸುವೆನು. ನಿನ್ನ ಕೈಗಳನ್ನು ಈರೀತಿಯಾಗಿ ಆಡಿಸಬೇಡ. ಆದರೆ ಮೃದುವಾಗಿಯೂ ರಸಭಾವಾನುಗುಣವಾಗಿಯೂ ಉಪಯೋಗಿಸು; ನೀವು ಕ್ರೋಧಭಾವವನ್ನು ತೋರಿಸುವ ಮಾತುಗಳು ಪ್ರವಾಹವೆಂತಲೂ, ಬಿರುಗಾಳಿಯೆಂತಲೂ, ಹೇಳಬಹುದಾಗಿರುವವು. ಆದ್ದರಿಂದ ಅಂಥಾ ಕ್ರೋಧಭಾವವನ್ನು ತೋರಿಸಬೇಕಾದ ಕಾಲದಲ್ಲಿ ಯಾದರೂ ಮಿತಿಯನ್ನು ಮೀರದೆ ಮೃದುತೆಯನ್ನು ತೋರಿಸುವಂತೆ ಅಭ್ಯಾಸವನ್ನು ಮಾಡಬೇಕು. ಸ್ಥೂಲಕಾಯರಾದ ಆಟದವರು ಆಗ್ರಹಸೂಚಕ ವಾಕ್ಯಗಳನ್ನು ತುಂಡುತುಂಡುಮಾಡಿ ಕಠೋರ ಧ್ವನಿಯಿಂದ ಕೂಗುತ್ತಲೂ ಹಳ್ಳದಲ್ಲಿ ಕೂತಿರುವ (ಕೊನೆಯ ಕ್ಲಾಸಿನಲ್ಲಿ ಕೂತಿರುವ) ವರ ಕಿವಿಗಳನ್ನು ಕಿವುಡುಮಾಡುವಂತೆ, ಕೂಗಿಕ್ಕೊಳ್ಳುತ್ತಿರುವವರ ಕಠೋರೋಕ್ತಿಗಳು ನನಗೆ ಬಹು ಸಂಕಟವನ್ನು ಉಂಟುಮಾಡುವವು. ಹೀಗೆ ಮಾಡುವದ್ದರಿಂದ ಅರ್ಥರಹಿತವಾದ ಅಭಿನಯ ಅರ್ಥರಹಿತವಾದ ಮಾತು ಇವುಗಳೇ ಗೊತ್ತಾಗುವವಲ್ಲದೆ ಯಾವವಿಷಯವೂ ಗೊತ್ತಿಲ್ಲದ ಕೊನೆಯಕ್ಲಾಸಿನಲ್ಲಿ ಇರತಕ್ಕವರಿಗೆ ಹಿತವಾಗಿರಬಹುದಲ್ಲದೆ ಪ್ರಾಜ್ಞರಿಗೆ ಸಂತೊಷವಾಗಲಾರದು; ಮತ್ತು ನಾಟಕೋದ್ದೇಶವು ಭಂಗಪಡುವದು. ಹೀಗೆ ರಸಭಾವವಾಕ್ಯಗಳನ್ನು ಕೆಡಿಸುವ ನಾಟಕದವರನ್ನು ಕೋರಡೆಯಿಂದ ಹೊಡೆಯಿಸುವಷ್ಟು ಕೋಪವು ನನಗೆ ಉಂಟಾಗುವದು.

ನಾಟಕಾನುಕರಣಕಾಲದಲ್ಲಿ ಅತಿಸಾಮ್ಯನಾಗಿಯೂ ಅತಿಕ್ರೂರನಾಗಿಯೂ ಇರಬೇಡ; ತತ್ತತ್ಕಾಲೋಚಿತವಾಗಿ ನಿನ್ನಬುದ್ಧಿಕೌಶಲ್ಯವನ್ನೂ ಸ್ವಲ್ಪ ಉಪಯೋಗಿಸು, ರಸಾಭಿನಯವನ್ನು ಮಾತುಗಳಿಗೂ, ಮಾತುಗಳನ್ನು ರಸಾಭಿನಯಗಳಿಗೂ, ಸಮಂಜಸವಾಗಿ ಸೇರಿಕೊಂಡಿರಲಿ; ಆದರೆ ಕಾಲೋಚಿತ ಸ್ವಭಾವವನ್ನು ಮೀರಿಹೋಗಕೂಡದು. ಹಾಗೆ ಮಾಡುವದ್ದರಿಂದ ನಾಟಕದ ಪ್ರಯೋಜನವು ನೆರವೇರದೆಯೇ ಹೋಗುವದು. ಲೋಕದ ಗುಣದುರ್ಗುಣಗಳನ್ನು ಸ್ವಾಭಾವಿಕವನ್ನೂ, ಕನ್ನಡಿಯಲ್ಲಿ ಪ್ರತಿಬಿಂಬವನ್ನು ತೋರ್ಪಡಿಸುವಂತೆ ತೋರಿಸುವದೇ ಪೂರ್ವದಲ್ಲಿಯೂ, ಈಗಲೂ, ಮುಂದಕ್ಕೂ ನಾಟಕದ ಮುಖ್ಯ ಪ್ರಯೋಜನವಾಗಿರುವದು. ನೀತಿಸ್ವರೂಪವನ್ನೂ, ಕಾಲರೀತಿಯನ್ನು, ಯೋಗ್ಯತೆಯನ್ನೂ ನಾಟಕಾನುಕರಣದಿಂದ ತೋರ್ಪಡಿಸಬೇಕು. ಹೀಗೆಮಾ

ಡದೆ ಅತಿಯಾಗಿಯೋ ಆಗಲಿ, ನ್ಯೂನವಾಗಿಯೋ ಆಗಲಿ ಅಭಿನಯೋಕ್ತಿಗಳನ್ನು ತೋರ್ಪಡಿಸಿ ಮೂಢರಾದ ಜನರು ನಗುವಂತೆ ಮಾಡಿದರೂ, ರಸಜ್ಞರಿಗೆ ಬಹುಕ್ಲೇಶ ಉಂಟಾಗದೆ ಇರಲಾರದು. ರಸಜ್ಞರು ಕೆಲವರು ಇದ್ದಾಗ್ಯೂ ಅವರ ಅಭಿಪ್ರಾಯವೇ ಮುಖ್ಯಗಣ್ಯವಲ್ಲದೆ ಅರಸಿಕರಾದ ಮೂಢತಮರು ಅನೇಕರ ಅಭಿಪ್ರಾಯವು ಮುಖ್ಯವಲ್ಲ. ಕೆಲವರು ನಾಟಕ ಸಂಘದವರನ್ನು ನೋಡಿ ಬಲ್ಲೆನು, ಅವರೆನ್ನು ಕೆಲವರು ಬಹಳವಾಗಿ ಶ್ಲಾಘಿಸಿಯೂ ಇರುತ್ತಾರೆ. ಇವರ ನಟನೆಯನ್ನು ಹುಂಕಾರಗಳನ್ನು ರೀತಿಗಳನ್ನೂ ನೋಡಿದರೆ ಇವರು ದೇವರಿಂದ ನಿರ್ಮ್ಮಿಸಿದವರಲ್ಲವೆಂತಲೂ, ಒಬ್ಬ ಕೈಕೆಲಸದವನಿಂದ ನಿರ್ಮ್ಮಿತರಾದವರೆಂತಲೂ, ಭಾವಿಸಬೇಕಾದಷ್ಟು ಅಸಹ್ಯಕರವಾಗಿ ನಟಿಸುವರು. ಇಂಥಾ ಭಾಗಗಳನ್ನು ಸರಿಯಾಗುವಂತೆ ತಿದ್ದಿಕೊಳ್ಳಬೇಕು. ನಾಟಕದಲ್ಲಿ ಕವಿಗಳು ವಿದೂಷಕನು ಎಷ್ಟು ಮಾತನಾಡಬೇಕೆಂದು ಬರೆದಿರುತ್ತಾರೆಯೋ ಅಷ್ಟನ್ನೇ ಹೇಳಬೇಕಲ್ಲದೆ ತನ್ನ ಬುದ್ಧಿಯಿಂದ ಹೆಚ್ಚಿಸಿಕೊಂಡು ಅವಿವೇಕವಾಗಿ ಯದ್ವಾತದ್ವವಾಗಿ ಹೇಳಕೂಡದು: ಏಕೆಂದರೆ, ಕೆಲವರು ವಿದೂಷಕನ ವೇಷದವರು ತಾವೇ ನಕ್ಕು ಅದರಿಂದ ಮೂಢರಿಗೆ ನಗೆಬರುವಂತೆ ಮಾಡುವರು ; ಮತ್ತು ಕೆಲವರು ಮರೆತು ಹೋಗಿರುವ ಮಾತುಗಳನ್ನು ಈ ಮಧ್ಯಕಾಲದಲ್ಲಿ ಜ್ಞಾಪಿಸಿಕೊಳ್ಳುವದಕ್ಕಾಗಿ ವ್ಯಾಜಾಂತರದಿಂದ ಅವಕಾಶನ್ನು ಉಂಟುಮಾಕ್ಕೊಳ್ಳುವರು. ಈರೀತಿಯು ಬಹುಕೆಟ್ಟದ್ದು ಮತ್ತು ಅಸಹ್ಯಕರವು; ಇದರಿಂದ ಅಸಹ್ಯಕರನಾದ ವಿದೂಷಕನ ಅಹಂಕಾರವು ವ್ಯಕ್ತಪಡುವದು.

ERRATA.

ಅಸಾಧು ಸಾಧು ಪತ್ರಿಕೆ.

ಪುಟ.	ಪಙ್ತಿ.	ಅಸಾಧು.	ಸಾಧು.
೪	೨೦	ಹೊಗವಾಗ್ಗೆ	ಹೋಗುವಾಗ್ಗೆ
೭	೧೪	ತಕ್ಕದು	ತಕ್ಕದ್ದು
,,	೨೭	ಸಂತೊಷ	ಸಂತೋಷ
೯	೨೨	ಸುತ್ತೆನೆ	ಸುತ್ತೇನೆ
೧೪	೧೯	ಚಿಂತ್ತೆ	ಚಿಂತೆ
೧೫	೧೯	ಬಲೆ	ಬಲೆ
೧೬	೧೦	ಎಬಂತೆ	ಎಂಬಂತೆ
,,	೧೧	ಇನೊಂದು	ಇನ್ನೊಂದು
೨೪	೧೩	ಬಹುದೆ	ಬಹುದು
,,	೧೫	ಹೆಜ್ಜಾಗಿ	ಹೆಚ್ಚಾಗಿ
೨೭	೮	ವಿಷಯಪ್ರಾಯ	ವಿಷಪ್ರಾಯ
,,	೧೬	ಮ್ರುದು	ಮೃದು
೨೯	೨೦	ಉಳ್ಳನ್ದಾಗಿದೆ	ಉಳ್ಳದ್ದಾಗಿದೆ
೩೦	೧೫	ಆನುರಾಗ	ಅನುರಾಗ
೩೧	೫	ಈಪ್ರಾಸದ	ಈ ಪ್ರಾಸಾದ
೩೩	೬	ಲಿಲಾವತಿ	ಲೀಲಾವತಿ
೩೬	೨೦	ಕಾಯಾರಿಗಿರಲು	ಕಾರಿಯಾಗಿರಲು
೩೭	೮	ಆನುರಾಗದಿಂದ	ಅನುರಾಗದಿಂದ
೩೯	೧೧	ಆದೃಶ್ಯ	ಅದೃಶ್ಯ
೪೦	೬	ಪ್ರೆಯುಸಿ	ಪ್ರೇಯುಸಿ
೪೧	೨೧	ಅಗೆಲಿಕೆ	ಅಗಲಿಕೆ
೪೨	೨೫	೪೧	೧೪
೪೫	೨೭	ಅಕೆಯ	ಆಕೆಯ
,,	,,	ನನಲ್ಲಿ	ನನ್ನಲ್ಲಿ

ಪುಟ.	ಪಙ್ತಿ.	ಅಸಾಧು.	ಸಾಧು.
,,	೧೪	ಆದೆಲ್ಲಾ	ಅದೆಲ್ಲಾ
,,	೧೫	ಚಪಲಬಿತ್ತ	ಚಪಲಚಿತ್ತ
೪೭	೫	ಸಂಕಲ್ಬ	ಸಂಕಲ್ಪ
೪೮	೧೪	ಬಹೇದೆ	ಬಹುದೆ
,,	೧೫	ಹೆಳುತ್ತೇನೆ	ಹೇಳುತ್ತೇನೆ
,,	೧೬	ಸಮರ್ಥ್ಗನು	ಸಮರ್ಥನು
೫೭	೫	ಗೋತ್ತಿರು	ಗೊತ್ತಿರು
,,	೯	ಅಕೆಗೆ	ಆಕೆಗೆ
೫೫	೧೮	ನನಲ್ಲಿ	ನನ್ನಲ್ಲಿ
,,	೨೫	ನಿನ್ಬೊಳ್	ನಿನ್ನೊಳ್
೫೬	೭	ಇರೇವದೇನೊ	ಇರುವದೇನೊ
,,	೬	ಅಮೆಲೆ	ಆಮೇಲೆ
,,	೮	ವರಿಸುವದೆ	ವರಿಸುವದೇ
೫೭	೨೪	ಯಾದಿರ	ಯಾರಿರ
೫೯	೨೧	ಹೇಳಿಕೊಳ್ಳೇತ್ತಾನೆ	ಹೇಳಿಕೊಳ್ಳುತ್ತಾನೆ
೬೦	೮	ಕೊಪವು	ಕೋಪವು
,,	೧೬	ಒಬ್ನನನ್ನು	ಒಬ್ಬನನ್ನು
	೧೮	ಆಥವಾ	ಅಥವಾ
೬೧	೨೬	ವಾಸಮಾಡುತ್ತೆವೆಯೊ?	ವಾಸಮಾಡುತ್ತೇವೆಯೊ?
೬೨	೭	ಇಲ್ಲದಸ್ತಳಕ್ಕೆ	ಇಲ್ಲದಸ್ಥಳಕ್ಕೆ
,,	೧೪	ಮಷ್ಯನೆಂದು	ಮನುಷ್ಯನೆಂದು
	೧೯	ದ್ರೊಹಿಯಲ್ಲ	ದ್ರೋಹಿಯಲ್ಲ
	೨೦	ಗೊತ್ತೆಲ್ಲವೆಂದು	ಗೊತ್ತಿಲ್ಲವೆಂದು
೬೩	೨೧	ಸುಮಾಧಾನಪಡಿಸು	ಸಮಾಧಾನಪಡಿಸು
೬೪	೧೮	ಸ್ಮಶಾನಸ್ಥನಾಗಿರುತ್ತೇನೆ	ಶ್ಮಶಾನಸ್ಥನಾಗಿರುತ್ತೇನೆ
,,	೨೮	ಆಗಿರುವದು	ಆಗಿರುವನು.
೬೮	೧೦	ಅನೃನಾರೋಪಣೆ	ಅನೃತಾರೋಪಣೆ.
,,	೧೮	ಸಂಹರಿಸತಕ್ಕದು	ಸಂಹರಿಸತಕ್ಕದ್ದು.
೬೯	೧೭	ನನನ್ನು	ನನ್ನನ್ನು.

ಪುಟ.	ಪಙ್ತಿ.	ಅಸಾಧು.	ಸಾಧು.
,,	೨೨	ಜೋಡಸಿ	ಜೋಡಿಸಿ.
೩೦	೫	ಕ್ರಮೇಣಸ ಹಜ	ಕ್ರಮೇಣಸಹಜ.
,,	೬	ಕತ್ದಲೆಯಿಂದ	ಕತ್ತಲೆಯಿಂದ.
,,	೮	ಮಜೆಗಿಂತಲೂ	ಮಂಜಿಗಿಂತಲೂ,
,,	೧೦	ಹುಬುಗಳುಳ್ಳ	ಹುಬ್ಬುಗಳುಳ್ಳ.
,,	೧೨	ಧಾಮದಲಂಶಕಲಾ	ಧಾಮದಶಕಲಾ.
,,	೧೩	ಮಹೋತ್ಸವಾರ್ಥವಾಗಿ	ಮಹೋತ್ಸವಾರ್ಥವಾಗಿ.
,,	೨೫	ಧೀರಕೀರಶಥ	ಧೀರಕೀರರಥ.
೩೧	೧೩	ಆತ್ಮಹತ್ಯಾ	ಆತ್ಮಹತ್ಯವನ್ನು.
	೨೪	ಹನಯಿಂದೆ	ಹತಿಯಿಂದೆ.
೩೨	೨೫	ಪಾರಿವಾಣಪುಕ್ಕಿಯ	ಪಾರಿವಾಣಹಕ್ಕಿಯ.
೩೯	೩	ಅಷ್ಟ್ಯಘಟ್ಟ್ಯಯಾಗಿ	ಅಷ್ಟ್ಯುಘಟ್ಟ್ಯಯಾಗಿ.
,,	೧೮	ಅದ್ದರಿಂದ	ಆದ್ದರಿಂದ.
೮೩	೬	ಮುಂಚಿಯೋ	ಮುಂಚೆಯೋ,
೮೫	೧೬	ಮೆಲೆ	ಮೇಲೆ.
೯೫	೧೮	ಪೊಗುವೆ !	ಪೋಗುವೆ !.
೯೬	೫	ಗರುವಾರವೊ ?	ಗುರುವಾರವೊ ?.
,,	೧೩	(ಅತ್ಮಗತಂ)	(ಆತ್ಮಗತಂ).
೧೦೫	೨೫	ಹೊಡಿಯಿತು	ಹೊಡೆಯಿತು.
೧೦೩	೨೩	ಮೋಸವಗೆಲ್	ಮೋಸವಗೈ.
೧೧೨	೧೩	ಕ್ರೂರವಾಗಿ	ಕ್ರೂರವಾಗಿ.
೧೧೪	೨೪	ದೆಸೆಯಿಂದ	ದೆಸೆಯಿಂದ.
೧೨೦	೫	ಅಪಹರಿಸಿ	ನಪಹರಿಸಿ.
,,	೧೧	ಯ್ಯಾವಸಾ	ಯೌವನಾ.
೧೨೩	೨೩	(ಧೀರಶೂರಾ)	(ಸಾರಗುಣೇ).
೧೨೩	೨೩	ಬರೆದಿದೆನು	ಬರದಿದ್ದೆನು.
೧೨೯	೨	ಇಲ್ಲಿದು	ಇಲ್ಲಿದ್ದು.

ಶ್ರೀರಸ್ತು.

RÁMAVARMA CHARITRE

(ROMEO AND JULIET.)

ರಾಮವರ್ಮ ಚರಿತ್ರೆ

(ರೋಮಿಯೋ ಅಂಡ್ ಜೂಲಿಯಟ್.)

ಪ್ರಸ್ತಾವನೆ.

ಶ್ರೀಮಾಲೋಚನ ಕೈರವೇಂದು ಜಗತೀ ಕ್ಷೇಮಂಕರಂ ಶ್ರೀಕರಂ । ಶ್ಯಾಮಾಲದ್ಯುತಿ ಬಂಧುರಾಂಗನಜರಂ ಪೀತಾಂಬರಂ ಸುಂದರಂ ॥ ಸೋಮಾದೀಡಿತ ಪಾದಪದ್ಮಯುಗಳಂ ಸನ್ಮಂಗಳಂ ಶ್ರೀಗಳಂ । ಶ್ರೀಮಚ್ಚಾಮನೃಪಂಗೆ ತಾಂಕುಡುಗೆ ಸುಶ್ರೀಬೋಧವಂ ಮಾಧವಂ ॥ ೧ ॥

॥ ರಾಗ—ಕಾಂಭೋಜಿ ॥ ಆದಿತಾಳ ॥

ಸಲಹು ಲಕ್ಷ್ಮೀಶ । ಕಲುಷವಿನಾಶ ॥ ಪಲ್ಲವಿ ॥ ನಿಗಮವಿನುತ ಪದ । ಯುಗಳ ಲೋಕಾನಂದ ॥ ಖಗಪತಿ ವಾಹನ । ಜಗತೀಪಾವನ । ಅಗಣಿತಮಹಿಮನೆ । ಸುಗುಣ ರತ್ನಾಕರನೆ । ಮೃಗಧರಪೂಜಿತ । ನಗವೈರಿಸೇವಿತ ॥೧॥ ನೀಲಬಲಾಹಕ । ನೀಲನಿಭಾಂಗಕ । ಪಾಲನಪರ ಲೀಲಾ । ಲೋಲಸುಶೀಲ ॥ ವ್ಯಾಳಶಯನವನ । ಮಾಲಭಕ್ತಾವನ । ಶೀಲ ಕೃಪಾವಾಲ । ಶ್ರೀಲೋಲ ಗೋಪಾಲ ॥೨॥ ತಾಮರಸಾಂಬಕ । ಸಾಮಜ ಪಾಲಕ । ಶ್ರೀಮಹಿತಾಜರ ।

ಧಾಮಪೀತಾಂಬರ ॥ ಕೌಮುದೀಸಮ ಗೌರ । ಕೌಮೋದಕೀಧರ । ಚಾಮ ನೃಪಾಲಕ । ಕಾಮಿತದಾಯಕ ॥ ೩ ॥

(ಸುತ್ತಲೂ ನೋಡಿ ಆನಂದಯುಕ್ತನಾಗಿ) ಆಃ! ನಮ್ಮ ಪುಣ್ಯದಿಂದ ಸಕಲವೂ ಸೇರಿರುವದು.

ಕಂದ ॥ ಕಾಲಂ ಸುರಭಿವಿಶಾಲಂ । ಶೀಲಾಧಿಕನಂತು ಹೊಣಕವಿಕುಲತಿ
ಲಕಂ ॥ ತಾಳಲಯರಾಗವಿದರೀ । ಮೇಳದವರ್ಸಭ್ಯರಾದೊಡಂ
ರಸಿಕೇಂದ್ರರ್ ॥ ೧ ॥

ಆದ್ದರಿಂದ ನನ್ನ ನಾಟಕಪ್ರಯೋಗ ಚಾತುರ್ಯದಿಂದ ಈ ಸಭಿಕರ ಮನಸ್ಸನ್ನು ಆಕರ್ಷಿಸಲು ಕುತೂಹಲವುಂಟಾಗಿರುವದು. ಪ್ರಿಯೆಯಾದ ನಟಿಯನ್ನು ಕರೆವೆನು ; (ಎಂದು ತೆರೆಯಕಡೆಗೆ ನೋಡಿ) ಪ್ರಿಯೆ ! ಕಾಮನವಲ್ಲರಿ ! ಅಲಂಕೃತಳಾಗಿದ್ದರೆ ; ಇತ್ತ ಬಾ.

ನಟಿ. (ಬಂದು) ಆರ್ಯನೇ! ಇದೋ ಬಂದೆನು ಏನಪ್ಪಣೆ ?

ಸೂತ್ರಧಾರ. ಪ್ರಿಯೆ ! ಇಂಗ್ಲೆಂಡ್ ದೇಶದಲ್ಲಿ ಕವಿಸಾರ್ವಭೌಮನೆಂದು ಪ್ರಸಿದ್ಧನಾಗಿರುವ ಷೇಕ್ಸ್‌ಪೀಯರ್ ಎಂಬ ಕವಿಯಿಂದ ವಿರಚಿತವಾಗಿರುವ "ರೋಮಿಯೋ ಜೂಲಿಯಟ್" ಎಂಬ ಇಂಗ್ಲೀಷ್ ನಾಟಕವು ಕರ್ಣಾಟಕ ಭಾಷೆಯಲ್ಲಿ ರಚಿತವಾಗಿರುವದಷ್ಟೆ; ಆ ನಾಟಕವನ್ನೇ ಅಭಿನಯಿಸಬೇಕೆಂದು ಈ ಸಭಿಕರು ಆಜ್ಞಾಪಿಸಿ ಇರುವರು. ಆದ್ದರಿಂದ ಸಂಗೀತಾರಂಭವನ್ನು ಮಾಡು.

ನಟಿ. ಆರ್ಯನೆ ! ನನ್ನ ಸಂಗೀತವಲ್ಲಿ ಯಾವ ರುತುವನ್ನು ವರ್ಣಿಸಲಿ ?

ಸೂತ್ರ. ಪ್ರಿಯೆ ! ವಸಂತಕಾಲವು ಸಕಲಜನ ಮನೋವಿನೋದಕಾರಿಯಲ್ಲವೆ ? ಕೇಳು,

ವೃತ್ತಂ॥ ಸಹಕಾರಾವಳಿ ಯಾವಕಾಲದೊಳ್ ತಾನಾಗಿರ್ಕುವೆೋ ಕಾಮಗ
ಸಹಕಾರಂ ನೆರೆಮಾರನೆಲ್ಲಜಗಕಂ ತಾಂಮಾರನಾಗಿರ್ಪನೊ ॥ ಬ
ಮಂದಾಶುಗನಾದನಾ ವ್ರದರೊಳೇ ತಾನಾಶುಗಂ ಮೌನವಂ । ವ
ರ್ದ್ಧಿಪಿಕ ಕಾದುದೋಕಲಗಳತ್ವಂ ನೀನದಂ ಬಣ್ಣಿಸಾ ॥ ೩ ॥

ನಟಿ. ಆರ್ಯನೆ! ನಿನ್ನ ಅಪ್ಪಣೆಯಾದಂತಾಗಲಿ.

॥ ರಾಗ—ಕಮಾಚ್ ॥ ಆದಿತಾಳ ॥ (ಚಲುವನಲ್ಲಿಗೆ ಹೋಗುವೆ).

ಸುರಭಿಕಾಲ ವೈತಂದುದು । ಮೆರೆದು ದೀ ॥ ಪಲ್ಲ ॥ ಮಾರುತಧುತ ಸಹ ಕಾರಪರೀಮಳವ । ಮೀರಿದಾ ನಂದದಿಂ । ಬೀರುತ ಲೀ ॥೧॥ ಆಗತಮದನಗೆ । ಬಾಗುವಂದದೆಲತೆ । ರಾಗದಿಂ ತೂಗಲು । ಬೇಗದಿ ನೀ ॥ ೨ ॥ ಕಲಗಳಕ ಲರವ । ಕಲಕಲಮುಣ್ಮಿರ । ಅಳಿಯ ಝೇಂಕಾರಮೇ । ಬಳಸಿರ ಲೀ ॥ ೩ ॥

ಸೂತ್ರ. ಕಂದ ॥ ಸರಸಮುಹ ನಿನ್ನ ಗಾನದೆ । ಪರವಶತೆಯ ಪೊಂದಿ ತೆನ್ನ ಮಾನಸಮೀಗಳ್ ॥ ವಿರಹದೆ ಲೀಲಾವತಿಯಾ । ತೆರದಿಂದುಪವ ನದೆಹಂಮುದಂ ಬೊಂದಿದವೊಲ್ ॥ ೪ ॥

ನಟಿ. ಆರ್ಯನೆ! ಆ ಲೀಲಾವತಿಯ ತಂದೆಯ ಕಡೆಯುವರಿಗೂ, ರಾಮ ವರ್ಮನ ತಂದೆಯಕಡೆಯುವರಿಗೂ, ಇದ್ದ ದ್ವೇಷವು ಇನ್ನೂ ಶಮನವಾಗಲಿ ಲ್ಲವೊ?

ಸೂತ್ರ. ಪ್ರಿಯೆ! ಇನ್ನೂ ಇಲ್ಲಾ.

(ತೆರೆಯಲ್ಲಿ) ನನ್ನಾಣೆಗೂ ಈ ಅಪಮಾನವನ್ನು ಸೈರಿಸಲಾರೆನು.

ಸೂತ್ರ. (ಕೇಳಿ ತೆರೆಯಕಡೆ ನೋಡಿ) ಪ್ರಿಯೆಕಾಮವಲ್ಲರಿ!

ಕಂದ ॥ ಅಡಿಗಡಿಗೋರ್ವ ರನೋರ್ವ । ರ್ಝಡಿಯುತೆ ಮೂದಲಿಸಿಖ ಡ್ಗವಂ ಝಳಪಿಸುತಂ ॥ ಕಡುಗೋಪದಿ ನಾರ್ಭಟಿಸು । ತ್ತೊಡನಿ ತ್ತಲೆ ಸಾರುತಿಹರು ಭಟವರರೀರ್ವರ್ ॥ ೫ ॥

ಆದ್ದರಿಂದ ನಾವು ಇವರ ಮಧ್ಯದಲ್ಲಿ ಸಿಕ್ಕಿಕೊಂಡು ಪೇಚಾಡುವದು ರಿಯಲ್ಲ. ಬಾ ಮುಂದಿನಕಾರ್ಯ ಸನ್ನಾಹಕ್ಕೆ ಹೋಗೋಣ.

(ಇಬ್ಬರೂ ಹೋಗುವರು).

ಪ್ರ ಥ ಮಾ ೦ ಕ ೦.

ಪ್ರಥಮಸ್ಥಾನಂ.—ಬಹಿರಂಗವಾದ ಸ್ಥಳ.

(ಸೆಂತನು ಗ್ರೈವೇಯಕರು ಆಯುಧಪಾಣಿಗಳಾಗಿ ಪ್ರವೇಶಿಸುವರು.)

ಸೆಂತನು. ನನ್ನಾಣೆಗೂ ಈ ಅಪಮಾನವನ್ನು ಸಹಿಸಲಾರೆನು.

ಗ್ರೈವೇಯಕ. ಏನು, ಹಾಗೆ ಸಹಿಸಿದರೆ ನಾವು ಹೇಡಿಗಳೇ ಸರಿ.

ಸೆಂ. ಕೋಪವಾಗಿರುವಾಗಲೇ ಕಲಹವನ್ನು ಮಾಡೋಣ. ಮಾಧುರ ವಂಶಸ್ಥನಾದ ಒಬ್ಬ ನೀಚನು ನನ್ನನ್ನು ಕೆಣಕುತ್ತಲೇ ಇರುವನು.

ಗ್ರೈ. ಈ ದ್ವೇಷವು ನಮ್ಮ ಯಜಮಾನರಿಗೂ ಅವರ ಸೇವಕರಿಗೂ ಇರುವದು.

ಸೆಂ. ಇದೋ ಬಂದೆ, ನನ್ನ ಆಗ್ರಹವನ್ನು ತೋರಿಸುವೆನು.

ಗ್ರೈ. ಮಾಧುರನ ಮನೆತನದವರೀರ್ವರು, ಅದೋ ಬರುತ್ತಿರುವರು, ನಿನ್ನ ಕತ್ತಿಯನ್ನು ತೆಗೆ.

ಸೆಂ. ನನ್ನ ಕತ್ತಿಯನ್ನು ಹಿರಿದೇ ಇರುವೆನು; ಕಲಹವನ್ನು ಮಾಡು ನಾನು ನಿನ್ನ ಹಿಂದಿರುವೆನು.

ಗ್ರೈ. ಏನು ! ಹಿಂದೆ ಓಡಿಹೋಗುವಿಯೋ.

ಸೆಂ. ನನ್ನಲ್ಲಿ ಅನುಮಾನಬೇಡ.

ಗ್ರೈ. ಏನು, ನಿನಗೆ ನಾನು ಹೆದರುವೆನೊ ?

ಸೆಂ. ನಾವು ನ್ಯಾಯವನ್ನು ಅನುಸರಿಸೋಣ ಅವರೇ ಕೆಣಕಲಿ.

ಗ್ರೈ. ಅವರು ಇಲ್ಲಿ ಹೋಗವಾಗ್ಗೆ ನಾನು ಹುಬ್ಬುಗಂಟು ಹಾಕಿಕೊಳ್ಳುತ್ತೇನೆ ; ಏನು ಮಾಡುತ್ತಾರೆಯೋ ಮಾಡಲೀ.

ಸೆಂ. ನಾನು ನನ್ನ ಬೆಟ್ಟನ್ನು ಕಚ್ಚಿಕೊಳ್ಳುತ್ತೇನೆ ; ಇದನ್ನು ನೋಡಿಸುಮ್ಮನೆ ಹೋದರೆ ಅವರಿಗೇ ಅಪಮಾನವಾಗುವದು.

(ಏಕಪಿಂಗ ಬಾಲಚಂದ್ರರು ಪ್ರವೇಶಿಸುವರು).

ಏಕಪಿಂಗ. ಎಲೋ, ನನ್ನನ್ನು ನೋಡಿ ಬೆಟ್ಟನ್ನು ಕಚ್ಚುವೆಯೋ ?

ಸೆಂ. ನನ್ನ ಬೆಟ್ಟನ್ನು ನಾನು ಕಚ್ಚಿಕೊಂಡೆನು.

ಏಕ. ಏನು, ನಮ್ಮನ್ನು ನೋಡಿ ಕಚ್ಚಿದೆಯೋ ?

ಸೆಂತ. (ಗ್ರೈವೇಯಕನಕಡೆ ತಿರುಗಿ) ಹೌದೆಂದರೆ ನ್ಯಾಯವು ನಂಮಂತೆ ಇರುವದೊ?

ಗ್ರೈ. (ಸೆಂತನುವಿಗೆ ಪಾರ್ಶ್ವದಲ್ಲಿ) ಇಲ್ಲಾ.

ಸೆಂ. ತಮ್ಮನ್ನನೋಡಿ ಅಲ್ಲಾ. ಸುಮ್ಮನೆ ಕಚ್ಚಿಕೊಂಡೆನು.

ಗ್ರೈ. ವ್ಯಾಜ್ಯವನ್ನು ಮಾಡುವೆಯೋ?

ಏಕ. ವ್ಯಾಜ್ಯವೇ? ಇಲ್ಲ.

ಸೆಂ. ವ್ಯಾಜ್ಯವನ್ಮಾಡುವದಾದರೆ ನಾನು ಸಿದ್ಧನಾಗಿಯೇ ಇರುವೆನು; ನಿನ್ನ ಯಜಮಾನನಿಗೆ ಸರಿಯಾದ ಧಣಿಯನ್ನು ನಾನೂ ಸೇವಿಸುತ್ತಿರುವೆನು.

ಏಕ. ನನ್ನ ಧಣಿಗಿಂತಲೂ ಅವನು ಉತ್ತಮನಲ್ಲ.

ಸೆಂ. ಏನು?

ಗ್ರೈ. ನನ್ನ ಯಜಮಾನನ ನೆಂಟನೊಬ್ಬನು ಬರುತ್ತಿರುವನು; ಉತ್ತಮನೆಂದು ಹೇಳು.

ಸೆಂ. ಸಂದೇಹವೇನು, ಉತ್ತಮನೇ.

ಏಕ. ನೀನು ಆಡುವದೆಲ್ಲಾ ಶುದ್ಧಾಂಗವಾಗಿ ಸುಳ್ಳು.

ಸೆಂ. ಗಂಡಸರೆ ಆದರೆ ಬನ್ನಿ. ಗ್ರೈವೇಯಕನೆ! ಪರರನ್ನು ನಿಗ್ರಹಿಸುವ ನಿನ್ನ ಏಟನ್ನು ಮರೆಯಬೇಡ. (ಕಲಹವನ್ನು ಮಾಡುವರು).

ಇ

ಬೇಹಾರಿ. *ಎಲೆ ಹುಚ್ಚರೆ! ಬಿಡಿಬಿಡಿ ನಿಮ್ಮ ಕತ್ತಿಗಳನ್ನು ದೂರ ಹಾಕಿಬಿಡಿ. ನೀವು ಮಾಡುವ ಅಪರಾಧವು ನಿಮಗೆ ಗೊತ್ತೇಯಿಲ್ಲಾ.

ನಾ

(ಅವರ ಕತ್ತಿಗಳನ್ನು ಕೆಳಕ್ಕೆ ಹಾಕುತ್ತಾನೆ.)

(ತ್ರೈವಿಕ್ರಮನು ಬರುವನು.)

ತ್ರೈ. ಏನು! ನೀನು ಈ ಪಶುಗಳ ಮಧ್ಯದಲ್ಲಿ ಸಿಕ್ಕಿರುವಿಯೋ? ಬೇಹಾರಿ! ಇಗೋ ತಿರುಗು ಯಮಪುರವನ್ನು ನೋಡು.

॥ ರಾಗ—ಬೇಗಡೆ ॥ ಛಾಪುತಾಳ ॥ (ಅವರಿಗಿಂತ ನೀನಧಿಕನೊ).

*ಬಿಡಿಬಿಡಿ ನಿಮ್ಮ । ಕೇಡುಗತನವನು ॥ ಪ ॥ ನಿಮ್ಮಖಡ್ಗಗಳನು । ಸುಮ್ಮನೆ ಬಿಸುಡುವ । ದುಮ್ಮಹವೇನಿದಿ । ದೊಮ್ಮೆಹೆಮ್ಮೆಯೊಳು ॥ ೧ ॥ ದುರುಳರೆ ನೀವೆಲ್ಲಾ । ವಿರಚಿ ತಪ್ಪನು । ಅರಿತಿಲ್ಲವೆನೀವೀ । ಪರಿಯದುರ್ಮತಿಯ ॥ ೨ ॥ ಈ ಕೋಪದಿಂ ಬಹ । ಲೋಕಬಾಧಕಮವಿ । ವೇಕಬುದ್ಧಿಯು ಸಾಕು । ಸಾಕು ಕಾಕುತನವ ॥ ೩ ॥

ಬೇ. ನಾನು ಸಮಾಧಾನ ಪಡಿಸುತ್ತಿರುವೆನು. ನಿನ್ನ ಕತ್ತಿಯನ್ನು ಮುಚ್ಚು, ಇಲ್ಲವೆ ಅದರ ಸಹಾಯದಿಂದ ಇವರ ಕಲಹವನ್ನು ನಿಲ್ಲಿಸು.

ತ್ರೈ. ಕತ್ತಿಯನ್ನು ಸೆಳೆದಮೇಲೆ ಸಮಾಧಾನವೋ!

ಕಂದ ॥ ನಾರಕವಂ ಮಾಧುರಪರಿ। ವಾರದಜನರನ್ನು ನಿನ್ನುಮನದೇತೆರ
ದಿಂ ॥ ವೈರಿಸುತಿಹೆ ನಾತೆರದಿಂ। ವಿಾರಿಸಮಾಧಾನದುಕ್ತಿಯಂ ದ್ವೇ
ಷಿಪೆನಾಂ ॥ ೧ ॥ (ಎಂದು ಜಗಳವಾಡುತ್ತಾರೆ).

(ಉಭಯಪಕ್ಷದ ಜನಗಳು ಅನೇಕರು ಬಂದು ಸೇರುತ್ತಾರೆ. ಪಟ್ಟಣದವರು ದೊಣ್ಣೆಗಳು, ಕಲ್ಲು, ಆಯುಧಗಳನ್ನು ತೆಗೆದುಕೊಂಡು ಬರುತ್ತಾರೆ).

ಪಟ್ಟಣದವರು. ದೊಣ್ಣೆಗಳೆಲ್ಲಿ ! ಕತ್ತಿಗಳೆಲ್ಲಿ ! ಹೊಡೆಯಿರಿ, ಸೋಲಿಸಿ, ಕಾಪಿಲನ ಕಡೆಯುವರು ಸಾಯಲಿ! ಮಾಧುರನ ಕಡೆಯುವರು ಹಾಳಾಗಲಿ!

(ಕಾಪಿಲನು ತನ್ನ ಹೆಂಡತಿಯೊಡನೆ ಪ್ರವೇಶಿಸುವನು.)

ಕಾಪಿ. ಇದೇನು ಗದ್ದಲ? ನನ್ನ ಯುದ್ಧಖಡ್ಗವನ್ನು ಕೊಡು.

ಲಲಿತಾಂಗಿ. ಕೈಕೋಲು ಬೇಕೋ! ಖಡ್ಗವನ್ನು ಯಾತಕ್ಕೆ ಕೇಳುವಿರಿ?

ಕಾಪಿ. ಖಡ್ಗವೇಬೇಕು. ವೃದ್ಧನಾದ ಮಾಧುರನು, ನನ್ನನ[ಿ]ದ ಸ್ವಲ್ಪವೂ ಲಕ್ಷ್ಯಮಾಡದೆ ಕತ್ತಿಯನ್ನು ಆಡಿಸುತ್ತಿರುವನು.

(ಮಾಧುರನು ಹೆಂಡತಿಯೊಡನೆ ಪ್ರವೇಶಿಸುವನು.)

ಮಾಧುರ. ಎಲೆ! ನೀಚನಾದ ಕಾಪಿಲನೇ, ಅಡ್ಡಿಯನ್ನು ಮ[ಾಡ] ಬೇಡ, ನಾನು ಹೋಗುವೆನು.

ಕಲಾವತಿ. ಶತ್ರುವನ್ನು ನೋಡಲುಬಂದು ಹೆಜ್ಜೆಯನ್ನೂ ಇಡಬೇ[ಡ]

(ರಾಜನು ಪರಿಜನಗಳೊಡನೆ ಪ್ರವೇಶಿಸುವನು.)

ರಾಜ. ಕ್ಷೇಮಕ್ಕೆ ಶತ್ರುಗಳಾದ ದ್ರೋಹಿಗಳಿರಾ, ಆಯುಧಗಳ ನ್ನು ದುರುಪಯೋಗಪಡಿಸುವ ಪಾಪಿಗಳಿರಾ ಏನು ಕೇಳುವದಿಲ್ಲವೊ? ನಿಮ್ಮ ಈ ಕ್ರೋಧಾಗ್ನಿಯನ್ನು ನಿಮ್ಮ ರಕ್ತಪ್ರವಾಹದಿಂದಲೇ ಶಮನ ವನ್ನು ಮಾಡುವ ಪಶುಗಳಿರಾ, ನಿಮ್ಮ ರಕ್ತಮಯವಾದ ಕೈಗಳಿಂದ

ಹಿಡಿದಿರುವ, ಕತ್ತಿಗಳನ್ನು ಈಗಲೇ ಬಿಸಾಡದಿದ್ದರೆ, ಶಿಕ್ಷಿಸುವೆನು. ಕುಪಿತನಾದ ನಿಮ್ಮ ಅರಸನ ಆಜ್ಞೆಯನ್ನು ಕೇಳಿ. ಎಲೆ ಕಾಪಿಲನೇ, ಎಲೆ, ಮಾಧುರನೆ! ನೀವಿಬ್ಬರೂ ಅಕಾರಣವಾದ ಒಂದು ಮಾತಿಗೋಸ್ಕರ ಪರಸ್ಪರ ದ್ವೇಷಿಸಿ ಈ ರಾಜವೀಥಿಯಲ್ಲಿ ಕಲಹವನ್ನು ಮಾಡಿ ಪ್ರಜಾಸ್ವಾಸ್ಥ್ಯಕ್ಕೆ ಭಂಗವನ್ನು ಮೂರುಸಾರಿ ಮಾಡಿದಿರಿ. ಮತ್ತು ಈ ಪಟ್ಟಣದಲ್ಲಿ ಬಹುಕಾಲದಿಂದಲೂ ನಿರಾಯಾಸವಾಗಿ ಸುಖದಿಂದಿದ್ದ ವೃದ್ಧರೂಕೂಡ ಉಚಿತಾಲಂಕಾರಗಳನ್ನು ತ್ಯಜಿಸಿ, ನಿಮ್ಮ ಕ್ರೂರಕಲಹ ಶಮನಾರ್ಥವಾಗಿ, ಆಯುಧವನ್ನು ಧರಿಸುವಂತೆ ಮಾಡಿರುವಿರಿ. ಇನ್ನುಮೇಲೆ ಸ್ವಾಸ್ಥ್ಯಕ್ಕೆ ಭಂಗಪಡಿಸಿದರೆ, ನಿಮ್ಮ ಪ್ರಾಣಗಳಿಂದಲೇ ಶಮನವನ್ನು ಮಾಡುವೆನು. ಈಗ ಇತರರೆಲ್ಲರೂ ಇಲ್ಲಿಂದ ಹೋಗಿ. ಕಾಪಿಲನೆ ನೀನು ನನ್ನೊಂದಿಗೆ ಬಾ. ಮಾಧುರನೆ ನೀನು ಈ ವಿಷಯದಲ್ಲಿ ನಮ್ಮ ಸಂತೋಷವನ್ನು ತಿಳಿಯಲು, ಮಧ್ಯಾಹ್ನಕ್ಕೆ ನಮ್ಮ ಅರಮನೆಗೆ ಬರಬೇಕು. ಮರಣವನ್ನು ತಪ್ಪಿಸಿಕೊಳ್ಳಬೇಕಾದರೆ, ಎಲ್ಲರೂ ಈಗಲೇ ಹೋಗತಕ್ಕದು.

(ರಾಜ, ಪರಿಜನಗಳು, ಕಾಪಿಲ, ಲಲಿತಾಂಗಿ, ತ್ರೈವಿಕ್ರಮ, ಪಟ್ಟಣಸ್ಥರೂಹೋಗುತ್ತಾರೆ).

ಮಾ. ಈ ಕಲಹವನ್ನು ಪ್ರಾರಂಭಿಸಿದವರು ಯಾರು? ಬಾಲಕನೆ, ಇದು ಪ್ರಾರಂಭವಾದಾಗ ನೀನು ಇಲ್ಲಿಯೇ ಇದ್ದೆಯೋ?

ಬೇ. ನಿನ್ನ ಪ್ರತಿಪಕ್ಷದವನ ಸೇವಕರು, ನಿನ್ನ ಕಡೆಯವರೂ, ಸೇರಿ ನಾನು ಬರುವದಕ್ಕೆ ಮುಂಚೆಯೇ, ಇಲ್ಲಿ ಕಲಹವನ್ನು ಮಾಡುತ್ತಿದ್ದರು. ಅವರನ್ನು ಬಿಡಿಸಲು ಪ್ರಯತ್ನಿಸಿದೆನು; ಆಗ ತ್ರೈವಿಕ್ರಮನು ಖಡ್ಗಪಾಣಿಯಾಗಿ ಬಂದನು. ನನ್ನ ಸಮಕ್ಷಮದಲ್ಲಿಯೇ ನಮ್ಮವರನ್ನು ನಿರಾಕರಿಸುತ್ತಾ, ಕತ್ತಿಯನ್ನು ಝಳಪಿಸುತ್ತಿದ್ದನು. ಈ ರೀತಿಯಲ್ಲಿ ಕಲಹವು ನಡೆಯುವಾಗ್ಗೆ, ಉಭಯಪಕ್ಷದ ಜನಗಳೂ, ಇತರರೂ, ಗುಂಪು ಸೇರಿದ್ದರು. ಅಷ್ಟರಲ್ಲಿಯೇ ಧೊರೆಯು ಬಂದು ಎಲ್ಲರನ್ನೂ ಬೇರೆಬೇರೆಮಾಡಿದನು.

ಕಲಾವತಿ. ಆಹಾ! ನಮ್ಮ ರಾಮವರ್ಮನು ಎಲ್ಲಿರುವನು? ನೀನು ಅವನನ್ನು ಈ ದಿನ ನೋಡಿದ್ದೆಯೊ? ಈ ವ್ಯಾಜ್ಯದಲ್ಲಿ ಅವನು ಇಲ್ಲದೇ ಇದ್ದದ್ದು ನನಗೆ ಬಹಳ ಸಂತೊಷ.

ಬೇ. ಕಂದ ॥ ಲೋಕಾರಾಧಿತಸೂರ್ಯಂ । ಪಾಕಾಹಿತ ದಿಕ್ಸುವರ್ಣವಾತಾ
ಯನದಿಂ ॥ ಶ್ರೀಕರನುದಯಿಪಮುನ್ನವೆ । ಶೋಕಾಕುಲನಾಗಿ
ಚರಿಸಲಾಂ ಪೋಗಿರ್ದೆಂ ॥ ೧ ॥

ಅಲ್ಲಿ ಊರಿನ ಪಶ್ಚಿಮ ದಿಕ್ಕಿನ ಅತ್ತೀಮರದ ತೋಪಿನಲ್ಲಿ, ಸಂಚರಿಸು ತ್ತಿದ್ದ ನಿನ್ನಮಗನನ್ನು ನೋಡಿ, ಅವನ ಬಳಿಗೆ ಹೋಗುತ್ತಿರುವಲ್ಲಿ, ನನ್ನನ್ನು ಕಂಡು ಅವನು ಮರೆಯಾದನು. ಏಕಾಂಗಿಯಾಗಿರುವಾಗ್ಗೆ ಯೋ ಚನೆಯು ನನಗೆ ಹ್ಯಾಗೆ ಬಹಳ ಜಾಗರೂಕವಾಗಿರುವದೊ ಹಾಗೆಯೇ ಅವನಿಗೂ ಇರುವದೆಂದು ಭಾವಿಸಿ, ಅವನು ಹೋದ ಪ್ರದೇಶವನ್ನು ಬಿಟ್ಟು, ನನ್ನನ್ನು ತ್ಯಜಿಸಿದ ಅವನನ್ನು ನಾನೂ ತ್ಯಜಿಸಿ ಅವನಿಗೆ ತಪ್ಪಿ ಸಿಕೊಂಡು ಬಂದೆನು.

ಮಾಧು. ಅನೇಕಾವರ್ತಿ ಪ್ರಾತಃಕಾಲಗಳಲ್ಲಿ ಅಲ್ಲಿಯೇ ತಿರುಗುತ್ತಾ ಇರುವನು.

ಕಂದ ॥ ಮದನಾಗ್ನಿಯ ಧೂಮದವೋ । ಲೊದಗುವ ಕಡುಬಿಸಿಯನಾಂತ
ನಿಟ್ಟುಸುರಿಂದಂ ॥ ಮುದಿರವಪೆಚ್ಚಿಸುತಂ ಕಾ । ಲ್ಯದಹಿಮವಂ
ಕಂಬನಿಗಳನುಜ್ಜ್ರುಂಭಿಸುತಂ ॥ ೩ ॥

* ಸಮಸ್ತಪ್ರಾಣಿಗಳಿಗೂ ಸಂತೋಷವನ್ನುಂಟು ಮಾಡುವ ಸೂರ್ಯನು ರಾತ್ರಿಯ ಅಂಧಕಾರದ ತೆರೆಯನ್ನು ತೆಗೆಯಲು, ಪೂರ್ವದಿಕ್ಕಿನಲ್ಲಿ ಪ್ರಾರಂ ಭಿಸಿದರೆ ವ್ಯಸನಪೀಡಿತನಾದ ನನ್ನಮಗನು, ಬೆಳಕಿನಿಂದಕದ್ದು ಮನೆಯೊ ಳಕ್ಕೆ ಬಂದು ಅಂತರಂಗವಾಗಿ ಕಿರುಮನೆಯಲ್ಲಿ ಸೇರಿಕೊಳ್ಳುವನು. *

॥ ರಾಗ—ಹಿಂ ಮುಖಾರಿ ॥ ಆದಿತಾಳ ॥ (ಶೈಲಸಾರ್ವಭೌಮ).

* ಕೇಳುಕೇಳು ಬೇಹಾರಿ । ಹೇಳುವೆನು ಸಾರಿ ॥ ಪಲ್ಲ ॥ ತಾಳಲಾರದೆನ್ನಯ । ಬಾ ನಾ ಪರಿಯನು ॥ ಅ ॥ ಮೂರುಲೋಕಕಾನಂದ । ಸಾರವನ್ನು ತೋರುವ ॥ ಚಾರುಕ ತಿವಾರರುಚಿರ । ವಾರಿಜಾಪ್ತಬಂಧವು ॥ ೧ ॥ ಪೂರಿತನೈಶಾಂಧ । ಕಾರಯವನಿಕೆಯಾ ವಾರೆಮಾಡಿ ತೆಗೆಯಲು । ಪ್ರಾರಂಭವೆಸಗೆ ॥ ೨ ॥ ಕಾಂತಾಮಣಿಯವಿರಹಾ । ಕ್ರಾಂ ನಾಗಿಪುತ್ರನು । ಅಂತರಂಗದಲ್ಲಿ ಕುಳಿತು । ಚಿಂತೆಪಡುತಿರ್ಪನು ॥ ೩ ॥

ನ

ದ

ಕಿಟಕಿಗಳನ್ನು ಮುಚ್ಚಿ ಬಿಸಿಲನ್ನು ಹೊರಪಡಿಸಿ, ರಾತ್ರೆಯನ್ನು ತಾನೇ ನಿರ್ಮಿಸಿಕೊಳ್ಳುವನು. ಇಂಥಾವನ ನಡತೆಯು ಒಳ್ಳೆಬುದ್ಧಿವಾದಗಳಿಂದ ಸರಿಯಾಗದಿದ್ದರೆ, ಬಲುಕೇಡು ಸಂಕಟವೂ ಪ್ರಾಪ್ತವಾಗುವದು.

ಬೇ. ಪೂಜ್ಯನಾದ ಚಿಕ್ಕಪ್ಪನೆ, ಹೀಗೆ ಇರುವದಕ್ಕೆ ಕಾರಣವು ನಿನಗೆ ತಿಳಿದಿರುವದೋ ?

ಮಾ. ಇಲ್ಲ, ಅವನಿಂದ ತಿಳಿಯಲಸಾಧ್ಯವು.

ಬೇ. ನಯಭಯಗಳಿಂದ ಕೇಳಿರುತ್ತೀಯೋ ?

ಮಾ. ನಾನು, ಅನೇಕ ಸ್ನೇಹಿತರೂ ಸಹ, ನಾನಾಪ್ರಕಾರವಾಗಿ ಕೇಳಿದೆವು. ಆದರೆ—

ಕಂದ ॥ ಕೋರಂಗಳರಳತಮ್ಮಯ । ಚಾರುತ್ವವ ತೋರುತಂಪರೀಮಳ
ಭರವಂ ಸೂರಂಗರ್ಪಿಸುವನಿತರೊ । ಳಾರಡಿ ಕೋರಕವ ಕಡಿದು
ಕೆಡಿಸಿದತೆರದಿಂ ॥ ೪ ॥

ನನ್ನ ಮಗನು, ಇತರರು ಊಹಿಸುವದಕ್ಕೂ, ತಿಳಿಯುವದಕ್ಕೂ ಅವಕಾಶವಿಲ್ಲದಂತೆ ತನ್ನ ಯೋಚನೆಯನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಮರುಗುವನು. ಅವನ ವ್ಯಸನಕಾರಣವು ಸ್ವಲ್ಪಮಟ್ಟಿಗಾದರೂ ತಿಳಿದರೆ, ಅದನ್ನು ಪರಿಹರಿಸಲು ಬಹಳ ಅಪೇಕ್ಷೆಯುಳ್ಳವರಾಗಿರುವೆವು.

ಬೇ. ಆಹಾ ! ಇಲ್ಲಿಯೆ ಬರುತ್ತಿರುವನು ನೋಡು. ಆದ್ದರಿಂದ ನೀನು ಸ್ವಲ್ಪದಯವಿಟ್ಟು ಮರೆಯಾದರೆ, ಅವನ ವ್ಯಸನಕ್ಕೆ ಕಾರಣವನ್ನು ಯಾವ ಪ್ರಯತ್ನದಿಂದಲಾದರೂ, ತಿಳಿದುಕೊಳ್ಳುತ್ತೇನೆ.

ಮಾ. ನೀನು ಇಲ್ಲಿ ನಿಲ್ಲುವದ್ದರಿಂದ ನಿನ್ನ ಪ್ರಯತ್ನವು ಸಾರ್ಥಕವಾಗಲೆಂದು ನಾನು ದೇವರಿಗೆ ಪ್ರಾರ್ಥಿಸುತ್ತೇನೆ. ಪತ್ನಿಯೆ ಬಾ, ನಾವು ಹೋಗೋಣ. (ಹೋಗುವರು).

(ರಾಮವರ್ಮನು ಪ್ರವೇಶಿಸುವನು.)

ಬೇ. ಸಹೋದರನೆ, ನಿನಗೆ ಸುಪ್ರಭಾತವೆ ?

ರಾ. ದಿವಸವು ಇನ್ನೂ ಇಷ್ಟು ಬಾಲ್ಯಾವಸ್ಥೆಯಲ್ಲಿಯೇ ಇರುವದೊ ?

ಬೇ. ಈಗಲೇ ಒಂಭತ್ತು ಘಂಟೆ ಹೊಡೆಯಿತು.

ರಾ. ಅಯ್ಯೋ! ದುಃಖವು ಕಾಲವನ್ನು ಎಷ್ಟು ದೀರ್ಘವನ್ನಾಗಿ ಮಾಡುವದು. ಈಗಲೇ ಅತಿಜಾಗ್ರತೆಯಾಗಿ ಹೋದವನು ನನ್ನ ತಂದೆ ಯಲ್ಲವೆ?

ಬೇ. ಹೌದು; ಯಾವ ದುಃಖವು ನಿನ್ನ ಕಾಲವನ್ನು ದೀರ್ಘವನ್ನಾಗಿ ಮಾಡುವದು?

ರಾ. ಯಾವದು ಲಭಿಸಿದ್ದರೆ ಕಾಲವು ಸಂಕುಚಿತವಾಗುತ್ತಿತ್ತೋ ಅದು ಲಭ್ಯವಾಗದೆ ಇರುವದ್ದರಿಂದ.

ಬೇ. ಅನುರಾಗಯುಕ್ತನಾಗಿರುವೆಯೋ?

ರಾ. ಅದರಿಂದ ಹೊರಗಾಗಿರುವೆನು.

ಬೇ. ಏನು, ಅನುರಾಗದಿಂದ ಹೊರಗಾಗಿಯೊ?

ರಾ. ನನ್ನನ್ನು ಮೋಹಿತನನ್ನಾಗಿ ಮಾಡಿದ ಆಕೆಯ ವಿಶ್ವಾಸದಿಂದ ಹೊರಗಾಗಿ ದುಃಖಪಡುತ್ತಿರುವೆನು.

ಕಂದ ॥ ಕುಸುಮವೆ ಶಿಲೀಮುಖಂ ಮೋಹ! ಶ್ವಸನಂ ಸಖನಂಗರಹಿತನಾ
ದೊಡುಮದನಂ ॥ ಮುಸೆದಲಗನೆಸೆದು ಕಟ್ಟು । ಬ್ಬಸವಡಿಪಂ ಮಥಿಸಿ
ಮನವ ಕರ್ಕಶತನದಿಂ ॥ ೫ ॥

ರಾ. ಅಂಥನಾದ ಮನ್ಮಥನು ತನ್ನ ಬಾಣಗಳನ್ನು ಎಷ್ಟು ಸರಿಯಾಗಿ ಗುರಿಮಾಡುವನು. ಎಲ್ಲಿ ಊಟವನ್ನು ಮಾಡೋಣ? ಅಯ್ಯೋ! ಈಗ ಇಲ್ಲಿನಡೆದ ಕಲಹವು ಯಾವದು? ಛೀ! ಹೇಳದಿರು! ನಾನು ಎಲ್ಲವನ್ನೂ ತಿಳಿದಿರುವೆನು. ಇದು ದ್ವೇಷದಿಂದ ಉಂಟಾದ್ದು ಆದರೂ ಅನುರಾಗಕ್ಕೆ ಸಂಬಂಧಪಟ್ಟದ್ದು. ಆ ನನ್ನ ಅನುರಾಗವೊ—

ಕಂದ ॥ ಗೌರವದೆ ಲಘುತೆ ನಿದ್ರಾ । ಭಾರದೊಳೆಚ್ಚರಿಕೆ ಹೊಗೆಯೊಳು
ರಿಯಾ ಮಯದೊಳ್ ॥ ಆರೋಗ್ಯ ಮಗ್ನಿಯಲ್ಲಿ ತು । ಷಾರತೆ
ಯುಮ ದೆಂತು ಸಂಘಟಿಸದಾತೆರದಿಂ ॥ ೬ ॥

ನನ್ನ ಅನುರಾಗವೂ ಹಾಗೆಯೆ! ಸಹೋದರನೆ ನಗುವೆ ಯಲ್ಲವೆ?

ಬೇ. ಇಲ್ಲಪ್ಪಯ್ಯ ವ್ಯಸನಪಡುತ್ತೇನೆ.

ರಾ. ನೀನು ಯಾಕೆ ವ್ಯಸನಪಡುವೆ?

ಬೇ. ನಿನ್ನ ಮನೋವ್ಯಥೆಗಾಗಿ.

ರಾ. ಯಾಕೆ? ಇದೇ ನಿನ್ನ ಉಪಕಾರ, ನನ್ನ ವ್ಯಸನವೇ ಅಪಾರವಾಗಿ ತುಂಬಿ ಇರುತ್ತೆ; ನಿನ್ನ ವ್ಯಸನವನ್ನು ಅದರೊಂದಿಗೆ ಸೇರಿಸಿ ತುಳುಕಿಸುವೆಯೋ? ಈಗ ನೀನು ತೋರಿಸುವ ವಿಶ್ವಾಸವು ಈಗಲೇ ಅಪರಿಮಿತವಾಗಿರುವ ನನ್ನ ವ್ಯಸನವನ್ನು ಹೆಚ್ಚು ಮಾಡುವದು.

ಕಂದ ‖ ಕೋರಿದನುರಾಗವದು ಕೈ । ಸೇರಲು ಹೊಗೆಯಿಲ್ಲದಗ್ನಿಯಂತು
ಜ್ವಲಿಕುಂ ‖ ಕೋರಿಕೆ ನೆರವೇರದಿರಲ್ । ಕಾರುವ ಕಂಬನಿಯ ಧಾರೆಸಾ
ಗರಮಕ್ಕುಂ ‖ ೭ ‖

ಇದಲ್ಲದೆ ಮತ್ತೇನು? ಮೋಹವು ಅಪೇಕ್ಷಿಸತಕ್ಕ ಹುಚ್ಚುತನವು! ಇಷ್ಟಿದ್ದರೆ ಅಮೃತಪ್ರಾಯವಾದರೂ ನುಂಗುವದಕ್ಕೆ ವಿಷವಾಗುವದು. ಹೋಗುವೆನಯ್ಯಾ. (ಹೋಗುತ್ತಾ).

ಬೇ. ತಾಳು ತಾಳು ನಾನೂ ಬರುತ್ತೇನೆ. ನೀನು ಹೀಗೆ ಉದಾಸೀನವನ್ನು ಮಾಡಿ ಹೋಗುವದು ಮರ್ಯಾದೆಯಲ್ಲ.

ರಾ. ನನ್ನ ಬುದ್ಧಿಯೇ ನನ್ನ ಸ್ವಾಧೀನವಲ್ಲಿಲ್ಲ. ನಾನು ಇಲ್ಲಿ ಇಲ್ಲ. ರಾಮವರ್ಮನೇ ಅಲ್ಲ. ಅವನು ಎಲ್ಲಿಯೋ ಇರುವನು.

ಬೇ. ನೀನು ಅನುರಾಗಿಸಿರುವ ಸ್ತ್ರೀಯು ಯಾರು, ನಿಜವಾಗಿ ಹೇಳು.

ರಾ. ನಾನು ಸಂಕಟಪಡುವದಲ್ಲದೆ ನಿನಗೆ ಹೇಳಲೂಬೇಕೋ?

ಬೇ. ಸಂಕಟವನ್ನು ತಡೆದು ನನಗೆ ಸರಿಯಾಗಿ ಹೇಳು.

ರಾ. ಸಮಾಧಾನಚಿತ್ತದಿಂದ ಮರಣ ಶಾಸನವನ್ನು ಬರೆಯೆಂದು ಕಂಠಗತಪ್ರಾಣನಾದ ರೋಗಿಗೆ ಹೇಳಿದಂತೆ ಆಯಿತು. ಚಿಂತಾಸಕ್ತನಿಗೆ ಇದು ಹೇಳತಕ್ಕ ಮಾತೇ ಅಲ್ಲ. ಆದರೂ ಸಹೋದರನೆ, ನಾನು ನಿಜವಾಗಿಯೂ ಒಬ್ಬ ಸ್ತ್ರೀಯಲ್ಲಿ ಅನುರಕ್ತನಾಗಿರುವೆನು.

ಬೇ. ನೀನು ಅನುರಾಗ ಪರವಶನಾಗಿರುವೆನೆಂದು ಹೇಳಿದಾಗಲೆ ಇದನ್ನು ಊಹಿಸಿದೆನು.

ರಾ. ನೀನು ಒಳ್ಳೆ ಗುರಿಯಿಡುವವನು. ನಾನು ಪ್ರೀತಿಸುವವಳು ಬಹು ಸುಂದರಾಂಗಿಯು.

ಬೇ. ಸಹೋದರನೆ, ಸರಿಯಾಗಿ ತಪ್ಪದೇ ಗುರಿಯಿಟ್ಟರೆ ಹೊಡೆಯ ಬಹುದು.

ರಾ. ಆಗುರಿಯು ತಪ್ಪಿತು, ಆಕೆಗೆ ಮನ್ಮಥಬಾಣವು ತಗುಲುವದಿಲ್ಲ. ಅತಿ ಬುದ್ಧಿಶಾಲಿನಿಯು.

ಕಂದ ॥ ಯುವತಿ ಜಿತೇಂದ್ರಿಯಭಾವದ । ಕವಚದಿ ನಾವೃತೆಯಳಾಗಿಕಂ
ಗೊಳಪುದರಿಂ ॥ ಕುವಲಯಬಾಣನ ಪೂಸರ । ಮವಳಂಗಕೆತಗುಲಿ
ನಾಟದೇ ಮುರಿದಿಹುದೈ ॥ ೮ ॥

ಅನುರಾಗೋಕ್ತಿಜಾಲಕ್ಕೆ ಸಿಕ್ಕಳು, ಅಪಹರಿಸತಕ್ಕ ದೃಷ್ಟಿಗಳಿಗೆ ಗೋಚರಳಾಗುವಳಲ್ಲ. ಸನ್ಯಾಸಿಯನ್ನು ಕೂಡ ಆಸೆಗೊಳಸುವಧನಕ್ಕೆ ವಶಳಾಗಳು. ಅಯ್ಯೋ! ಸೌಂದರ್ಯವೆಂಬ ಭಾಗ್ಯದಲ್ಲಿದ್ದರೂ ಆಕೆಯು ಮರಣಾನಂತರ ಆ ಸೌಂದರ್ಯವು ಕೊನೆಯಾಗುವದಾದ್ದರಿಂದ ಬಹಳ ಬಡವಳೆಂತಲೇ ಹೇಳಬೇಕು.

ಬೇ. ಆದರೆ ಇನ್ನೂ ಅವಿವಾಹಿತಳಾಗಿರುವಂತೆ ಪ್ರತಿಜ್ಞೆಯನ್ನುಮಾಡಿರುವಳೋ?

ರಾ. ಹೌದು.

ಕಂದ ॥ ಮೂಲೋಕವಮೋಹಿಪತ । ನ್ನಾ ಲಲಿತಸುರೂಪಕಕಟಕರಿನಶಪ
ಥದಿಂ ॥ ಮಾಲಿನ್ಯವಪೊಂದಿಪಳಾ । ನೀಲಾಯತನೇತ್ರೆಯೆಂದುದಂದು
ಗವಡುವೆಂ ॥ ೯ ॥

॥ ರಾಗ—ಕಮಾಚ್ ॥ ರೂಪಕತಾಳ ॥ (ಕಂತುತಾಪವೆಂತು).

*ಏನನೆಂಬೆ । ನಾನುಸಖನೆ । ಮಾನಿನಿಯ ರೀತಿಯ ॥ ಪಲ್ಲ ॥ ಮಾನಸವನು । ಮಾನದೊಳೇ! ತಾನಾಳಿದು ದೀಗಬೇಗ ॥ ಅನು ॥ ನಾರಿಗೆನ್ನೊಳ್ । ಸಾರಮುದವ । ಪಾರವಾಗಿಯಿದ್ದರು । ತೋರದೆಬಲು । ಗಾರುಗೊಳಿಪಳು । ದಾರಿತೋರದು ಹಿಂದೆಮುಂದೆ ॥ ೧ ॥ ವನಿತಾಮಣಿ । ಯನುರಾಗದ । ವಿನಯೋಕ್ತಿಗೆ ಸಿಲ್ಕಳು । ಮುನಿಗಳನುಂ ಮನಗುಂದಿಪ ॥ ಧನಕಾದೊಡು ಸಾಧ್ಯಳಲ್ಲ ॥ ೨ ॥ ಎಂದೆಂದಿಗೂ । ಕುಂದದಿರುವ ॥ ಚಂದವೆಂಬ ಭಾಗ್ಯವ । ಪೊಂದಿರುವಾ । ಸುಂದರಿಮನ । ದಂದೇದಿಗೆ ನೊಡುವಳೋ ॥ ೩ ॥

ಆ ಲಲಿತಾಂಗಿಯು ಅತಿರೂಪವತಿ, ಮತ್ತು ಬುದ್ಧಿಶಾಲಿನಿ ಆಗಿದ್ದರೂ ನನಗೆ ನಿರಾಶೆಯನ್ನು ಉಂಟುಮಾಡಿ ಅನುರಾಗ ಮಾಡುವದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿರುವಳು. ಈ ಪ್ರತಿಜ್ಞೆಗಾಗಿಯೇ ನಾನು ಜೀವನ್ಮೃತನಾಗಿರುವೆನು. ಆದರೆ ಅದನ್ನು ಹೇಳುವದಕ್ಕೆಮಾತ್ರ ಜೀವಿಸಿ ಇರುತ್ತೇನೆ.

ಬೇ. ಹಾಗಾದರೆ ನಾನು ಹೇಳುವಂತೆ ಮಾಡು, ಆಕೆಯನ್ನು ಕುರಿತು ಆಲೋಚನೆ ಮಾಡುವದನ್ನೇ ಮರೆತುಬಿಡು.

ರಾ. ಯೋಚನೆ ಮಾಡುವದನ್ನೇ ಮರೆತು ಬಿಡುವದು ಹ್ಯಾಗೆ ?

ಬೇ. ನಿನ್ನ ನೇತ್ರಗಳಗೆ ಅಧಿಕ ಸ್ವಾತಂತ್ರ್ಯವನ್ನು ಕೊಟ್ಟು ತದಿತರ ಸುಂದರಾಂಗಿಯರನ್ನು ನೋಡಿ ಪರೀಕ್ಷಿಸುತ್ತಾ ಆಲೋಚನೆಯನ್ನು ಮರೆಯಬೇಕು.

ರಾ. *ಹಾಗೆ ಮಾಡುವದ್ದರಿಂದ ಆಕೆಯ ಸೌಂದರ್ಯವೇ ಅತಿಯಾಗಿ ಯೋಚಿಸುವಂತೆ ಆಗುವದು. ದೃಷ್ಟಿಧನವನ್ನು ಕಳೆದುಕೊಂಡ ಅಂಧನು ಅದನ್ನು ಮರೆಯಲಾರನು.* ಯೋಗ್ಯಳಾಗಿಯು, ಸುಂದರಳಾಗಿಯೂ, ಇರುವ ಒಬ್ಬ ಸ್ತ್ರೀಯನ್ನು ತೋರಿಸಿದರೆ ಅವಳನ್ನು ಚಲುವೆಯೆಂದು ಹೇಳಿದವರ ಅಭಿಪ್ರಾಯ ಸರಿಯೂದ್ದೋ ಎಂಬ ಅಂಶವನ್ನುಮಾತ್ರ ತಿಳಿದು ಕೊಳ್ಳಲು ಉಪಯೋಗಿಸುವೆನು. ದಯಮಾಡು, ಮರೆವೆಯನ್ನು ಉಪದೇಶಿಸುವದಕ್ಕೆ ನಿನ್ನಿಂದ ಆಗುವದಿಲ್ಲ.

ಬೇ. ಮರೆವೆಯೋ ಇಲ್ಲವೋ ನೋಡೋಣ, ಮುಂದೆ ಗೊತ್ತಾಗುವದು ಹಾಗಾಗದಿದ್ದರೆ ನಾನು ಪರಾಜಿತನಾದೆನೆಂದು ತಿಳಿ. (ಹೋಗುತ್ತಾರೆ).

॥ ರಾಗ—ತೋಡಿ ॥ ಛಾಪುಶಾಳ ॥ (ಅಹ ಹಾತಮಸೆ).

*ಮರೆವೇನೆಂತಾ । ಸ್ಮರಮೋಹಿನಿಯ ॥ಪ॥ ಸರಸೀರುಹಸುಂದರಲೋಚನೆಯ ॥ಅ॥ ಭುವನಾದ್ಭುತರೂ । ಪವತಿಯನುಳಿದು । ಯುವತಿಯರನಾ । ನವಲೋಕಿಪೆನೇಂ ॥ ೧ ॥ ಕಾಂತರೂಪವಿವ । ಳಂತಾನ್ಪುದಿಲ್ಲಾಗೆ । ಕಾಂತೆಯಯೋಚಿಪ । ಚಿಂತೆಪೇರ್ಚುವದು ॥೨॥ ಇರುವಕಂಗಳುಪೋಗಿ । ಮರುಗುವಂಧಕನು । ಸ್ಫುರಿಸುತಿದ್ದಕಣ್ಣ । ಮರೆಯಲಾಪನೆ ಹಾ ! ॥ ೩ ॥

ದ್ವಿತೀಯಸ್ಥಾನಂ—ಬೀದಿ.

(ಕಾಪಿಲ, ಪೇಶಲಾಂಗ, ಸೇವಕರು ಪ್ರವೇಶಿಸುವರು).

ಕಾ. ಮಹಾರಾಜನು ನನಗೆಹ್ಯಾಗೆ ಅಜ್ಞಾಪಿಸಿದನೋ ಹಾಗೆಯೇ ಮಾಧುರಸಿಗೂ ನಿರ್ಬಂಧಪಡಿಸಿ ಇರುವನು. ನಂಮ್ಮಂಥಾ ವೃದ್ಧರು ಕಲಹವನ್ನು ಮಾಡದೆ ಇರುವದು ಕಷ್ಟವಲ್ಲವೆಂದು ತೋರುವದು.

ಪೇಶಲಾಂಗ. ನೀವಿಬ್ಬರೂ ದೊಡ್ಡಮನುಷ್ಯರು. ಇದುವರಿಗೆ ಈ ರೀತಿಯಲ್ಲಿ ವಿಮನಸ್ಕರಾಗಿ ಇದ್ದದ್ದೇ ಶೋಚನೀಯವಾದ್ದು. ಸ್ವಾಮಿ, ಅದು ಹಾಗಿರಲಿ, ನನ್ನ ಕೋರಿಕೆಯ ವಿಷಯವಾಗಿ ಏನಪ್ಪಣೆ?

ಕಾ. ಮೊದಲು ಹೇಳಿದಂತೆ ಈಗಲೂ ಹೇಳುವೆನು. ನನ್ನ ಮಗಳಗೆ ಇನ್ನೂ ಹದಿನಾಲ್ಕು ವರ್ಷಗಳು ತುಂಬಿಲ್ಲಾ. ಈ ಲೋಕ ವ್ಯವಹಾರಗಳನ್ನೇ ಅರಿಯಳು. ಇನ್ನೂ ಎರಡು ವಸಂತ ರುತುಗಳು ಕಳೆಯುವ ವರಿಗೂ ಆಕೆಯು ಪತ್ನೀಪದಕ್ಕೆ ಅರ್ಹಳೆಂದು ಯೋಚಿಸುವದಕ್ಕೆ ಆಗುವದಿಲ್ಲ.

ಪೇ. ಇವಳಗಿಂತಲೂ ಚಿಕ್ಕವಯಸ್ಸಿನವರು ಆಗಲೆ ಪುತ್ರವತಿಯರಾಗಿರುತ್ತಾರೆ.

ಕಾ. ಅಷ್ಟು ತ್ವರ್‍ಯದಲ್ಲಿ ಆಗುವದ್ದರಿಂದ ಬೇಗನೆ ಕಷ್ಟ ಪ್ರಾಪ್ತಿಯಾಗುವದು. ನನಗೆ ಆದ ಮಕ್ಕಳುಗಳಲ್ಲಿ ನನ್ನ ಜೀವಾತುಪ್ರಾಯಳಾಗಿ ಉಳಿದಿರುವ ಇವಳೊಬ್ಬಳೇ ನನ್ನ ಸರ್ವಸ್ವವೆಂದು ತಿಳಿದಿರುವೆನು. ಆದರೂ ಚಿಂತೆಯಿಲ್ಲ, ಸುಗುಣನೆ ಕೇಳು—

ಕಂದ ॥ ತನುಜೆಯ ಮಾನಸ ಮಾವನೊ । ಳನುರಾಗದೆಬದ್ಧ ಮಪುದೊ
ನಾನದನೀಗಳ್ ॥ ಅನುಮೋದಿಸುತಾ ಕಾರ್ಯವ । ನನುಗೊಳಸುವೆನ
ಡ್ಡಿಗೈಯದೇ ಮುದದಿಂದಂ ॥ ೧೧ ॥

ಈ ರಾತ್ರೆ, ನನ್ನ ಮನೆಯಲ್ಲಿ ಎಂದಿನಂತೆ ಉತ್ಸವವು ನಡೆಯುವದು. ಆದಕ್ಕೆ ನನಗೆ ಇಷ್ಟರಾದ ಕೆಲವರನ್ನು ಕರೆದು ಇರುತ್ತೇನೆ. ಅಂಥಾ ಇಷ್ಟರೊಳಗೆ ನೀನೂ ಸೇರಿರುವೆಯಾದ್ದರಿಂದ ನೀನೂ ಬಂದರೆ ನನಗೆ ಕೇವಲ ಸಂತೋಷವುಂಟಾಗುತ್ತೆ. ಈದಿನ ರಾತ್ರಿಯಲ್ಲಿ ನನ್ನ ಮನೆಗೆ ಪ್ರಕಾಶವನ್ನು

ಉಂಟುಮಾಡುವದಕ್ಕೆ ಪಾದಚಾರಿಗಳಾಗಿ ಬರುವ ಕನ್ಯಾರತ್ನಗಳೆಂಬ ನಕ್ಷತ್ರಗಳನ್ನು ನೋಡಿ ನಿನ್ನ ನೇತ್ರ ಜನ್ಮಸಾಫಲ್ಯವನ್ನು ಮಾಡಿಕೋ. ಅಂಥಾ ಅಮೋಘವಸ್ತುಗಳ ಸಂದರ್ಶನವು ತರುಣರಿಗೆ ಪರಮಾನಂದ ಸಂದಾಯಕವಲ್ಲವೆ ?

ಕಂದ ॥ ಹಿಮಕಾಲಂ ತೊಲಗುತ್ತಿರೆ । ಸುಮಸಮಯಾಗಮನ ಮೆಂತುಹ
ರ್ಷದಮದರೋಲ್ ॥ ಸುಮಶರಮೋಹಿನಿಯರವ್ರೊಲ್ । ಪ್ರಮದೆಯರಿಂ
ದೆನ್ನ ಗೃಹದೆಸೇ ರ್ದಪರಿರುಳೋಳ್ ॥೧೧॥

ಹೇಳುವದನ್ನೆಲ್ಲಾ ಚೆನ್ನಾಗಿ ಕೇಳು. ಎಲ್ಲರನ್ನು ಚೆನ್ನಾಗಿ ನೋಡು. ಅವರಲ್ಲಿ ಯಾರು ಸೌಂದರ್ಯಾಧಿಕಳೊ ಅಂಥಾ ತರುಣಿಯನ್ನು ನೀನು ಪ್ರಾರ್ಥಿಸು. ಅಲ್ಲಿ ಸೇರುವ ಸ್ತ್ರೀಯರಲ್ಲಿ ನನ್ನ ಮಗಳೂ ಒಬ್ಬಳಾಗಿರುವಳು. ನನ್ನೊಡನೆ ಬಾ,—ಎಲೋ,—ಈಪಟ್ಟಣದಲ್ಲೆಲ್ಲಾ ತಿರುಗಿ ಇದರಲ್ಲಿ ಹೆಸರು ಬರೆದಿರುವವರನ್ನು ಕಂಡು (ಕಾಗದಾ ಕೊಡುತ್ತಾನೆ) ನನ್ನ ಮನೆಗೆ ತಮ್ಮ ಆಗಮನದಿಂದ ಸಂತೋಷವನ್ನುಂಟು ಮಾಡಬೇಕೆಂದು ಹೇಳು.

(ಪೇಶಲಾಂಗ ಕಾಪಿಲರು ಹೋಗುವರು).

ಸೇವಕ. ಇದರಲ್ಲಿ ಹೆಸರು ಬರೆದು ಇರುವವರನ್ನು ಹೋಗಿ ನೋಡಬೇಕೆ? ಇಲ್ಲಿ ಬರೆದು ಇರುವದು *ಮೋಚಿಗರವನು ಅಳತೆ ಕೋಲನ್ನು, ದರ್ಜಿಯು ಪಾಪಾಸು ಅಚ್ಚನ್ನು, ಬೆಸ್ತನು ಚಿತ್ರದಕಡ್ಡಿಯನ್ನು, ಚಿತ್ರಗಾರನು ಬಲೆಯನ್ನು ಉಪಯೋಗಿಸಿಕೊಳ್ಳುವರು. ಎಂದು ಇರುವದು* ಆದರೆ

॥ ರಾಗ—ಯಮುನಾಕಲ್ಯಾಣಿ ॥ ಆದಿತಾಳ ॥ (ಧೀರೋಹಿತ ವಿದುಷಾಲನೆ).

*ಅಕ್ಕಟನಾಸೀ । ಯಕ್ಕರಗಳಬಲು । ಲಕ್ಕಿಸಿ ನೋಡಲು । ಕಕ್ಕುಬಿಕ್ಕಹುದು ॥ ಪ ॥ ಬಕ್ಕಣೆಯಾ । ಲೆಕ್ಕಿಸಲು । ಫಕ್ಕನೆ ನಗೆತಾ । ನುಕ್ಕುವದು ॥ ಅ ॥ ಅಟ್ಟದ ಕೋಲಿಗೆ । ಪಟ್ಟೆಯಪೋಣಿಸಿ । ಇಟ್ಟೆಡೆಯನು ತಾನಿಟ್ಟಿಸುತ । ಘಟ್ಟನೆ ಮೆಟ್ಟುತ । ಬಟ್ಟೆಗಳನು ಹೊಲೆದಿಟ್ಟವನು ॥ ೧ ॥ ಅರೆ ಬರೆ ಗಡ್ಡಿಯ । ಹಿಡಿಯುತ ಕಡಲೆಡೆ । ಹೊಡಕೆಯನಡುವೆಡೆ । ಕಡುಬೀಸಿ । ದಡದೊಳೇ । ಕೊಡಹುತ್ತ । ಬಡಮೀನುಗಳನು ಹಿಡಿದವನು ॥ ೨ ॥ ಉದ್ದದ ಬಲೆಯಿಂ । ದದ್ಭುತಬಣ್ಣವ । ಮುದ್ದಿನ ಚಿತ್ರವ । ತಿದ್ದುವನು । ಹದ್ದನು ಗುದ್ದುತ್ತ । ಬಿದ್ದಿಹ ಚರ್ಮವ । ಹೊದ್ದವನು ॥ ೩ ॥

ಇದರಲ್ಲಿ ಬರೆದು ಇರತಕ್ಕ ಹೆಸರಿನವರನ್ನು ಕಂಡು ಕರೆದುಬರುವಂತೆ ಆಜ್ಞಾಪ್ತನಾಗಿರುವ ನನಗಾದರೋ ಬರೆಯುವದಕ್ಕೂ ಬರುವದಿಲ್ಲ, ಓದುವದಕ್ಕೂ ಬರುವದಿಲ್ಲ, ಬಳ್ಳೇದು ವಿದ್ವಾಂಸರ ಬಳಿಗೆ ಹೋಗುವೆನು, ಇರಲಿ.

(ಬೇಹಾರಿ, ರಾಮುವರ್ಮರು ಪ್ರವೇಶಿಸುವರು.)

ಬೇ. ಒಂದು ಬೆಂಕಿಯು ಇನ್ನೊಂದರ ಉರಿಯನ್ನು ಆರಿಸುವದು "ದುಃಖಂ ದುಃಖೈಸ್ತಿರೋಧೀಯತೆ" ಎಂಬಂತೆ ಇತರರ ದುಃಖದಿಂದ ನಮ್ಮ ವ್ಯಥೆಯು ಕಡಮೆಯಾಗುವದು. "ಹೊಸನೀರು ಬಂದು ಹಳೇ ನೀರನ್ನು ನೂಕಿತು" ಎಬಂತೆ ನಿನ್ನ ನೇತ್ರಗಳಲ್ಲಿರುವ ಹಳೇವಿಷವನ್ನು ಹೊಸದಾದ ಇನ್ನೊಂದು ವಿಷಪ್ರಯೋಗದಿಂದ ಹೊರಡಿಸು.

ರಾ. ಬಾಳೇ ಎಲೆಯನ್ನು ಹಾಕುವದರಿಂದ ನೀನು ಹೇಳಿದಂತೆ ಆಗುವದು.

ಬೇ. ಯಾತಕ್ಕೆ.

ರಾ. ನಿನ್ನ ಮುರಿದ ಕಾಲಿಗೆ.

ಬೇ. ಏನು, ರಾಮುವರ್ಮನೆ ನಿನಗೆ ಹುಚ್ಚೋ ?

ರಾ. ಆದರೂ ಹುಚ್ಚನಂತೆ ನಿರ್ಬಂಧಪಡಿಲ್ಪಟ್ಟು ಆಹಾರವಿಲ್ಲದೆ ಅನೇಕ ಯಾತನೆಗಳನ್ನು ಅನುಭವಿಸುತ್ತಾ ಇಧೇನೆ. ಬಳ್ಳೇದು ಹೋಗುವೆನು.

ಸೇ. ಸ್ವಾಮಿ ನಿಮಗೆ ಓದುವದಕ್ಕೆ ಬರುವದೊ?

ರಾ. ಸಂಕಟದಿಂದ ದೀನವಾದ ನನ್ನ ಪುಣ್ಯವನ್ನು ಓದ ಬಲ್ಲೆನು.

ಸೇ. ಅದು ಪುಸ್ತಕವಿಲ್ಲದೇ ಕಲಿತಿರ ಬಹುದು. ಆದರೆ ನೋಡಿದ್ದನ್ನು ಓದುವದಕ್ಕೆ ಬರುತ್ತೋ?

ರಾ. ಭಾಷೆಯು, ಅಕ್ಷರವು, ತಿಳಿದರೆ ಓದುತ್ತೇನೆ.

ಸೇ. ಏನು ಸತ್ಯವಾದಿ ನೀನು ; ಸಂತೋಷವಾಗಿರು.

(ಹೊರಡುವನು).

ರಾ. ನಿಲ್ಲುನಿಲ್ಲು ನಾನು ಓದುತ್ತೇನೆ.

(ಓದುತ್ತಾನೆ).

ಮಾರವೀರ, ಇವನ ಹೆಂಡತಿ, ಮಕ್ಕಳು ; ಆ..
ತಂಗಿಯರು ; ವಿನೀತ, ಇವನ ಹೆಂಡತಿ ; ಪ್ಲಾವಂಗಮ, ಇವನ ಮಕ್ಕಳು ; ಮದನ, ಇವನ ತಮ್ಮ ವ್ಯಾಲೊಲ ; ನನ್ನ ಚಿಕ್ಕಪ್ಪನಾಗ ಕಾಪಿಲ, ಇವನ ಹೆಂಡತಿ, ಹೆಣ್ಣು ಮಕ್ಕಳು ; ಕಲವಾಣಿ ; ಲವಂಗಿಕೆ ; ವೇದ ನಿಧಿ ; ತ್ರಿವಿಕ್ರಮ ; ಲಾವಣ್ಯಾಂಗ ; ಹೇಮಲತೆ.

(ಕಾಗದವನ್ನು ಹಿಂತಿರುಗಿಕೊಟ್ಟು).

ರಾ. ಬಹಳ ಜನಗಳು ಸೇರುವರು, ಎಲ್ಲಿಗೆ ಇವರು ಬರಬೇಕು ?

ಸೇ. ಅಲ್ಲಿಗೆ.

ರಾ. ಎಲ್ಲಿಗೆ ?

ಸೇ. ಭೋಜನಕ್ಕೆ ನಮ್ಮ ಮನೆಗೆ.

ರಾ. ಯಾರ ಮನೆಗೆ.

ಸೇ. ನನ್ನ ಯಜಮಾನನ ಮನೆಗೆ.

ರಾ. ನಿಜ ಇದನ್ನು ನಾನು ನಿನ್ನನ್ನು ಮೊದಲೇ ಕೇಳಬೇಕಾಗಿತ್ತು.

ಸೇ. ನೀನು ಕೇಳದೆಯೇ ಹೇಳುವೆನು ಲಾಲಿಸು. ನನ್ನ ಯಜಮಾನನು ಭಾಗ್ಯವಂತನಾದ ಕಾಪಿಲನು. ನೀನು ಮಾಧುರ ವಂಶಸ್ಥನಲ್ಲದೇ ಇದ್ದರೆ ಬಂದು ಸಂತೊಷಪಡು, ಸುಖವಾಗಿರು.

(ಹೋಗುತ್ತಾನೆ).

ಬೇ. ಕಾಪಿಲನು ಮಾಡುವ ಈ ಮಹೋತ್ಸವಕ್ಕಾಗಿ ನೀನು ಮೋಹಿಸಿರುವ ಕಲವಾಣಿಯೂ ಅಲ್ಲಿಗೆ ಬರುವಳು ಮತ್ತು ಅತಿ ಸುಂದರಾಂಗಿಯರೆಂದು ಪ್ರಸಿದ್ಧಿಯನ್ನು ಹೊಂದಿರುವ ಕನ್ಯಾಮಣಿಯರೂ ಅಲ್ಲಿಗೆ ಹೋಗುವರು. ನಿಷ್ಪಕ್ಷಪಾತವಾದ ದೃಷ್ಟಿಗಳಿಂದ ನಾನು ತೋರಿಸುವಳ ಸೌಂದರ್ಯವನ್ನೂ ನಿನ್ನ ಕಲವಾಣಿಯ ಸೌಂದರ್ಯವನ್ನೂ ಚೆನ್ನಾಗಿ ನೋಡಿ ಪರೀಕ್ಷಿಸಿದರೆ ನೀನು ಹಂಸೆಯೆಂದು ಭಾವಿಸಿರುವವಳು ಕಾಗೆಯೆಂದು ನೀನು ಭಾವಿಸುವಂತೆ ಆಗುವಳು.

ರಾ. ನನ್ನ ಕಣ್ಣಿನ ನೋಟವು ಅಷ್ಟು ಸುಳ್ಳಾಗಿರುವ ಪಕ್ಷಕ್ಕೆ ಬಿಸಿಬಿಸಿಯಾದ ನನ್ನ ನೇತ್ರೋದಕದ ಕಾಸಾರದಲ್ಲಿ ಎಷ್ಟು ಸಾರಿ ಮುಳುಗಿದ್ದರೂ

ಇದರಲ್ಲಿ ಬಣ್ಣಿಸುವ ಆ ಕೆಟ್ಟ ಕಣ್ಣುಗಳು ಹಾಳಾಗಲಿ. ನನ್ನ ಕಲವಾಣಿ ಅಷ್ಟು ಸೌಂದರ್ಯಶಾಲಿನಿಯೆ ?

ಕಂ ॥ ಮಹಿಯೊಳಿರು ವೆಲ್ಲವಸ್ತುವ । ಬಹುತರ ಕಾಲಂಗಳಿಂದೆ ನೋಡಿ
ರುತಿರ್ಪಾ ॥ ಅಹಿಮಕರ ನಿನ್ನೆವರವಾ । ಮಹಿಳೆಗೆಸಮ ರೂಪವ
ತಿಯ ನೀಕ್ಷಿಸಲಿಲ್ಲಂ ॥೧೦॥

ಬೇ. ಬಿಡುಬಿಡು, ನಿನ್ನ ಸುಂದರಾಂಗಿಯನ್ನು ನೋಡುವಾಗ್ಗೆ ಇನ್ಯಾರೂ ಸಮೀಪದಲ್ಲಿ ಇಲ್ಲದ್ದರಿಂದ ಈಪ್ರಕಾರ ಹೇಳುವೆ. ಆದರೆ ಈ ರಾತ್ರಿ ನಾನು ನಿನಗೆ ತೋರಿಸುವ ಕನ್ಯಾರತ್ನವನ್ನು, ನೋಡಿ ಆಗ ತಾರತಮ್ಯವನ್ನು ಪರೀಕ್ಷಿಸಿದರೆ ಈಗ ನಿನಗೆ ಉತ್ತಮಳಾಗಿ ತೋರಿ ಇರುವವಳು ಸಾಧಾರಣಳೆಂತಲೂ ನೀನೇ ಭಾವಿಸಲಾರೆ.

ರಾ. *ನಾನು ನಿನ್ನೊಂದಿಗೆ ಬರುತ್ತೇನೆ. ಆದರೆ ನನ್ನ ಸುಂದರಾಂಗಿಯನ್ನು ನೋಡಿ ಆನಂದಪಡುವದಕ್ಕೆ ಅಲ್ಲದೆ ನೀನು ತೋರಿಸುವವರನ್ನು ನೋಡುವದಕ್ಕೆ ಅಲ್ಲ.

(ಹೋಗುತ್ತಾರೆ).

ತೃತೀಯ ಸ್ಥಾನಂ—ಕಾಪಿಲನ ಮನೆಯ ಒಂದುಕಿರುಮನೆ.

(ಲಲಿತಾಂಗಿ, ಧಾತ್ರಿ ಇವರು ಪ್ರವೇಶಿಸುವರು.)

ಲ. ಧಾತ್ರಿ! ನನ್ನ ಮಗಳು ಎಲ್ಲಿ? ನಾನು ಕರೆದೆನೆಂದು ಹೇಳಿ ಕೂಗು.

ಧಾತ್ರಿ. ನನ್ನ ಅರಗಿಣಿಯೆ! ನಾರೀಶಿರೋಮಣಿಯೆ! ರೂಪವತಿಯೆ! ಲೀಲಾವತಿಯೆ ಬಾ.

॥ ರಾಗ—ಹಿಂ ॥ ಭೈರವ ॥ ಮಿಶ್ರಛಾಪು ॥ (ಭಾವವನರಿಯದೆ ಭಾಮಿನಿ).

*ನಾನುಬರುವೆ ನಿನ್ನೊಡನೆ । ಉದಾ । ಸೀನತೆಯೇಕೆನ್ನೊಳೀಗಲೆ ॥ಪ॥ ಆವಿಧದೊಳು ನಾಂ । ಭಾವಜಹತನಾಗಿ । ಜೀವಾತುವನ ವಲೋಕಿಸೆ ॥ ೧ ॥ ಕಾಮಮೋಹಿನಿಯಾದ । ವಾಮಾಕ್ಷಿ ಸುದತಿಯ । ಪ್ರೇಮಾಲೋಕಕೆ ಪಾತ್ರನಾಗಲು ॥ ೨ ॥ ಸೇರಿರುವ ಬಳಿಯ । ನೀರಜಾನನೆ ನೋಡೆನು । ನಾರಿಯುನವಳ ನಾಲೋಕಿಸೆ ॥ ೩ ॥

(ಲೀಲಾವತಿ ಪ್ರವೇಶಿಸುವಳು).

ಲೀಲಾ. ಏನು, ಯಾರು ನನ್ನನ್ನು ಕರೆದವರು.

ಧಾ. ನಿನ್ನ ಜನನಿಯು.

ಲೀ. ತಾಯೇ, ಇದೋ ಇಲ್ಲಿ ಬಂದಿರುವೆನು, ನಿನ್ನ ಅಪ್ಪಣೆ ಏನು ?

ಲ. ಇದೋ ಹೇಳುವೆನು ಕೇಳು. ಧಾತ್ರಿಯೆ ನಾವು ಸ್ವಲ್ಪ ರಹಸ್ಯವಾಗಿ ಮಾತನಾಡ ಬೇಕಾಗಿರುವದು. ನೀನು ಸ್ವಲ್ಪ ಆಚೆ ಇರು. ಬೇಡ ಬೇಡ, ಬಾ, ನನಗೆ ಜ್ಞಾಪಕಕ್ಕೆ ಬಂತು, ನಮ್ಮ ಸಂಭಾಷಣೆಯನ್ನು ಕೇಳು. ನಿನಗೆ ನನ್ನ ಮಗಳ ವಯಸ್ಸು ಗೊತ್ತಿರುವದು.

ಧಾ. ನಿಜ. ಇವಳು ಜನಿಸಿದ ದಿನ, ವಾರ, ಮಾಸ, ವರ್ಷ ಇವುಗಳಲ್ಲದೆ, ಘಂಟೆಯನ್ನೂ ಹೇಳುವೆನು.

ಲ. ಇನ್ನೂ ಹದಿನಾಲ್ಕು ವರ್ಷಗಳು ತುಂಬಿಲ್ಲ.

ಧಾತ್ರಿ. ಹದಿನಾಲ್ಕು ವರ್ಷಗಳು ಆಗಲಿಲ್ಲವೆಂದು ನನ್ನ ಹದಿನಾಲ್ಕು ಹಲ್ಲುಗಳನ್ನು—ಆದರೆ ನನಗೆ ಈಗ ನಾಲ್ಕು ಹಲ್ಲುಗಳುಮಾತ್ರ ಉಳಿದಿರುವವೆಂದು ಹೇಳಲು ವ್ಯಸನ ಪಡುತ್ತೇನೆ—ಕಿತ್ತಿಡುವೆನು. ನವರಾತ್ರಿಗೆ ಇನ್ನು ಎಷ್ಟು ದಿವಸ ವಿರುವದು ?

ಲ. ಒಂದು ತಿಂಗಳಲ್ಲಿ ಕೆಲವು ದಿವಸಗಳು ಉಳಿದಿರುವವು.

ಧಾ. ನವರಾತ್ರಿಯ ಪಾಡ್ಯದ ರಾತ್ರಿಗೆ ಹದಿನಾಲ್ಕು ತುಂಬುವದು. ಸೂಸಕೆ ಮತ್ತು ಈಕೆಯೂ ಒಂದೇವಯಸ್ಸಿನವರು. ಸೂಸಕೆ ಆದರೊ, ನನಗೆ ತಕ್ಕವಳಲ್ಲವಾದ್ದರಿಂದ ದೇವರ ಸನ್ನಿಧಿಯಲ್ಲಿರುವಳು. ಆದರೆ ನಾನು ಮೊದಲು ಹೇಳಿದಂತೆ, ನವರಾತ್ರಿಯ ಪಾಡ್ಯಕ್ಕೆ, ಲೀಲಾವತಿಗೆ ಹದಿನಾಲ್ಕು ವರ್ಷಗಳು ತುಂಬುವವು. ತಾಳು, ನನಗೆ ಈಗ ಜ್ಞಾಪಕಕ್ಕೆ ಬಂತು. ಹ್ಯಾಗೆಂದರೆ:—ಭೂಕಂಪವಾಗಿ ಈಗ ಹನ್ನೊಂದು ವರ್ಷಗಳಾದವು. ಆ ದಿವಸ,—ನಾನು ಆ ದಿವಸವನ್ನು ಎಂದಿಗೂ ಮರೆಯುವದಿಲ್ಲ,—ಸ್ತನ್ಯ ಪಾನಮಾಡುವದನ್ನು ಬಿಡಿಸಿದೆ, ಅದಕ್ಕೋಸ್ಕರ ಗೋಡೇಹತ್ತಿರ ಬಿಸುಲಿನಲ್ಲಿ ಕೂತುಕೊಂಡು ಸ್ತನಗಳಿಗೆ ಬೇವಿನ ಎಣ್ಣೆಯನ್ನು ಹಚ್ಚಿದೆ ; ನೀನು ಮತ್ತು ನನ್ನ ಯಜಮಾನನು ಆಗ ಮಧುರಾ ನಗರದಲ್ಲಿದ್ದಿರಿ

ನನಗೆ ಚೆನ್ನಾಗಿ ಜ್ಞಾಪಕದಲ್ಲಿದೆ; ಆದರೆ ನಾನು ಹೇಳಿದಂತೆ ನನ್ನ ಸ್ತನಕ್ಕೆ ಹಚ್ಚಿದ ಬೇವಿನೆಣ್ಣೆಯನ್ನು ಸವಿದು ನನ್ನ ಕಂದನು, ಮುಖವನ್ನು ಸೊಟ್ಟ ಮಾಡಿಕ್ಕೊಂಡು ಜಗಳವಾಡಲಿಲ್ಲವೆ? ತದಾರಭ್ಯ ಈಗ ಹನ್ನೊಂದು ವರ್ಷ ಗಳಾಗಿವೆ. ಆಗ ನಿಂತುಕೊಳ್ಳುತ್ತಿದ್ದಳು, ಇಲ್ಲ, ಓಡಾಡುತ್ತಲೂ ಇದ್ದಳು. ಏಕೆಂದರೆ, ಅದಕ್ಕೆ ಹಿಂದಿನದಿವಸವೇ ಬಿದ್ದು ಹಣೆಯನ್ನು ಗಾಯ ಮಾಡಿ ಕ್ಕೊಂಡಳು. ಈಗ ಸ್ವರ್ಗದಲ್ಲಿರುವ ನನ್ನ ಗಂಡನು ಮಗುವನ್ನು ಎತ್ತಿ ಕ್ಕೊಂಡು ಸಮಾಧಾನಪಡಿಸಿ ಹಾಸ್ಯಮಾಡಿದನು. ಆಗ ಅವಳು ಅಳುವ ದನ್ನು ಬಿಟ್ಟಳು. ಸಹಸ್ರ ವರ್ಷವಾದರೂ ನಾನು ಅದನ್ನು ಮರೆಯಲಾರೆ.

ಲ. ನಿನ್ನ ಹಾಳುಹರಟೆ ಸಾಕು, ಸುಮ್ಮನಿರು.

ಧಾ. ಇರಲಿ. ಹಣೆಯಮೇಲೆ ಒಂದು ರೂಪಾಯಿನಷ್ಟು ಅಗಲ ಘಾಯವಾಗಿ ಅಳುತ್ತಿದ್ದರೂ ನನ್ನ ಗಂಡನು ಹಾಸ್ಯ ಮಾಡಿದಕೂಡಲೆ ಅಳು ವದನ್ನು ಬಿಟ್ಟು ಸುಮ್ಮನೆ ಆದದ್ದನ್ನು ಸ್ಮರಿಸಿದರೆ ನನ್ನ ಹೃದಯವು ಸೀಳಿ ಹೋಗುವದು. ಕೂಡಲೆ ಮಗು ಅಳುವನ್ನು ನಿಲ್ಲಿಸಿ ಬಾಯಿ ಮುಚ್ಚಿ ಕ್ಕೊಂಡಿತು.

ಲೀ. ನಿನ್ನ ಧರ್ಮಕ್ಕೆ ನೀನೀಗ ಬಾಯಿ ಮುಚ್ಚಿಕ್ಕೊಂಡಿದ್ದರೆ ಸಾಕು.

ಧಾ. ಆಗಲಿ ನಾನು ಹೇಳದ್ದೆಲ್ಲಾ ಆಯಿತು. ದೇವರು ನಿನಗೆ ಮಂ ಗಳವನ್ನು ಮಾಡಲಿ. ನಾನು ಸಾಕಿದ ಎಲ್ಲಾ ಮಕ್ಕಳುಗಳಿಗಿಂತಲೂ ನೀನು ಬಹಳ ಮುದ್ದಾಗಿರುವೆ, ನಾನು ಜೀವಿತಳಾಗಿರುವಷ್ಟರಲ್ಲಿಯೇ ನಿನ್ನ ಮದುವೆಯನ್ನು ನೋಡಬೇಕೆಂಬ ಒಂದು ಅಭಿಲಾಷೆ ಮಾತ್ರ ಇರುವದು.

ಲ. ಆ ಮದುವೆಯನ್ನು ಕುರಿತು ಮಾತನಾಡುವದಕ್ಕೇ ನಾನು ಇಲ್ಲಿ ಬಂದದ್ದು. ಲೀಲಾವತಿ, ಈ ಮದುವೆಯ ವಿಷಯದಲ್ಲಿ ನಿನ್ನ ಅಭಿಲಾಷೆ ಏನು?

ಲೀ. ಸ್ವಪ್ನದಲ್ಲಿ ಕೂಡ ಅಂಥಾ ಭಾಗ್ಯವನ್ನು ನಾನು ಯೋಚಿಸಿಲ್ಲ.

ಧಾ. ಏನು, ಭಾಗ್ಯವೆನ್ನುತ್ತೀಯೆ! ನೀನು ಬಹಳ ಬುದ್ಧಿಶಾಲಿನಿಯು.

ಲ. ಒಳ್ಳೇದು ಈಗ ವಿವಾಹವನ್ನು ಕುರಿತು ಆಲೋಚಿಸು, ಈ ವಾರಣಾವತಿಯಲ್ಲಿ ಮರ್ಯಾದೆವಂತರಾದ ಹೆಂಗಸರುಗಳು ನಿನಗಿಂತಲೂ ಚಿಕ್ಕ

ವರಾಗಿದ್ದರೂ ಆಗಲೇ ತಾಯಿಯರಾಗಿರುತ್ತಾರೆ. ನೀನು ಕನ್ನಿಕೆಯಾಗಿರುವ ಈ ನಿನ್ನ ವಯಸ್ಸಿಗೆ ನಾನು ನಿನ್ನ ತಾಯಿಯಾಗಿದ್ದೆನು. ಸುಮ್ಮನೆ ವಿಳಂಬಿಸ ಲೇಕೆ? ಶೂರನಾದ ಪೇಶಲಾಂಗನು ನಿನ್ನ ಕೈಗಳನ್ನು ಅಪೇಕ್ಷಿಸುತ್ತಿರುವನು.

ಧಾ. ಆತನೂ ಮೇಣದಿಂದ ಮಾಡಿದ ಬೊಂಬೆಯಂತೆ ರೂಪುವುಳ್ಳ ವನಾಗಿ ಸೃಷ್ಟಿಸಲ್ಪಟ್ಟಧಾನೆ.

ಲ. ವಾರಣಾವತಿ ಎಂಬ ಪಟ್ಟಣದಲ್ಲಿ ಶ್ರೇಷ್ಟನಾಗಿರುವನು.

ಧಾ. ನಿಜ.

ಲ. ಏನುಹೇಳುವೆ? ಆತನನ್ನು ಅನುರಾಗಿಸುವೆಯೋ? ಈ ರಾತ್ರಿ ನಮ್ಮಲ್ಲಿ ನಡೆಯುವ ಉತ್ಸವದಲ್ಲಿ ಆತನನ್ನು ಕಾಣುತ್ತೀಯೆ. ಸೌಂದರ್ಯ ವೆಂಬ ಲೇಖಿನಿಯಿಂದ ಬರೆದಿರತಕ್ಕ ಅವನ ಮುಖವೆಂಬ ಪುಸ್ತಕವನ್ನು ಚೆನ್ನಾಗಿ ನೋಡು. ಅದರಿಂದ ನಿನಗೆ ಸಂತೋಷ ವುಂಟಾಗುವದು. ಹಾಗೆ ಪರೀಕ್ಷಿಸಿವರೂ, ಅದರ ಭಾವವು ತಿಳಿಯದೇ ಇದ್ದರೆ, ಅವನ ಕಟಾಕ್ಷವೀ ಕ್ಷಣ ವ್ಯಾಖ್ಯಾನದಿಂದ ಅನುರಾಗಾರ್ಥವನ್ನು ತಿಳಿದುಕೋ. ಆ ಪುಸ್ತ ಕಕ್ಕೆ ಮೇಲನ ರಕ್ಷಾಪತ್ರಿಕೆ ಮಾತ್ರ ಸೇರಿಲ್ಲ. ಅನೇಕರು ಆ ಪುಸ್ತಕ ವನ್ನು ಅಪೇಕ್ಷಿಸಿ ನೋಡಿದರು. ಆದರೂ ಭಾವವನ್ನು ತಿಳಿದು ಆನಂದ ಪಡುವದಕ್ಕೆ ಆಗಲಿಲ್ಲ. ಆದ್ದರಿಂದ ಅವನನ್ನು ವರಿಸಿ, ಆತನಲ್ಲಿರತಕ್ಕದ್ದ ನೆಲ್ಲಾ ನೀನೇ ಅನುಭವಿಸು. ಹೀಗೆ ವರಿಸುವದ್ದರಿಂದ ನಿನಗೇನೂ ಲೋಪ ವಾಗಲಾರದು.

ಧಾ. ಏನೂ ಲೋಪವಿಲ್ಲ! ಗಂಡಸಿನಿಂದಲೇ ಹೆಂಗಸು ಪ್ರಸಿದ್ಧಿಗೆ ಬರುವಳು.

ಲ. ಪೇಶಲಾಂಗನ ಅನುರಾಗವು ನಿನಗೆ ಇಷ್ಟವಾದ್ದೋ ಹೇಳು.

ಲೀ. ನೊಡೋಣಮಾತ್ರದಿಂದ ಇಷ್ಟಪಡುವಂತೆ ಆಗುವದಾದರೆ ನಾನು ಆತನನ್ನು ನೋಡುತ್ತೇನೆ. ಆದರೆ ನಿನ್ನ ಅನುಮತಿಯಿಂದ ಕೊ ಡಲ್ಪಟ್ಟ ಸಹಾಯವು ಎಷ್ಟು ಕೊಡುತ್ತೊ ಅಷ್ಟುದೂರ ನನ್ನ ದೃಷ್ಟಿ ಯನ್ನು ಓಡಿಸುತ್ತೇನೆ. ಅಲ್ಲದೆ ಇದಕ್ಕಿಂತಲೂ ಹೆಚ್ಚಾಗಿ ಗುರಿಯಿ ಡುವದಿಲ್ಲ.

(ಸೇವಕನ ಪ್ರವೇಶ).

ಸೇ. ತಾಯೆ, ಅತಿಥಿಗಳು ಬಂದಿರುವರು; ಎಲೇ ಹಾಕಿರುವದು; ನಿಮ್ಮನ್ನು ಕರೆದರು; ಚಿಕ್ಕ ಯಜಮಾನಿತಿ ಎಲ್ಲೆಂದು ಕೇಳಿದರು; ಪಾಕ ಕಾರ್ತಿಯರನ್ನು ಅಡಿಗೆಯ ಮನೆಯಲ್ಲಿ ಮೂದಲಿಸುವರು; ಎಲ್ಲವೂ ಅವಸರ ದಲ್ಲಿರುವವು. ನಾನು ನನ್ನ ಕೆಲಸಕ್ಕೆ ಹೋಗಬೇಕು. ಬೇಗಬನ್ನಿ.

ಲ. ನಿನ್ನ ಹಿಂದೆಯೇ ಬಂದೆವು. ಎಲೆ ಲೀಲಾವತಿ ಪೇಶಲಾಂಗನು ಬಂದಿರುವನು.

ಧಾತ್ರಿ. ಲೀಲಾವತಿ, ಹೋಗು, ನಿನಗೆ ಶುಭವಾಗಲಿ.

(ಹೋಗುತ್ತಾರೆ).

ಚತುರ್ಥಸ್ಥಾನಂ—ಬೀದಿ.

(ರಾಮವರ್ಮ, ಮದನ, ಬೇಹಾರಿ, ವೇಷಧಾರಿಗಳು, ದೀವಟಿಗೆಯವರು, ಮತ್ತು ಇತರರು ಪ್ರವೇಶಿಸುವರು).

ರಾ. ನಾವು ಅಲ್ಲಿಗೆ ಹೋಗುವದಕ್ಕೆ ಕಾರಣವೇನಾದರೂ ಹೇಳೋಣವೊ? ಅಥವಾ ಬೇಡವೊ?

ಬೇ. ಏನೂ ಬೇಡ. ಸುಮ್ಮನೆ ಹೋಗಿ ಸಂಗೀತವನ್ನು ಕೇಳಿ ಎಲ್ಲರಂತೆ ಬಂದುಬಿಡೋಣ.

ರಾ. ಈ ಗಮನವಿಲಂಬವು ನನಗೆ ಇಷ್ಟವಿಲ್ಲ. ಬನ್ನಿ, ಬೇಗನೆನಡೆಯಿರಿ.

ಮದನ. ನೀನು ಅನುರಾಗಿ, ಮನ್ಮಥನ ಸಹಾಯದಿಂದ ಬೇಗನೆ ನಡೆಯುವೆ.

ರಾ. ಅವನ ಬಾಣದ ಪೆಟ್ಟಿನಿಂದ ಘಾಯವಡೆದು ಇರುವೆನು, ಆ ಅನಂಗನ ಸಹಾಯದಿಂದ ಸತ್ವರ ಗಮನವು ಏಂದಿಗೂ ಬರುವದಿಲ್ಲ, ಅನುರಾಗದಿಂದ ಸಹಿಸಲಸಾಧ್ಯವಾದ ವ್ಯಸನ ಸಾಗರದಲ್ಲಿ ಮುಳುಗಿರುವೆನು.

ಮ. ಅದರಲ್ಲಿ ಮುಳುಗಬೇಕಾದರೆ ಅನುರಾಗವು ಅತಿಭಾರವಾಗಿರಬೇಕು. ಇಂಥಾ ಕೋಮಲವಾದ ಅನುರಾಗವು ಭಾರವನ್ನು ತಡೆಯಲಾರದು.

ರಾ. ಅನುರಾಗವು ಕೋಮಲವಾದ್ದೊ ? ಅತಿ ಕರ್ಕಶವಾದ್ದು ; ಕೆಟ್ಟದ್ದು ; ಮತ್ತು ಮುಳ್ಳಿನಂತೆ ಚುಚ್ಚುವದು.

ಮ. ಅನುರಾಗವು ನಿನ್ನ ವಿಷಯದಲ್ಲಿ ಕರ್ಕಶವಾಗಿದ್ದರೆ ನೀನು ಅದಕಿಂತಲೂ, ಕರ್ಕಶನಾಗು. ಬಾಧೆ ಪಡಿಸುತ್ತಿರುವ ಅನುರಾಗವನ್ನು ನೀನೂ ಚುಚ್ಚಿ ಅದನ್ನು ಸೋಲಿಸು. ನನಗೆ ಬಂದು ಮೊಗವಾಡವನ್ನು ಕೊಡು.

(ಮೊಗವಾಡವನ್ನು ಹಾಕಿಕೊಳ್ಳುತ್ತಾ).

ಈಗ ನನ್ನ ರೂಪದಲ್ಲಿರತಕ್ಕ ನ್ಯೂನತೆಗಳನ್ನು ಯಾರುತಾನೆ ಕಂಡುಹಿಡಿದಾರು ?

ಬೇ. ಬಾ, ಒಳಕ್ಕೆ ಹೋಗೋಣ. ಒಳಕ ಒಬ್ಬೊಬ್ಬರು ಒಂದೊಂದು ಕಡೆಗೆ ಹೋಗೋಣ. (ಹೋಗುತ್ತಾರೆ).

ಪಂಚಮಸ್ಥಾನಂ—ಕಾಪಿಲನಮನೆಯ ದಿರ್ವಾಖಾನೆ.

(ಸೇವಕರು ಪ್ರವೇಶಿಸುವರು ; ವಾದ್ಯಗಾರರು ಕಾದಿರುವರು).

೧ನೇ ಸೇ. ಪಾಚಕನು ಎಲ್ಲಿ ಹೋದನು.

೨ನೇ ಸೇ. ಎಲ್ಲಾ ಸಿದ್ಧವಾಗಿರುವದೋ ? .

೧ನೇ ಸೇ. ನಿನ್ನನ್ನು ಒಳಕ್ಕೆ ಕರೆಯುತ್ತಾರೆ.

೨ನೇ ಸೇ. ಎರಡು ಕಡೆ ಇರುವದು ಹ್ಯಾಗೆ ?

(ಎಲ್ಲರೂ ಮರೆಯಾಗುತ್ತಾರೆ).

(ಕಾಪಿಲ ಅತಿಥಿಗಳೊಡನೆಯು ವೇಷಧಾರಿಗಳೊಡನೆಯು ಸಹ ಪ್ರವೇಶಿಸುವನು).

ಕಾ. ಅಯ್ಯಾ ನೀವುಗಳು ಬಂದದ್ದು ಬಹಳಸಂತೋಷ, ನಿಮ್ಮಗಳೊಡನೆ ಕಾಲು ಸರಿಯಾಗಿರುವ ಸುಂದರಿಯರೆಲ್ಲರೂ ನರ್ತಿಸುವರು. ಯಾವ ಸುಂದರಿಯು ಈಗ ನರ್ತನ ಮಾಡುವದಿಲ್ಲವೆಂದು ಹೇಳುವಳೊ, ಯಾರು ನರ್ತಿಸುವದಿಲ್ಲವೊ ಅವರ ಕಾಲು ಸರಿಯಾಗಿಲ್ಲವೆಂತಲೇ ಹೇಳುತ್ತೇನೆ. ನಿಮಗೆ ಸುಖಾಗಮನವಾಗಲಿ ! ನಾನು ನಿಮ್ಮಂತೆ ಮೊಗವಾಡವನ್ನು ಹಾಕಿಕೊಳ್ಳುತ್ತಿದ್ದ ಕಾಲವು, ಒಬ್ಬ ಸುಂದರಾಂಗಿಯ ಕಿವಿಯಲ್ಲಿ ಹಿತಕರವಾದ

ಇತಿಹಾಸವನ್ನು ಹೇಳುವಕಾಲವೂ ಇತ್ತು, ಈಗ ಆ ಕಾಲವು ಗತಿಸಿಹೋಯಿತು. ವಾದ್ಯಗಾರರೆ ಬನ್ನಿ; ವಾದ್ಯನಾದವನ್ನು ಮಾಡಿ; ಸ್ಥಳವನ್ನು ಬಿಡಿ, ಹುಡಿಗಿಯರೆಲ್ಲರು ನರ್ತಿಸಲಿ. (*ವಾದ್ಯಧ್ವನಿಯಾಗುವದು ನರ್ತಿಸುವರು*) ಎಲೈ ಬೆಳಕುಸಾಲದು. ಇನ್ನಷ್ಟು ದೀಪಗಳನ್ನು ಹಚ್ಚಿರಿ, ಇಲ್ಲಿ ಬಹಳ ಸೊಗಸಾಗಿರುವದು. ಈ ಉತ್ಸವವು ನಾನು ಊಹಿಸಿದ್ದಕಿಂತಲೂ, ಅಧಿಕ ಮನೋಹರವಾಗಿ ಜರುಗುತ್ತಲಿದೆ. ನನ್ನ ಸಹೋದರನೆ, ಬಾರೈಯ್ಯಾ. ಕೂತುಕೊ, ನೀನೂ ನಾನೂ ಮೊಗವಾಡ ಹಾಕಿಕೊಂಡು ನರ್ತಿಸಿ ಬಹಳದಿನಗಳು ಆಗವಲ್ಲವೆ? ನಾವು ನರ್ತನವನ್ನು ಮಾಡುವ ಕಾಲವು ಗತಿಸಿ ಹೋಯಿತು.

೨ನೇ ಕಾ. ಈಗ್ಗೆ ಮೂವತ್ತು ವರ್ಷಗಳಾದವು.

ಕಾ. ಅಷ್ಟು ಯಿಲ್ಲ, ಸುಮಾರು ಇಪ್ಪತ್ತೈದು ಸಂವತ್ಸರಗಳು ಆಗಿರಬಹುದ. ಲಾವಣ್ಯನಿಧಿಯ ಪ್ರಸ್ತನಾದಾಗ್ಗೆ ನಾವು ಮೊಗವಾಡ ಹಾಕಿಕೊಂಡದ್ದು.

೨ನೇ ಕಾ. ಇಲ್ಲಾ ಇನ್ನೂ ಹೆಚ್ಚಾಗಿದೆ; ಅವನ ಮಗನು ಈಗ ಮೂವತ್ತು ವರ್ಷದವನಾಗಿರುವನು.

ಕಾ. ಇದೇನು ಹೀಗೆಹೇಳುತ್ತೀಯೆ? ಈಗ್ಗೆ ಎರಡು ವರುಷದವರಿಗೂ, ಅವನು ಪೋಷಣೆಯಲ್ಲಿದ್ದನು.

ರೊ. ಆ ಸುಂದರಾಂಗನ ಕೈಗಳನ್ನು ಅವಲಂಬಿಸಿ ಬರುತ್ತಿರುವ ಆ ಕನ್ಯಾಶಿರೋಮಣಿ ಯಾರು?

ಸೇವಕ. ಎಲೈ ಈಕೆ ಯಾರೊ ನನಗೆ ತಿಳಿಯದು.

॥ ರಾಗ — ಜುಂಜೋಟಿ ॥ ಛಾಪುತಾಳ ॥ (ಮಮೋರಹೊ ಷೋಹೀಷರಾ).

*ಶ್ರೀರಾಮಭೋವಸಾರದಯಾ । ಪಾರವಿಮಾಯಾ ॥ ಪ ॥ ನೀರೇರುಹನೇತ್ರಾಂಬುದಾ । ಕಾರಸುಮೋದ ॥ ಅ ॥ ರಮಾವಿಲೋಚನಾಬ್ಜಸೂರ । ಕುಮತಿವಿದಾರ ॥ ಸಮಿರಸುಪೂಜ್ಯಪಾದಾ । ಸಮನತವೇದ ॥ ೧ ॥ ಪುರಾರಿನಿರ್ಜರಾದಿಧರಾ । ಮರವರಪಾಲ । ಪರಾತ್ಪರಭೂಮೀಸುತಾ । ವರಶುಭಶೀಲ ॥ ೨ ॥

ರಾ. *ಆಹ! ಸ್ವಪ್ರಕಾಶದಿಂದ ದೀಪಪ್ರಕಾಶಗಳನ್ನು ನಾಚಿಸುವಳು. ಈಕೆಯ ಕಾಂತಿಯು ರಾತ್ರಿಯಕಾಲದಲ್ಲಿ, ಹಬ್ಸಿನೀಜನಗಳ ಕಿವಿಯಲ್ಲಿ ಪ್ರಜ್ವಲಿಸುತ್ತಿರುವ ವಜ್ರದ ಕಮಲದಂತೆ ಪ್ರಕಾಶಿಸುತ್ತಿರುವದು. ಈ ರೂಪಾತಿಶಯವು ಉಪಯೋಗಿಸುವದಕ್ಕೆ ಅಮೌಲ್ಯವಾದ್ದು*; ಈಲೋಕಕ್ಕೆ ಅತಿಶಯುಳಾದ ಈಕೆಯು,—

ಕಂ॥ ಮಡದಿಯರ ಮಧ್ಯದಲ್ಲೀ। ಬೆಡಗಿನ ಕಣಿ ಕೀರವಾಣಿ ನಾರೀಮಣಿ
ತಾಂ॥ ಕಡುಮೆರೆವಳ್ಕಾಕಾಳಿಯು। ನಡುವೆಡೆಯೊಳ್ರಾಜಹಂಸಿ ಯಾ
ರಾಜಿಸುವ್ರೊಲ್॥ ೧೩॥

ಈ ನರ್ತನವು ಮುಗಿದ ಕೂಡಲೆ, ಆಕೆ ಇರುವ ಸ್ಥಳವನ್ನುಗೊತ್ತುಮಾಡಿ, ಆಕೆಯ ಮೃದುತರವಾದ ಹಸ್ತಗಳ ಸ್ಪರ್ಶದಿಂದ ಈ ನನ್ನ ಕರ್ಕಶಪಾಣಿಯನ್ನು, ಸೌಖ್ಯಪಡಿಸುವೆನು. ನನಗೆ ಇದುವರಿಗೆ ಅನುರಾಗವೆನ್ನುವದು ಗೊತ್ತಿತ್ತೋ? ದೃಷ್ಟಿಯಿಲ್ಲವೆಂದು ಸತ್ಯವಾಗಿಹೇಳುವೆನು. ಯಾತಕ್ಕೆಂದರೆ, ಇದುವರಿಗೂ ಇಂಥಾ ರೂಪಾತಿಶಯಗಳನ್ನುನಾನು ನೋಡಿಯೇ ಇಲ್ಲಾ.

ತ್ರೈವಿಕ್ರಮ. †ಈ ಧ್ವನಿಯು ಮಾಧುರನದೆಂದು ತೋರುತ್ತೆ; ಎಲೆ ಸೇವಕನೆ, ನನ್ನ ಆಯುಧವನ್ನು ತೆಗೆದುಕೊಂಡು ಬಾ. ಓಹೋ! ಮೊಗ

॥ ರಾಗ — ಬೇಹಾಗ್॥ ಆದಿತಾಳ॥ (ಬಲ್ಲೆನೇಳೊ ಪ್ರಿಯ).

*ಇವಳಾವಳೊ ಮಾನಿನಿ। ಭುವನೈಕ ಮೋಹಿನಿ॥ ಪ॥ ದೀಪಕಾಂತಿಗಳಿಗೆ। ಲೋಪವನ್ನುಮಾಡುವ। ರೂಪದಿಂದ ರಾರಾಜಿಪೀ। ಚಾಪಲಾಯತಾಕ್ಷಿಯು॥ ೧॥ ವನಿತೆಹಬ್ಸೀನಿನ। ಜನಗಳಕಿವಿಯೊಳು। ಮಿನುಗುವವಜ್ರದ। ವನಜಾತದೊಲಿಹ॥ ೨॥ ಈರೂಪವೀತರುಣಿ। ವಾರೋಪಯೋಗಕೆ। ಸೇರದಿರ್ಪಮೌಲ್ಯದ। ಸಾರವಸ್ತುವಾಗಿಹುದು॥ ೩॥

॥ ರಾಗ—ಸುರಟಿ॥ ಝಾಪುತಾಳ॥ (ಶ್ರೀಮಹಿತಾಂಗಕ).

†ಕೊಡುಕೊಡು ಖಡ್ಗವ। ತಡಮಾಡದೆನಾಂ। ಪಿಡಿದಾಯುಧವನು। ಕೆಡುಗನಕಡಿವೇಂ॥ ಪ॥ ಸ್ಥವಿರ ಮಾಧುರವಂಶ। ದವನಿವನೆಮ್ಮಯ। ತ್ಸವಕೆ ಭಂಗವಮಾಡೆ। ಜವದೆಬಂದಿಹನು॥ ೧॥ ಮೊಗವಾಡದೆತನ್ನ। ಮೊಗವನುಮುಚ್ಚಿ। ಧಿಗಿಲ್ಲದೆಬಂದೀ। ಪಗೆಯನುಕೊಲ್ಲೆ॥ ೨॥ ಖಲನಿವನನುಕೊಲೆ। ಕಲುಷವಿಲ್ಲೆಂದು। [illegible]ಗಿಹೆ ನಾಣೆಯ। ಕುಲದಮೇಲಿಡುವೇಂ॥ ೩॥

ವಾಡದಿಂದ ಮುಖವನ್ನು ಮುಚ್ಚಿಕೊಂಡು, ನಮ್ಮ ಉತ್ಸವವನ್ನು ಅಪ ಹಾಸ್ಯ ಮಾಡಲು, ಇಲ್ಲಿಗೆ ಬರುವಷ್ಟು ಧೈರ್ಯವಾಯಿತೊ? ಇವನನ್ನು ಕೊಲ್ಲುವದು ಪಾಪವಲ್ಲವೆಂದು, ನನ್ನ ವಂಶದಮೇಲೆ ಆಣೆ ಇಟ್ಟುಕೊಳ್ಳ ವೆನು.

ಕಾ. ಯಾತಕ್ಕೆ ಏನಾಯಿತು? ನೀನು ಯಾತಕ್ಕೋಸ್ಕರ ಇಷ್ಟು ಆರ್ಭಟವಮಾಡುವೆ?

ತ್ರೈ. ಚಿಕ್ಕಪ್ಪನೆ, ಇವನು ನಮ್ಮ ಶತ್ರುವಾದ ಮಾಧುರನ ವಂಶೀ ಯನು. ಈ ನೀಚನು, ಹಗೆಯಿಂದ ನಮ್ಮ ಉತ್ಸವವನ್ನು ಅಪಹಾಸ್ಯ ಮಾಡಲು, ಈ ರಾತ್ರೆ ಇಲ್ಲಿಗೆ ಬಂದಿರುತ್ತಾನೆ.

ಕಾ. ಅವನು ರಾಮವರ್ಮನೋ?

ತ್ರೈ. ಹೌದು, ಆ ನೀಚನಾದ ರಾಮವರ್ಮನೆ.

ಕಾ. ತಾಳು, ತಾಳು, ಅವನ ಗೋಜಿಗೆ ಹೋಗಬೇಡ. ಮರ್ಯಾದೆ ಯಿಂದ ಇರುವನು; ಇವನನ್ನು ಈ ಪಟ್ಟಣಸ್ಥರೆಲ್ಲರೂ ಗುಣಶಾಲಿಯೆಂ ತಲೂ, ಒಳ್ಳೇ ನಡೆತೆಯುಳ್ಳವನೆಂತಲೂ ಹೊಗಳುತ್ತಾರೆ. ಈ ವೂರಿನ ಭಾಗ್ಯಕ್ಕೋಸ್ಕರಲಾದರೂ ಆಗಲಿ, ನನ್ನ ಮನೆಯಲ್ಲಿ ಅವನಿಗೆ ಅಪಮಾನ ಮಾಡಲಾರೆನು. ಆದ್ದರಿಂದ ಅವನ ತಂಟೆಗೆ ಹೋಗದೇಯಿರಬೇಕೆನ್ನುವದೇ ನನ್ನಿಷ್ಟ; ಈ ನನ್ನ ಇಷ್ಟವನ್ನು ನೆರವೇರಿಸುವದಾದರೆ, ಉತ್ಸವ ಕಾಲಕ್ಕೆ ಭಂಗಕಾರಿಯಾದ ನಿನ್ನ ಕೋಪವನ್ನು ಬಿಟ್ಟು, ಹಸನ್ಮುಖಿಯಾಗಿರು.

ತ್ರೈ. ಇಂಥಾ ನೀಚನು ನಮ್ಮಮನೆಗೆ ಅತಿಥಿಯಾಗಿ ಬಂದಿದ್ದರೂ ನನ್ನ ಕೋಪವು ಹೋಗತಕ್ಕದ್ದೆ? ಅವನಿರುವದನ್ನು ನಾನು ಸೈರಿಸಲಾರೆನು.

ಕಾ. ಸೈರಿಸಬೇಕು, ನಾನು ಹೇಳುತ್ತೇನೆ. ಇಲ್ಲಿಗೆ ನಾನೋ ನೀನೋ ಯಜಮಾನ? ನೀನು ಸೈರಿಸುವದಿಲ್ಲವೆ? ನನ್ನ ಅತಿಥಿಗಳಲ್ಲಿ ಗದ್ದಲ ಮಾಡುತ್ತೀಯೋ!

ತ್ರೈ. ಚಿಕ್ಕಪ್ಪನೆ, ಇದು ಬಹಳ ಅಪಮಾನವಲ್ಲವೆ?

ಕಾ. ಹೋಗು, ಹೋಗು. ನೀನು ಅತಿಮೂರ್ಖನು, ಈ ನಿನ್ನ ನಡತೆಯು ನಿನಗೆ ಕೇಡುಮಾಡದೆ ಇರಲಾರದು, ನಾನು ಬಲ್ಲೆನು. ನಾನು

ಹೇಳಿದ್ದಕ್ಕೆ ಪ್ರತ್ಯುತ್ತರವನ್ನು ಹೇಳಬೇಡ. ಇದುಸಾಕು. ನೀನು ಬಹಳ ಅಶಿಕ್ಷಿತನು. ಹೊರಟುಹೋಗು. ಇಲ್ಲವೇ ಸುಮ್ಮನೆ ಇರು.

ತ್ರೈ. ನೀನು ನನಗೆ ಸುಮ್ಮನಿರೆಂದು ಬಲಾತ್ಕಾರ ಮಾಡುವೆ, ನನ್ನ ಕೋಪವಾದರೋ ನನ್ನನ್ನೇ ಸುಡುತ್ತಿರುವದು ; ನಾನು ಇಲ್ಲಿಂದ ಹೊರಟುಹೋಗುತ್ತೇನೆ : ಆದರೆ "ಎತ್ತದಗ್ರೇಮೃತಮಿವ ಪರಿಣಾಮೇವಿಷೋಪಮಂ" ಎಂಬಂತೆ, ಈಗ ಹಿತವಾಗಿತೋರುವ ಇವನ ಆಗಮನವು ಕೊನೆಗೆ ವಿಷಯಪ್ರಾಯವಾಗುವದು. (ಹೋಗುತ್ತಾನೆ).

ರಾ. (ಲೀಲಾವತಿಗೆ) ನಿನ್ನ ಪರಿಶುದ್ಧವಾದ ಹಸ್ತವು, ಅಯೋಗ್ಯವಾದ ನನ್ನ ಹಸ್ತಸ್ಪರ್ಶದಿಂದ ಅಪರಿಶುದ್ಧ ವಾಗುವದಾದರೆ, ಅದಕ್ಕೆ ತಪ್ಪುಕಾಣಿಕೆಯು ಸಿದ್ಧವಾಗಿರುವದು.

ಲೀ. ತಪ್ಪು ಕಾಣಿಕೆಯನ್ನು ಕೊಡತಕ್ಕವರು ಯಾರು ?

ರಾ. ನಿನ್ನ ಹಸ್ತವನ್ನು ಅಪರಿಶುದ್ಧವನ್ನಾಗಿ ಮಾಡಿದ್ದರಿಂದ ಲಜ್ಜೆಪಟ್ಟಿರುವ ಈ ನನ್ನ ತುಟಿಗಳೆಂಬ ಯಾತ್ರಿಕರು.

ಲೀ. ಆ ಕಾಣಿಕೆ ಯೆಂಥಾದ್ದು ?

ರಾ. ಮೃದುವಾದ ನಿನ್ನ ಕಪೋಲವನ್ನು, ಕೋಮಲವಾದ ನನ್ನ ತುಟಿಗಳಿಂದ ಮುದ್ದಾಡುವದೇ.

ಲೀ. ಅದುಹಾಗಿರಲಿ, ಮರ್ಯಾದಾವಂತನಿಗೆ ಸಹಜವಾದ, ನೀನು ತೋರಿಸುವ ನಮ್ರತೆಯಿಂದ, ನಿನ್ನ ಕೈಗಳನ್ನು ದೂಷಿಸಿಕೊಳ್ಳುವೆ ; ಸಿದ್ಧಪುರುಷರಿಗೆ ಯಾತ್ರಾಜನಗಳು ವಂದನೆಯನ್ನು ಮಾಡುತ್ತಾರೆ.

ರಾ. ಸಿದ್ಧಪುರುಷರಿಗೂ, ಯಾತ್ರಾಜನಗಳಿಗೂ ತುಟಿಗಳು ಇಲ್ಲವೊ ?

ಲೀ. ಆ ತುಟಿಗಳು ಪ್ರಾರ್ಥನೆಗೆಮಾತ್ರ ಉಪಯೋಗಿಸತಕ್ಕದ್ದು.

ರಾ. ಆದರೆ ಪ್ರೀಯೆ, ಸಿದ್ಧಪುರುಷಳೆ, ಕೈಗಳಿಂದ ಮಾಡುವ ಕೆಲಸವನ್ನು ತುಟಿಗಳು ಮಾಡಲಿ ; ಪ್ರಾರ್ಥಿಸುವದು, ಭಕ್ತಿ ಹೋಗದಂತೆ ಇರುವದಕ್ಕೆ ಎನ್ನುವದು ಒಪ್ಪತಕ್ಕದ್ದು.

ಲೀ. ಸಿದ್ಧಪುರುಷರು ಚಲಿಸುವದೇ ಇಲ್ಲ. ಪ್ರಾರ್ಥಿಸಿದರೆ ಮಾತ್ರ ವರವನ್ನು ಕೊಡುತ್ತಾರೆ.

ರೋ. ಹಾಗಾದರೆ, ನನ್ನ ಪ್ರಾರ್ಥನೆ ಸಫಲವಾಗುವವರಿಗೂ ಚಲಿಸದೆ ಸುಮ್ಮನೆ ಇರು. (ಮುತ್ತು ಕೊಟ್ಟು) ಈಗ ನನ್ನ ತುಟಿಗಳ ದೌರ್ಭಾಗ್ಯವು ನಿನ್ನ ಕಪೋಲಚುಂಬನೆಯಿಂದ ಹೋಗಲಿ.

ಲೀ. ನಿನ್ನ ತುಟಿಗಳಿಂದ ಪ್ರಾಪ್ತವಾದ ದೌರ್ಭಾಗ್ಯವು, ನನ್ನ ಕಪೋಲಗಳಲ್ಲಿರುವದು.

ರೋ ನನ್ನ ತುಟಿಗಳಿಂದ ಪಾಪವೆ? ನನ್ನನ್ನು ಒಳ್ಳೇ ಮಾತಿನಿಂದಲೇ ಹಂಗಿಸಿದೆ! ನನ್ನ ದೌರ್ಭಾಗ್ಯವನ್ನು ನನಗೆ ಹಿಂದಿರಿಗಿಸಿ ಕೊಡು.

(ಮುದ್ದಾಡುವದಕ್ಕೆ ಹೋಗುವನು).

ಲೀ. ನೀನು ಶಾಸ್ತ್ರಾನುಸಾರವಾಗಿಯೇ ಮುದ್ದಾಡುವಂತೆ ಕಾಣುವದು.

ಧಾ. ಎಲೆ ಮಗಳೆ, ನಿನ್ನ ಮಾತೆಯು ನಿನ್ನೊಡನೆ ಮಾತನಾಡಲು ಕರೆಯುತ್ತಾಳೆ.

ರೋ. ಆಕೆಯ ತಾಯಿಯಾರು?

ಧಾ. ಅವಳ ತಾಯಿ ಸುಗುಣಾಲಂಕೃತಳಾದ, ಈ ಮನೆಯ ಯಜಮಾನಿತಿಯು. ಇದುವರಿಗೆ ನೀನು ಮಾತನಾಡಿಸುತ್ತಾ ನಿಂತಿದ್ದ ಬಾಲೆಯು, ನಾನು ಸಾಕಿದವಳು. ಈ ಬಾಲೆಯನ್ನು ವರಿಸುವ ಸುಂದರಾಂಗನು ಬಹು ಭಾಗ್ಯಶಾಲಿಯಾಗುವನು. ಇದು ನಿಜ, ಚೆನ್ನಾಗಿ ತಿಳಿ.

ರೋ. ಅಯ್ಯೋ ಅದೃಷ್ಟವೆ! ಆಕೆ ಕಾಪಿಲನ ವಂಶದವಳೆ? ಹಾ, ಹಾ, ನನ್ನ ಪ್ರಾಣವು ಶತ್ರುವಶವಾಯಿತು.

ಬೇ. ಬಾ ಹೋಗೋಣ, ಇದೇ ಒಳ್ಳೇಸಮಯ.

ರೋ. * ಒಳ್ಳೇದು. ನನಗೆ ಬಹಳ ಸಂಕಟವಾಗಿದೆ.*

॥ ರಾಗ—ದೇಶೀಕಾಪಿ ॥ ಝಾಪುತಾಳ ॥ (ಮೆಲ್ಲನೆಬೀಸುವ).

* ಹೋಗುವೆನೆಂತನು । ರಾಗದ ಕಣಿಯನು । ಭಾಗಧೇಯಾರ್ಜಿತ । ಯೋಗೆಯ ನುಳಿಯುತ ॥ ಪ ॥ ಮುಂದಕೆಕಾಲಿಡೆ । ಹಿಂದಕೆಸೆಳೆವುದು । ಸುಂದರಿಯಾಗುಣ । ವೃಂದದೆಸಿಲುಕಿದೇಂ ॥ ೧ ॥ ಅಂಕುರಿತಸ್ಮಿತ । ಪಂಕಜನೇತ್ರೆಯ । ಕಿಂಕರನಾಗದ । ಸಂಕಟದಿಂದಲಿ ॥ ೨ ॥ ಪಾತಕಿಮನ್ಮಥ । ಚೂತಶರಾಹತಿ । ಯಾತನೆಯಲ್ಲಿಜೀ । ವಾತುವ ತೊರೆಯುತ ॥ ೩ ॥

ಕಾ. ಹೋಗುವದಕ್ಕೆ ಪ್ರಯತ್ನ ಮಾಡಿದಿರಿ ; ಸ್ವಲ್ಪ ಭೋಜನಮಾಡಿ ಕೊಂಡು ಹೋಗಿರಿ. ಎಲ್ಲಾ ಸಿದ್ಧವಾಗಿರುತ್ತೆ. ಹಾಗೊ, ಆದರೆ ಚಿಂತೆ ಯಿಲ್ಲ, ನೀವೆಲ್ಲರೂ ಬಂದದ್ದು ಬಹಳ ಸಂತೋಷವಾಯಿತು, ದಯಮಾಡಿ.

(ಲೀಲಾವತಿ, ಧಾತ್ರಿವಿನಾ ಎಲ್ಲರೂ ಹೋಗುತ್ತಾರೆ).

ಲೀ. ಧಾತ್ರಿ ಇಲ್ಲಿಬಾ, ಅಲ್ಲಿ ಹೋಗುವವನು ಯಾರು ?

ಧಾ. ವೃದ್ಧನಾದ ತಾರಕನ ಮಗನು.

ಲೀ. ಈಗ ಬಾಗಲಿನಿಂದ ಹೊರಕ್ಕೆ ಹೋಗುತ್ತಿರುವವನು ಯಾರು ?

ಧಾ. ಅವನು ಪ್ರಸನ್ನ ಕುಮಾರನೆಂದು ತೋರುತ್ತೆ.

ಲೀ. ನರ್ತನವನ್ನು ಮಾಡದೆ, ನಿಂತಿದ್ದು ಈಗ ಅಲ್ಲಿ ಹೋಗುತ್ತಿರು ವವನು ಯಾರು ?

ಧಾ. ನನಗೆ ತಿಳಿಯದು.

ಲೀ. ಹೋಗಿ ಆತನ ಹೆಸರನ್ನು ತಿಳಿದುಕೊಂಡುಬಾ ; ಅವನಿಗೆ ಮದುವೆಯಾಗಿದ್ದರೆ, ನನಗೆ ವಿವಾಹವು ಸ್ಮಶಾನದಲ್ಲಿಯೇ ಆಗುವಂತೆ ಇದೆ.

ಧಾ. ಆತನ ಹೆಸರು ರಾಮವರ್ಮನು, ಮಾಧುರವಂಶಸ್ಥನು ; ನಿಮ್ಮ ಶತ್ರುವಿನ ಏಕಪುತ್ರನು.

ಲೀ. *ನನ್ನ ಅನುರಾಗವು ಶತ್ರುವಿನಲ್ಲಿ ಹುಟ್ಟಿತು ! ತಿಳಿಯದೆ ಜಾಗ್ರ ತೆಯಲ್ಲಿ ನೋಡಿದೆ, ಅನುರಾಗಿಸಿದ ಬಳಿಕ ಅವನು ಶತ್ರುವಂಶೀಯನೆಂದು ಗೊತ್ತಾಯಿತು, ಶತ್ರುವಿನಲ್ಲಿ ಅನುರಾಗ ಹುಟ್ಟಿದ್ದರಿಂದ ನನ್ನ ಅನುರಾಗ ವು ಬಹಳ ಶಕುನ ಉಳ್ಳದ್ದಾಗಿದೆ ! *

ಧಾ. ಇದೇನು ? ಇದೇನು ?

॥ ರಾಗ—ಖರಹರಪ್ರಿಯ—ಆದಿತಾಳ ॥ (ನುಡಿನುಡಿಯೆನಗಾರೆಣೆ).

* ತೆರೆನದಾವುದೊಮುಂದೆ । ವಿರಹದಿಬೆಂದೆ ॥ ಪ ॥ ಅನುರಾಗವಾರಿಪು । ಜನದೊಳು ಪುಟ್ಟಿತು । ಅನುವಕಾಣದೆಮನ । ಮನುಮಾನವಾಂತುದು ॥ ೧ ॥ ಸರಸನರೂಪಕೆ । ಮರುಳಾಗಿನಾನು । ಅರಿಯದೇವರಿಸಿದೀ । ಪರಿಯುಕ್ಕೈಸೇರ್ವ್ವದೆ ॥ ೨ ॥ ನೋಡಿದಮಾತ್ರದೆ । ಮಾಡಿಮದೆನ್ನಕೈ । ಗೂಡಲುಶ್ಲಾಘ್ಯವೆಂ । ದಾಡುವರೆಲ್ಲರು ॥ ೩ ॥

ಲೀ. ಈಗ ನಾಟ್ಯವಾಡುವಾಗ ನಾನು ಕಲಿತ ಮಟ್ಟು.

(ತೆರೆಯಲ್ಲಿ ಲೀಲಾವತಿ ಎಂದು ಧ್ವನಿಯಾಗುವದು).

ಧಾ. ಬಂದೆವು, ಬಂದೆವು, ಬಾ ಹೋಗೋಣ.

(ಹೋಗುತ್ತಾರೆ).

(ಕೋಕಿಲನು ಪ್ರವೇಶಿಸುವನು.)

ಪೂರ್ವಾನುರಾಗವು ನಷ್ಟವಾಗುತ್ತಿರುವದು, ಅದಕ್ಕೆ ಬದಲಾಗಿ ಮತ್ತೊಂದು ಅನುರಾಗ ಲೇಶವು ಹಣುಕಿ ನೋಡುತ್ತಿರುವದು; ಯೌವನಸುಂದರಾಂಗಿಯ ಅನುರಾಗದಿಂದ ಉಂಟಾದ ವಿರಹಶೋಕವು, ಬಾಧೆಪಡುವಂತೆ ಮಾಡಿತ್ತೋ, ಅದು ಈಗ ಲೀಲಾವತಿಯ ಸಂದರ್ಶನವಾದಬಳಿಕ ಕಡಮೆಯಾಯಿತು. ಈಗ ರಾಮವರ್ಮ ಲೀಲಾವತಿಯರು, ಪರಸ್ಪರಾನುರಾಗವನ್ನು ವೃದ್ಧಿ ಪಡಿಸುತ್ತಿರುವರು; ಅವರಿಬ್ಬರೂ ಪರಸ್ಪರಾನುರಾಗ ದೃಷ್ಟಿಜಾಲಗಳಲ್ಲಿ ಸಿಕ್ಕಿಕೊಂಡಿರುವರು; ಶತ್ರು ಪಕ್ಷದವಳೆಂದು ಭಾವಿಸಿಕೊಂಡಿರುವ ಅವನಿಗೆ ತನ್ನ ವಿರಹವ್ಯಥೆಯನ್ನು ಸೂಚಿಸಬೇಕಾಗಿ ಇರುವದು; ಆಕೆಯು ಸುತ್ತಲೂ ಇರವ ಅಪಾಯದಮಧ್ಯದಲ್ಲಿ ಅನುರಾಗವನ್ನು ಸಂಪಾದಿಸಿಕೊಳ್ಳಬೇಕಾಗಿರುವದು. ಅವನು ಶತ್ರುಪಕ್ಷದವನಾದ್ದರಿಂದ ಅನುರಾಗ ಸೂಚಕಗಳಾದ ಮಾತುಗಳನ್ನು ಆಡುವದಕ್ಕೂ, ಅವಕಾಶವಾಗಲಾರದು. ತಾನು ನೂತನವಾಗಿ ಅನುರಾಗಿಸಿ ಇರುವ ಆ ಪ್ರಿಯನನ್ನು ನೋಡುವದಕ್ಕೂ ಆಕೆಗೂ ಸಂದರ್ಭವಿಲ್ಲ. ಆದರೆ ಅನುರಾಗವೆನ್ನುವದು ಸಾಮರ್ಥ್ಯವನ್ನುಂಟುಮಾಡಿ, ಕಾಲವೆನ್ನುವದು ಪರಸ್ಪರ ಸಮ್ಮೇಳನೆಗೆ ಸಮಯವನ್ನುಂಟುಮಾಡಿ, ಅತಿ ಕ್ರೂರವಾದ ಶತ್ರುತ್ವವು ಅತಿ ಮಧುರವಾದ ಅನುರಾಗವನುಂಟು ಮಾಡುವದು.

(ಹೋಗುವನು).

ಸಂಬಂಧ
ನಿನಗೆ

ದ್ವಿತೀಯಾಂಕಂ.

ಪ್ರಥಮಸ್ಥಾನಂ—ಪುರೋಪವನ ಸಮೀಪಪ್ರದೇಶ.

(ರಾಮವರ್ಮನು ಪ್ರವೇಶಿಸುವನು.)

ರಾ. *ನನ್ನ ಪ್ರಾಣವೆಲ್ಲಾ ಇಲ್ಲಿಯೇ ಇರುವದಲ್ಲ,* ಈಪ್ರಾಸದವನ್ನು ದಾಟಿ ಮುಂದೆನಾನು ಹೋಗುವದುಹ್ಯಾಗೆ? ಒಳ್ಳೇದು ಈ ಗೋಡೆಯನ್ನುಹತ್ತಿ ದುಮುಕ್ಕುವೆನು.

(ಗೋಡೆಯನ್ನು ಹತ್ತಿ ದುಮುಕ್ಕಿ ಒಳಕ್ಕೆ ಹೋಗುವನು).

(ಬೇಹಾರಿ, ಮದನರು ಪ್ರವೇಶಿಸುವರು.)

ಬೇ. ರಾಮವರ್ಮನೆ! ರಾಮವರ್ಮನೆ!

ಮ. ಅವನೇನು ಹುಚ್ಚನಲ್ಲ; ಇದುವರಿಗೆ ಅವನು ಮನೆಗೆಹೋಗಿ ಮಲಗಿರಬಹುದು.

ಬೇ. ಇಲ್ಲ, ಈ ಮಾರ್ಗವಾಗಿ ಬಂದು, ಈ ಗೋಡೆಯನ್ನು ದುಮುಕಿ ಒಳಕ್ಕೆ ಹೋದನು. ಮದನನೆ, ಅವನನ್ನು ನೀನು ಕರೆ.

ಮ. ಹಾಗೆಯೇ ಆಗಲಿ, ರಾಮವರ್ಮನೆ! ಸ್ತ್ರೀವ್ಯಾಮೋಹವು! ಹುಚ್ಚುತನವು! ಮೋಹವು! ಅನುರಾಗವು! ಇವೆಲ್ಲವೂ ನಿನ್ನಲ್ಲಿ ನೆಲೆಯಾಗಿರುವವು. ನಿನ್ನ ರೀತಿಯನ್ನುನೋಡಿದರೆ, ವ್ಯಸನಾಕ್ರಾಂತ ನಾಗಿರುವಂತೆ ತೋರುವದು. ನೀನು ಒಂದು ಮಾತನ್ನಾದರೂ ಆಡಿದರೆ, ನನಗೆ ಸಂತೋಷವಾಗುವದು.

ಕಂ ॥ ಮುನಿಕೌಶಿಕನೂರ್ವಶಿಯು । ಲ್ಲನುರಾಗಿಸುವಂತೆ ಕುಸುಮಬಾಣವ
ನೆಸೆದಾ ॥ ಮನಸಿಜನಂ ಕುರಿತಾದೊಡ । ಮನುನಯದಿಂದೊಂದು
ಮಾತನಾಡೈಮಿತ್ರಾ ॥ ೧ ॥

॥ ರಾಗ—ಬೇಹಾಗು ॥ ಆದಿತಾಳ ॥ (ಪೋಯಿರಮ್ಮನೆ)

* ಕಾಣುವೆನೆಂತಾ । ಪ್ರಾಣಸಂಜೀವಿನಿಯು ॥ ಪ ॥ ಮಾರನಶರಹತಿಯಿಂ । ದಾರಿಯಕಾಣದೆ । ಸಾರುತೀಗಲ್ಲಿಗಾ । ನಾರೀಶಿರೋಮಣಿಯು ॥ ೧ ॥ ತಲ್ಲಣಗೊಂಡಸು । ವೆಲ್ಲವುಚಲಿಸದೆ । ಇಲ್ಲಿಯೇ ಇರುತಿಹು । ದಲ್ಲನಾಂಪೋಗುತ ॥ ೨ ॥ ಕಾರುಗತ್ತಲೆಯೊಳು । ಇರುವದಡಿಯಿಡೆ । ಯಾರೊಳುಹೇಳಲಿ । ಮಾರಿದೀತಾಪವ ॥ ೩ ॥

ಲೀ. ಈವನು ಕೇಳುವದೂ ಇಲ್ಲ, ಚಲಿಸುವದೂ ಇಲ್ಲ, ಇತ್ತಲಾಗಿ ,ವದೂ ಇಲ್ಲ, ಒಳ್ಳೇದು, ಒಂದು ಉಪಾಯುವನ್ನು ಮಾಡುತ್ತೇನೆ. ,ಇವನನ್ನು ಮೋಹಪಡಿಸಿರುವ—

ಕಂ ॥ ಸೆಳೆನಡುವಿಂಚೆಂದುಟಿಯಿಂ । ಜಲಜೇಕ್ಷಣದಿಂದೆ ಮೃದುಲಪದಗತಿ
ಯಿಂದುಂ ॥ ಸುಲಲಿತ ರಂಭೋರುಗಳಿಂ । ತೊಳಗುವಕಲವಾಣಿಯ
ಲ್ಲಿ ಶಪಥವನಿಡುವೆಂ ॥ ೧ ॥

ಬಾ, ಈಗಲಾದರೂ ಮಾತನಾಡು.

ಬೇ. ಈ ಮಾತನ್ನು ರಾಮುವರ್ಮನು ಕೇಳಿದ್ದೇಆದರೆ, ನಿನ್ನ ಮೇಲೆ ಕೋಪವನ್ನು ಮಾಡುವನು.

ಮ. ಕೋಪವನ್ನು ಮಾಡುವದಕ್ಕೆ ನಿಮಿತ್ತವೇನು ? ಅವನ ಪ್ರಾಣಪ್ರಿಯೆಯ ಗುಣಗಳನ್ನು, ನಿಷ್ಪಕ್ಷಪಾತವಾಗಿ ವರ್ಣಿಸಿ ಇರುವೆನು. ನಾನು ಮಾಡಿದ ಈ ಯುಕ್ತಿಯು, ಅವನು ಹೊರಗೆ ಬರುವದಕ್ಕು, ಮಾತನಾಡುವವಕ್ಕೂ, ಕಾರಣವಲ್ಲವೆ ?

ಬೇ. ಆಲೋಚನಾಪರರಿಗೆ, ಅನುಕೂಲವಾದ ಈ ರಾತ್ರಿಯ ಸಹಾಯದಿಂದ, ಅನುರಾಗವೆಂಬ ಅಂಧಕನಿಗೆ ಸಮಾನವಾದ ಕತ್ತಲೆಯನ್ನು, ಆಶ್ರಯಿಸಿ, ಈ ತೋಟದ ಗಿಡಗಳ ಮಧ್ಯದಲ್ಲಿ ಮರೆಯಾಗಿ ಇರುವನು.

ಮ. ಅನುರಾಗವು ಅಂಧನಾದರೆ, ಲಕ್ಷ್ಯವಿಡುವದು ಹ್ಯಾಗೆ ? ಭ್ರಾಂತನಾದ ಇವನು ವೃಕ್ಷಮೂಲವನ್ನ ಆಶ್ರಯಿಸಿ, ವೃಕ್ಷಗತ ಫಲಂಗಳನ್ನೆಲ್ಲಾ ತನ್ನ ಪ್ರಾಣಕಾಂತೆಯೆಂದೇ ಭಾವಿಸುತ್ತಿರುವಂತೆ ತೊರುವದು. ರಾಮುವರ್ಮನೆ, ನಿನ್ನಂತೆ ಮರದಕೆಳಗೆ ಮಲಗುವದಕ್ಕೆ ನನ್ನಿಂದಾಗುವದಿಲ್ಲ; ನಿನಗೆ ಈ ರಾತ್ರಿಯು ಶುಭಕರವಾಗಲಿ. ನಾನುಹೊಗುವೆನು. ಬೇಹಾರಿಯೆ ಬಾ, ಮನೆಗೆ ಹೋಗೋಣ.

ಬೇ. ನಮಗೆ ಕಾಣದಂತೆ ಬೌತುಕೊಂಡಿರುವವನನ್ನು, ಹುಡುಕಿ ಪ್ರಯೋಜನವೇನು ? ಬಾ ಹೋಗೋಣ.

(ಹೋಗುವರು).

ಕುಂದಾಗುವದೊ ? ಮನೆತನವೆನ್ನುವದು ಮನುಷ್ಯದೇಹಕ್ಕೆ ಸಂಬಂಧ ಪಟ್ಟ ಕರಚರಣಾದ್ಯವಯುವಗಳೊ ? ಅಂಥಾದ್ದನ್ನು ಬಿಟ್ಟಮಾತ್ರಕ್ಕೆ ನಿನಗೆ ಯಾವಕುಂದಕವೂ ಆಗುವದಿಲ್ಲ ; ಆದ್ದರಿಂದ ಆ ಮನೆತನದ ಹೆಸರನ್ನು ಬಿಡು.

ಕಂ॥ ತೊರೆದೀನಿನ್ನಯುಪೆಸರಂ । ಪೆರತಂಸ್ವೀಕರಿಸೆ ನಿನ್ನ ಪರಿಕೆಡುತಿ
ಹುದೇಂ ॥ ಸರಸಿಜವ ಬೇರೆಪೆಸರಿಂ । ಕರೆದೊಡೆ ತಾನದರ ಪರಿಮ
ಳಂ ಬೇರಹುದೇಂ ॥ ೬ ॥

ಆದ್ದರಿಂದ, ನಿನ್ನ ರಾಮವರ್ಮನೆಂಬ ಹೆಸರನ್ನು ಪರಿತ್ಯಜಿಸು; ಅವಕ್ಕೆಬದುಲಾಗಿ ನನ್ನನ್ನೇ ಸ್ವೀಕರಿಸು.

ರಾ. ಪ್ರಿಯೆ, ನೀನು ಹೇಳಿದಂತೆಯೇ ಆಗಲಿ ; ನೀನು ನನ್ನನ್ನು ಪ್ರಿಯ ನೆಂದು ಭಾವಿಸಿದರೆ ಸಾಕು, ನಿನಗೆ ಅಪ್ರಿಯವಾದ, ರಾಮವರ್ಮನೆಂಬ ನನ್ನ ನಾಮಧೇಯವನ್ನು, ದೂರದಲ್ಲಿಬಿಟ್ಟು, ನಿನಗೆ ಹಿತಕರವಾಗಿರುವ ಮತ್ತೊಂ ದು ಹೆಸರನ್ನು ಸ್ವೀಕರಿಸುವೆನು ; ಇನ್ನುಮೇಲೆ ನಾನು ರಾಮವರ್ಮನಲ್ಲ.

ಲೀ. ನನ್ನ ಆಲೋಚನೆಗೆ ಭಂಗವನ್ನುಂಟುಮಾಡುತ್ತಾ, ಅಗೋಚರ ನಾಗಿ ಕತ್ತಲೆಯಲ್ಲಿ ಇರುವ ನೀನು ಯಾರು ?

ರಾ. ನಾನು ಯಾರೆ, ನನ್ನ ಹೆಸರನ್ನು ಹೇಳುವದಕ್ಕೆ ಅಸಮರ್ಥ ನಾಗಿರುವೆನು ; ಎಲೆ ಕಾಂತಾಶಿರೋಮಣಿ, ನಿನಗೆ ದ್ವೇಷಕರವಾಗಿರುವ ಈ ನಾಮಧೇಯವು ನನ್ನಕೈಗೆ ಸಿಕ್ಕುವದಾಗಿದ್ದರೆ, ಅದನ್ನು ತುಂಡುತುಂ ಡು ಮಾಡುತ್ತಿದ್ದೆನು.

ಲೀ. ಆಃ ! ಈಗ ಆಡಿದಮಾತು ಸ್ವಲ್ಪವಾಗಿ ನನ್ನಕಿವಿಗೆ ಬಿದ್ದಿ ದ್ದರೂ, ಆ ಮನೋಹರ ಧ್ವನಿಯು ಇಂಥಾ ಪುರುಷನದೆಂದೇ ಗೊತ್ತಾ ಯಿತು ; ಎಲೆ ಸುಂದರಾಂಗನೆ ! ನೀನು ಮಾಥುರನ ಮನೆತನದ ರಾಮವ ರ್ಮನಲ್ಲವೆ ?

ರಾ. ಪ್ರಿಯೆ, ನನ್ನ ಹೆಸರು ನಿನಗೆ ಅಸಹ್ಯವಾಗಿದ್ದರೆ, ನಾನು ರಾಮ ವರ್ಮನಲ್ಲ.

ಲೀ. *ಇಲ್ಲಿ ನಿನ್ನ ಆಗಮನಕ್ಕೆ ಕಾರಣವೇನು ? ಹೇಳು, ಈ ಉಪವನದ ಸುತ್ತು ಗೋಡೆಯು ಅತ್ಯುನ್ನತವಾದ್ದು ; ಅಂಥಾದ್ದನ್ನು ಹ್ಯಾಗೆದಾಟಿದೆ ? ಇಲ್ಲಿ ನನ್ನ ಕಡೆಯವರು ಯಾರಾದರೂ ನಿನ್ನನ್ನು ಕಂಡರೆ, ಶತ್ರುಪಕ್ಷದವನೆಂದು ಆಗಲೇ ನಿನ್ನನ್ನು ಕೊಲ್ಲದೆ ಬಿಡರು.

ರೋ. ಪ್ರಿಯೆ, ಮನ್ಮಥ ಸಹಾಯವೆಂಬ ರಕ್ಕೆಗಳು ನನಗೆ ಇರಲು ಈ ಗೋಡೆಯನ್ನು ದಾಟಿದ್ದು ಹಾಗಿರಲಿ, ಮೇರು-ಪರ್ವತವನ್ನಾದರೂ ದಾಟುತ್ತಿದ್ದೆನು ; ಅಸಹಾಯ ಶೂರನಾದ, ಮಾರವೀರನು ನನಗೆ ಬೆಂಬಲನಾಗಿರಲು, ನಿನ್ನ ಕಡೆಯವರು ಅನೇಕರು ಬಂದರೂ ನಾನು ಹೆದರುವದಿಲ್ಲ.

ಕಂ॥ ಅರಸಿ ನಿನ್ನ ಯಕಡೆಯವ । ರುರುತರಖಡ್ಗಂಗಳಿಂದೆ ಬಾಧಿಸ ನಿತರೋಳ್ ॥ ಸ್ಮರನಕಟನಿನ್ನ ಕಡೆಗ । ಣ್ಸರಳಿಂ ಗುರಿನೋಡಿ ಪೊಡಿಕೊಲುವಂಚಲದಿಂ ॥ ೩ ॥

ಆದ್ದರಿಂದ ನಿನ್ನ ಸಾನುರಾಗ ಕಟಾಕ್ಷ ವೀಕ್ಷಣೆಗೆ, ನಾನು ಪಾತ್ರನಾದ್ದೇ ಆದರೆ, ನಿನ್ನ ಕಡೆಯವರ ಶತ್ರುತ್ವದಿಂದ ಏನೂ ಆಗಲಾರದು.

ಲೀ. ಹ್ಯಾಗಾದರು ಆಗಲಿ, ನೀನು ಅವರಿಗೆ ಗೋಚರನಾಗದೇ ಇರಬೇಕೆಂದು ಪ್ರಾರ್ಥಿಸುವೆನು.

॥ ರಾಗ—ಕಾಂಭೋಜಿ ॥ ಝಾಪುತಾಳ ॥ (ನಿನುನಮ್ಮಿನಾನು).

*ಲೀ. ಧೀರನೇ ನೀನೀ । ಯಾರಾಮಭಿತ್ತಿಯ । ಹಾರುತ್ತಲದೆಂತು । ನೀರಬಂದೆ ಹಾಹಾ ॥ ೧ ॥ ಹೇಳುಶ್ರೀದಯಾ । ಶಾಲಿಕಾಂತನೆನೀಂ ॥ ಪ ॥

ರೋ. ಮಾರನೇಸಹ । ಕಾಯಾರಿಗಿರಲು । ಹಾರಿಬರುವೆನಾ । ಮೇರುವನಾದರೂ ॥ ೧ ॥ ಕೇಳುಕೇಳಶ್ರೀ । ಲೋಲಲೋಚನೆನೀಂ ॥ ಪ ॥

ಲೀ. ಇಲ್ಲಿನಜನರು । ಮೆಲ್ಲನೆಕಂಡರೆ । ವಲ್ಲಭನೆನಿನ್ನ । ಕೊಲ್ಲದೆಬಿಡರು ॥ ೨ ॥

ರೋ. ಲಲನೆನಿನ್ನವ । ರ್ಕೊಲುವನಿತರೊಳ್ । ಜಲಜಬಾಣನನ್ನ । ನುಳಿಯದಿರ್ಪನೈಯ್ಯೋ ॥ ೨ ॥

ಲೀ. ಈನಮ್ಮ ಜನವು । ತಾನೋಡದಂದದಿಂ । ನೀನಿರಬೇಕೆಂದು । ನಾನೀಗಕಾಂಕ್ಷಿಪೆ ॥ ೩ ॥

ರೋ. ನೀನ್ ವರ್ಗ । ತೊರದಂತಿರಲೀ ॥ ಕಾರಿರುಳೇಸಹ । ಕಾರಿಯಾಗಿರ್ಪುದು ॥ ೩ ॥

ರಾ. ಹಾಗಾದರೆ ಇನ್ನು ಯಾರಮೇಲೆ ಆಣೆಯನ್ನಿಡಲಿ ?

ಲೀ. ಆಣೆಯನ್ನು ಇಡತಕ್ಕದ್ದೇ ಅವಶ್ಯಕವಿಲ್ಲ; ಹಾಗೆ ಇಡಬೇಕಾಗಿ ಇದ್ದರೆ, ನಾನು ಮನಸ್ಸಿನಲ್ಲಿ ಪೂಜಿಸುತ್ತಿರುವ, ಗುಣಗಣಾಲಂಕೃತನಾದ ನಿನ್ನಮೇಲೆಯೇ ಆಣೆಯನ್ನು ಇಟ್ಟುಕೊಂಡರೆಸಾಕು.

ರಾ. ನನ್ನ ಪ್ರಾಣಪ್ರಿಯೆಯು—

ಲೀ. ಬೇಡಬೇಡ ಪ್ರಮಾಣವನ್ನು ಮಾಡಬೇಡ, ಈ ರಾತ್ರಿಯಲ್ಲಿ ನಾನು ನಿನ್ನನ್ನು ನೋಡಿದಮಾತ್ರದಿಂದಲೇ ಆನಂದವನ್ನು ಹೊಂದಿ ಮೋಹಿತಳಾಗಿದ್ದಾಗ್ಯೂ, ಇಷ್ಟು ಅಭ್ಯಗ್ರದಲ್ಲಿಯೇ ನಾವು ಸಂಕಲ್ಪವನ್ನು ಪೂರ್ಣಮಾಡಿಕೊಳ್ಳುವದು ಉಚಿತವಲ್ಲ; ಇದೋ ಮಿಂಚಿತು ನೋಡು ಎಂದು ಹೇಳುವಷ್ಟರಲ್ಲಿಯೇ, ಆ ಮಿಂಚು ಹ್ಯಾಗೆ ಅದೃಶ್ಯವಾಗುವದೊ, ಹಾಗೆ ತ್ವರ್ಯದಿಂದ ಮಾಡಿದಕಾರ್ಯವು ಅಸ್ಥಿರವಾದೀತು, ಈ ರಾತ್ರಿಯು ನಮ್ಮಿಬ್ಬರಿಗೂ ಮನೋಹರವಾಗಿಯೂ, ಶುಭಕರವಾಗಿಯೂ ಇರುವದು; ಇಂಥಾ ರಾತ್ರಿಯಲ್ಲಿ ಹುಟ್ಟಿದ ಪರಸ್ಪರಾನುರಾಗವೆಂಬ ಲತೆಯು, ಕ್ರಮೇಣ ವೃದ್ಧಿಯನ್ನುಹೊಂದಿ, ಕುಟ್ಮಲಿತವಾಗಿ ವಸಂತಮಾರುತ ಸ್ಪರ್ಶದಿಂದ, ವಿಕಸಿತವಾಗಿ ಪುನಃ ನಾವುನೋಡುವಾಗ್ಗೆ, ಉತ್ಕೃಷ್ಟಫಲ ಪುಷ್ಪಗಳಿಂದ ಶೋಭಿಸುತ್ತಿರಲಿ; ಈ ರಾತ್ರಿಯು ನಿನಗೆ ಸುಖ ಸಂತೋಷಗಳನ್ನು ಕೊಡಲಿ.

ಕಂ॥ ಸುಂದರನೆ ನಿನ್ನದರ್ಶನ। ದಿಂದೆನಗಾಗಿರ್ಪತೆರದೆ ನಿನಗುಂ ಮೋಹಾ।
ನಂದಂಗಳಿರ್ಪವೆನುತಾಂ । ಸಂದೇಹಮದಿನಿತು ಮಿಲ್ಲದೇ ನಂಬಿ
ರ್ಪೆಂ ॥ ೧೦ ॥

ಬಳ್ಳೀದು ಪ್ರಿಯನೆ! ನಾನು ಅಂತಃಪುರಕ್ಕೆ ಹೋಗುವೆನು.

ರಾ. ಪ್ರಿಯೆ! ನೀನು ನನ್ನನ್ನು ಸ್ವಲ್ಪವಾದರೂ ಮನ್ನಿಸದೆ ಹೊ[illegible]ಟು ಹೋಗಬಹುದೆ ?

ಲೀ. ಪ್ರಿಯನೆ ಈ ರಾತ್ರಿಯಲ್ಲಿ ನಿನಗೆ ಯಾವ ಸಮಾಧಾನ[illegible] ಹೇಳಿ ಮನ್ನಿಸಲಿ ?

ರಾ. ಪ್ರಿಯೆ! ನನಗೆ ನಿನ್ನಲ್ಲಿ ಇರತಕ್ಕ ಅನುರಾಗವನ್ನು[illegible] ಪೂರ್ವಕವಾಗಿ ನಾನು ಹ್ಯಾಗೆ ಸೂಚಿಸಿದೆನೊ, ನೀನೂ [illegible]

ಜ್ಞೆಯನ್ನು ಮಾಡಿದರೆ ಸಾಕು, ಅದರಿಂದಲೇ ನನ್ನನ್ನು ಮನ್ನಿಸಿದಂತೆ ಆಗುವದು.

ಲೀ. ನಿನಗಿಂತಲೂ ಮೊದಲೇ ನಾನು ಪ್ರತಿಜ್ಞೆಯನ್ನು ಮಾಡಿರುವದ್ದರಿಂದ ಪುನಃ ಪ್ರತಿಜ್ಞೆಯು ಅನವಶ್ಯಕವು.

ರಾ. ಪ್ರೆಯಸಿ! ನೀನು ಪ್ರತಿಜ್ಞೆಯನ್ನು ಪುನಃ ಮಾಡುವದಿಲ್ಲವೆಂದು ಹೇಳಿದರೆ, ದತ್ತಾಪಹಾರವನ್ನು ಮಾಡಿದಂತಾಗುವದಿಲ್ಲವೆ?

ಲೀ. ಕಂ॥ ಘನತರ ಮೆನ್ನಯುಮನದೊಳ । ಗನುರಾಗಂವಾರ್ಧಿ
ಯಂತೆತುಂಬಿತುಳುಂಕುಗುಂ ॥ ನಿನಗದರೊಳಗೆನಿತಿತ್ತಪೆ । ನನಿತುಂ
ತಾಂಪೆರ್ಚುತಿರ್ಪುದಿಮ್ಮಡಿಯಿಂದಂ ॥ ೧೧ ॥

(ತೆರೆಯಲ್ಲಿ ದೂತಿಯು ಲೀಲಾವತಿಯೆ, ಎಂದು ಕರೆಯುವಳು).

ಲೀ. ಪ್ರಿಯನೆ! ಒಳಗೆ ಯಾರೋ ಕರೆಯುತ್ತಾರೆ, ನಾನು ಹೋಗುವೆನು. ಸಖಿ! ಬಂದೆನು. ಸುಂದರಾಂಗನೆ ಸತ್ಯವನ್ನು ಬಿಡಬೇಡ, ಹೋ ಹೋ! ಹೋಗಬೇಡ, ಸ್ವಲ್ಪ ನಿಲ್ಲು, ಪುನಃ ನಾನು ಬರುತ್ತೇನೆ.

(ಕಿಟಕಿಯಿಂದ ಒಳಕ್ಕೆ ಹೋಗುವಳು).

ರಾ. *ಆಹಾ! ಇದೇನು ಇದು ರಾತ್ರಿಯೆ, ಏನು, ಅವಳು ಲೀಲಾವತಿಯೆ, ಈಗ ನಡೆದ ಸರಸಸಲ್ಲಾಪಗಳೆಲ್ಲಾ ಏನು ಸ್ವಪ್ನವೊ? ಅಥವಾ ಮನೋವಿಕಾರವೊ? ಆದರೆ ನಿಜವೊ! ಈ ರೀತಿಯ ಪರಮಾನಂದವು ನಿಜವೇ ಆಗಿದ್ದೀತೆ?*

ಲೀ. (ಕಿಟಕಿಯಲ್ಲಿ ನೋಡಿ) ಪ್ರಿಯನೆ! ನಿನ್ನೊಡನೆ ನಾನು ಮೂರು ಮಾತುಗಳನ್ನು ಆಡುವೆನು, ಬಳಿಕ ನೀನು ಹೋಗಬಹುದು; ನಿನ್ನ

॥ ರಾಗ—ಜಲಾವು ॥ ಆದಿತಾಳ ॥ (ಬೇಡುವೆ ನಿನ್ನನು)

*ಆಹಹ ಏನಿದು । ಈ ಹಿತಭಂಗವು ॥ ಪ ॥ ಈಹದನೆಲ್ಲವು । ಮೋಹವೊಏನೊ ॥ರಾ॥
...ತ್ರಿಯೊ ಆ । ಚದುರೆಲೀಲಾವತಿಯೋ । ಮುದದೊಳೀಗನಡೆ । ದುವದೇಂಸ್ವಪ್ನ
...॥ ನಾಲೀಕಶರನಿಂದ । ಜಾಲವಿದೇನೋ । ಆಲಲನೆಯಮಾಯಾ । ಜಾಲದಬಗೆ
...॥ ನಾಗವೇಣಿಯಾಳೊಡ । ನೀಗನಡೆದಪರಿ । ಭಾಗಧೇಯದೆನಿಜ । ವಾಗಿತಾ

ಅನುರಾಗವು ನನ್ನಲ್ಲಿ ಸ್ಥಿರವಾಗಿ ಇದ್ದು, ನನ್ನನ್ನು ವರಿಸುವದೇ ನಿನಗೆ ಮುಖ್ಯವಾಗಿದ್ದರೆ, ಆ ವಿವಾಹವು ಯಾವಕಾಲದಲ್ಲಿ, ಯಾವ ಸ್ಥಳದಲ್ಲಿ, ಆಗ ತಕ್ಕದ್ದೊ, ಆ ಸಮಾಚಾರವನ್ನು ನಾನು ಕಳುಹಿಸುವ ದೂತಿಯೊಡನೆ ಹೇಳಿ ಕಳುಹಿಸಬೇಕು. ಆಗ ನಾನು ನನ್ನ ಸರ್ವಸ್ವವನ್ನೂ ನಿನ್ನ ಪಾದಾರವಿಂದಗಳಿಗೆ ಒಪ್ಪಿಸಿ, ನನ್ನ ಪತಿಯಾದ ನೀನು ಎಲ್ಲಿಗೆ ಕರೆದರೂ, ಅಲ್ಲಿಗೆ ಬರುತ್ತೇನೆ; ನಿನ್ನ ಅನುರಾಗವು ನಂಬತಕ್ಕದ್ದಲ್ಲದಿದ್ದರೆ—

ಧಾ. (ತೆರೆಯಲ್ಲಿ) ಅಮ್ಮಾ ಲೀಲಾವತಿ!

ಲೀ. ದೂತಿ! ಇದೊ ಬಂದೆ. ಪ್ರಿಯನೆ, ನನ್ನ ವ್ಯಸನಕ್ಕೆ ನನ್ನನ್ನೇ ಗುರಿಮಾಡಿ ಹೋಗು, ನಾಳೆ ದೂತಿಯನ್ನು ಕಳುಹಿಸುವೆನು.

ರಾ. ಈಗಲೀಗ ನನ್ನ ಪ್ರಾಣಗಳು ಉಜ್ಜೀವಿತವಾದವು.

ಲೀ. ಪ್ರಿಯನೆ! ನಿನಗೆ ಈ ರಾತ್ರಿಯು ಮಂಗಳಕರವಾಗಲಿ.

(ಮರೆಯಾಗುವಳು).

ರಾ. ಕಂ॥ ತರುಣೀಮಣಿ ನೀನಂತಃ। ಪುರಕೀಗಳ್ ಪೋಗೆ ನಿನ್ನ ವಿ
ರಹವ್ಯಥೆಯಿಂ ॥ ಮರುಮರುಗಿ ಬಳಲುವೆ ನಗೀ। ಯಿರುಳ್ಮಾಸ್ತುದೆಂ
ತಕಟ ಮಂಗಳಕರಂ ನೆಲದೋಳ್ ॥ ೧೨ ॥

ಬಾಲಕರು ಪಾಠಗಳನ್ನು ಓದಿದ ಬಳಿಕ ಪುಸ್ತಕಗಳನ್ನು ಅಲ್ಲಲ್ಲಿಯೇ ಬಿಟ್ಟು ಪಾಠಶಾಲೆಯಿಂದ ಮನೆಗೆ ಎಷ್ಟು ಸಂತೋಷವಾಗಿ ಹೋಗುತ್ತಾರೆಯೋ, ಹಾಗೆ ಪ್ರೇಯಸೀಯರ ಬಳಿಗೆ ಪ್ರಿಯರು ಹೋಗುವರು ; ಅದೇ ಬಾಲಕರು ಪುಸ್ತಕಗಳನ್ನು ತೆಗೆದುಕೊಂಡು ಪುನಃ ಪಾಠಶಾಲೆಗೆ ಸಂತೋಷರಹಿತರಾಗಿ ಹ್ಯಾಗೆ ಹೋಗುತ್ತಾರೆಯೊ, ಹಾಗೆ ಪ್ರಿಯತಮರ ಅಗಲಿಕೆಯು ಸಂತೊಷರಹಿತವಾಗುವದು.

(ಹೋಗುತ್ತಿರುವನು).

ಲೀ. (ಕಿಟಕಿಯಲ್ಲಿ) ಪ್ರಿಯನೆ ಪ್ರಿಯನೆ! ನನ್ನ ಮಾತನ್ನು ಕೇಳು ; ಹಾ ಹಾ! ಹೊರಟೇ ಹೋದನಲ್ಲ! ಇವನು ಪುನಃ ಬರುವದಕ್ಕೆ ಏನು ಮಾಡಲಿ? ಹಾ ಹಾ! ನಾನು ಪರಾಧೀನಳಾದ್ದರಿಂದ ಗಟ್ಟಿಯಾಗಿ ಕೂಗುವದಕ್ಕೆ ಅವಕಾಶವಿಲ್ಲ; ಏನುಮಾಡಲಿ, ನಾನು ಪರಾಧೀನಳಲ್ಲದಿದ್ದರೆ, ನನ್ನ

ಪ್ರಾಣಕಾಂತನನ್ನು ಗಟ್ಟಿಯಾಗಿ ಕೂಗಿ, ಆ ಪ್ರತಿಧ್ವನಿಯಿಂದ ಈ ಉಪವನ ವನ್ನೆಲ್ಲಾ ತುಂಬಿಸುತ್ತಿದ್ದೆನು.

ರಾ. ಆಃ! ನನ್ನ ಪ್ರಿಯೆಯು ನನ್ನನ್ನು ಕರೆಯುವಳು.

ಕಂ ॥ ಇರುಳೊಳ್ ಪ್ರಾಣಪ್ರೇಯಸಿ। ಯುರ ಮೃದುಮಧುರತರಸರಸವ
ಚನಂ ಸುಮನೋ ॥ ಹರಗಾನದತ್ತಣಿಂದಂ। ಪಿರಿದಹಸಂತೋಷ
ವನ್ನು ಪುಟ್ಟಿಪುದಹಹಾ ॥ ೧೩ ॥

ಲೀ. ರಾಮವರ್ಮನೆ!

ರಾ. ಆಃ! ಪ್ರಾಣಪ್ರೇಯಸಿ?

ಲೀ. ನಿನ್ನ ಬಳಿಗೆ ನನ್ನ ದೂತಿಯನ್ನು ಎಷ್ಟುಹೊತ್ತಿಗೆ ಕಳುಹಿಸಲಿ?

ರಾ. ಒಂಭತ್ತು ಘಂಟೆಗೆ ಸರಿಯಾಗಿ ಕಳುಹಿಸು.

ಲೀ. ತಪ್ಪುವದಿಲ್ಲ, ಅಲ್ಲಿನವರಿಗೂ ಒಂದು ಗಳಿಗೆಯನ್ನು ಒಂದು ಕಲ್ಪದಂತೆ ಕಳೆಯುತ್ತಿರುವೆನು; ಸುಂದರಾಂಗನೆ, ನಿನ್ನನ್ನು ನಾನು ಯಾತಕ್ಕೆ ಕರೆದೆನೋ ಮರೆತೆನು.

ರಾ. ನಿನಗೆ ಜ್ಞಾಪಕಕ್ಕೆ ಬರುವವರಿಗೂ ಇಲ್ಲಿಯೇ ಇರುವೆನು.

ಲೀ. ನಿನ್ನ ಸಾಮೀಪ್ಯದಿಂದುಂಟಾದ ಸಂತೋಷವನ್ನೇ ಮನಸ್ಸಿನಲ್ಲಿ ಜ್ಞಾಪಿಸಿಕೊಳ್ಳುತ್ತಾ, ನಿನ್ನನ್ನು ಇಲ್ಲಿಯೇ ನಿಲ್ಲಿಸಿಕೊಳ್ಳಬೇಕೆಂಬ ಕುತೂಹಲದಿಂದ, ನಿನ್ನನ್ನು ಯಾತಕ್ಕೆ ಕರೆದೆನೋ ಅದನ್ನು ಮರೆವೆನು.

ರಾ. ನನ್ನ ಮನೆಯನ್ನು ಮರೆತು ಇದನ್ನೇ ಮನೆಯೆಂದು ಭಾವಿಸಿ, ನಿನಗೆ ಮರೆವೆಯನ್ನು ಹೆಚ್ಚು ಮಾಡುವದಕ್ಕೋಸ್ಕರ ಅಭಿಮುಖದಲ್ಲಿಯೇ ನಿಂತಿರುವೆನು.

ಲೀ. ಪ್ರಿಯನೆ ಬೆಳಕಾಗುತ್ತಾ ಬಂತು, ನೀನು ಹೋಗಲೇ ಬೇಕಾಯಿತು,

ಕಂ ॥ ಚರಿಸಲಿಹೊರಗೆನ್ನುತೆ ಪಂ। ಜರದಿಂದಂ ಬಿಟ್ಟಗಿಣಿಯ ತತ್ಪರಿ
ಪಾಲಂ ॥ ನೆರೆಪಾರಿಪೋಕುಮೆಂದದ। ಭರದಿಂ ಪಂಜರಕೆ ಮಗುಳೆ
ನೂಂಕಿದತೆರದಿಂ ॥ ೪೦ ॥

ನಿನ್ನನ್ನು ದೂರಕ್ಕೆ ಕಳುಹಿಸಲು ಮನಸ್ಸು ಬರುವದಿಲ್ಲ.

ರಾ. ಪ್ರಿಯೆ! ನಾನು ನಿನ್ನ ಗಿಣಿಯಾಗಿಯಾದರೂ ಹುಟ್ಟಬಾರದಾಗಿತ್ತೆ?

ಲೀ. ನಾನೂ ಹಾಗೆಯೇ ಯೋಚಿಸುತ್ತೇನೆ; ಹಾಗೆ ನೀನು ಗಿಣಿಯೇ ಆಗಿದ್ದರೆ ಪ್ರೇಮಾತಿಶಯದಿಂದ ನಿನ್ನನ್ನು ಏನು ಮಾಡುತ್ತಿದ್ದೆನೋ! ಈ ರಾತ್ರಿಯು ನಿನಗೆ ಮಂಗಳಕರವಾಗಲಿ. ವಿಯೋಗವು ಬಹುಕಷ್ಟಕರವಾದದ್ದು.

(ಹೋಗುವಳು).

ರಾ. ಪ್ರಿಯೆ! ನಿನಗೆ ಸುಖನಿದ್ರೆಯು ಸಂತೋಷಕರವಾಗಲಿ; ನಿನ್ನಂತೆ ಸಂತೋಷದಲ್ಲಿ ಇರುವ ಭಾಗ್ಯವು ನನಗೆ ಎಂದಿಗೆ ಉಂಟಾದೀತೊ!

ಕಂ ॥ ಕಡುಬೇಗದೆ ಗುರುದೇಶಿಕ । ನೆಡೆಗೈದುತಲೆನಗೆ ಸಂಭವಿಸಿದೀ ಪರಿ
ಯಂ ॥ ಬಿಡದೆಲ್ಲವ ಬಿನ್ನವಿಸು । ತ್ತಡಿಗೆರಗಿ ಸಹಾಯವನ್ನು ಬೇಡು
ವೆ ನವರಾ ॥ ೧೫ ॥

(ಹೋಗುವನು).

ತೃತೀಯ ಸ್ಥಾನಂ.—ಯೋಗೀಶ್ವರನ ಗುಹೆ.

(ಪೂಜ್ಯಪಾದನು ಹೂವಿನ ಬುಟ್ಟಿಯನ್ನು ಹಿಡಿದುಕೊಂಡು ಪ್ರವೇಶಿಸುವನು).

ಪೂಜ್ಯ. ಕಂ ॥ * ಅತಿಶಯಗಾಢತಮಃಪರಿ । ವೃತರಾತ್ರಿಯನೊತ್ತಿ
ನೂಂಕುತಂಕರಪುರುಣ ದ್ಯುತಿತಲೆದೋರ್ಸ್ಕಂ ಪೂರ್ವ । ಕ್ಷಿತಿಧರ
ವಂಬೆಳಗಿ ಜನಕೆನಗೆಯೊಗೆಯಿಸುತಂ ॥ ೧೬ ॥

॥ ರಾಗ—ನಾರಾಯಣಿ ॥ ಝಾಪುತಾಳ ॥ (ಮೂಡುವನಿತ್ತರವಿ).

* ಮಿರುಗುವದರುಣರುಚಿ । ಪುರುಹೂತದಿಶೆಯೊಳು ॥ ಪ ॥ ಪರ್ವದೀಕಾರಿರುಳ ವೊತ್ತದೆ । ಕೊರ್ವಿರುವರಾತ್ರಿಯನುನೂಂಕುತ । ಸರ್ವಲೋಕಕುನಗೆಯನೊಗೆಯಿಸಿ । ಪೂರ್ವಪರ್ವತವನ್ನುಬೆಳಗುತ ॥ ೧ ॥ ಆತುರದೆಕಾಲವನುಸೂಚಿಸೆ । ಕಾತುರಿಪಕೋಳಿಗಳನೆಬ್ಬಿಸಿ । ಶೀತಮಾರುತಪೋತನನುಬಲು । ಕೌತುಕದೆಮುಂಕಳುಹಿಸುತ್ತಲಿ ॥ ೨ ॥

ಕಂ॥ ಉದಯಿಪ ಸೂರ್ಯನತೇಜಕೆ । ಬೆದರ್ದಾತನಚಕ್ರಹತಿಯತಪ್ಪಿಸಿ ಕೊಳುತಂ ॥ ಮದುವಕುಡಿದವನತೆರದಿಂ। ದಿದೊ ತೂಗಾಡುತ್ತೆ ಲೋಪುತಿರ್ಕುಂಧ್ವಾಂತಂ ॥ ೧೭ ॥

ನಾನು ಸೂರ್ಯೋದಯಾತ್ಪೂರ್ವದಲ್ಲಿಯೇ, ಈ ನನ್ನ ಬುಟ್ಟಿಯಲ್ಲಿ ವಿಷಮಯಂಗಳಾದ ಮೂಲಿಕೆಗಳನ್ನು, ಮಧುರಸಭರಿತಂಗಳಾದ ಪುಷ್ಪಗಳನ್ನೂ ತುಂಬಿಕೊಳ್ಳುವೆನು.

ಕಂ॥ ಲೋಕಕ್ಕೆ ಧಾತ್ರಿಯಾಗಿಹ। ಭೂಕಾಂತೆಯುಜಠರದಲ್ಲಿ ಪುಟ್ಟುತೆಬಳಿಕಂ ॥ ಆಕೆಯುಮೊಲೆವಾಲೀಂಟುವ್ರೊ। ಲೀಕಾಂತಾರದೊಳಗೊಗೆ ದಸಸಿಗಳ್ ತೋರ್ಕುಂ ॥ ೧೮ ॥

ಇವುಗಳಲ್ಲಿ, ಅನೇಕಮೂಲಿಕೆಗಳು ಬಹಳವಾಗಿ ಉಪಯೋಗಕ್ಕೆ ಬರುವವು, ಕೆಲವು, ಸ್ವಲ್ಪಮಾತ್ರ ಉಪಯೋಗಕರಗಳು, ಆದರೂ ಪ್ರತಿಯೊಂದೂ ಬೇರೆಬೇರೆಯಾಗಿರುವದು. ಆಃ! ಗಿಡಗಳಲ್ಲಿಯೂ, ಮೂಲಿಗಳಲ್ಲಿಯೂ, ಕಲ್ಲುಗಳಲ್ಲಿಯೂ, ಬಹುಪ್ರಯೋಜನಕರಗಳಾದ ಗುಣಗಳು ಇರುವವು; ಭಗವಂತನ ಸೃಷ್ಟಿಯಲ್ಲಿ ಜನಗಳಿಗೆ ಉಪಯೋಗಕರವಾಗದವು ಯಾವವೂ ಇಲ್ಲ. ಆದರೆ ಎಷ್ಟುವಳ್ಳೇಪದಾರ್ಥವಾಗಿದ್ದರೂ ಅದನ್ನು ದುರುಪಯೋಗಪಡಿಸಿದರೆ, ಅದರ ಸುಗುಣವು ತಪ್ಪಿಹೋಗಿ ಕೇಡನ್ನು ಉಂಟುಮಾಡುವದು; ದುರ್ಗುಣವು ತಾನು ಮಾಡುವ ಕೆಲಸಗಳಿಂದ ಕಾಲಾಂತರದಲ್ಲಿ ಸುಗುಣವಾಗಿ ಪರಿಣಮಿಸುವದು. ಈ ಪುಷ್ಪದ ಬಾಲವೃಂತದಲ್ಲಿ ವಿಷವೂ, ಔಷಧಶಕ್ತಿಯೂ, ಇರುವದು; ಇದರ ವಾಸನೆಯು ಮನಸ್ಸಿಗೆ ಪರಮಾನಂದಕರವು; ಇದನ್ನೇ ತಿಂದರೆ ಮರಣವನ್ನು ಹೊಂದಿಸುವದು. ಆದ್ದರಿಂದ ಮನುಷ್ಯರಲ್ಲಿಯೇ ಆಗಲಿ, ಮೂಲಿಕೆಗಳಲ್ಲಿಯೇ ಆಗಲಿ ಸುಗುಣ ದುರ್ಗುಣಗಳು ನಿಯುತವಾಗಿರುವವು. ಯಾವಾಗ ದುರ್ಗುಣವು ಪ್ರಬಲವಾಗುವದೊ, ಆಗ ವಿಷಗುಣವು ಸಸಿಗಳನ್ನು ಹಾಳುಮಾಡುವದು.

(ರಾಮವರ್ಮನು ಪ್ರವೇಶಿಸುವನು.)

ರಾ. ಗುರುಗಳಿಗೆ ವಂದಿಸುವೆನು.

ಪೂಜ್ಯ. ನಿನಗೆ ಮಂಗಳವಾಗಲಿ! ಈ ಅರುಣೋದಯ ಕಾಲದಲ್ಲಿ ನನ್ನ ಕಿವಿಗೆಬೀಳುವ, ಮನೋಹರಧ್ವನಿಯು ಯಾರದು? ಎಲೈ ಇಷ್ಟು ಜಾಗ್ರತೆಯಲ್ಲಿ ನೀನು ಶಯನವನ್ನು ಬಿಟ್ಟು ಬಂದಿರುವದನ್ನು ನೋಡಿದರೆ, ಚಿಂತಾಕ್ರಾಂತನಾಗಿರುವಂತೆ ತೋರುವದು: ವೃದ್ಧರಿಗೂ ಚಿಂತಾಕ್ರಾಂತರಿಗೂ ನಿದ್ರೆ ಬರುವದಿಲ್ಲ; ಯೋಚನೆಯಿಲ್ಲದೆ, ದುಃಖಲೇಶವನ್ನೂ ತಿಳಿಯದೆ ಇರುವ ಪ್ರಾಯದವರಿಗೆ ನಿದ್ರೆಯು ಬಲುಬೇಗ ಬರವದು; ನಿನ್ನ ಸತ್ವರಾಗಮನವೇ ನಿನ್ನ ಚಿಂತಾಕ್ರಾಂತತೆಯನ್ನು ತೋರ್ಪಡಿಸುವದು; ಹಾಗಲ್ಲದಿದ್ದರೆ ನೀನು ಈ ರಾತ್ರೆಯಲ್ಲಿ ನಿನ್ನ ಮನೆಯಲ್ಲಿ ಮಲಗಿರಲಿಲ್ಲವೆಂದು ಊಹಿಸುತ್ತೇನೆ.

ರಾ. ಪೂಜ್ಯರೆ! ತಾವು ಕೊನೆಯಲ್ಲಿ ಅಪ್ಪಣೆ ಕೊಡಿಸಿದ ಮಾತು ನಿಜ, ರಾತ್ರೆಯು ನನಗೆ ಬಹಳ ಹಿತಕರವಾಗಿಯೇ ಇತ್ತು.

ಪೂ. ಏನು ಏನು! ಹಾ ದೇವರೆ ಈತನ ಪಾಪಕೃತ್ಯವನ್ನು ಕ್ಷಮಿಸು! ಏನು, ಕಲವಾಣಿಯೊಡನೆ ಇದ್ದೆಯೊ?

ರಾ. ಪೂಜ್ಯರೆ ನಾನು ಕಲವಾಣಿಯೊಡನೆ ಇರಲಿಲ್ಲ, ಆ ಹೆಸರನ್ನೇ ಮರೆತೆನು, ಅದು ನನಗೆ ಶತ್ರುವಾಗಿರುವದು.

ಪೂ. ಊಃ! ಆದರೆ ನೀನು ಸತ್ಪುರುಷನು; ಈ ರಾತ್ರೆ ಏಲ್ಲಿದ್ದೆ?

ರಾ. ತಾವು ಪುನಃ ಪ್ರಶ್ನೆಯನ್ನು ಮಾಡುವದರೊಳಗಾಗಿ ನನ್ನ ಸಕಲ ವೃತ್ತಾಂತವನ್ನೂ ವಿಜ್ಞಾಪಿಸುವೆನು; ನಾನು ಶತ್ರುವಿನ ಮನೆಯಲ್ಲಿ ಮಹೋತ್ಸವಾನುಭವವನ್ನು ಮಾಡುತ್ತಿದ್ದೆನು: ಅಲ್ಲಿ ಅಕಸ್ಮಾತ್ ನನಗೂ ಒಬ್ಬ ಸುಂದರಾಂಗಿಗೂ ಪರಸ್ಪರಾನುರಾಗ ವುಂಟಾಯಿತು; ಆದರಿಂದ ಉಂಟಾದ ಮನ್ಮಥವಿಕಾರವು, ಶ್ರೇಷ್ಠರಾದ ತಮ್ಮ ಸಹಾಯವೆಂಬ ಔಷಧದಿಂದ ನಿವಾರಣ ವಾಗಬೇಕು; ಪೂಜ್ಯರೆ! ನನಗೆ ಶತ್ರುಗಳೇ ಇಲ್ಲ, ಆದರೂ ಈಗ ನಾನು ಶತ್ರುವಿನ ಸೌಖ್ಯಕ್ಕಾಗಿಯೇ ತಮ್ಮನ್ನು ಬೇಡುತ್ತೇನೆ.

ಪೂ. ಎಲೈ! ಸುಗುಣಶಾಲಿಯೆ, ನನಗೆ ತಿಳಿವಂತೆ ಸ್ಪಷ್ಟವಾಗಿಹೇಳು.

ರಾ. ಮಹದೈಶ್ವರ್ಯ ಸಂಪನ್ನನಾದ ಕಾಪಿಲನ ಮಗಳು ಲೀಲಾವತಿಯಲ್ಲಿ ನನ್ನ ಮನಸ್ಸು ಆಸಕ್ತವಾಯಿತು; ಅಕೆಯ ಮನಸ್ಸು ನನಲ್ಲಿಯೂ

ಅನುರಕ್ತವಾಯಿತು. ಆದ್ದರಿಂದ ತಾವು ನಮ್ಮಿಬ್ಬರಿಗೂ ಶಾಸ್ತ್ರಪ್ರಕಾರವಾಗಿ ಮದುವೆಯನ್ನು ಮಾಡತಕ್ಕದೊಂದೇ ಅವಶಿಷ್ಟವಾಗಿರುವದು. ಯಾನಸ್ಥಳದಲ್ಲಿ, ಯಾವಕಾಲದಲ್ಲಿ, ಯಾವರೀತಿಯಲ್ಲಿ, ಪ್ರತಿಜ್ಞೆಯನ್ನು ಮಾಡಿದೇವೂ ಅದನ್ನು ಬಳಿಕ ವಿಜ್ಞಾಪಿಸಿಕೊಳ್ಳುತ್ತೇನೆ; ಈದಿನವೇ ನಮಗೆ ಮದುವೆಯನ್ನು ಮಾಡಬೇಕೆಂದು ಪ್ರಾರ್ಥಿಸುವೆನು.

ಪೂ. ಆಹ! ಇದೇನು ಆಶ್ಚರ್ಯ! ಆರೀತಿಯಲ್ಲಿ ಪ್ರೀತಿಸುತ್ತಿದ್ದ ಕಲವಾಣಿಯ ವ್ಯಾಮೋಹವು ಇಷ್ಟುಬೇಗ ಮರೆಯಾಯಿತೆ? ಯೌವನಸ್ಥರ ಅನುರಾಗವು, ಕಣ್ಣಿನಲ್ಲಿ ಇರುವದೇ ಹೊರ್ತು ಮನಸ್ಸಿನಲ್ಲಿ ಇರುವದಿಲ್ಲ! ಎಲೈ! ಈ ಕಲವಾಣಿಗೋಸ್ಕರ ಎಷ್ಟುಕಷ್ಟಪಟ್ಟಿರುವೆ! ಅನುರಾಗವನ್ನು ತಿಳಿಯದೆ ನೀನು ಎಷ್ಟುಕಣ್ಣೀರನ್ನು ಕರೆದಿರುವೆ! ನೋಡಿಕೊ ನಿನ್ನ ಕಣ್ಣೀರು ಸುರಿದಕಲೆಯು ನಿನ್ನ ಕೆನ್ನೆಯಮೇಲೆ ಇನ್ನೂ ಮಾಸದೇ ಇರುವದು, ಈ ಕಲವಾಣಿಯಲ್ಲಿ ನನಗೆ ಉಂಟಾಗಿರುವ ಅನುರಾಗವು ಈ ದೇಹದೊಂದಿಗೇ ಪರಿಹಾರವಾಗತಕ್ಕದೆಂದು ನೀನು ಹೇಳುತ್ತಿರಲಿಲ್ಲವೆ? ಆದೆಲ್ಲಾ ಈಗ ಎಲ್ಲಿ ಹೋಯಿತು? ಲೋಕದಲ್ಲಿ ಚಪಲಚಿತ್ತರಾದ ಗಂಡಸರಿಂದಲೇ ಹೆಂಗಸರು ಕೆಡುವರೆಂದು ತಿಳಿಯತಕ್ಕದ್ದು.

ರಾ. ನಾನು ಕಲವಾಣಿಯನ್ನು ಪ್ರೀತಿಸುತ್ತಿದ್ದಾಗಲೂ ತಾವು ಹೀಗೆಯೇ ಹೇಳುತ್ತಿದ್ದಿರಿ.

ಪೂ. ನೀನು ಪ್ರೀತಿಸುತ್ತಿದ್ದೆಯೆಂದು ಅಲ್ಲ, ಸರ್ವದಾ ಆಕೆಯನ್ನು ಧ್ಯಾನಿಸುತ್ತಿದ್ದ ಕಾರಣ ಬುದ್ಧಿವಾದವನ್ನು ಹೇಳುತ್ತಿದ್ದೆನು.

ರಾ. ಅನುರಾಗವನ್ನು ಪರಿತ್ಯಜಿಸು ಎಂದು ತಾವು ಅಪ್ಪಣೆ ಕೊಡಲಿಲ್ಲವೆ?

ಪೂ. ಒಂದನ್ನು ಬಿಟ್ಟು ಮತ್ತೊಂದನ್ನು ಅಂಗೀಕರಿಸೆಂದು ಹೇಳಲಿಲ್ಲ.

ರಾ. ಪೂಜ್ಯರೆ, ನನ್ನನ್ನು ಯಾತಕ್ಕೆ ದಂಡಿಸುತ್ತೀರಿ,

ಕಂ ॥ ಈಗೆನ್ನೊಳಗನುರಾಗಿಸಿ । ದಾಗುಣಮಣಿಯಾತ್ಮರೂಪವಿನಯಾ
ದಿಗಳಿಂ ॥ ಬೇಗೆನ್ನನು ಮೋಹಿಸಿದಂ । ತಾಗಳ್ ಕಲವಾಣಿಯೆನ್ನ ಮೋ
ಹಿಸಲಿಲ್ಲಂ ॥ ೧೯ ॥

ಪೂ. ನಿನ್ನ ಅನುರಾಗವು ತುದೀ
ಸ್ಸಿನಲ್ಲಿ ಇರಲಿಲ್ಲವೆಂದು ತಿಳಿದು, ಅವಳು ನಿನ್ನ
ಚಪಲಚಿತ್ತನೆ, ನನ್ನೊಂದಿಗೆ ಬಾ, ಈ ಒಂದು ವಿಷಯ
ವನ್ನು ಮಾಡುತ್ತೇನೆ; ದೈವ ಸಂಕಲ್ಪದಿಂದ ಸಂಘಟಿಸುವ
ವು ನಿಮ್ಮ ಪರಸ್ಪರ ದ್ವೇಷವನ್ನು ಹೋಗಲಾಡಿಸಿ ಸ್ನೇಹಕ್ಕನು
ಗಲಿ.

ರಾ. ಪೂಜ್ಯರೆ! ಇಲ್ಲಿಂದ ಬೇಗಹೋಗೋಣ, ತಾವು ಎಷ್ಟುಜಾಗ್ರತೆ ಮಾಡಿದರೂ ನನಗೆ ಅಷ್ಟು ಒಳ್ಳೇದು.

ಪೂ. ಎಲೈ,

ಕಂ ॥ ತ್ವರೆಯಿಂದೆಸೈದ ಕಾರ್ಯಕೆ । ಬರುತಿಹುದ್ವೈಭಂಗ ಮದರಿನಿಂಕಾರ್ಯ
ಗಳಂ ॥ ಪರಿಭಾವಿಸುತಾ ಲೋಚಿಸಿ । ವಿರಚಿಸಲಾಕಾರ್ಯ ಸಿದ್ಧಿತಪ್ಪ
ದುಜಗದೊಳ್ ॥ ೨೦ ॥

(ಹೋಗುತ್ತಾರೆ).

ಚತುರ್ಥ ಸ್ಥಾನಂ—ಬೀದಿ.

(ಬೇಹಾರಿ, ಮದನ, ಇವರು ಪ್ರವೇಶಿಸುವರು.)

ಮ. ಈಗ ರಾಮವರ್ಮನು ಎಲ್ಲಿರಬಹುದು? ರಾತ್ರಿ ಮನೆಗೆ ಬರಲಿಲ್ಲವೊ?

ಬೇ. ಆತನು ತಂದೆಯ ಮನೆಗೇ ಬರಲಿಲ್ಲವೆಂದು ಆತನ ಸೇವಕನು ಹೇಳಿದನು.

ಕಂ ॥ ಲಲಿತಶಶಿಯಂತೆ ಮುಖವಂ । ಬಲುಬೆಟ್ಟತುಬಜ್ಜರದೊಲೆ ಮನ
ವಂತಳೆದಾ ॥ ಕಲವಾಣಿ ಈತನಂ ಮರು । ಳ್ಗೊಳಿಸುತಲುನ್ಮತ್ತನಂತೆ
ತಿರುಗಿಪಳಕಟಾ ॥ ೨೧ ॥

ಬೇ. ವೃದ್ಧಕಾಪಿಲನ ನೆಂಟನಾದ ತ್ರಿವಿಕ್ರಮನು, ರಾಮವರ್ಮನ ತಂದೆಯ ಮನೆಗೆ, ಒಂದು ಕಾಗದವನ್ನು ಕಳುಹಿಸಿ ಇರುತ್ತಾನೆ.

ವೇಕೆಂದು ಅದರಲ್ಲಿ ಬರೆದಿರಬಹುದು.

ಅದಕ್ಕೆಸರಿಯಾಗಿ ಉತ್ತರವನ್ನು ಬರೆಯುವನ

ಗಯನ್ನು ಬಲ್ಲವರು ಯಾರಾದರೂ ಅದಕ್ಕೆ ಉತ್ತ

ಬಹುದು.

ಹಾಗಲ್ಲ, ಆಕಾಗದಕ್ಕೆ ಸರಿಯಾದ ಉತ್ತರವನ್ನು ರಾಮವರ್ಮನೇ ಸ್ಥೈರ್ಯದಿಂದ ಕೊಡುವದಕ್ಕೆ ಯೋಗ್ಯನು.

ಮ. ಅಯ್ಯೋ! ಆ ರಾಮವರ್ಮನೊ,

ಕಂ ॥ ಜಲರುಹಲೋಚನೆಯಾದಾ । ಕಲಾನ್ನಾಣಿಗೆತೆತ್ತು ಮನವಮೋ
ಹಾಂಬುಧಿಯೊಳ್ ॥ ಮುಳುಗುತೆ ಮನ್ಮಥಪಾಶಾ । ವಳಿ ಬದ್ಧನು
ಮಾಗಿ ಬಳಲಿಬಲಗುಂದಿರ್ಪಂ ॥ ೨೦ ॥

ಇಂಥಾವನು ತ್ರೈವಿಕ್ರಮನೊಡನೆ ಯುದ್ಧವನ್ನು ಮಾಡುವದಕ್ಕೆ ಸಮರ್ಥನಾದಾನೆ ?

ಬೇ. ಆಹ! ನೀನು ಹೀಗೆ ಹೇಳಬಹುದೆ, ಅವನು ಯಾರು ?

ಮ. ಅವನು ಯಾರೆ, ಹೇಳುತ್ತೇನೆ ಕೇಳು, ವಿನಯದಿಂದ ಮಧುರೋಕ್ತಿಗಳನ್ನು ಆಡುವದರಲ್ಲಿ ಸಮರ್ಥನು, ಜಗಳವಾಡುವಕಾಲದಲ್ಲಿಯೂ ಸಂಗೀತವನ್ನು ಹಾಡುತ್ತಲೂ, ತಾಳಗಳನ್ನು ಧ್ಯಾನಿಸುತ್ತಲೂ ಇರುವನು; ಆದರೂ ದ್ವಂದ್ವ ಯುದ್ಧದಲ್ಲಿ ಬಹು ಸಮರ್ಥನು.

ಬೇ. ನೋಡು ನೋಡು ಆದೋ ರಾಮವರ್ಮನು ಬರುತ್ತಿರುವನು.

ಮ. ವಿರಹಾತಿರೇಕದಿಂದ ಕಾಂತಿಗುಂದಿರುವ, ಈತನ ಮುಖವನ್ನು ನೀನು ನೋಡು.

(ರಾಮವರ್ಮನು ಪ್ರವೇಶಿಸುವನು.)

ನಿನ್ನೇರಾತ್ರಿ ನಮಗೆ ಚೆನ್ನಾಗಿ ಮೋಸಮಾಡಿದೆ.

ರಾ. ಎಲೈ ಮಿತ್ರರೆ! ನಿಮಗೆ ಸುಪ್ರಭಾತವೆ; ನಿಮಗೆ ನಾನು ಮಾಡಿದ ಮೋಸವೇನು ?

ಮ. ನಮ್ಮನ್ನು ಬಿಟ್ಟು ನೀನು ತಪ್ಪಿಸಿಕೊಂಡು ಹೋದದ್ದನ್ನು ಮರೆತೆಯೋ ?

ರಾ. ಮಿತ್ರನೆ! ಕ್ಷಮಿಸು, ನನಗೆ ಅವಶ್ಯಕವಾದ ಕಾರ್ಯವಿತ್ತು; ಅಂಥಾ ಸಮಯದಲ್ಲಿ ನೀವು ಉಪಚಾರವನ್ನು ಅಪೇಕ್ಷಿಸಲಾಗದು.

ಮ. ನಿನ್ನ ವಿದ್ಯೆಗೂ, ನಿನ್ನ ಸ್ವಭಾವಕ್ಕೂ, ಈರೀತಿಯಾದ ಸ್ನೇಹ ಪರತ್ವವು ನಿನಗೆ ಸಹಜವಾದದ್ದು; ಈರೀತಿಯನ್ನು ನೋಡಿ ನಮಗೆ ಬಹಳ ಸಂತೋಷವಾಯಿತು; ಈಗ ನೀನು ಇರಬೇಕಾದ ರೀತಿಯಲ್ಲಿಯೇ ಇರುತ್ತೀಯೆ, ಅನುರಾಗ ಭ್ರಾಂತಿಯು ಈಗ ಬಹಳ ಕಡಮೆಯಾಗಿ ಇರಬಹುದು.

ಬೇ. ಸಾಕು ಸಾಕು, ನಿನ್ನ ಮಾತುಗಳನ್ನು ನಿಲ್ಲಿಸು.

ಮ. ನಿನ್ನ ಇಷ್ಟಾನುಸಾರವಾಗಿ ನನ್ನ ಮಾತುಗಳನ್ನು ಯಾತಕ್ಕೆ ನಿಲ್ಲಿಸಬೇಕು?

ಬೇ. ಹಾಗೆ ನಿಲ್ಲಿಸದಿದ್ದರೆ, ನಿನ್ನ ಕಥೆಯು ಎಂದಿಗೂ ಕೊನೆಗಾಣುವದಿಲ್ಲ.

ಮ. ಹಾಗಲ್ಲ, ಹಾಗಲ್ಲ, ಕೊನೆಗಾಣುವದು.

ರಾ. ಆಃ! ಅಲ್ಲಿ ಒಂದು ವೇಷವು ಬರುತ್ತಿರುವದು ನೋಡು.

(ಸೇವಕ ಧಾತ್ರಿಯರು ಪ್ರವೇಶಿಸುವರು.)

ಮ. ಇವಳ ಸೀರೆಯು ಎಷ್ಟು ಹರಡಿಕೊಂಡಿದೆ.

ಬೇ, ಭಾಪು! ಭಾಪು!

ಧಾ. ಎಲೆ ಸೇವಕನೆ!

ಸೇ. ಧಾತ್ರಿ ಏನಪ್ಪಣೆ?

ಧಾ. ನನ್ನ ಬೀಸಣಿಕೆಯನ್ನು ಕೊಡು.

ಮ. ಆಃ! ಎಲೆ ಸೇವಕನೆ!

ಕಂ ॥ ಈಸೊಗಸುವೊಗವ ಮುಚ್ಚಲು । ಬೀಸಣಿಕೆಯ ಬೇಗನೀವುದೀ
ಕೆಯುವೊಗದಾ ॥ ಆಸಿರಿಯಂ ನೋಳ್ಪವರಿಂ । ಭಾಸುರಮಹ ಬೀಸ
ಣಿಕೆಯನೋಳ್ಪುದೆಯುಕ್ತಂ ॥ ೨೩ ॥

ಧಾ. ಅಯ್ಯಾ! ನಿಮಗೆ ಕುಶಲವೆ?

ಮ. ಈ ಸಾಯಂಕಾಲವು ನಿನಗೆ ಶುಭಪ್ರದವಾಗಲಿ.

ಧಾ. ಹಾಗಾದರೆ ಈಗ ಅಷ್ಟು ಹೊತ್ತಾಯಿತೆ?

ಮ. ಅದಕ್ಕೆ ಸಂದೇಹವೇನು, ಮಧ್ಯಾಹ್ನವು ಕಳೆದು ಹೋಯಿತು.

ಧಾ. ಬಿಡು ಬಿಡು, ನೀನು ಯೆಂಥಾವನು !

ಮ. ದೇವರಿಂದ ನಿರ್ಮಿಸಲ್ಪಟ್ಟ ಒಬ್ಬ ದೊಡ್ಡ ಮನುಷ್ಯನು.

ಧಾ. ಬಹಳ ಚೆನ್ನಾಗಿ ಹೇಳಿದೆ, ಅದು ಹಾಗಿರಲಿ ; ನೀವು ಯಾರಾದರೂ ರಾಮವರ್ಮನನ್ನು ಬಲ್ಲಿರೊ? ಆತನಿರುವ ಸ್ಥಳವನ್ನು ನನಗೆ ತಿಳಿಹಿಸ ಬೇಕು.

ರಾ. ಅಮ್ಮ ! ನಾನೇ ಹೇಳುತ್ತೇನೆ, ನನ್ನ ತಂದೆಯ ಅಪರಾಧದಿಂದ ರಾಮವರ್ಮನೆಂಬ ಹೆಸರುಳ್ಳವನು ನಾನೆ.

ಧಾ. ಏನು ಚೆನ್ನಾಗಿ ಹೇಳಿದೆ.

ಮ. ಕೆಟ್ಟದ್ದನ್ನೆಲ್ಲಾ ಬಹಳ ಚೆನ್ನಾಗಿ ಅರ್ಥವನ್ನು ಮಾಡಿಕೊಂಡ ನೀನು, ಬಹಳ ಬುದ್ಧಿಶಾಲಿನಿ.

ಧಾ. ಆತನೇ ನೀನಾಗಿದ್ದ ಪಕ್ಷದಲ್ಲಿ, ನಿನ್ನೊಡನೆ, ರಹಸ್ಯವಾಗಿ ಮಾತ ನಾಡಲು ಅಪೇಕ್ಷಿಸುವೆನು.

ಬೇ. ಪ್ರಾಯಶಃ ಭೋಜನಕ್ಕೆ ಕರೆದುಕೊಂಡು ಹೋಗಬಹುದು.

ಮ. ಹಾಗೆಯೇಸರಿ, ನಾವು ಇದನ್ನು ಗೊತ್ತು ಮಾಡಿದೆವಲ್ಲ !

ರಾ. ಏನು ಗೊತ್ತು ಮಾಡಿದಿರಿ ?

ಮ. ಏನೂಯಿಲ್ಲ, ರಾಮವರ್ಮನೆ ! ನಿನ್ನ ತಂದೆಯ ಮನೆಗೆ ನೀನು ಬರುತ್ತೀಯೊ ? ನಾವು ಭೋಜನಕ್ಕೆ ಹೋಗುವೆವು.

ರಾ. ನೀವು ಹೋಗಿ, ನಾನೂ ನಿಮ್ಮ ಹಿಂದೆಯೇ ಬರುತ್ತೇನೆ.

ಮ. ವೃದ್ಧಳೆ ! ನಿನ್ನ ಅಪ್ಪಣೆಯನ್ನು ಪಡೆದು ನಾವು ಹೋಗುತ್ತೇವೆ.

॥ರಾಗ — ಶಂಕರಾಭರಣ ॥ ಆದಿತಾಳ ॥ (ಶ್ರೀರಾಜರಾಜೇಶ್ವರಿ)

ಏನೆಂಬೆ ನೀರೂಪಕೆ । ಪಡಿ । ನಾನೆಲ್ಲಿಯೂ ಕಾಣೆನು । ಹೋ ಹೋ ಹೊ ॥ ॥ ಪಲ್ಲ॥ ಚಿಕ್ಕಿನಂದದೆತನ್ನ । ಚಿಕ್ಕ ಕಣ್ಣುಗಳನು । ಪೆಕ್ಕಳಿಪಳು ಛೀ । ಮುಕ್ಕನಿವಳು ಹೋ ಹೊ ॥ ೧॥ ಪಸರಿಸಿಕೊಂಡಿರ್ಪ । ವಸನವ್ರುನಸಿಮೂಗು । ಕುಸಿಗತ್ತುಕಿಸಿಬಾಯಿ । ಕಿಸುರಾಲಿಯೊ ಹೋ ಹೊ ॥ ೨॥ ಬೊಜ್ಜುಗೊಂಡಂಗದ । ಕಜ್ಜಿಯನುಜ್ಜುಜ್ಜಿ । ಹೆಜ್ಜೆ ಯನಿಡುವೀ । ಗುಜ್ಜಾರಿಯಜ್ಜಿಯ ॥ ೩॥

(ಇಬ್ಬರೂ ಹೋಗುವರು)

ಧಾ. ಬಾಯಿಗೆ ಬಂದಹಾಗೆಲ್ಲಾ ಹರಟುತ್ತಾ ಹೋದನಲ್ಲ, ಅವನು ಯಾರು ?

ರಾ. ಧಾತ್ರಿಯೆ ! ಅಧಿಕ ಪ್ರಸಂಗಿಯಾದ ಅವನು ಒಬ್ಬ ದೊಡ್ಡಮನುಷ್ಯನು ; ಒಂದು ತಿಂಗಳಲ್ಲಿ ಎಷ್ಟು ಮಾತನ್ನು ಕೇಳಬಹುದೋ, ಅಷ್ಟು ಮಾತುಗಳನ್ನು ಒಂದು ನಿಮಿಷದಲ್ಲಿಯೇ ಆಡುವನು.

ಧಾ. ನನ್ನಮೇಲೆ ಏನಾದರೂ ಹೇಳಿದರೆ, ಅವನು ಎಷ್ಟು ಬಲಶಾಲಿಯಾಗಿದ್ದರೂ ಅವನನ್ನು ಕೆಳಕ್ಕೆ ಕೆಡಹುವೆನು. ನನ್ನ ಕೈಯಲ್ಲಿ ಆಗದೇ ಇದ್ದರೆ, ಸಮರ್ಥರಿಂದ ಮಾಡಿಸುವೆನು. ಅವನು ದೊಡ್ಡ ಮನುಷ್ಯನು, ಅವನಿಗೆ ನಾನು ಸರಿಯೆ, ಅವನ ತಂಟೆಗೇನಾದರು ಹೋದನೆ ? ಅಥವಾ ನಾನು ಅವನ ಸ್ನೇಹಿತಳೆ ? ಸೇವಕನೆ, ನಿನ್ನ ಸಮಕ್ಷಮದಲ್ಲಿಯೇ ಆ ನೀಚನು ನನಗೆ ಮಾಡಿದ ಅಪಮಾನವನ್ನು ನೀನು ನೋಡಿ ಸೈರಿಸಬಹುದೆ ?

ಸೇ. * ನಿನಗೆ ಅವನು ಮಾಡಿದ ಅಪಮಾನವೇನು ? ಹಾಗೆ ನಿನಗೆ ಅಪಮಾನವನ್ನು ಮಾಡಿದ್ದರೆ, ಕೂಡಲೇ ಒರೆಯಿಂದ ಈಚೆಗೆ ಖಡ್ಗವನ್ನು ಹಿರಿಯುತ್ತಿದ್ದೆನು. ನ್ಯಾಯವು ನಮ್ಮಂತಿದ್ದರೆ, ಜಗಳದಲ್ಲಿ ಖಡ್ಗವನ್ನು ಧರಿಸತಕ್ಕಷ್ಟು ಧೈರ್ಯವು ನನಗೆ ಉಂಟು.*　　

ಧಾ. ನೋಡು, ಇದೋ ಕೋಪದಿಂದ ನನ್ನ ಶರೀರವು ನಡುಗುತ್ತಿರುವದು. (ರಾಮವರ್ಮನಕಡೆತಿರುಗಿ) ಎಲೈ ನಿನ್ನೊಡನೆ ಒಂದು ಮಾತನಾಡುವೆನು. ನಾನು ನಿನಗೆ ಹೇಳಿದಂತೆ ನನ್ನ ಚಿಕ್ಕ ಯಜಮಾನಿತಿಯು ನಿನ್ನನ್ನು ವಿಚಾರಿಸುವಂತೆ ಆಜ್ಞಾಪಿಸಿ ಇರುವಳು. ಅವಳು ಹೇಳಿರುವ ಮಾತುಗಳಲ್ಲಿ ಕೆಲವು ಅಂಶಗಳನ್ನು ಹೇಳುತ್ತೇನೆ. ಆಕೆ ಇನ್ನೂ ಬಾಲೆಯು, ಕೇವಲ ಮರ್ಯಾದಾವಂತಳು, ಇಂಥಾವಳಿಗೆ ನೀನು ಕಪಟವನ್ನು ತೋರಿಸಿ, ಮೋಸವನ್ನು ಮಾಡುವದು ನಿನಗೆ ಯೋಗ್ಯವಲ್ಲ.

॥ ರಾಗ—ಖರಹರಪ್ರಿಯ ॥ ಆದಿತಾಳ ॥　　(ಜೇಸರಸೆಬನ)

* ಹೇಳುವದೀಗೆನ್ನೊಳು ॥ ಪ ॥ ಖೂಳನು ಮಾಡಿದ ಮಾನಹಾನಿಯು ॥ ಅ ॥ ದುರುಳನು ಗರುವದಿ । ನಿರದಪ ಮಾನವ । ವಿರಚಿಸೆ ಕಡುಗವ । ನೊರೆಯಿಂತೆಗೆವೆ ॥ ೧ ॥ ಸಲೆ ನ್ಯಾಯವು ನ । ಮ್ಮೊಳಗಿರೆ ಕಲಹಕೆ । ಸೆಳೆಯಲು ಕಡುಗವ । ಬಲಶಾಲಿಯು ॥ ೨ ॥

ರಾ. ಕಂ ॥ ನಿನಗಾಳಿದಳಾಗಿರುವಾ । ಮನಸಿಜನರಗಿಣಿಗೆ ಮಾಮಕ
ಪ್ರೇಯಸಿಗಾ ॥ ಅನುನಯದ ಮಾತುಗಳನೀ । ನನುವಿಂದುಸುರೆಂದು
ನಿನ್ನ ನಾಂಪ್ರಾರ್ಥಿಸುವೇಂ ॥ ೨೪ ॥

ಧಾ. ನೀನು ಸಂತೋಷವಾಗಿರು ; ನಿಜವಾಗಿಯು ಆಕೆಗೆ ಹೇಳು ತ್ತೆನೆ, ಇದನ್ನು ಕೇಳಿ ಅವಳು ಬಹಳ ಸಂತೋಷವನ್ನು ಹೊಂದುತ್ತಾಳೆ.

ರಾ. ಧಾತ್ರಿಯೆ ! ನಾನು ಹೇಳುವ ಬಂದು ಮಾತನ್ನಾದರೂ ಕೇಳದೆ, ನೀನು ಹೋಗಿ ಆಕೆಗೆ ಏನು ಹೇಳುತ್ತೀಯೆ ?

ಧಾ. ನೀನು ಮೋಸವನ್ನು ಮಾಡುವದಿಲ್ಲವೆಂದು ಪ್ರತಿಜ್ಞೆ ಯನ್ನು ಮಾಡಿದನೆಂದು ಹೇಳುವೆನು.

ರಾ. ಈದಿನ ಮಧ್ಯಾನ್ಹಕ್ಕೆ ಸರಿಯಾಗಿ, ಗುರುಸೇವೆಗೆ ಹೋಗುವೆನೆಂಬ ವ್ಯಾಜದಿಂದ, ಪೂಜ್ಯಪಾದ ಯೋಗೀಶ್ವರರ ಗುಹೆಗೆ ಬಂದರೆ, ಅಲ್ಲಿ ಮದುವೆ ಯಾಗಬಹುದು ಎಂದು ನನ್ನ ಪ್ರಾಣಕಾಂತೆಗೆ ವಿಜ್ಞಾಪಿಸು. ಧಾತ್ರಿಯೆ ! ನಿನ್ನ ಶ್ರಮಕ್ಕಾಗಿ ಈ ಪಾರಿತೋಷಕವನ್ನು ಸ್ವೀಕರಿಸು.

ಧಾ. ಇದು ನನಗೆ ಅವಶ್ಯಕವಿಲ್ಲ, ನಿಜವಾಗಿಯೂ ಬೇಡ.

ರಾ. ಇದನ್ನು ಅವಶ್ಯಕವಾಗಿ ನೀನು ತೆಗೆದುಕೊಳ್ಳಬೇಕು.

ಧಾ. ನಿನ್ನ ಇಷ್ಟಾನುಸಾರವಾಗಿ, ಮಧ್ಯಾನ್ಹಕ್ಕೆ ಸರಿಯಾಗಿ ಲೀಲಾವ ತಿಯು ಅಲ್ಲಿಗೆ ಬರುವಳು.

ರಾ. ಧಾತ್ರಿ ! ನೀನು ದೇವಸ್ಥಾನದ ಹಿಂದೆಯೇ ಕಾದಿರಬೇಕು, ನನ್ನ ಸೇವಕನು ಬಂದು ನೂಲೇಣಿಯನ್ನು ಅಲ್ಲಿಗೆ ತೆಗದುಕೊಂಡು ಬರುವನು. ಅದರಿಂದ ನನಗೆ ಬಹಳ ಸಂತೋಷವು ಉಂಟಾಗುವದು. ನೀನೀಗ ದಯೆ ಮಾಡು, ನನ್ನಲ್ಲಿ ಸಂಪೂರ್ಣವಾದ ನಂಬುಗೆಯನ್ನಿಡು.

ಕಂ ॥ ಮಡದಿಯೆ ನೀನೆನಗಾಗಿಯೆ । ಪಡುತಿರುವೀಶ್ರಮವ ನಾನದೆಂದಿಗು
ಮರೆಯೇಂ ॥ ಬಡನೊಡನೆ ಕೇಳ್ದನೆನ್ನುತೆ । ಬಿಡಿದುಸುರಾನಿನ್ನ
ಯೊಡತಿಯುಳ ಸನ್ನಿಧಿಯೊಳ್ ॥ ೨೫ ॥

ಧಾ. ಎಲ್ಲೈ, ದೇವರು ನಿನಗೆ ಮಂಗಳವನ್ನು ಮಾಡಲಿ. ಅಯ್ಯಾ ! ನಾನೊಂದಮಾತನ್ನು ಹೇಳುತ್ತೇನೆ ಕೇಳು.

ರಾ. ಧಾತ್ರಿ! ಅದೇನು ಹೇಳು, ನಿದಾನವಾಗಿ ಕೇಳುವೆನು.

ಧಾ. ನೀನು ಕಳುಹಿಸುವ ಸೇವಕನು ನಂಬುವದಕ್ಕೆ ಯೋಗ್ಯನೋ? ಮೂವ್ವರ ಕಿವಿಗೆ ಬಿದ್ದ ರಹಸ್ಯವು ಬಹುಕಾಲ ಗೋಪ್ಯವಾಗಿ ಇರಲಾರದೆಂಬ, ಗಾದೆಯು ನಿನಗೆ ಗೊತ್ತಿರುವದಷ್ಟೆ?

ರಾ. ನನ್ನ ಸೇವಕನು ನಂಬುವದಕ್ಕೆ ಯೋಗ್ಯನೇ ಹೌದು.

ಧಾ. ನನ್ನ ಯಜಮಾನಿತಿಯು ಅತಿಸುಂದರಾಂಗಿಯು, ಮತ್ತು ಬಾಲೆಯು, ಅವಳನ್ನು ಬಾಲ್ಯದಲ್ಲಿ ಹೇಶಲಾಂಗನೆಂಬಾತನು ವಶಮಾಡಿಕೊಳ್ಳಬೇಕೆಂದು ಬಹುಪ್ರಯತ್ನ ಮಾಡಿದನು. ಆಕೆಗೆ ಅವನಲ್ಲಿ ಅನುರಾಗ ಉಂಟಾಗಲಿಲ್ಲ; ಅವಳಿಗೆ ಕೋಪಪಡಿಸುವದಕ್ಕೋಸ್ಕರ, ಹೇಶಲಾಂಗನು ನಿನಗೆ ಸರಿಯಾದ ವರನೆಂದು ಹೇಳಿದಮಾತ್ರದಿಂದಲೆ, ಆಕೆಯು ಮುಖವು ಕಾಂತಿಗುಂದುತ್ತಿತ್ತು. 'ರಾಮವರ್ಮ', 'ರಾಜೀವ' ಎಂಬ ಈ ಎರಡು ನಾಮಧೇಯವೂ ರಕಾರದಿಂದಲೇ ಪ್ರಾರಂಭವಾಗುವದಲ್ಲವೆ?

ರಾ. ಹೌದು ಈ ಎರಡೂ ರೇಫಾದಿಯೇ, ಅದರೇನು?

ಧಾ. ನಾನು ಹೇಳಿದ್ದೇನು ಪರಿಹಾಸವಾಯಿತೊ? ರಾಜೀವವೆಂದು ಆಕೆಯು ವಿಶ್ವಾಸಕ್ಕೆ ಪಾತ್ರವಾದ ಗಿಳಿಯ ಹೆಸರು, ಅಲ್ಲ ಅಲ್ಲ, ಜ್ಞಾಪಕಕ್ಕೆ ಬಂತು; ಅದು ಬೇರೇ ಹೆಸರು ಅದರೂ, ರಾಜೀವವೆಂಬ ಪುಷ್ಪವನ್ನು ನಿನ್ನನ್ನು ಸರ್ವದಾ ಧ್ಯಾನಿಸುತ್ತಿರುವಳು, ಎಂದು ನಿನಗೆ ಹೇಳಿದರೆ, ಅದು ನಿನಗೆ ಬಹಳ ಸಂತೋಷವನ್ನುಂಟು ಮಾಡುವದಲ್ಲವೆ?

ರಾ. ಧಾತ್ರಿ! ನಿನ್ನ ಸಖಿಯು ಬಳಿಯಲ್ಲಿ ನನ್ನನ್ನು ಶ್ಲಾಘಿಸು.

ಧಾ. ಒಂದು ಸಾವಿರ ಸಾರಿ ಶ್ಲಾಘಿಸುವೆನು.

ರಾ. ಧಾತ್ರಿ, ನಾನು ಹೋಗುತ್ತೇನೆ. (ಹೋಗುವನು).

ಧಾ. ಸೇವಕನೆ!

ಸೇ. ಧಾತ್ರಿ! ಇದೋ ಬಂದೆನು.

ಧಾ. ನನ್ನ ಬೀಸಣಿಕೆಯನ್ನು ತೆಗೆದುಕೊಂಡು, ನನ್ನ ಮುಂದುಗಡೆಯಲ್ಲಿ ಮರ್ಯಾದೆಯಿಂದ ನಡೆ.

ಸೇ. ಅಪ್ಪಣೆ. (ಹೋಗುವರು).

ಪಂಚಮಸ್ಥಾನಂ—ಕಾಪಿಲನ ಉಪವನ.

(ಲೀಲಾವತಿಯು ಪ್ರವೇಶಿಸುವಳು).

ಲೀ. * ಧಾತ್ರಿಯನ್ನು ನಾನು ಕಳುಹಿಸುವಾಗ ಒಂಭತ್ತು ಘಂಟೆ ಹೊಡೆದಿತ್ತು, ಅರ್ಧಘಂಟೆಯ ವಳಗಾಗಿ ಹಿಂತಿರುಗಿ ಬರುವೆನೆಂದು ಹೇಳಿದ್ದಳು; ಬಂದುವೇಳೆ ಆತನನ್ನು ನೋಡುವದಕ್ಕೆ ಸಂದರ್ಭವಾಗಲಿಲ್ಲವೇನೊ? ಹಾಗಿರಲಾರದು, ಅವಳು ಕೇವಲ ವೃದ್ಧಳಾದ್ದರಿಂದ ನಡೆಯಲಾರಳು. * ಹಾ ಹಾ! ಅನುರಾಗ ಪೀಡಿತರಾದವರ ಸೇವಕರ ವೇಗವು, ಮನೋವೇಗಕಿಂತಲೂ, ಸೂರ್ಯ ರಥ ವೇಗಕಿಂತಲೂ, ಹತ್ತರಷ್ಟು ಅಧಿಕವಾಗಿ ಇರಬೇಕು. ಆದ್ದರಿಂದಲೆ, ವಾಯುವೇಗಿಯಾದ ಮನ್ಮಥನಿಗೆ ರೆಕ್ಕೆಗಳು ಇರುವವು: ಈಗ ಸೂರ್ಯನು ತಲೆಯಮೇಲಿದ್ದು ಮಧ್ಯಾನ್ಹವನ್ನು ಸೂಚಿಸುತ್ತಿರವನು; ಒಂಭತ್ತು ಘಂಟೆಯಿಂದ ಮಧ್ಯಾನ್ಹಕ್ಕೆ ಮೂರು ಘಂಟೆಗಳು ಕಳೆದು ಇರುವದು, ಇಷ್ಟು ಹೊತ್ತಾದರೂ ಇನ್ನೂ ಬರಲಿಲ್ಲ. ಅವಳಿಗೂ ನನ್ನಂತೆಯೇ ಯೌವನಾವಸ್ಥೆಯೂ, ವಿರಹಪರ್ಯಾಕುಲತೆಯೂ ಇದ್ದರೆ, ಆಗ ಬೇಗ ಓಡಿಬಂದು, ನನ್ನ ಪ್ರಿಯನ ಮಾತುಗಳನ್ನು ನನಗೂ, ನನ್ನ ಮಾತುಗಳನ್ನು ಅವನಿಗೂ, ಹೇಳುತ್ತಿದ್ದಳು. ಆದರೆ, ಸ್ಥೂಲಶರೀರ, ಮಂದಬುದ್ಧಿ, ಇವುಗಳುಳ್ಳ ವೃದ್ಧರಿಗೆ ಸಮಯಾಸಮಯ ಜ್ಞಾನವೇ ಇರುವದಿಲ್ಲ.—ಕಡೆಗೂ ಅದೋ ಬರುತ್ತಾಳೆ!

॥ ರಾಗ—ಕಿಂ ॥ ಮುಖಾರಿ ॥ ಆದಿತಾಳ ॥ (ಕೈಮೀರೀವನವಾಸಕ್ಕೆ)

* ಬಾರಲಿಲ್ಲವೇ ಕೊಸಖಿಯು । ಸಾರಿಬೇಗದಿಂ ॥ ಪ ॥ ದಾರಿಯೊಳೇನಾದುದೊ । ಕಾರಣವೇನೋ ॥ ಅ ॥ ಕಂಬನಿಗರದುಬಲು । ನಂಬುಗೆಯಿತ್ತು । ಒಂಬತ್ತುಗಂಟೆಗಟ್ಟೆದೇಂ । ಪಂಬಲಿಸುತ ॥ ೧ ॥ ಅರೆಗಳಿಗೆಯುಲ್ಲಿಪಿಂ । ದಿರುಗಬಹನೆನ್ನು । ತೊರದುಪೊದಳೆನ್ನರಸ । ನಿರಲಿಲ್ಲವೇನೊ ॥ ೨ ॥ ಕಾಣಲಿಲ್ಲವೇನೊಯೆನ್ನ । ಪ್ರಾಣಕಾಂತನಂ । ಕ್ಷೀಣಬಲೆಗೆ ಬೇಗಬರಲು । ತ್ರಾಣವಿಲ್ಲೇನೋ ॥ ೩ ॥

(ಸೇವಕ ಧಾತ್ರಿಯರು ಪ್ರವೇಶಿಸುವರು).

ಲೀ. ಎಲೆ ಪ್ರಾಣಸಖಿಯೆ! ನನ್ನ ಪ್ರಾಣಕಾಂತನನ್ನು ಕಂಡಿದ್ದೆಯೋ? ಏನು ಸಮಾಚಾರ? ನಿನ್ನ ಸೇವಕನನ್ನು ಹೊರಕ್ಕೆ ಕಳಹಿಸು.

ಧಾ. ಸೇವಕನೆ, ನೀನು ಹೋಗಿ ಬಾಗಿಲಲ್ಲಿರು.

ಸೇ. ಅಪ್ಪಣೆ. (ಹೋಗುವನು).

ಲೀ. ಅಮ್ಮಾ ಧಾತ್ರಿ! ಅಯ್ಯೊ,

ಕಂ॥ ವಿತರ್ಕ ಚಿಂತೆಯಾಂತೌ। ದೂತಿಯೆ ನೀಂ ವ್ಯಸನಕಾರಿಯಾಗಿರು
ತಿರ್ಪಾ॥ ಮಾತನೆ ಪೇಳುವದಾವರು। ಕೌತುಕದಿಂ ನಗುತೆ ಪೇಳು
ಹಾಗಲ್ಲದಿರಲ್ ॥ ೨೬ ॥

ನೀನು ಹೇಳುವ ವರ್ತಮಾನವು ಹಿತಕರವಾಗಿದ್ದರೂ, ಅದನ್ನು ಹೇಳುವ ನಿನ್ನ ಮುಖವು ಚಿಂತಾಕ್ರಾಂತವಾಗಿದ್ದರೆ, ಆವರ್ತಮಾನದಿಂದುಂಟಾಗುವ ಸಂತೋಷವು ಕಡಮೆಯಾಗುವದು.

ಧಾ. ಅಮ್ಮಾ ನನಗೆ ಬಹಳ ಆಯಾಸವಾಗಿದೆ, ಸ್ವಲ್ಪ ವ್ಯವಧಾನವನ್ನು ಕೊಡು, ನನ್ನ ಮೂಳೆಗಳೆಲ್ಲಾ ಬಹಳವಾಗಿ ನೋಯುತ್ತಿವೆ. ಅಯ್ಯೋನನಗೆ ಬಹಳ ಆಯಾಸವಾಯಿತು.

ಲೀ. *ಧಾತ್ರಿ! ನನ್ನ ಮೂಳೆಗಳು ನಿನ್ನಲ್ಲಿ ಇದ್ದು, ನಿನ್ನಲ್ಲಿರುವ ವರ್ತಮಾನವು ನನಲ್ಲಿ ಇರಬಾರದಾಗಿತ್ತೆ! ಸಖಿಯೇ! ಹಾಗೆಮಾಡಬೇಡ, ಬಾ ಮಾತಾಡು, ಏನು ವರ್ತಮಾನ ಹೇಳು.*

ಧಾ. ಇದೇನು ಇಷ್ಟು ಅವಸರ, ಸ್ವಲ್ಪಹೊತ್ತು ತಡೆಯಲಾರೆಯೊ? ನಾನು ಮೇಲೆಮೇಲೆ ಉಸುರನ್ನು ಬಿಡುವವರಿಂದಲೇ ಮಾತನಾಡುವದಕ್ಕೆ ಆಗುವದಿಲ್ಲವೆಂದು ನಿನಗೆ ತಿಳಿಯದೇನೊ?

॥ ರಾಗ—ಮೋಹನ—ಝಾಪುತಾಳ ॥

* ಹೇಳುಹೇಳುಸಖಿ। ಆಲಸ್ಯವೇತಕೆ॥ಪ॥ ಮೌಳಿಮುಬಾಗಿಸಿ। ಕಾಲಿಗೆಬೀಳುವೆ॥ಅ॥ ತರುಣಿ ಎನ್ನಯಬಲ। ಮಿರುತೆನಿನ್ನೊಳು ನಿನ್ನೊಳ। ಇರುವಾಮಾತುಗಳೆನ್ನೊಳ। ಇರಬಾರದಾಗಿತ್ತೆಂ॥೧॥ ಬೇಡಿಕೊಂಬೆನು ಕೈಯ। ಜೋಡಿಸಿತಡವನ್ನು। ಮಾಡದೆನೀಂ ಕೃಪ। ನೂಡುತಲೆನ್ನೊಳು॥೨॥

ಲೀ. ಮಾತನಾಡುವದಕ್ಕೆ ಆಗುವದಿಲ್ಲವೆಂದು ಹೇಳುವದಕ್ಕೆ ಮಾತ್ರ ನಿನಗೆ ಶಕ್ತಿ ಇರೇವದೇನೊ? ನೀನು ಹೇಳುವ ವರ್ತಮಾನಕಿಂತಲೂ, ನಿನ್ನ ಆಲಸ್ಯ ಕಾರಣವು ದೊಡ್ಡದಾಗಿ ಇರುವಂತೆ ತೋರುವದು. ನೀನು ತಂದಿರುವ ಸಮಾಚಾರವು, ಅನುಕೂಲವೊ ಅನನುಕೂಲವೊ, ಅದನ್ನಾದರೂ ಬೇಗಹೇಳು. ಉಳಿದ್ದನ್ನು ಆಮೇಲೆ ಹೇಳಬಹುದು.

ಧಾ. ಆದರೆ ಹೇಳುವೆನು ಕೇಳು, ಪುರುಷರಲ್ಲಿ ಉತ್ತಮನನ್ನು ವರಿಸುವದೆ ನಿನಗೆ ಗೊತ್ತಿಲ್ಲ; ರಾಮವರ್ಮನು ನಿನಗೆ ಪತಿಯಾಗುವದಕ್ಕೆ ಅರ್ಹನೇ ಅಲ್ಲ: ರೂಪದಲ್ಲಿ ಇತರರಿಗಿಂತಲೂ ಶ್ರೇಷ್ಠನಾದರೂ, ಮಾನಮರ್ಯಾದೆಗಳಲ್ಲಿ ಶ್ರೇಷ್ಠನೆಂದು ಹೇಳಲಾರೆ, ಆದರೆ ಮಕ್ಕಳಂತೆ ಸಾಧುಸ್ವಭಾವವುಳ್ಳವನೆಂದು ಮಾತ್ರ ಹೇಳಬಹುದು. ಹೋಗು ನಿನ್ನ ಮಾರ್ಗವನ್ನು ಅನುಸರಿಸು. ದೇವರಿಗೆ ಪ್ರಾರ್ಥನೆಯನ್ನು ಮಾಡು, ಮನೆಯಲ್ಲಿ ಎಲ್ಲರಿಗೂ ಭೋಜನವಾಯಿತೊ ?

ಲೀ. ಇನ್ನೂ ಊಟವಿಲ್ಲ ಧಾತ್ರಿ! ನೀನು ಈಗ ಹೇಳಿದ್ದೆಲ್ಲ ಮೊದಲೇ ಗೊತ್ತಾಗಿತ್ತು; ವಿವಾಹವಿಷಯವನ್ನು ಕುರಿತು ಆತನು ಹೇಳಿದ್ದೇನು? ಆವಿಷಯವನ್ನು ಮೊದಲು ಹೇಳು.

ಧಾ. ಅಯ್ಯೊ! ನನ್ನತಲೆ ಇಪ್ಪತ್ತು ಹೋಳಾಗುವಂತೆ ಸಿಡಿಯುತ್ತಿದೆಯಲ್ಲ? ನನ್ನ ಬೆನ್ನು ಎಷ್ಟು ನೋಯುತ್ತಿರುವದು. ಕ್ರೂರಳಾದ ನೀನು ನನ್ನನ್ನು ತಿರುಗಾಡಿಸಿ ಸಾಯುವಂತೆ ಮಾಡಿದೆಯಲ್ಲ.

ಲೀ. ಧಾತ್ರಿ! ನಿನಗೆ ಆದ ಆಯಾಸಕ್ಕಾಗಿ ನಾನು ಬಹಳವಾಗಿ ವಿಷಾದಿಸುತ್ತೇನೆ, ನನ್ನ ಪ್ರಿಯನು ಏನು ಹೇಳಿದನೊ ಅದನ್ನು ದಯಮಾಡಿಟ್ಟು ಜಾಗ್ರತೆಯಾಗಿ ಹೇಳು.

ಧಾ. ನಿನಗೆ ಅನುರೂಪನಾದ, ದಯಾಳುವಾದ, ಸುಂದರಾಂಗನಾದ, ಗುಣಶಾಲಿಯಾದ, ನಿನ್ನ ಪ್ರಿಯನು ಹಾಗೆಯೇ ಆಗಲೆಂದು ಹೇಳಿದನು; ದೊಡ್ಡಮನುಷ್ಯರಲ್ಲಿ ಇರುವ ಗುಣಗಳೆಲ್ಲಾ, ಈತನಲ್ಲಿ ಇರುವವು; ನಿನ್ನ ತಾಯಿಯು ಎಲ್ಲಿ?

ಲೀ. ಯಾಕೆ, ಮನೆಯಲ್ಲಿಯೇ ಇರುವಳು. ಧಾತ್ರಿ! ನಿನ್ನ ಮಾತುಗಳು ಎಷ್ಟು ಡೊಂಕಾಗಿ ಇರುವವು, ಆಡಿದ್ದನ್ನು ಪೂರೈಸುವದಿಲ್ಲವೊ?

ಧಾ. ಎಲೆ ಸುಗುಣಶಾಲಿನಿ! ನಿನಗೆ ಬಹಳ ಕೋಪಬಂತೊ? ಈಗ ಲೀಗ ನನ್ನ ಶ್ರಮಗಳೆಲ್ಲಾ ಸಾರ್ಥಕವಾದವು. ಇನ್ನುಮೇಲೆ ನನ್ನನ್ನು ಕಳಹಿಸಬೇಡ, ಬೇಕಾದರೆ ನೀನೇ ಹೋಗಿ ಕೇಳಿಕೊಳ್ಳಬಹುದು.

ಲೀ. ಧಾತ್ರಿ! ಈ ಗಡಬಿಡಿಯಿಂದ ಪ್ರಯೋಜನವೇನು, ನನ್ನ ಪ್ರಾಣಕಾಂತನು ಹೇಳಿದ್ದೇನು?

ಧಾ. ಈದಿನ ದೇವಸ್ಥಾನಕ್ಕೆ ಹೋಗಲು, ನೀನು ಅಪ್ಪಣೆಯನ್ನು ಪಡೆದಿರುವೆಯೊ?

ಲೀ. ಪಡೆದಿರುವೆನು, ಆದರೇನು?

ಧಾ. ಜಾಗ್ರತೆಯಲ್ಲಿ ಪೂಜ್ಯಪಾದ ಯೋಗೀಶ್ವರರ ಗುಹೆಗೆ ಹೋಗು, ಅಲ್ಲಿ ನಿನ್ನನ್ನು ಪತ್ನಿಯನ್ನಾಗಿ ಮಾಡಲು ಆತನು ಕಾದಿರುವನು. ಆಹ! ನೋಡಿದೆಯ ಈ ವರ್ತಮಾನವನ್ನು ಕೇಳಿದಮಾತ್ರದಿಂದಲೇ ಉಂಟಾದ ಸಂತೋಷದಿಂದ ಆನಂದಬಾಷ್ಪವು ಕಣ್ಣಿನಲ್ಲಿ ತುಂಬಿ ತುಳುಕುತ್ತಿರುವದು. ನೀನು ದೇವಸ್ಥಾನಕ್ಕೆ ಹೋಗು; ನಾನು ಪ್ರತ್ಯೇಕ ಮಾರ್ಗದಿಂದ ಹೋಗಿ ನಿನ್ನ ಸಖನು ನಿನ್ನ ಅಂತಃಪುರಕ್ಕೆ ಬರುವದಕ್ಕಾಗಿ, ಬಂದು ನೂಲೇಣಿಯನ್ನು ತರುತ್ತೇನೆ. ಲೀಲಾವತಿಯೆ! ನನಗೆ ಎಷ್ಟು ಶ್ರಮವಾದರೂ ಚಿಂತೆಯಿಲ್ಲ, ನೀನು ಸುಖವಾಗಿರುವದೇ ನನಗೆ ಬೇಕಾದ್ದು. ನಾನು ಭೋಜನಕ್ಕೆ ಹೋಗುತ್ತೇನೆ, ನೀನು ಗುಹೆಗೆ ಹೋಗು.

ಲೀ. *ದಯಾಶಾಲಿನಿಯಾದ ಧಾತ್ರಿಯೆ! ನೀನು ಬಹಳ ನಂಬುಗೆವಂತಳು; ನಿನ್ನ ಉಪಕೃತಿಯು, ಅಪರಿಮಿತವಾದ್ದು, ನೀನು ಭಾಗ್ಯಶಾಲಿನಿಯಾಗು. ನಾನು ಹೋಗುತ್ತೇನೆ.* (ಹೋಗುವಳು.)

॥ ರಾಗ—ಶಹನ ॥ ಝಾಪುತಾಳ ॥ (ಯಾದಿರಬಹುದೀ)

* ಪರಮಾನಂದವು । ದೊರಕಿತಿಂದೆನಗೆ ॥ ಪ ॥ ತರುಣಿಯೆನಿನ್ನಯ । ಕರುಣಾತಿರೇಕದಿ ॥ ಅ ॥ ಅನುರಾಗದೆ ಗೈದೀ । ಯನಘೋಪಕೃತಿಯನು । ವಸಿತೆನಾನೆಂದಿಗೂ । ನೆನೆಸುತಲಿರುವೆನು ॥ ೧ ॥ ಅಂಬನೀನುಬಲು । ನಂಬುಗೆವಂತಳು । ತುಂಬಿದೈಸಿರಿಯನಾ । ಲಂಬಿಸಿಬಾಳೌ ॥ ೨ ॥

ಷಷ್ಠ ಮ ಸ್ಥಾ ನ ೦—ಪೂಜ್ಯಪಾದರಗುಹೆ.

(ರಾಮವರ್ಮ ಪೂಜ್ಯಪಾದರು ಪ್ರವೇಶಿಸುವರು).

ಪೂ. ಈದಿನ ನಾವು ಮಾಡುವದಕ್ಕೆ ಆರಂಭಿಸಿ ಇರುವ ಕಾರ್ಯವು, ನಿರ್ವಿಘ್ನವಾಗಿ ನೆರವೇರಿ, ವ್ಯಸನಾಸ್ಪದವಾಗದೆ, ಉತ್ತರೋತ್ತರ ಸಂತೋಷ ದಾಯಕವಾಗುವಂತೆ, ದೇವರು ಅನುಗ್ರಹಿಸಲಿ.

ರಾ. ತಥಾಸ್ತು ತಥಾಸ್ತು, "ಸತ್ಯಮಸ್ತು ವಚಸ್ತವ." ಒಂದು ನಿಮಿಷವಾದರೂ ನಾನು ಆ ಪ್ರಾಣಕಾಂತೆಯ ಅಭಿಮುಖದಲ್ಲಿ ನಿಲ್ಲುವದರಿಂದ, ಉಂಟಾಗುವ ಸಂತೋಷವು, ವ್ಯಸನಪರಂಪರೆಯನ್ನಾದರೂ ಹೋಗಲಾಡಿ ಸುವದು. ಪೂಜ್ಯರೆ! ತಾವು ವಿವಾಹವನ್ನು ಮಾಡಿದಬಳಿಕ, ಆಕ್ರೂರ ವಾದ ಮೃತ್ಯುವೇಬಂದು ಇದಿರಿನಲ್ಲಿ ನಿಂತರೂ, ನಾನು ಹೆದರುವನಲ್ಲ. ನನ್ನ ಪತ್ನಿಯೆಂದು ಆಕೆಯನ್ನು ಕರೆಯುವಂತೆ ಆದರೆ ಸಾಕು.

ಪೂ. ಎಲೈ! "ಅತಿ ಸರ್ವತ್ರ ವರ್ಜಯೇತ್" ಎಂದಿರುವದ್ದರಿಂದ, ಅತಿಸಂತೋಷವು, ಕೊನೆಗೆ ವಿಪರೀತವಾಗಿ ಪರಿಣಮಿಸೀತು.

ಕಂ॥ ಹುತವಾಹನನುಂ ಪೊಸಮದ್ದುಂ । ಜತೆಯಾದೊಡನೆಯೆ ಧಗೆಂದು ಪ
ತ್ತುವತೆರದಿಂ ॥ ಅತಿಹರ್ಷವ್ಯಸನಂಗಳ್ । ಮಿತಿಮೀರಲ್ ಮೃತಿಯು
ತಪ್ಪದವನೀತಲದೊಳ್ ॥ ೨೩ ।

ಮಧುರವಾದ ಜೇನು ತುಪ್ಪವಾದರೂ, ಅತಿಸೇವನೆಯಿಂದ ಕ್ಷುತ್ತನ್ನು ಹೋಗಲಾಡಿಸಿ, ಅನರ್ಥವನ್ನುಂಟುಮಾಡುವದು. ಆದ್ದರಿಂದ ಮಿತವಾದಸಂತೋಷವು ಚಿರಕಾಲದವರಿಗೂ, ಊರ್ಜಿತವಾಗಿರುವದು. ಲೋಕ ದಲ್ಲಿ ಯಾವದೂ ಅತಿಯಾಗಬಾರದು. ಅದೋ ನಿನ್ನ ಪ್ರಾಣಕಾಂತೆಯು ಬರುತ್ತಿರುವಳು; ಆಃ ಅವಳ ಗಮನವು ಎಷ್ಟು ಮಂದವಾಗಿರುವದು, ಸುಂ ದರಾಂಗಿಯಾದ ಈಕೆಯು ಹತ್ತು ಮಲ್ಲಿಗೆಯ ಹೂವಿನ ತೂಕವಿರುವಂತೆ ತೋರುವಳು.

ಕಂ॥ ಅನುರಾಗ ಪೀಡಿತರ್ಕಳ । ತನುವ್ರೊಳ್ಮಾನಸದೊಳೆಂತು ಲಾಘವಮಿ
ರ್ಕ್ಕುಂ ॥ ಕೊನೆಗವರ ಹರ್ಷಮೆಲ್ಲ ಮ । ದನಿತ್ಯಮಾಗುತ್ತೆ ಲಾಘವ
ವ ಪ್ರೇಮಪ್ರುದ್ಧ್ಯೆ ೨೮ ॥

* ನನಗೆ ನಿನ್ನಲ್ಲಿ ಇರುವ ಪ್ರೀತಿಗೆ ಕಾರಣವು ನಿನಗೆ ತಿಳಿಯುವವರಿಗೂ, ನೀನು ಊಹಿಸುವದಕ್ಕಿಂತಲೂ ಹೆಚ್ಚಾಗಿ ನಿನ್ನಲ್ಲಿ ಪ್ರೀತಿಯನ್ನು ಮಾಡುವೆನು; ಆದ್ದರಿಂದ ಕಾಪಿಲನೆ,—ಈ ಕಾಪಿಲನೆಂಬ ಹೆಸರನ್ನು ನನ್ನ ಹೆಸರಿನಂತೆಯೇ ಪ್ರೀತಿಸುತ್ತಿರುವೆನು,—ಕೇಳು;* ದಯಮಾಡು, ತೃಪ್ತನಾಗು.

ಮ. ಈ ವಿಧೇಯತ್ವವು, ಬಹಳ ಅಪಮಾನ ಕರವಾಗಿಯು, ನೀಚವಾಗಿಯೂ, ಇರುವದು. (ಕತ್ತಿಯನ್ನು ಸೆಳೆಯುತ್ತಾನೆ).
ಎಲಾನೀಚನೆ, ತ್ರೈವಿಕ್ರಮನೆ, ನನ್ನೊಂದಿಗೆಬಾ ನಡೆ.

ತ್ರೈ. ನನ್ನೊಡನೆ ಏನನ್ನು ಅಪೇಕ್ಷಿಸುತ್ತೀಯೆ?

ಮ. ಎಲೈ ಮಾರ್ಜಾಲರಾಜನೆ ಏನೂ ಇಲ್ಲ, ನಿನ್ನ ಪಂಚಪ್ರಾಣಗಳಲ್ಲಿ ಒಂದನ್ನು ಕೊಡು; ಉಳಿದ ನಾಲ್ಕುಪ್ರಾಣಗಳನ್ನು ನಿನ್ನಿಂದ ದೂರ ಮಾಡುತ್ತೇನೆಂಬ, ಧೈರ್ಯವುಂಟು. ಕತ್ತಿಯನ್ನು ಬೇಗವರೆ ಇಂದ ತೆಗಿಯುವಿಯೋ? ಜಾಗ್ರತೆ ಮಾಡದಿದ್ದರೆ, ನನ್ನ ಕತ್ತಿಯು, ನಿನಗೆ ಅಪಾಯವನ್ನು ಮಾಡೀತು.

ತ್ರೈ. ಇದೊ, ನಾನು ಸಿದ್ಧನಾಗಿ ನಿಂತಿರುವೆನು.

ರಾ. ಸುಗುಣನಾದ ಮದನನೆ, ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು.

ಮ. ಬಾ; ನಿನ್ನ ಹೇಡಿತನ ಹಾಗಿರಲಿ.

(ಇಬ್ಬರೂ ಜಗಳವಾಡುತ್ತಾರೆ).

ರಾ. ಬೇಹಾರಿಯೆ, ನಿನ್ನ ಖಡ್ಗವನ್ನು ಹಿರಿದು, ಅವರುಗಳನ್ನು ಸಮಾಧಾನಪಡಿಸು; ಎಲೈ ದೊಡ್ಡಮನುಷ್ಯರುಗಳಿರಾ, ಇದೇನು ಅನ್ಯಾಯ, ಈ ವ್ಯಾಜ್ಯವನ್ನು ನಿಲ್ಲಿಸಿ; ಮದನನೆ, ತ್ರೈವಿಕ್ರಮನೆ, ನಮ್ಮ

॥ ರಾಗ — ನಾದನಾಮಕ್ರಿಯ ॥ ಮಿಶ್ರಛಾಪು ತಾಳ ॥   (ಪೋಪೋವೇ ಚಲಿಯ)

*ಕೋಪವಿದೇತಕೆ । ಕಾಪುರುಷರೊಳೀ ॥ ಪ ॥ ಎನಗೆ ನಿನ್ನೊಳಗಿರು । ವನುರಾಗಕಾರಣವು । ನಿನಗರಿವನ್ನವಾ । ನನುನಯದಿಂದಿಹೇಂ ॥ ೧ ॥ ಸರಸ ನಿನ್ನೊಳಗಿನ್ನೇ ವರವಿರ್ದಪ್ರೀತಿಗುಂ । ಪಿರಿದಾಗಿ ಮಾಳ್ಪೆನೆಂ । ದೊರೆವೆನಾನನರಿಂ ॥ ೨ ॥ ಎನ್ನಯ ಪೆಸರಿನೊಲ್ ನಿನ್ನ ಯಪೆಸರನ್ನು । ದುನ್ನತಿವನಾಮತುವೆ । ನಿನ್ನೇಕೆಸಂದೇಗಂ ॥ ೩ ॥

ಮಹಾರಾಜನು ಈಪಟ್ಟಣದ ರಾಜವೀಧಿಯಲ್ಲಿ, ಕಲಹವನ್ನು ಮಾಡಕೂಡದೆಂದು ಕ್ರೂರವಾದ ಅಪ್ಪಣೆಯನ್ನು ಕೊಟ್ಟಿರುವನು; ನಿಲ್ಲಿಸು ತ್ರೈವಿಕ್ರಮನೆ, ಮದನನೆ, ನಿಧಾನಿಸು.

(ತ್ರೈವಿಕ್ರಮ ಇವನಕಡೆಯುವರು ಹೋಗುವರು).

ಮ. ನನಗೆ ಘಾಯವಾಯಿತು, ನಿಮ್ಮ ವಂಶಗಳು ನಾಶವಾಗಲಿ! ನನ್ನ ಅವತಾರವು ಪೂರ್ತಿಯಾಯಿತು; ಆವನು ಘಾಯವಡೆಯದೇ ಹೋದನೆ!

ಬೇ. ಏನು ಘಾಯವಾಯಿತೋ?

ಮ. ಹೌದು ಸ್ವಲ್ಪ ಘಾಯವಾಗಿದೆ. ಆದರೂ ಇದೇ ಸಾಕಾಗಿಧೆ.— ನನ್ನ ಸೇವಕನು ಎಲ್ಲಿ? ಎಲೆ ಸೇವಕನೆ, ಹೋಗಿ ವೈದ್ಯನನ್ನು ಕರೆದುಕೊಂಡು ಬಾ. (ಸೇವಕನು ಹೋಗುವನು).

ರಾ. ಮಿತ್ರನೆ "ವಿಪದಿ ಧೈರ್‍ಯಂ" ಎಂದಿರುವದ್ದರಿಂದ, ಧೈರ್‍ಯಶಾಲಿಯಾಗಿರು. ಘಾಯವು ಅತ್ಯಪಾಯ ಕರವಾಗಿರಲಾರದು.

ಮ. ಇಲ್ಲ, ಭಾವಿಯಷ್ಟು ಆಳವಾಗಿಯೇ ಆಗಲಿ ಅಥವಾ ಕೋಟೇಬಾಗಿಲಿನಷ್ಟು ಅಗಲವಾಗಿಯೇ ಆಗಲಿ, ಇರುವ ಘಾಯವಲ್ಲ; ಆದರೆ ಇದೇ ಸಾಕು, ಅದರ ಕಾರ್‍ಯವನ್ನು ನೆರವೇರಿಸುವದು. ನಾಳೆ ನನ್ನನ್ನು ವಿಚಾರಿಸುವದಾದರೆ ಸ್ಮಶಾನಸ್ಥನಾಗಿರುತ್ತೇನೆ. ಅಯ್ಯೋ, ನನ್ನ ದೇಹದಲ್ಲ ಕತ್ತಿ ತುಂಬಾ ಚುಚ್ಚಿತು, ಇನ್ನು ಈ ಲೋಕದಾಸೆಯೇ ನನಗೆ ಇಲ್ಲ. ನಿಮ್ಮ ಈ ಎರಡು ಮನೆತನಗಳೂ ಹಾಳಾಗಲಿ! ಏನು! ನಾಯಿ, ಬೆಕ್ಕು, ಇವುಗಳಿಂದ ಮನುಷ್ಯ ಸಂಹಾರನಾಗುವದೊ! ನೀನೇತಕ್ಕೆ ನಮ್ಮ ಮಧ್ಯದಲ್ಲಿ ಬಂದೆ? ನಿನ್ನ ಮರೆಯಲ್ಲಿ ನನ್ನನ್ನು ತಿವಿದು ಘಾಯ ಮಾಡಿದನು.

ರಾ. ನಾನು ನಿಮ್ಮ ಒಳ್ಳೇದಕ್ಕೆಂತ ಎಣಿಸಿದೆ,

ಮ. ಬೇಹಾರಿಯೆ, ಜಾಗ್ರತೆಯಾಗಿ ನನ್ನನ್ನು ಮನೆಗೆ ಕರೆದುಕೊಂಡು ಹೋಗು. ಇಲ್ಲದಿದ್ದರೆ ಮೂರ್ಛಿತನಾದೇನು? ನಿಮ್ಮ ವಂಶಗಳು ಹಾಳಾಗಲಿ. ಹಲಸಿನಕಾಯನ್ನು ಕೊಚ್ಚಿದಂತೆ ನನ್ನ ಶರೀರದಲ್ಲಿ ಘಾಯಗಳು ಆಗಿರುವವು. ನಿಮ್ಮವಂಶಗಳು. (ಮದನ ಬೇಹಾರಿಗಳು ಹೋಗುತ್ತಾರೆ).

ರಾ. ನನಗೆ ಆಪ್ತ ಮಿತ್ರನಾಗಿಯೂ, ರಾಜನಿಗೆ ಸಮೀಪ ಬಂಧುವಾಗಿಯೂ, ಇರುವ ಈತನಿಗೆ ನನ್ನ ಸಹವಾಸದಿಂದ, ಅಪಾಯಕರಗಳಾದ ಘಾಯಗಳು ಆದವು; ತ್ರೈವಿಕ್ರಮನ ಅಪರಾಧವು, ನನ್ನ ಯಶಸ್ಸನ್ನು ಕೆಡಿಸಿರುವದು. ಆ ತ್ರೈವಿಕ್ರಮನಾದರೊ, ಈಗ ಸ್ವಲ್ಪ ಹೊತ್ತಿನಿಂದ ನನಗೆ ಸಂಬಂಧಿಯಾಗಿರುವನು.

ಕಂ॥ ಎಲೆ ಲೀಲಾವತಿ ನಿನ್ನಯ । ತೊಳಗುವ ಸುಕುಮಾರ ಸುಂದರತ್ವ
ಮಿದೆನ್ನಂ ॥ ಲಲನೆಯ ತೆರದೋಳ್ಮಾಡುತೆ । ಕಲಿತನವಂ ಕೆಡಿಸಿಕುಂ
ದಿಸಿತು ಧೀರತೆಯಂ ॥ ೩ ॥

(ಬೇಹಾರಿ ಪುನಃ ಪ್ರವೇಶಿಸುವನು).

ಬೇ. ರಾಮವರ್ಮನೆ, ರಾಮವರ್ಮನೆ, ಶೂರನಾದ ಮದನನು ಸ್ವರ್ಗಸ್ಥನಾದನು! ಅಕಾಲದಲ್ಲಿಯೇ ಈ ಪ್ರಪಂಚವನ್ನು ಧಿಕ್ಕರಿಸುತ್ತಿದ್ದ, ಆತನ ಧೀರಜೀವವು, ಸ್ವರ್ಗಲೋಕವನ್ನು ಹತ್ತುತ್ತಿರುವದು.

ರಾ. ಈದಿನದ ಘೋರಕೃತ್ಯವು ಇನ್ನೂ ಬಹಳ ಅನಾಹುತಗಳನ್ನು ಮಾಡುವದು; ಈ ಅನಾಹುತವು ಕಾಲಾಂತರದಲ್ಲಿ ಬಹಳ ಕಷ್ಟವಾಗಿ ಕೊನೆಗಾಣುವದು.

ಬೇ. ಕೇವಲ ಭಯಂಕರನಾದ ತ್ರೈವಿಕ್ರಮನು, ಪುನಃ ಇಲ್ಲಿಗೆ ಬರುತ್ತಿರುವನು.

ರಾ. ಮದನನು ಮೃತನಾದನು! ಇವನು ಜೀವಿತನಾಗಿಯೂ, ಜಯಶಾಲಿಯಾಗಿಯೂ, ಇರುತ್ತಾನೆ!

ಕಂ ॥ ಸೈರಣೆಯೆ ನಿನಗೆ ನಾ ನಿದೊ । ದೂರವ ಸಾರಲ್ಕೆ ಬೇಗನಪ್ಪಣೆಯಿ
ತ್ತೀಂ ॥ ಸಾರಿದಕೊ ಮಾರಿರೌದ್ರಾ । ಕಾರಂ ಬಂದೆನ್ನ ಸೇರುತಿರ್ಪು
ದಿದೀಗಳ್ ॥ ೪ ॥

(ತ್ರೈವಿಕ್ರಮನು ಪುನಃ ಪ್ರವೇಶಿಸುವನು.)

ಎಲೈ ತ್ರೈವಿಕ್ರಮನೆ, ನೀನು ನನಗೆ ಸ್ವಲ್ಪ ಹೊತ್ತಿನಮುಂಚೆ ಮಾಡಿದ ಮರ್ಯಾದೆಯನ್ನು, ನೀನೇ ತೆಗೆದುಕೊ; ನೀಚನೆ, ದ್ರೋಹಿಯೆ,

ಮದನನ ಜೀವವು ಈಗ ನಮ್ಮ ತಲೆಗಳ ಮೇಲೆ ಆಕಾಶಮಾರ್ಗದಲ್ಲಿ, ನಿನ್ನ ಜೀವದ ಸಹವಾಸವನ್ನು ನಿರೀಕ್ಷಿಸುತ್ತಾ, ಕಾದು ಇರುವದು; ನೀನಾಗಲಿ, ಅಥವಾ ನಾನಾಗಲಿ, ಇಲ್ಲವೆ ನಾವಿಬ್ಬರೂಸಹಾ ಅವನ ಜತೆಗೆ ಹೋಗಬೇಕು.

ತ್ರೈ. ಎಲೋ ನೀಚನೆ, ಹುಡುಗನೆ, ಅವನ ಜತೆಯಲ್ಲಿ ಇರುತ್ತಿದ್ದ ನೀನೇ ಅವನೊಂದಿಗೆ ಹೋಗು.

ರಾ. ಇದು ಅದನ್ನು ಗೊತ್ತುಮಾಡಲಿ.

(ಜಗಳವಾಡುತ್ತಾರೆ: ತ್ರೈವಿಕ್ರಮನು ಬೀಳುತ್ತಾನೆ).

ಬೇ. ರಾಮವರ್ಮನೆ ಓಡಿಹೋಗು; ಪೌರರೆಲ್ಲರೂ ಕುಪಿತರಾಗಿ ಬರುತ್ತಿರುವರು; ತ್ರೈವಿಕ್ರಮನ ಪ್ರಾಣವು ಹೋಯಿತು; ಕಂಭದಂತೆ ನಿಲ್ಲಬೇಡ; ನೀನು ಸಿಕ್ಕಿದರೆ ರಾಜನು ನಿನಗೆ ಮರಣ ದಂಡನೆಯನ್ನು ವಿಧಿಸುತ್ತಾನೆ; ಇಲ್ಲಿಂದ ಹೋಗು, ನಡೆ.

ರಾ. ಅಯ್ಯೋ! ನನ್ನನ್ನು ಅದೃಷ್ಟವು ಹುಚ್ಚನಂತೆ ಆಡಿಸುತ್ತಿರುವದು!!

ಬೇ. ಯಾಕಿಲ್ಲಿ ನಿಂತಿರುವೆ? (ರಾಮವರ್ಮನು ಹೋಗುತ್ತಾನೆ.)

(ಪೌರರು ಪ್ರವೇಶಿಸುವರು).

೧ನೇ ಪೌ. ಮದನನನ್ನು ವಧಿಸಿದವನು ಎಲ್ಲಿ ಓಡಿಹೋದನು? ಕೊಲೆಯನ್ನು ಮಾಡಿದ ಆ ತ್ರೈವಿಕ್ರಮನು ಎಲ್ಲಿ?

ಬೇ. ಆ ತ್ರೈವಿಕ್ರಮನು, ಇಲ್ಲಿ ಬಿದ್ದು ಇರುವನು.

೧ನೇ ಪೌ. ಬಾ ನನ್ನೊಂದಿಗೆ; ಧೊರೆಯ ಹೆಸರಿನಿಂದ ನಿನ್ನ ಮೇಲೆ ಆರೋಪಣೆಯನ್ನು ಮಾಡುತ್ತೇನೆ, ಬಾ.

(ಪರಿವಾರ ಸಮೇತನಾದ ಧೊರೆಯು, ಮಾಧುರ, ಕಾಪಿಲ, ಇವರ ಹೆಂಡತಿಯರು, ಇತರರೂ ಪ್ರವೇಶಿಸುವರು).

ಧೊ. ಈ ಕೆಟ್ಟ ವ್ಯಾಜ್ಯವನ್ನು ಪ್ರಾರಂಭಿಸಿದವರು ಎಲ್ಲಿ?

ಬೇ. ಕೇಳು ಮಹಾರಾಜನೆ, ಈ ಅಪಾಯಕರವಾದ ದುರದೃಷ್ಟವಾದ, ಕಲಹದ ಸಂಗತಿಗಳನ್ನೆಲ್ಲ, ನಾನು ಬಲ್ಲೆನು; ಮದನನನ್ನು ಸಂಹರಿ

ಸಿದ, ಧೈರ್ಯಶಾಲಿಯಾದ ನಿನ್ನ ಬಾಂಧವನು, ಯೌವನಸ್ಥನಾದ ರಾಮವರ್ಮ ನಿಂದ ಹತನಾಗಿ, ಅಲ್ಲಿ ಬಿದ್ದಿರುವನು.

ಲಲಿತಾಂಗಿ. ಹಾ ಹಾ ! ನನ್ನ ಬಂಧುವಾದ ತ್ರೈವಿಕ್ರಮನೆ ! ಅಯ್ಯೋ ನನ್ನ ಸೋದರಳಿಯನೆ ! ಅಯ್ಯೋ ಕೆಟ್ಟದೃಷ್ಟಿಯೆ ! ನನಗೆ ಕೇವಲ ಪ್ರೇಮಪಾತ್ರನಾದ ಅಳಿಯನು ಸತ್ತು ಇರುವನು; ಆರ್ಯಪುತ್ರನೆ ! ನ್ಯಾಯಾಧಿಪತಿಯಾದ ಧೊರೆಯೆ ! ನೀನು ಇದಕ್ಕೆ ಪ್ರತಿಯಾಗಿ, ಮಾಧುರ ವಂಶೀಯರನ್ನು ಸಂಹರಿಸು. ಅಯ್ಯೋ ಅಳಿಯನೆ ! !

ಧೊ. ಬೇಹಾರಿಯೆ, ಕ್ರೂರವಾದ ಕಲಹವನ್ನು ಉಪಕ್ರಮಿಸಿದವರು ಯಾರು ?

ಬೇ. ರಾಮವರ್ಮನಿಂದ ಹತನಾಗಿ, ಬಿದ್ದು ಇರುವ ತ್ರೈವಿಕ್ರಮನೆ; ಈ ವಾಕ್ಯಕ್ಕೆ ಕಾರಣವು ಅತ್ಯಲ್ಪವಾದ್ದು, ಗಮನ ಕೊಡಬೇಡ, ಧೈರ್ಯಯುತನಾದ ನಿನಗೂ ಕೋಪ ಉಂಟಾಗುವದು, ಆದ್ದರಿಂದ—

ಕಂ ॥ ಲಲಿತೋಕ್ತಿಗಳಿಂ ದೈನ್ಯದೆ । ತಿಳುಹುತೆ ಕಳೆಗುಂದಿಪಾದಯುಗಕೆ
ರಗುತ್ತಂ ॥ ಕಲಹವ ಬಿಡೆಂದು ಬೇಡಲು । ಮುಳಿಸೇ ಪೆರ್ಚಿದಿದು
ಶಮನಗುಣ ಮಡಗಿದುದೈ ॥ ೫ ॥

ತ್ರೈವಿಕ್ರಮನು, ಧೈರ್ಯಶಾಲಿಯಾದ ಮದನನ ಎದೆಯಮೇಲೆ ಕತ್ತಿಯಿಂದ ತಿವಿದನು ; ಆಗ ಕುಪಿತನಾದ ಮದನನು, ತಾನು ಧೈರ್ಯಶಾಲಿಯಾಗಿ ಬಂದು ಕೈಯಿಂದ ಕತ್ತಿಯ ಏಟನ್ನು ತಪ್ಪಿಸಿಕೊಂಡು, ಇನ್ನೊಂದು ಕೈಯಿಂದ ಅವನನ್ನು ತಿವಿದನು ; ಆಗ ರಾಮವರ್ಮನು "ಸ್ನೇಹಿತರುಗಳಿರಾ, ನಿಲ್ಲಿಸಿ ನಿಲ್ಲಿಸಿ, ಬಿಡಿ, ಬಿಡಿ," ಎಂದು ಘಟ್ಟಿಯಾಗಿ ಕೂಗಿ ಹೇಳಿದನು, ಮತ್ತು ಬೇಗ ಬಂದು ತನ್ನ ಕೈಗಳಿಂದ, ಅವರ ಸಾಯುಧಕರಗಳನ್ನು ಹಿಡಿದುಕೊಂಡು, ಅವರಿಬ್ಬರ ಮಧ್ಯದಲ್ಲಿ ನಿಂತುಕೊಂಡನು ; ಆದರೂ ರಾಮವರ್ಮನ ಹಿಡಿತವನ್ನು ತಪ್ಪಿಸಿಕೊಂಡು, ತ್ರೈವಿಕ್ರಮನು ತನ್ನ ಖಡ್ಗದಿಂದ ಮದನನ ಎದೆಯಮೇಲೆ ತಿವಿದನು ; ಕೂಡಲೆ ಮದನನು ಬಿದ್ದು ಸತ್ತನು, ತ್ರೈವಿಕ್ರಮನು ಓಡಿಹೋದನು.

ಧೊ. ಆ ಮೇಲೆ—

ಬೇ. ಸ್ವಲ್ಪದೂರ ಓಡಿಹೋಗಿದ್ದ ತ್ರೈವಿಕ್ರಮನು, ಕೋಪಾಕ್ರಾಂತನಾಗಿ ಹಿಂದಿರುಗಿಬಂದು, ರಾಮವರ್ಮನೊಡನೆ ಕಲಹವನ್ನು ಮಾಡುತ್ತಿದ್ದನು ; ನಾನು ಬಂದು ಅವರ ಕಲಹವನ್ನು ಶಮನಮಾಡುವದರೊಳಗಾಗಿಯೇ ವೀರನಾದ ತ್ರೈವಿಕ್ರಮನು ಹತನಾಗಿ ಬಿದ್ದನು ; ಬಳಿಕ ರಾಮವರ್ಮನು ಓಡಿ ಹೋದನು ; ಅದೋ ನೋಡು, ರಾಮವರ್ಮನಿಂದ ಹತನಾದ, ತ್ರೈವಿಕ್ರಮನು ಅಲ್ಲಿ ಬಿದ್ದಿರುವನು ; ಮಹಾರಾಜನೆ ಇದೆಲ್ಲಾ ನಿಜ, ಸುಳ್ಳಾಗಿದ್ದರೆ ನನ್ನ ಪ್ರಾಣವನ್ನೇ ತೆಗೆಯಬಹುದು.

ಲಲಿ. ಮಾಧುರನ ಬಂಧುವಾದ ಇವನು, ತತ್ಪಕ್ಷಾಭಿಮಾನದಿಂದ ಹೀಗೆ ಅನ್ಯಾರೋಪಣೆಯನ್ನು ಮಾಡಿ ಹೇಳುವನು ; ಆದ್ದರಿಂದ ಇದೆಲ್ಲಾ ಸುಳ್ಳು. ಇಲ್ಲಿ ಸುಮಾರು ಇಪ್ಪತ್ತು ಜನಗಳು ಕಲಹಕ್ಕೆ ಸೇರಿದ್ದಂತೆ ತೋರುವದು, ಅವರೆಲ್ಲರೂ ಸೇರಿ ಇವನೊಬ್ಬನನ್ನೇ ಕೊಂದಿರಬಹುದು. "ಕೃತೇಚ ಪ್ರತಿ ಕರ್ತವ್ಯ ಮೇಷಧರ್ಮ ಸ್ಸನಾತನಃ" ಎಂದಿರುವದ್ದರಿಂದ ನ್ಯಾಯವಿಚಾರವನ್ನು ಮಾಡು. ತ್ರೈವಿಕ್ರಮನನ್ನು ಸಂಹರಿಸಿದ ರಾಮವರ್ಮನು ಬದುಕಿರುವದು ಸರಿಯಲ್ಲ.

ಧೊ. ಮದನನನ್ನು ತ್ರೈವಿಕ್ರಮನು ಕೊಂದನು, ಆ ತ್ರೈವಿಕ್ರಮನನ್ನು ರಾಮವರ್ಮನು ಸಂಹರಿಸಿದನು. ಆದ್ದರಿಂದ ಇದಕ್ಕಾಗಿ ಯಾರನ್ನು ಸಂಹರಿಸತಕ್ಕದು ?

ಮಾ. ಇದು ರಾಮವರ್ಮನ ಅಪರಾಧವಲ್ಲ. ಧೊರೆಯೆ, ಅವನು ಮದನನ ಸ್ನೇಹಿತನು ; ನ್ಯಾಯರೀತಿಯಾಗಿ ಹೋಗಬೇಕಾಗಿದ್ದ, ತ್ರೈವಿಕ್ರಮನ ನಾಶಕ್ಕೆ ರಾಮವರ್ಮನು, ನಿಮಿತ್ತ ಕಾರಣನಾದ್ದು ಅವನ ತಪ್ಪಾಗಿದೆ.

ಧೊ. ಈ ತಪ್ಪಿಗಾಗಿಯೇ ಇಲ್ಲಿಂದ ಅವನಿಗೆ ಗಡೀಪಾರನ್ನು ವಿಧಿಸಿರುವೆನು ; ನಿಮ್ಮ ಈ ಹೇಯವಾದ ಜಗಳವು, ನನಗೆ ವ್ಯಸನವನ್ನು ಉಂಟುಮಾಡಿತು, ನನ್ನ ಬಂಧುವು ಮೃತನಾದನು, ಆದ್ದರಿಂದ ನಿಮ್ಮ ಜನ್ಮಾವಧಿ ಜ್ಞಾಪಕವಿರುವಂತೆ ಘೋರವಾದ ಶಿಕ್ಷೆಯನ್ನು ವಿಧಿಸುವೆನು ; ನಿಮ್ಮ ವಾದವನ್ನು ಕಲಹಕಾರಣವನ್ನೂ ನಾನು ಕೇಳುವದೇ ಇಲ್ಲ ; ನಿಮ್ಮ ಕಣ್ಣೀರುಗಳು ಮತ್ತು ಪ್ರಾರ್ಥನೆಗಳು ನಮ್ಮ ಆಜ್ಞೆಯನ್ನು ಎಂದಿಗೂ ಹಿಂತೆ

ರಿಗಿಸಲಾರವು ; ರಾಮವರ್ಮನು ಹೊರಟುಹೋಗಲಿ ; ಅವನು ಪುನಃ ಇಲ್ಲಿ ಸಿಕ್ಕುವ ಪಕ್ಷಕ್ಕೆ, ಅದೇ ಅವನಿಗೆ ಮರಣಕಾಲವೆಂದು ಚೆನ್ನಾಗಿ ತಿಳಿಯ ತಕ್ಕದ್ದು ; ಈ ದೇಹವನ್ನು ಇಲ್ಲಿಂದ ಈಗಲೇ ಸಾಗಿಸತಕ್ಕದ್ದು.

ಕಂ ॥ ಪರರಂ ಕೊಂದವರಂ ಬಲು । ತೆರದಿಂ ಶಿಕ್ಷಿಸದೆ ಕರುಣದಿಂ ಮನ್ನಿ
ಸಲಾ ॥ ಪರಿ ಮುಂದಕನರ್ಥಪರಂ । ಪರೆಯಂ ಪುಟ್ಟಿಸುತೆ ನೀತಿ
ಮಾರ್ಗವ ಕೆಡಿಕುಂ ॥ ೬ ॥ (ಹೋಗುತ್ತಾರೆ).

ದ್ವಿತೀಯ ಸ್ಥಾನ ೦—ಕಾಪಿಲನಮನೆ ಉದ್ಯಾನವನ.

(ಲೀಲಾವತಿಯು ಪ್ರವೇಶಿಸುವಳು)

ಲೀ. ಕಂ ॥ ಸೂರರಥಾಶ್ವಂಗಳಿರಾ । ಮೀರುತೆ ನಿಜವೇಗದಿಂದೆ ಸೂ
ರ್ಯನ ರಥವಂ ॥ ಸೇರಿಪುದೀಗಳೆ ಪಶ್ಚಿಮ । ಪಾರಾವಾರಾಂತ್ಯ ತೀರ
ವಂ ಬಹುದಯೆಯಿಂ ॥ ೭ ॥

ಎಲೆ ರಾತ್ರಿಯೆ, ನೀನು ಅನುರಾಗ ಪರವಶರಾದವರಿಗೆ ಸಹಾಯ ಕಾರಿಯು ! ಆದ್ದರಿಂದ ನಿನ್ನ ಕಪ್ಪಾದ ಕತ್ತಲೆಯೆಂಬ ತೆರೆಯಿಂದ ಜಗತ್ತನ್ನು ಮರೆಮಾಡು, ಮತ್ತು ನನ್ನ ಪ್ರಾಣಕಾಂತನು ಯಾರಿಗೂ ಗೋಚರನಾಗದಂತೆಯೂ, ಇತರರ ಮಾತಿಗೆ ಆಸ್ಪದ ನಾಗದಂತೆಯೂ, ಬಂದು ನನನ್ನು ಆಲಿಂಗಿಸುವಂತೆಮಾಡು ; ಅನುರಾಗಪರವಶರು, ತಮ್ಮ ಸೌಂದರ್ಯ ಪ್ರಕಾಶದಿಂದಲೇ, ತಮ್ಮ ಅನುರಾಗ ಕಾರ್ಯಗಳನ್ನು ಮಾಡಿಕೊಳ್ಳಬಲ್ಲರು. ಅಥವಾ ಅನುರಾಗವು ಮನ್ಮಥನಂತೆ ಅಂಧವಾಗಿರುವ ಪಕ್ಷಕ್ಕೆ, ಅನುರಾಗಕ್ಕೆ ಕತ್ತಲೆ ಬಹಳ ಸಹಾಯಕರವಾದ್ದು ; ಕತ್ತಲೆಯೆಂಬ ಕಪ್ಪು

॥ ರಾಗ—ಶಾಮಕಲ್ಯಾಣಿ ॥ ಆದಿತಾಳ ॥ (ದೇವಬಂದನಮ್ಮಸ್ವಾಮಿ)

*ಬೇಡುವೆ ರಾತ್ರಿಯೆ । ಜೋಡಿಸಿ ಕರಗಳ ॥ ಪ ॥ ಕೂಡಲು ಪತಿಯನು । ಮಾಡು ಸಹಾಯವ ॥ ಅ ॥ ಸಾರಾನುರಾಗಸಹಾ । ಕಾರಿಯಾಗಿರುವಳೆ । ಬೀರುಜೇಗನೆನಿನ್ನ । ಕಾರುಗತ್ತಲೆಯನ್ನು ॥ ೧ ॥ ಆರೊಳುಮಾತಿಗೆ । ಸೇರದೆ ಗೋಪ್ಯದಿಂ । ದಾ ರಾಮವರ್ಮನೆನ್ನ । ಸೇರುವಂದದೆ ಮಾಡು ॥ ೨ ॥ ಅನುರಾಗ ಪರವಶ । ಜನರಾತ್ಮಕಾಂತಿಯಿಂ । ದನುರಾಗ ಕಾರ್ಯಂಗ । ಳನು ಮಾಡಬಲ್ಲರು ॥ ೩ ॥

ಸೀರೆಯನ್ನು ಧರಿಸಿರುವ, ಸೌಮ್ಯಗುಣ ಗಂಭೀರಳಾದ, ರಾತ್ರಿಯೆ, ಆ ಸುಂದರಾಂಗನಾದ ರಾಮವರ್ಮನಿಗೆ, ನಾನು ಸೋತು ಅವನ ಪ್ರೀತಿಯನ್ನು ಸಂಪಾದಿಸಿದ ಸಂತೋಷದಿಂದ ಉಂಟಾಗಿರುವ, ನನ್ನ ಕಪೋಲಾನುರಾಗವು, ಕ್ರಮೇಣ ಸಹಜವಾಗುವವರಿಗೂ, ಇದರ ಚಿಹ್ನೆಯು ಪರರಿಗೆ ಗೋಚರವಾಗದಂತೆ, ನಿನ್ನ ಕತ್ತಲೆಯಿಂದ ಮರೆಮಾಡುತ್ತಿರು: ಎಲೆ ರಾತ್ರಿಯೆ, ಬೇಗಬಾ, *ರಾತ್ರಿಯಲ್ಲಿ ಹಗಲಿನಂತೆ ಪ್ರಕಾಶಿಸುವ ರಾಮವರ್ಮನೆ ಬಾ, ಯಾಕೆಂದರೆ ಕಪ್ಪಾದ ಕಾಗೆಯ ಮೇಲೆ ಬಿದ್ದ ಮಂಜಿಗಿಂತಲೂ, ಈ ರಾತ್ರಿಯಲ್ಲಿ, ನೀನು ಹೆಚ್ಚಾದ ಕಾಂತಿಯುಳ್ಳವನಾಗಿರುವೆ; ಮನೋಹರವಾದ ರಾತ್ರಿಯೆ ಬಾ, ಕಪ್ಪಾದ ಹುಬ್ಬುಗಳುಳ್ಳ, ನನಗೆ ಪ್ರೀತಿಕರವಾದ ರಾತ್ರಿಯೆ ಬಾ, ನನ್ನ ರಾಮವರ್ಮನನ್ನು ನನಗೆ ಕೊಡು,*

ಕಂ॥ ಯಾಮಿನಿನೀಂ ಮತ್ಪ್ರಿಯತನು । ಧಾಮವಲಂಶಕಲಾಳಿಯನ್ನು
ಕೊಂಡದರಿಂದಂ ॥ ವ್ಯೋಮವ ನಲಂ ಕರಿಸೆಬರ । ಧಾಮನನರ್ಚಿ
ಸದೆ ನಿನ್ನನೇ ಪೂಜಿಸುವರ್ ॥ ೮ ॥

ಹಾ! ಹಾ! ನಾನು ನನ್ನನ್ನೇ ಕ್ರಯಧನವಾಗಿ ಕೊಟ್ಟು, ಮನೋಹರವಾದ ಒಂದು ಪ್ರೇಮರತ್ನವನ್ನು ತೆಗೆದುಕೊಂಡೆನು, ಅದು ಅದ್ಯಾಪಿ ನನ್ನ ಸ್ವಾಧೀನಕ್ಕೆ ಬರಲಿಲ್ಲ; ತನ್ನ ಮಹೋತ್ಸವಾರ್ಥವಾಗಿ ನೂತನವಸ್ತ್ರಾಲಂಕಾರಗಳು ಸಿದ್ಧವಾಗಿರುವವೆಂದು ತಿಳಿದಿದ್ದರೂ, ಅದನ್ನು ಯಾವಾಗ ಧರಿಸಿಕೊಂಡೇನೋ ಎಂದು ಚಪಲಚಿತ್ತವಾದ ಮಗುವಿಗೆ, ಉತ್ಸವದ ಹಿಂದಿನ ರಾತ್ರಿಯು ಎಷ್ಟು ದೀರ್ಘವಾಗಿಯೂ, ಬೇಜಾರಾಗಿಯೂ ಇರುವದೊ, ಹಾಗೆ ನನಗೆ ಈ ದಿನವು ಅಷ್ಟು ಬೇಜಾರಾಗಿದೆ. ಓಹೋ ನನ್ನ ಧಾತ್ರಿಯು ಬರುತ್ತಿರುವಳು. ವರ್ತಮಾನವನ್ನು ತಂದಿರುವಳು; ರಾಮವರ್ಮನ ಮಾತನ್ನೇ ಆಡುವರ ಮಾತುಗಳು ಅಮೃತೋಪಮಗಳಾಗಿವೆ.

॥ ರಾಗ—ಪರಜು ॥ ಅದಿತಾಳ ॥ (ನಿನಗ್ಯಾರೆನಂದರೊ)

* ಬಾರೆನ್ನಜೀವಿತ ನಾಥ । ನಿಜ । ಚಾರುರೂಪಜಿತ । ಧೀರಕೀರಶಥ ॥ ಪ ॥ ಯಾ॥ ಮಿನಿಯೊಳುಸಿತ । ಧಾಮನಂತೆಸೆವನೆ । ಕಾಮರೂಪಗುಣ । ಧಾಮರಾಮವರ್ಮ ॥ ೧ ॥ ನೀಲಾಚಲದಮೇಲೆ । ಪಾಲೆರೆದಂತೀ । ಕಾಳರಾತ್ರಿಯೊಳು । ಮೇಲಾಗಿಪೊಳೆವನೆ ॥ ೨ ॥

(ಧಾತ್ರಿ ಹಗ್ಗಗಳನ್ನು ತೆಗೆದುಕೊಂಡು ಪ್ರವೇಶಿಸುವಳು).

ಧಾತ್ರಿಯೆ, ಏನು ವರ್ತಮಾನ? ನಿನ್ನ ಕೈಯಲ್ಲಿ ಇರುವದೇನು; ರಾಮವರ್ಮನು ತರುವಂತೆ ಹೇಳಿದ್ದ ಹಗ್ಗಗಳೊ?

ಧಾ. ಹೌದು, ಹೌದು, ಹಗ್ಗಗಳು. (ಕೆಳಗೆ ಬಿಸಾಡುವಳು).

ಲೀ. ಅಯ್ಯೋ! ಏನು ವರ್ತಮಾನ ನಿನ್ನ ಕೈಯಿಗಳನ್ನು ಯಾಕೆ ಹಿಸುಕಿಕೊಳ್ಳುವೆ?

ಧಾ. ಆಃ ದುರ್ದಿನವೆ! ಅವನು ಸತ್ತನು, ಸತ್ತನು, ಪ್ರಿಯಳೆ, ನಾವು ಕೆಟ್ಟೆವು, ಕೆಟ್ಟೆವು; ಅವನು ಹೋದನು, ಮೃತನಾದನು; ಕೊಲ್ಲಲ್ಪಟ್ಟನು.

ಲೀ. ದೇವರೂ ಇಷ್ಟು ದಯಾಶೂನ್ಯನೆ?

ಧಾ. ರಾಮವರ್ಮನೇ ದಯಾಶೂನ್ಯನು. ದೇವರು ಅಂಥಾವನಲ್ಲ: ರಾಮವರ್ಮನೆ, ನೀನು ಹೀಗೆ ಆಗುವೆ ಎಂದು ಯಾರುತಾನೆ ಊಹಿಸಿದ್ದರು? ರಾಮವರ್ಮನೆ!

ಲೀ. ಕಂ॥ ಏತಕ್ಕೆನೀಂ ಪಿಶಾಚಿಯೊ। ಲೀತೆರದಿಂ ದಧಿಕವಾಗಿ ಪೀಡಿ
ಸುತಿರ್ಪೆ ॥ ದೂತಿ ಇದು ಘೋರನಾರಕ। ಯಾತನೆಯತ್ತಣಿನಿ
ನಧಿಕ ವಾಗಿಹುದಕಟಾ ॥ ೯ ॥

ರಾಮವರ್ಮನು ಆತ್ಮಹತ್ಯಾ ಮಾಡಿಕೊಂಡನೊ? ಹೌದೆಂದರೆ, ಆಮಾತನ್ನು ಚೂರುಚೂರು ಮಾಡುವೆನು; ನಾನು ಆಗ ಎಲ್ಲಿರುವೆನು? ನಾನು ಮರಣವನ್ನು ಹೊಂದುವೆನು; ಹೌದೇಅಲ್ಲವೆಹೇಳು, ನೀನು ಹೇಳತಕ್ಕ ಈ ಎರಡು ಮಾತುಗಳು ನನ್ನ ಸುಖ ದುಃಖಗಳನ್ನು ಆಶ್ರಯಿಸಿ ಇರುವವು.

॥ ರಾಗ—ಬೇಹಾಗ್ ॥ ಛಾಪುತಾಳ ॥　　(ಚೆಂದವಲ್ಲಿದು ಭೂಸುರೋತ್ತಮ)

ನುಡಿನುಡಿ ನುಡಿ ದೂತಿಬೇಗನೆ। ಈಗ। ತಡವೇಕೆನ್ನೊಡನೆ ॥ ಪ ॥ ಬಡನಾತ್ಮಹನಯಿಂದೆ। ನ್ನೊಡೆಯ ಮಡಿದಿಹನೆಂದು। ನುಡಿವೆಯೊನಾನೀಗಾ ಮಾತನು। ಪುಡಿಪುಡಿಯಮಾಡುವೆನು ॥ ೧ ॥ ಸನ್ನುತ ನೆನ್ನ ಮನ। ದನ್ನನಂತಾಗಿರ। ಲಿನ್ನು ನಾನಿರ್ಪನೆಧಾತ್ರಿಯೆ। ಮೃತಿ।ಯನ್ನು ಹೊಂದುವೆನು ॥ ೨ ॥ ತರುಣಿಯೆ ನೀನೊರೆ। ವೆರಡು ಮಾತುಗಳೊಳೆ। ನ್ನರುತರ ಸುಖದುಃಖಭಾವವು। ಸೇ। ರಿರುತಿಹು ದಹಹಾ ॥ ೩ ॥

ಧಾ. ನಾನು ಘಾಯುಗಳನ್ನು ನೋಡಿದೆನು; ಆಜಾನುಬಾಹುವಾದ, ಅವನ ವಿಶಾಲ ವಕ್ಷಸ್ಥಲದಲ್ಲಿ, ಇದ್ದ ಘಾಯುವನ್ನು ನಾನೇ ಈ ಹಾಳು ಕಣ್ಣುಗಳಿಂದ, ನೋಡಿದೆನು. ಹಾ ಹಾ! ದೈವವೆ! ರಕ್ತಮಯುವಾಗಿ ಯೂ ಶುಭ್ರವಾಗಿಯೂ, ಇದ್ದ ಅವನ ಶವವನ್ನು ನಾನೇ ನೋಡಿ ಮೂ ರ್ಛಿತಳಾದೆನು!

ಲೀ. ವೃ ॥ ಮನವೇ ನೀಂ ಹತನಾಗು ನೇತ್ರ, ನಿನಗೀ ಸ್ವಾತಂತ್ರ್ಯವಿ
ನ್ನೇಕೆಮಿಾ । ಲನವಂ ಪೊಂದೆಲೆ ನಶ್ವರಾಂಗಕವೆ ನೀಂ ಭೂತತ್ವವಂ
ಪೊಂದುಬಾ । ಲನೆ ಸಾಕಿಲ್ಲಿಗೆ ಮನ್ಮನೋರಥ ಶತಾಂಭೋರಾಯುಾ
ಬತ್ತಿತೆ । ನ್ನನುರಾಗಪ್ರಿಯು ರಾಮವರ್ಮನೊಡನಾನುಂ ಜೀವವಂ
ನೀಗುವೇಂ ॥ ೧೦ ॥

ಧಾ. ಹಾ ಹಾ! ತ್ರೈವಿಕ್ರಮನೆ! ನನ್ನ ಸ್ನೆಹಿತರಲ್ಲಿ ಅತ್ಯುತ್ತಮ ನಾದ ನೀನು ಸತ್ತದ್ದನ್ನು, ನಾನೇ ನೋಡಬೇಕಾಯಿತಲ್ಲ! ಹಾ ವಿಧಿಯೆ!

ಲೀ. ಹಾ ಹಾ! ಪರಸ್ಪರ ಸಂಬಂಧವಿಲ್ಲದ ಈ ವಿಪತ್ತು ಏನು? ನನ್ನ ವಿಶ್ವಾಸಕ್ಕೆ ಪಾತ್ರನಾದ ಸೋದರಮಾವ ತ್ರೈವಿಕ್ರಮನು ಮೃತನಾ ದನೆ? ಮತ್ತು ನನಗೆ ಪ್ರಾಣಪತಿಯಾದ ರಾಮವರ್ಮನು ಹತನಾದನೆ? ನೀವಿಬ್ಬರೂ ಹೋದಮೇಲೆ, ಯಾರಿದ್ದರೆತಾನೇ ಏನು ಫಲ, ಈ ಗಲೇ ಪ್ರಳಯುವಾಗಲಿ.

ಧಾ. ಮಗಳೆ ಸೈರಿಸು, ಸೈರಿಸು, ತ್ರೈವಿಕ್ರಮನನ್ನು ಕೊಂದ ರಾಮವರ್ಮನು, ದೇಶಭ್ರಷ್ಟನಾದನು!

ಲೀ. ಅಯ್ಯೋ ದೇವರೆ! ತ್ರೈವಿಕ್ರಮನ ಪ್ರಾಣವು ರಾಮವರ್ಮನ ಕೈಗಳಿಂದ ಹತವಾದುದೆ?

ಧಾ; ಹೌದು, ಹೌದು, ಅಯ್ಯೋ! ದುರ್ದಿನವೆ!!

ಲೀ ಸುಂದರ ಮುಖವುಳ್ಳ ಸರ್ಪವೆ! ಸುಂದರನಾದ ಕ್ರೂರನೆ! ದೇವತಾ ಸೌಂದರ್ಯವುಳ್ಳ ರಾಕ್ಷಸನೆ! ಪಾರಿವಾಣಪುಕ್ಕಿಯು ರೂಪವುಳ್ಳ ರಣಹದ್ದೇ! ಗೋಮುಖ ವ್ಯಾಘ್ರನೆ! ನೇತ್ರಾನಂದಕರವಾದ ನಿಂದ್ಯವಾದ ವಸ್ತುವೆ! ಸೌಂದರ್ಯಕ್ಕೆ ವಿರೋಧವಾದ ಸ್ವಭಾವವುಳ್ಳವನೆ! ಶಪ್ತನಾದ

ಸಿದ್ಧಪುರುಷನೆ! ಅತಿನೀಚವೃತ್ತಿ ಪ್ರವರ್ತಕನಾದ ಉತ್ತಮಜಾತಿ ಸಂಜಾತನೆ! ಇಂಥಾ ತ್ರಿಜಗನ್ಮೋಹಕ ಶರೀರದಲ್ಲಿ, ಕ್ರೂರರಾಕ್ಷಸ ಸ್ವಭಾವವೇ ಇರುವದಾದರೆ, ಎಲೆ ಸ್ವಭಾವವೆ ನಿನಗೆ ನರಕವಾಸವೇಕೆ ?

ಕಂ ॥ ಅತಿಹೇಯಕಥಾಸಂಗತಿ । ಯುತಪುಸ್ತಕಕೇಕೆ ಮೆರೆವರಕ್ಷಾಪತ್ರಂ ॥
ಭೃತಧರ್ಮರಾಜ ಗೃಹದೊಳ್ । ಹತಕೃತಕಾದಿಗಳು ವಸಿಸಬಹುದೇ
ನಕಟಾ ॥ ೧೧ ॥

ಧಾ. ಪುರುಷರಲ್ಲಿ ಸತ್ಯವು, ನಂಬುಗೆಯೂ, ಪ್ರಾಮಾಣಿಕತೆಯೂ, ಇಲ್ಲ. ಎಲ್ಲರೂ ಅಸತ್ಯವಾದಿಗಳು, ಎಲ್ಲರೂ ಕೆಟ್ಟವರು, ಎಲ್ಲರೂ ವಂಚಕರೆ! ಆಹಾ ನನ್ನ ಹುಡುಗನೆಲ್ಲಿ? ಹಾ ಹಾ ನನ್ನ ಪ್ರಾಣವು ಹೋಗುತ್ತಿರುವದು! ಸ್ವಲ್ಪ ನೀರು ಕೊಡು, ಸಹಿಸಲಶಕ್ಯವಾದ ಈ ವ್ಯಸನವು, ನನ್ನ ವೃದ್ಧಾಪ್ಯವನ್ನು ಹೆಚ್ಚು ಮಾಡುತ್ತಿರುವದು. ರಾಮವರ್ಮನು ಕೆಟ್ಟನು, ಅವನಿಗೆ ಅಪಮಾನ ಪ್ರಾಪ್ತಿಯಾಗಲಿ.

ಲೀ. ಎಲೆ ಧಾತ್ರಿ, ನೀನು ಹೀಗೆ ಹೇಳುವದಕ್ಕಾಗಿ ನಿನ್ನ ನಾಲಿಗೆಯು ಸುಟ್ಟು ಹೋಗಲಿ! *ಅಪಮಾನವೆನ್ನುವದು ಅವನ ಸಮಿಾಪಕ್ಕೆ ಬರಲು ನಾಚುವದು; ಮರ್ಯಾದೆಯೆನ್ನುವದು ಅವನಲ್ಲಿ ತುಂಬಿರುತ್ತೆ; ನಾನು ಅವನನ್ನು ದೂಷಿಸಿದೆನಲ್ಲಾ! ನಾನು ಎಂಥಾ ಪಾಪಿ, ರಾಕ್ಷಸಿ! *

ಧಾ. ನಿನ್ನ ಸೋದರಮಾವನನ್ನು ಕೊಂದವನನ್ನು ಶ್ಲಾಘಿಸುವೆಯೋ?

ಲೀ. ನನ್ನ ಗಂಡನನ್ನು ನಾನೇ ದೂಷಿಸಲೋ? ಈಗ ಸ್ವಲ್ಪಹೊತ್ತಿನಿಂದ, ಹೆಂಡತಿಯಾಗಿರುವ ನಾನೇ, ಈ ರೀತಿಯಾಗಿ ನಿನ್ನನ್ನು ದೂಷಿಸಿದರೇ ಇನ್ನ್ಯಾರುತಾನೆ ನಿನ್ನ ವಿಷಯವಾಗಿ ಒಳ್ಳೇಮಾತಾಡುವರು? ಪಾಪಿಷ್ಠನೆ

॥ ರಾಗ— ದರಬಾರು ॥ ರೂಪಕತಾಳ ॥ (ಯಾರುನೀನಲೆನಾರಿಯೆ).

* ದೂಷಿಸಿದೆನು । ಪ್ರಿಯನ ॥ ಪ ॥ ರೋಷದೆಬಹು । ದೋಷವಪರಿ । ಪೋಷಿಸ ದುರ್ಭಾಷೆಯಿಂದ ॥ ಅ ॥ ಮೋಲಹಗಾಂಭೀರ್ಯಧೈರ್ಯ । ಶೀಲಶೌರ್ಯೌದಾರ್ಯ । ಶಾಲಿಸಃಗುಣಜಾಲಕಲಾ । ಲೋಲನನತಿ । ಮೇಲವಾಗಿ ॥ ೧ ॥ ಇಂತುಲೋಕಮಾನ್ಯನಾದ । ಕಂತುರೂಪಕಾಂತನನ್ನು । ಪಂತದಿಂದ ದೂಷೀಸಿದೆನ । ದೆಂತುಪಾತಕಿಯೊನಾನು ॥ ೨ ॥

ಯಾತಕ್ಕೆ ನನ್ನ ಮಾವನನ್ನು ಕೊಂದೆ? ಆ ನೀಚನಾದ ನನ್ನ ಮಾವನು, ನನ್ನ ಆರ್ಯಪುತ್ರನನ್ನು ಕೊಲ್ಲುತ್ತಿದ್ದನು; ಕಣ್ಣೀರೆ ಹಿಂತಿರಿಗು, ಈಗ ಸುರಿಯುವದು ಆನಂದಬಾಷ್ಪವು: ತ್ರೈವಿಕ್ರಮನು ಕೊಂದು ಹಾಕಬೇಕೆಂದು ಇದ್ದ, ನನ್ನ ಗಂಡನು ಜೀವಿತನಾಗಿದಾನೆ; ನನ್ನ ಗಂಡನನ್ನು ಕೊಲ್ಲುತ್ತಿದ್ದ ತ್ರೈವಿಕ್ರಮನು ಸತ್ತು ಹೋದನು; ಇದು ಸರಿಯೆ, ಆದರೆ ನಾನು ಯಾತಕ್ಕಾಗಿ ವ್ಯಸನಪಡುವೆನು? ತ್ರೈವಿಕ್ರಮನ ಮರಣಕ್ಕಿಂತಲೂ, ಹೆಚ್ಚು ವ್ಯಥೆಯನ್ನು ಉಂಟು ಮಾಡಿದ, ಒಂದು ಮಾತನ್ನು ಕೇಳಿದೆನು, ಅದನ್ನು ಕುತೂಹಲದಿಂದ ಮರೆವೆನು, ಆದರೆ,

ಕಂ ॥ ಪಾಪಿಗೆ ತಾಂ ವಿರಚಿಸಿದಾ। ಪಾಪದ ಕೃತ್ಯಂಗಳೆಂತು ನೆನಪಿಗೆಬಹುದೋ ॥ ಆಪರಿಯಿಂ ದೊಡನೊಡನೆ ನ। ಗಾಪಗೆಯುಹ ಮಾತು ನೆನಪಿಗೈತರುತಿರ್ಕುಂ ॥ ೧೦ ॥

ತ್ರೈವಿಕ್ರಮನು ಸತ್ತನು, ರಾಮವರ್ಮನಾದರೊ ದೇಶಭ್ರಷ್ಟನಾದನು; ಆ ದೇಶಭ್ರಷ್ಟನಾದನೆಂಬ, ಒಂದು ಮಾತು ಸಹಸ್ರಜನ ತ್ರೈವಿಕ್ರಮರು ಸತ್ತರೆ ಎಷ್ಟು ವ್ಯಸನ ವುಂಟಾಗುತ್ತಿತ್ತೋ, ಅದಕ್ಕಿಂತಲೂ ಹೆಚ್ಚಾಗಿ ಇರುವದು; ತ್ರೈವಿಕ್ರಮನ ಮರಣವೊಂದೇ ನನ್ನ ವ್ಯಸನಕ್ಕೆ ಸಾಕಾಗಿತ್ತು, ಅಥವಾ ವ್ಯಸನವೆನ್ನುವವಕ್ಕೂ ಜತೆಗಾರರು ಬೇಕಾಗಿರುವಪಕ್ಷಕ್ಕೆ ತ್ರೈವಿಕ್ರಮನು ಸತ್ತನೆಂದು ಹೇಳಿದಾಗ, ನಿನ್ನ ತಾಯಿ, ತಂದೆ, ಸತ್ತರೆಂದು ಹೇಳಿದ್ದರೆ, ಸಹಜವಾಗಿ ತಿಳಿಯುತ್ತಿದ್ದೆನು, ಆದರೆ ತ್ರೈವಿಕ್ರಮನು ಸತ್ತನೆಂದು ಹೇಳಿದೊಡನೆಯೆ, ರಾಮವರ್ಮನು ದೇಶಭ್ರಷ್ಟನಾದನೆನ್ನುವ ಮಾತು, ತಾಯಿ, ತಂದೆ, ತ್ರೈವಿಕ್ರಮ, ಲೀಲಾವತಿ, ರಾಮವರ್ಮ, ಇವರೆಲ್ಲರೂ ಸತ್ತಂತೆ ಮಾಡಿತು; ಈ ವ್ಯಸನಕ್ಕೆ ಪಾರವೇ ಇಲ್ಲ; ಅದರಷ್ಟು ದುಃಖಪ್ರದವಾದ ಮಾತುಗಳೇ, ಯಾವದೂ ಇಲ್ಲ: ಧಾತ್ರಿ, ನನ್ನ ತಾಯಿ ತಂದೆಗಳು ಎಲ್ಲಿ ಇರುವರು?

ಧಾ. ತ್ರೈವಿಕ್ರಮನ ಶವದಬಳಿಯಲ್ಲಿ ಗೋಳಾಡುತ್ತಿರುವರು; ಅವರ ಬಳಿಗೆ ಹೋಗುತ್ತೀಯೊ? ನಾನೂ ನಿನ್ನೊಡನೆ ಬರುವೆನು.

ಲೀ. ತಮ್ಮ ಕಣ್ಣೀರುಗಳಿಂದ ಅವನ ಘಾಯಗಳನ್ನು ತೊಳೆಯಲಿ.

ಕಂ ‖ ಆಶವಕೆ ಕಂಬನಿಯು ಗರೆ । ವಾಳೆಯು ನವರೆಲ್ಲ ರೆಸಗಿಕೊಂಡ ಬಳಿ
ಕ್ಕಂ ‖ ಧೀಶಾಲಿಗವಗೆ ಲಭಿಸಿವ । ದೇಶಭ್ರಷ್ಟತ್ವ ಕಾನು ಕಂಬನಿಗ
ರೆವೇಂ ೧೩ ‖

ಈ ಹಗ್ಗವನ್ನು ತೆಗೆದುಕೊ, ಹಾ ಹಗ್ಗಗಳೆ! ನೀವು ಮೋಸಹೋದಿರಿ, ನಾನೂ ಮೋಸಹೋದೆನು, ಯಾಕೆಂದರೆ, ರಾಮವರ್ಮನು ದೇಶಭ್ರಷ್ಟನಾದನು, ನಿಮ್ಮ ಸಹಾಯದಿಂದ ನನ್ನನ್ನು ಸೇರುತ್ತಿದ್ದನು, ಆದರೆ ಅವನ ಸೇವಕಳಾದ ನಾನು, ಅವನ ವಿಯೋಗವನ್ನು ಸೈರಿಸಲಾರದೆ, ಸಾಯುವೆನು: ಹಗ್ಗಗಳೇ ಬನ್ನಿ, ಧಾತ್ರಿಯೇ ಬಾ, ನಾನು ನನ್ನ ಶಯ್ಯಾಗೃಹಕ್ಕೆ ಹೋಗುವೆನು, ನನ್ನ ಶಯನದಲ್ಲಿ ರಾಮವರ್ಮನಲ್ಲ, ಯಮನು ಮಲಗುವನು.

ಧಾ. ನಿನ್ನ ಕಿರುಮನೆಗೆ ಹೋಗು, ನಿನ್ನ ಸಮಾಧಾನಾರ್ಥವಾಗಿ ರಾಮವರ್ಮನನ್ನು ಕರೆದುಕೊಂಡು ಬರುತ್ತೇನೆ, ಅವನು ಇರುವ ಸ್ಥಳವು ನನಗೆ ಗೊತ್ತಿರುವದು; ಕೇಳು, ರಾಮವರ್ಮನು ಈ ರಾತ್ರೆ ಇಲ್ಲಿಗೆ ಬರುತ್ತಾನೆ, ನಾನು ಬರುವಂತೆ ಹೇಳುತ್ತೇನೆ, ಅವನು ಯೋಗೀಶ್ವರನ ಆಶ್ರಮದಲ್ಲಿ ಬಾತುಕೊಂಡಿದಾನೆ.

ಲೀ. ಎಲೆ ಧಾತ್ರಿ!

ಕಂ ‖ ಗಾಡನೆ ಪೋಗುತಲಿನನಂ । ನೋಡುತಲುಂ ಗುರವ ನಿತ್ತು ನನಗಾಶಿ
ಷವಂ ‖ ಮಾಡಿ ತೆರಳಲ್ಕನೀಂ ದಯೆ । ಮಾಡಿಲ್ಲಿಗೆನುತ್ತೆ ಬೇಡಿದಳೆ
ನುತೆ ಪೇಳೌ ‖ ೧೪ ‖ (ಹೋಗುವರು.)

ತೃತೀಯಸ್ಥಾನಂ.—ಯೋಗೀಶ್ವರನ ಆಶ್ರಮ.

(ಪೂಜ್ಯಪಾದ ರಾಮವರ್ಮರು ಪ್ರವೇಶಿಸುವರು.)

ಪೂ. ರಾಮವರ್ಮನೆ, ಭಯಂಕರನಾದ ರಾಮವರ್ಮನೆ, ಹೊರಕ್ಕೆ ಬಾ,

ಕಂ ‖ ದುರದೃಷ್ಟದಶೆಯು ತಾನಾ । ವರಿಸುತೆ ನಿನ್ನನುಬೆನ್ನಪತ್ತಿರು
ತಿರ್ಕ್ಕಂ ‖ ನೆರೆನೀಂ ಕ್ರೂರಗ್ರಹಸುಂ । ದರಿಯರ ಪರಿಣಯವ ಮಾಡಿ
ಕೊಂಡಿಹೆಯುಂದೇ ‖ ೧೫ ‖

ರಾ. ಪೂಜ್ಯರೆ, ಏನು ವರ್ತಮಾನ! ಅರಸನಾಜ್ಞೆ ಏನು? ಈಗ ನನಗೆ ತಿಳಿಯದೇ ಹೆಚ್ಚಾಗಿ ಅನುಭವಿಸ ಬೇಕಾಗಿರುವ ಕಷ್ಟಪರಂಪರೆಯು ಯಾವದು?

ಪೂ. ಎಲೈ ಪ್ರಿಯನಾದ ಬಾಲನೆ! ಕಷ್ಟಾನುಭವಕ್ಕೆ ನೀನು ಹೊಸಬನಲ್ಲ; ನಾನು ಅರಸನ ಆಜ್ಞೆಯನ್ನು ತಿಳಿದು ಬಂದಿರುವೆನು.

ರಾ. ಮರಣದಂಡನೆಗಿಂತಲೂ ಹೆಚ್ಚಾಗಿ, ಇನ್ನೇನನ್ನು ಆಜ್ಞಾಪಿಸಿರುವನು?

ಪೂ. ಆತನ ಆಜ್ಞೆಯು ಅಷ್ಟು ಕ್ರೂರವಾದ್ದಲ್ಲ, ದೇಹವನ್ನುಳಿಸಿದರೂ, ನೀನು ಇಲ್ಲಿಂದ ಹೋಗಬೇಕೆಂದು ಆಜ್ಞಾಪಿಸಿ ಇರುವನು.

ರಾ. ಆಃ!

ಕಂ॥ ಪುರಬಾಹ್ಯತೆ ನಿನಗೆಂದೆನ। ಗರುಪದೆ ದಯೆಯಿಂದೆ ಮರಣವೆಂದು
ಸುರುವುದಾ॥ ಮರಣಭಯ ದತ್ತಣಿಂದೀ। ಪರಿದೇಶಭ್ರಷ್ಟಭಾವ
ಮಧಿಕಂ ಜಗದೊಳ್॥ ೧೬॥

ಆದ್ದರಿಂದ ಆಮಾತನ್ನು ಹೇಳಬೇಡಿ.

ಪೂ. ನಿನ್ನನ್ನು ಈ ವಾರಣಾವತೆ ಪಟ್ಟಣದಿಂದ ಆಚೆಗೆ ದಾಟಿಸುವಂತೆ ರಾಜಶಾಸನವಾಗಿರುವದು; ಧೈರ್ಯದಿಂದಿರು. "ದೇಶೋವಿಶಾಲಾಃ ಪ್ರಭವೊಪ್ಯನಂತಾಃ" ಎಂದಿರುವದ್ದರಿದ, ಈ ಪ್ರಪಂಚವು ವಿಸ್ತಾರವಾದ್ದು.

ರಾ. ಈ ವಾರಣಾವತದಿಂದ ಹೊರಗೆ ಇರುವ ಎಲ್ಲಾ ಸ್ಥಳವು, ಸಮಸ್ತ ಯಾತನೆಗಳಿಗೆ ಮಾತೃಸ್ಥಾನವಾದ ನರಕವೇಸರಿ: ಇಲ್ಲಿಂದ ಹೊರಪಡಿಸಿದರೆ, ಈ ಲೋಕದಿಂದ ಹೊರಪಡಿಸಿದಂತೆಯೇ ಆಯಿತು; ಲೋಕದಿಂದ ಹೊರಡಿಸೋಣವೆಂದರೆ ಮರಣವೆ, ಮರಣವನ್ನು ಬೇರೆ ಹೆಸರಿನಿಂದ ದೇಶಭ್ರಷ್ಟತ್ವವೆಂದು ಹೇಳುತ್ತೀರಿ; ನನ್ನ ತಲೆಯನ್ನು ಸುವರ್ಣದ ಕೊಡಲಿಯಿಂದ ಛೇದಿಸಿ, ನನ್ನನ್ನು ಕೊಲ್ಲುವ ಆ ಏಟನ್ನು ನೋಡಿ ನಗುತ್ತಿರುವಿರೊ?

ಪೂ. ಆಃ! ಎಲೆ ಕೃತಘ್ನನೆ! ನೀನು ಮಾಡಿರುವ ಪಾಪಕೃತ್ಯಕ್ಕೆ ಮರಣವೇ ದಂಡನೆ ಎಂದು ಧರ್ಮಶಾಸ್ತ್ರದಲ್ಲಿ ಹೇಳುತ್ತೆ, ಆದಾಗ್ಯೂ ದಯಾ

ಳುವಾದ ಧೊರೆಯು, ನಿನ್ನ ಪಕ್ಷವನ್ನು ವಹಿಸಿ, ಶಾಸ್ತ್ರವನ್ನು ಲಕ್ಷ್ಯಕ್ಕೆತಾರದೆ ಕ್ರೂರವಾದ ಮರಣದಂಡನೆಗೆ ಪ್ರತಿಯಾಗಿ, ದೇಶಭ್ರಷ್ಟತ್ವವನ್ನು ವಿಧಿಸಿದನು; ಇದು ಬಹಳ ದಯಾಳುತ್ವವು, ಇದನ್ನು ನೀನು ತಿಳಿಯದೆ ಇರುತ್ತೀಯೆ!

ರಾ. ಇದು ದಯಾಳುತ್ವವಲ್ಲ, ಹಿಂಸೆಯು; ಇಲ್ಲಿ ಇರುವ ಶುಕ, ಪಿಕ, ಪಾರಾವತ, ಮೊದಲಾದ ಎಲ್ಲಾ ಪ್ರಾಣಿಗಳೂ, ಲೀಲಾವತಿಯ ಸಾಮೀಪ್ಯವೇ ತಮಗೆ ಸ್ವರ್ಗ ಸುಖಾನುಭವವೆಂದು ತಿಳಿದು, ಆಕೆಯನ್ನು ನೋಡುತ್ತಾ ಇರಬಹುದು, ಆದರೆ ಈ ರಾಮವರ್ಮನು ಮಾತ್ರ ನೋಡಕೂಡದು!

ಕಂ ‖ ಅತಿಹೇಯ ವಸ್ತುವಿನಮೇ | ಲತಿಶಯದಿಂ ಕುಳಿತು ಜೀವಿಸುವನೊ
　ಣಮಧರಾ ‖ ಮೃತಪಾನ ಮೆಸಗುತಾಕೆಯ | ಸುತನುವ ತಾಂ ಮುಟ್ಟ
　ಬಹುದು ನಾಂಕೂಡದೊ ಹಾ ‖ ೧೭ ‖

ನಾನು ಆ ನೊಣಕ್ಕಿಂತಲೂ ಕಡೆಯಾದೆನೊ? ಪೂಜ್ಯರೆ, ದೇಶಭ್ರಷ್ಟನಾಗತಕ್ಕವನು, ಅದಕ್ಕಿಂತಲು ಕಡೆಯಾದವನೇಸರಿ; ಆದರೆ ಇಂಥಾ ಶಿಕ್ಷೆಯನ್ನು ಮರಣವಲ್ಲವೆಂದು ತಾವು ಹೇಳುತ್ತೀರಿ,

ಕಂ ‖ ಕೊಲಲೆನ್ನಂ ನಿಮ್ಮೊಳು ಮಸೆ | ದಲಗಾದೊಡ ಮಿತರಮಾರ್ಗ
　ಮಾದೊಡು ಹಾಲಾ ‖ ಹಲಮಾದೊಡುಮಿಲ್ಲದರಿಂ | ಪೊಳಲಿಂ ಭ್ರ
　ಷ್ಟತ್ವ ಶಿಕ್ಷೆಯಂ ಪೇಳದಿರೇಂ ‖ ೧೮ ‖

ದಯಾಳುಗಳಾಗಿಯೂ, ಪರಿಶುದ್ಧರಾಗಿಯೂ, ಯೋಗಿಗಳಾಗಿಯೂ, ಇದೂ ಅಲ್ಲದೆ, ನನಗೆ ಕೇವಲ ಹಿತಚಿಂತಕರಾಗಿಯೂ ಇರುವ, ತಮಗೆ, ಈ ಮಾತನ್ನು ಹೇಳಿ, ನನ್ನನ್ನು ಕೊಲ್ಲುವದಕ್ಕೆ ಮನಸ್ಸು ಹ್ಯಾಗೆ ಬಂತೊ?

ಪೂ. ಎಲೆ ಹುಚ್ಚನೆ, ನಾನು ಹೇಳುವ ಮಾತನ್ನು ಕೇಳು.

ರಾ. ಅಯ್ಯೋ! ತಿರುಗಿ ಪುರಭ್ರಷ್ಟತ್ವವನ್ನು ಕುರಿತು ಮಾತನಾಡುವಿರಿ!

ಪೂ. ನೀನು ಪುರಭ್ರಷ್ಟನಾಗಿದ್ದರೂ, ನಿನ್ನ ಚಿಂತಾಸಮಾಧಾನಾರ್ಥವಾಗಿಯೂ, ಕಷ್ಟ ಪರಿಹಾರಾರ್ಥವಾಗಿಯೂ, ಒಂದು ಅಮೃತಪ್ರಾಯವಾದ ನೀತಿ ವಚನವನ್ನು ಕೊಡುತ್ತೇನೆ, ಅದರಿಂದ ನೀನು ಅಭೇದ್ಯನಾಗಿರು.

ರಾ. ದೇಶಭ್ರಷ್ಟನಿಗೆ ನಿಮ್ಮ ನೀತಿಯಿಂದೇನು? ಅದನ್ನು ಸುಡಿ, ಏಕೆಂದರೆ,

ವೃ ॥ ವರಲೀಲಾವತಿ ಗನ್ಯೆಯುಂ ಸೃಜಿಸುತೀ ಕ್ರೂರಾವನೀಶಾಜ್ಞೆಯಂ ।
ಭರದಿಂ ದೀಗಳೆಪಿಂದಿರುಂಗಿಸಿ ಮದೋನ್ಮತ್ತರ್ಕಳಂ ಪಾರರಂ ॥ ಪುರ
ಮಂದೇಶಮುಮಂ ಪೊದಳ್ದನಿತುಮಂ ಪಾಳ್ಗೈವ ಸಾಮರ್ಥ್ಯವಿವಾ ।
ಗೊರೆವೀ ನೀತಿಯೊಳರ್ಕ್ಕವೋ ನಿರದಿರಲ್ಕಾ ನೀತಿಯಿಂದೇಂಫಲಂ॥

ಪೂ. ಹುಚ್ಚರಿಗೆ ಕಿವಿಗಳೂ ಇಲ್ಲವೆಂದು ಈಗ ನನಗೆ ಗೊತ್ತಾಯಿತು.

ರಾ. ಬುದ್ಧಿವಂತರಿಗೆ ಕಣ್ಣುಗಳೇ ಇಲ್ಲದಮೇಲೆ, ಹುಚ್ಚರಿಗೆ ಕಿವಿಗಳು ಹ್ಯಾಗಿರುವವು?

ಪೂ. ನಿನ್ನ ಸಂಗತಿಗಳನ್ನು ಚೆನ್ನಾಗಿ ಚರ್ಚಿಸಿ ನೋಡೋಣ.

ರಾ. ತಮಗೆ ಅನುಭವವಿಲ್ಲದ ವಿಷಯಗಳನ್ನು ಕುರಿತು ಹ್ಯಾಗೆ ಮಾತಾಡುವಿರಿ? ನನ್ನಂತೆ ಯೌವನಸ್ಥರಾಗಿಯೂ, ಸ್ವಲ್ಪಕಾಲಕ್ಕೆ ಮುಂಚೆ ಲೀಲಾವತಿ ಯಂಥಾವಳನ್ನು ಮದುವೆಯಾಗಿದ್ದು, ತ್ರೈವಿಕ್ರಮನೂ ಸಂಹೃತನಾಗಿದ್ದು, ನನ್ನಂತೆ ಅವಳಲ್ಲಿ ಪ್ರಾಣವೆಲ್ಲಾ ಇದ್ದು, ದೇಶಭ್ರಷ್ಟರಾಗಿದ್ದರೆ, ಆಗ್ಗೆ ಮಾತನಾಡುತ್ತಿದ್ದಿರಿ; ಮತ್ತು ಈಗ ನಾನು ಮಾಡುವಂತೆ ಕೂದಲು ಕಿತ್ತಿಕೊಂಡು ಅಳುತ್ತಾ ನೆಲದಮೇಲೆ ಬಿದ್ದು, ಸ್ಮಶಾನ ದೃಷ್ಟಿಯುಳ್ಳವರಾಗಿರುತ್ತಿದ್ದಿರಿ.

ಪೂ. ಏಳು ಏಳು, ಯಾರೋ ಬಾಗಿಲಿನಲ್ಲಿ ಸದ್ದು ಮಾಡುವರು, ಏಳೈ ರಾಮವರ್ಮನೆ ಮರೆ ಯಾಗು; (ಸದ್ದಾಗುವದು).

ರಾ. ನಾನು ಚಲಿಸುವದಿಲ್ಲ,

ಕಂ ॥ ಅಸಹಾತ್ಮ ವ್ಯಸನಾನಲ । ದೆ ಸಕದಿ ನೊಗೆದೊಡನೆ ಮುಖದೆ ಪೊರ
ಪೊಣ್ಮುವನಿ ॥ ಟ್ಟುಸುರೆಲರೆಂಬೀ ಪೊಗೆ ತಾ । ನಸವಸದಿಂ ಮುಸುಕಿ
ತೆನ್ನ ಸಕಲಾಂಗಕಮಂ । ೨೦ ॥ (ತೆರೆಯಲ್ಲಿ ಸದ್ದಾಗುವದು).

ಪೂ. ಸದ್ದಾಗುವದು ಕೇಳು! ಯಾರಲ್ಲಿ? ರಾಮವರ್ಮನೆ ಏಳು; ನಿನ್ನನ್ನು ಹಿಡಿದು ಕೊಂಡು ಹೋಗುತ್ತಾರೆ, ಸ್ವಲ್ಪ ತಾಳು ನಿಂತುಕೋ? (ಸದ್ದಾಗುವದು) ನನ್ನ ಆನ್ಹಿಕದ ಸ್ಥಳಕ್ಕೆ ಹೋಗು, ಇದೋ ಬಂದೆ, ದೇವರ ಚಿತ್ತದಲ್ಲಿದ್ದದ್ದು ಆಗಲಿ; ಇದೇನು ಮೂರ್ಖತನ!

(ತೆರೆಯಲ್ಲಿ ಸದ್ದಾಗುವದು).

ಬಂದೆ, ಬಂದೆ, ಯಾರು ಅಷ್ಟುಘಟ್ಟಿಯಾಗಿ ಬಾಗಿಲನ್ನು ತಟ್ಟಿ ವರು: ಎಲ್ಲಿಂದ ಬಂದೆ? ಯಾರು ನೀನು? ಯಾತಕ್ಕೆ?

ಧಾ. (ಬಳಗಿನಿಂದ) ಬಾಗಿಲನ್ನು ತೆಗೆಯಿರಿ, ಆಮೇಲೆ ಹೇಳುತ್ತೇನೆ; ನಾನು ಲೀಲಾವತಿಯ ಸಮೀಪದಿಂದ ಬಂದು ಇರುತ್ತೇನೆ.

ಪೂ. ಹಾಗಾದರೆ, ಶುಭಾಗಮನವು.

(ಧಾತ್ರಿ ಪ್ರವೇಶಿಸುವಳು.)

ಧಾ. ಸ್ವಾಮಿ ಪೂಜ್ಯರೆ, ಅಯ್ಯಾ ಬೇಗಹೇಳಿ, ನನ್ನ ಲೀಲಾವತಿಯ ಗಂಡನಾದ ರಾಮವರ್ಮನು, ಎಲ್ಲಿರುವನು?

ಪೂ. ಅದೋ ಅಲ್ಲಿ ನೇತ್ರೋದಕ ಪ್ರವಾಹದಲ್ಲಿ, ಹೊರಳುತ್ತಾ ಬಿದ್ದಿ ರುವನು ನೋಡು.

ಧಾ. ಆಹಾ! ಈತನು ನನ್ನ ಸಖಿಯ ವಿಷಯದಲ್ಲಿ, ಅಕೃತ್ರಿಮ ಪ್ರೀತಿಯುಳ್ಳವನು, ವಂಚಕನಲ್ಲ.

ಪೂ. ಹಾ ಕಷ್ಟವೆ! ಇದೇನು ಸಂಭವಿಸಿತು!

ಧಾ. ಅವಳೂ ಹೀಗೆಯೇ ಅಳುತ್ತಾ, ಕೊರಗುತ್ತಾ ಬಿದ್ದು ಇರು ವಳು; ರಾಮವರ್ಮನೆ ನೀನು ಗಂಡಸಲ್ಲವೆ? ಏಳು, ಏಳು, ಲೀಲಾವತಿ ಗೋಸ್ಕರಲಾದರೂ ಏಳು; ಹಾ ಹಾ, ನೀನು ಇಂಥಾ ಕಷ್ಟಕ್ಕೆ ಗುರಿ ಯಾಗಬಹುದೆ?

ರಾ. ಧಾತ್ರಿಯೆ!

ಧಾ. ಅಯ್ಯಾ ಮರಣವೆ ಸಕಲಕ್ಕೂ ಕೊನೆ.

ರಾ. ಲೀಲಾವತಿಯೊಡನೆ ಮಾತನಾಡಿದೆಯೋ? ಅವಳು ಹ್ಯಾಗಿರುವಳು? ಮದುವೆಯಾದ ಸಂತೋಷದ ಬಾಲ್ಯದಲ್ಲಿಯೇ, ತನ್ನ ಸಮೀಪ ಬಂಧುವಾದವನನ್ನು ಕೊಂದ, ಘಾತುಕನೆಂದು ತಿಳಿದಿರುವಳೋ? ಎಲ್ಲಿರುವಳು? ಹ್ಯಾಗಿರುವಳು? ಏನು ಹೇಳಿದಳು?

ಧಾ. ಏನನ್ನೂ ಹೇಳುವದಿಲ್ಲ,

ವೃ ॥ ನೆಲದೊಳ್ಧಪ್ಪನೆ ಬೀಳ್ದುತಾಳ್ದು ಭಯಮಂ ಬಿಟ್ಟೊಂದ್ಮೆನಿಃಶ್ವಾಸಮಂ। ಬಳಿಕಂ ತೊಟ್ಟನೆ ನಿಟ್ಟಿಸಳ್ ಮರುಗುವಳ್ ಹಾ ಬಂಧುವೆಂದೊರ್ಮೆಸಂ ॥ ಬಲಿಸಳ್ ಥಟ್ಟನೆ ನೆಟ್ಟನೆದ್ದು ಪದವಂ ಮುಂದಿಟ್ಟು ಕಟ್ಟುಬ್ಬಸಂ। ದಳಿವಳ್ ಹಾ ಪ್ರಿಯ ರಾಮವರ್ಮ ನೆನುತಾಗಳ್ಮೂರ್ಛೆಯಂ ಪೊಂದುವಳ್ ॥ ೬೧ ॥

ರಾ. ಆಹೆಸರೆಂಬ, ಬಂದೂಕಿನಿಂದ ಹೊಡೆದ ಸೀಸವು ತಗುಲಿದಂತೆ, ಕೊರಗಿ ಬೀಳುವಳೋ? ಆ ಕೆಟ್ಟ ಹೆಸರುಳ್ಳವನ ಕೈಗಳಿಂದ, ತನ್ನ ಮಾವನು ಹತನಾದನೆಂತಲೂ ಬೀಳುವಳೋ? ಪೂಜ್ಯರೆ, ನನ್ನ ಈ ನೀಚಶರೀರದ ಯಾವಪ್ರದೇಶದಲ್ಲಿ, ಆ ಹೆಸರಿರುವದು ಹೇಳಿ, ನಾನು ಅದನ್ನು, ಈಗಲೇ ದೇಹದಿಂದ ಕಿತ್ತಿ ಹೊರಗೆ ಹಾಕುವೆನು. (ಕತ್ತಿಯನ್ನು ಸೆಳೆವನು.)

ಪೂ. ನಿನ್ನ ಕ್ರೂರಕೃತ್ಯದ ಕೈಗಳನ್ನು ತಡೆ; ನಿನ್ನ ಆಕಾರವು ಪುರುಷನೆಂದು ಸೂಚಿಸುವದು, ನಿನ್ನ ಚಿಂತಾಕ್ರಾಂತ ಭಾವವಾದರೋ, ನೀನು ಸ್ತ್ರೀಸ್ವಭಾವ ಉಳ್ಳವನೆಂದು, ಹೇಳುವದು. ಈ ಕ್ರೂರಕೃತ್ಯ ಮಾನಸವು ಘಾತುಕ ಮೃಗಜಾತಿ ರೀತಿಯನ್ನು ತೋರ್ಪಡಿಸುವದು;

॥ ರಾಗ—ಹುಸೇನಿ ॥ ಚಾಪುತಾಳ ॥

* ಹೇಳುಧಾತ್ರಿಯೇ। ನೀನೀಗ ॥ ಪ ॥ ಎಂತಿಹಳೆನ್ನ। ಕಾಂತೆ ಶೋಕಾ। ಕ್ರಾಂತೆಯಾದಳೊ ॥ ಅಂತರಂಗದೊಳು। ಪಂತವಾಂತಳೊ। ಮಂತುವಾನುತಲಿ। ಮುಗುದೆಪೇಳಿದುದ ॥ ೧ ॥ ಅರಸಿಯ ನೋಡಿ ನೀ। ನೊರೆದೆ ಯೇನನೇ। ತೆರದಿಂದ ಲಿರ್ಪಳೊ। ವರಿಸಿದೊಡನೆಬಂಧು। ವರನನ್ನು ಕೊಂದ। ದುರುಳನೆಂದು ಪರಿ। ಪರಿಯಯೋಚಿಪಳೋ॥ ದೀನೆಯಾಗುತೆಲ್ಲಿ। ಮಾಸಿನಿ ಇಹಳೆಂತು। ಏನೆಂದುಹೇಳಿದಳೊ ॥ ಸ್ವಾನುರಾಗದಮಾತ। ತಾನಾಡಿದಳೇನೋ। ಧ್ಯಾನಿಸುತ್ತಲನು। ಮಾನವನಾಂತಳೊ ॥ ೩ ॥

ಆದ್ದರಿಂದ ನೀನು ಎಂಥಾವನೊ ಕಾಣೆ! ಎಲೈ ಪುರುಷನಂತೆ ಕಾಣುವ ಹೆಂಗಸೆ! ಮನುಷ್ಯಜಾತಿಯಂತೆ ಕಾಣಿಸುವ ಮೃಗವೆ; ನೀನು ನನ್ನನ್ನು ಬಹಳವಾಗಿ ಆಶ್ಚರ್ಯಪಡಿಸಿ ಸ್ತಂಭೀಭೂತನನ್ನಾಗಿ ಮಾಡಿರುವೆ! ಸತ್ಯವಾಗಿಯು ನೀನು ಬುದ್ಧಿಶಾಲಿಯು, ಗುಣಾಢ್ಯನು, ಧೀರನು, ಎಂದು ತಿಳಿದು ಇದ್ದೆನು. ತ್ರೈವಿಕ್ರಮನನ್ನು ಕೊಂದು ಈಗ ಆತ್ಮಹತ್ಯವನ್ನು ಮಾಡಿಕೊಳ್ಳುತ್ತೀಯ್ಯೋ! ಹೀಗೆ ಮಾಡಿದರೆ, ನೀನೇ ಪ್ರಾಣವೆಂದು ನಂಬಿರತಕ್ಕ ನಿನ್ನ ಹೆಂಡತಿಯನ್ನು ಈ ಕೃತ್ಯದಿಂದ ನಿಜವಾಗಿ ನೀನೇ ಕೊಲ್ಲುವೆಯೋ? ಎಲೆ ಕ್ರೂರಾತ್ಮನೆ! ನಿನ್ನ ವಂಶವನ್ನು, ಈ ಲೋಕವನ್ನು, ದೇವರನ್ನು, ಯಾತಕ್ಕೆ ದೂಷಿಸುವೆ? ಬಿಡು ಬಿಡು, ನಿನ್ನ ರೂಪಕ್ಕೂ, ಬುದ್ಧಿಗೂ, ಅನುರಾಗಕ್ಕೂ, ಲಜ್ಜಾವಹವಾಗುವದು.

ಕಂ ॥ ಕೃಪಣಂ ತನ್ನೆಡೆಯೊಳಗಿಹ । ವಿಪುಲ ಧನಂಗಳನದೆಂತು ತೋರಿಸ ನದರೋಲ್ ॥ ಚಪಲಾತ್ಮನೆ ನಿನ್ನಲ್ಲಿರು । ವಪಾರ ದುರ್ಗುಣದೊಳನಿಸುವಂ ತೋರದಿರಾ ॥ ೬ ॥

ನಿನ್ನ ಆಕಾರವು ಲೋಕ ಮನೋಹರವಾಗಿದ್ದರೂ, ಅದಕ್ಕೆ ತಕ್ಕ ಧೈರ್ಯವಿಲ್ಲದ್ದರಿಂದ, ಇದು ಮೇಣದ ಗೊಂಬೆಯಂತಲೇ ಹೇಳಬೇಕು. ನೀನು ಸಂರಕ್ಷಿಸುವಂತೆ ಪ್ರತಿಜ್ಞೆಯನ್ನು ಮಾಡಿ ಕೊಟ್ಟಿರುವವಳು ಸಾಯುವಂತೆ ಮಾಡಿರುವೆ. ಆದ್ದರಿಂದ ನಿನ್ನ ಅನುರಾಗಪ್ರತಿಜ್ಞೆಯು ಸುಳ್ಳು. ಆಕೃತಿಗೂ ಅನುರಾಗಕ್ಕೂ ಭೂಷಣಪ್ರಾಯವಾದ ಬುದ್ಧಿಯನ್ನು, ತದುಪಯೋಗವನ್ನು, ಸಮಯಾ ಸಮಯವರಿತು ಮಾಡೋಣವನ್ನೂ ನೀನು ಕಾಣೆ. ಅಚತುರನಾದ ವ್ಯಾಧನಿಗೆ ತನ್ನ ಕೈಯಲ್ಲಿರುವ ಬಿಲ್ಲಿನಿಂದಲೇ ಅಪಾಯವು ಸಂಭವಿಸಿದಂತೆ, ನಿನ್ನ ಮೌಢ್ಯವೆಂಬ ಬೆಂಕಿಯಿಂದಲೇ ನಿನಗೆ ನಾಶ ಉಂಟಾಗುವದು. ಏಳು ಏಳು, ಧೈರ್ಯಶಾಲಿಯಾಗು, ಯಾರಿಗೋಸ್ಕರ ಸಾಯುವದಕ್ಕೆ ನೀನು ಸಿದ್ಧನಾಗಿದ್ದೆಯೋ, ಆ ಲೀಲಾವತಿಯು ಬದುಕಿರುವಳು. ಈ ವಿಷಯದಲ್ಲಿ ನೀನು ಪುಣ್ಯಶಾಲಿ; ನಿನ್ನನ್ನು ಕೊಲ್ಲಬೇಕೆಂದು ಇದ್ದ ತ್ರೈವಿಕ್ರಮನನ್ನು ನೀನೇ ಸಂಹರಿಸಿದೆ. ಅದರಲ್ಲಿಯೂ ನೀನೆ ಅದೃಷ್ಟಶಾಲಿಯು!! ನೀನು ಮಾಡಿದ ದುಷ್ಕಾರ್ಯಕ್ಕಾಗಿ

ನಿನಗೆ ಮರಣ ದಂಡನೆಯನ್ನು ವಿಧಿಸಬೇಕಾಗಿದ್ದ ಧರ್ಮಶಾಸ್ತ್ರವು, ಪುಣ್ಯದಿಂದ ದೇಶಭ್ರಷ್ಟತ್ವ ದಂಡನಾರೂಪವಾಗಿ ಪರಿಣಮಿಸಿತು. ಇದರಲ್ಲಿಯೂ ನೀನು ಪುಣ್ಯವಂತನು. ಅದೃಷ್ಟ ಪರಂಪರೆಯು ನಿನಗೆ ಕೈಗೂಡಿರುವದು, ಸುಖವೇ ಕಾದಿರುವದು. ಹೀಗೆ ಇರುವಾಗ್ಗ್ಯೆ, ನೀಚ ಸ್ವಭಾವವುಳ್ಳ ಹೆಂಗಸು, ಯಾವರೀತಿಯಾಗಿ ದೇವರು ಕೊಟ್ಟ ಸದ್ಗುಣಗಳನ್ನು ದುರುಪಯೋಗ ಪಡಿಸುವಳೋ, ಹಾಗೆ ನೀನು ನಿನ್ನ ಅದೃಷ್ಟವನ್ನು ಅನುರಾಗವನ್ನೂ ದೂಷಿಸುವೆ; ಇಂಥಾವರು ಕಷ್ಟವಾದ ಸಾವಿಗೆ ಗುರಿಯಾಗುತ್ತಾರೆ, ಚೆನ್ನಾಗಿ ತಿಳಿ; ಮೊದಲು ನೀನು ಆಲೋಚಿಸಿರುವಂತೆ ಹೋಗಿ, ಮಹಡಿಯ ಮೇಲೆ ಹತ್ತಿ, ನಿನ್ನ ಪ್ರಿಯಳನ್ನು ನೋಡಿ, ಸಮಾಧಾನಪಡಿಸು; ಹೋಗು, ಆದರೆ ಜಾಗರೂಕತೆಯಿಂದಿರು; ನಿನ್ನನ್ನು ಹಿಡಿಯುವದಕ್ಕೆ ಜನಗಳನ್ನು ಇಟ್ಟಿದ್ದಾರು, ಆಮೇಲೆ ಇಲ್ಲಿಂದ ಹೋಗಲು ಆಗಲಾರದು, ಆದ್ದರಿಂದ ಜಾಗ್ರತೆ ಮಾಡು; ಮಾಹಿಷ್ಮತೀ ಪಟ್ಟಣಕ್ಕೆ ಹೋಗಿ, ನಾವು ಇಲ್ಲಿ ಸಮಯವನ್ನು ನಿರೀಕ್ಷಿಸಿ, ನಿನ್ನ ವಿವಾಹವನ್ನು ಪ್ರಸಿದ್ಧಿಪಡಿಸಿ, ಎಲ್ಲರಿಗೂ ಸಮಾಧಾನಪಡಿಸಿ, ಮಹಾರಾಜನ ಕ್ಷಮಾಪಣೆಯನ್ನು ಪಡೆದು, ನಿನ್ನನ್ನು ಕರೆ ಕಳುಹಿಸುವ ವರಿಗೂ, ಅಲ್ಲಿಯೇ ಇರು; ಆಗ ನೀನು, ಈಗ ವಿಷ್ಟು ವ್ಯಸನದಿಂದ ಹೋಗುತ್ತೀಯೋ, ಅದಕ್ಕಿಂತಲೂ ಇಪ್ಪತ್ತು ಸಾವಿರದಷ್ಟು ಹೆಚ್ಚಾದ ಸಂತೋಷದಿಂದ, ಬರುವನಾಗುತ್ತೀಯೆ; ಧಾತ್ರಿಯೆ ನೀನು ಮುಂದಾಗಿ ಹೋಗಿ ಲೀಲಾವತಿಗೆ ತಿಳುಹಿಸಿ, ಎಲ್ಲರೂ ಬೇಗ ಮಲಗುವಂತೆ ಮಾಡೆಂದು ಹೇಳು; ಇದು ಕಷ್ಟವಲ್ಲ, ದುಃಖಿತರಿಗೆ ನಿದ್ರೆ ಬೇಗ ವಶವಾಗುವದು; ರಾಮವರ್ಮನೂ ಬರುವನು.

ಧಾ. ತಮ್ಮ ಉತ್ಕೃಷ್ಟವಾದ ಮಾತುಗಳನ್ನು ಕೇಳುತ್ತಾ, ಈ ರಾತ್ರಿಎಲ್ಲಾ ಇಲ್ಲಿಯೆ ಇರಬಹುದಾಗಿದೆ. ತಮ್ಮ ವೈದುಷ್ಯವು ಅಸದೃಶವಾದ್ದು, ಎಲೈ ರಾಮವರ್ಮನೆ, ನೀನು ಬರುವನೆಂದು ನನ್ನ ಚಿಕ್ಕ ಯಜಮಾನಿತಿಗೆ ಹೇಳುತ್ತೇನೆ.

ರಾ. ಹಾಗೆಯೇಮಾಡು, ನನ್ನನ್ನು ಶಿಕ್ಷಿಸುವದಕ್ಕೆ ಸಿದ್ಧಳಾಗಿರೆಂದು ನನ್ನ ಪ್ರಾಣಕಾಂತೆಗೆ ಹೇಳು.

ಧಾ. ಇದೋ ಆಕೆಯು ನಿನಗೆ ಈ ಉಂಗುರವನ್ನು ಕೊಟ್ಟಿರುವಳು; ಹೊತ್ತಾಯಿತು, ಜಾಗ್ರತೆಯನ್ನು ಮಾಡು. (ಹೋಗುವಳು).

ರಾ. * ಇದರಿಂದ ನನಗೆ ಬಹು ಸಮಾಧಾನವು ಉಂಟಾಯಿತು.*

ಪೂ. ಹೋಗು ನಿನಗೆ ಶುಭವಾಗಲಿ; ಕಾವಲನ್ನು ಇಡುವದಕ್ಕೆ ಮುಂಚೆಯೇ ಇಲ್ಲಿಂದ ಹೋಗು, ಅಥವಾ ಬೆಳಗಾಗುವದಕ್ಕೆ ಮುಂಚಿತವಾಗಿ, ವೇಷಾಂತರವನ್ನು ಮಾಡಿಕೊಂಡಾದರೂ ಹೋಗು; ಮಾಹಿಷ್ಮತೀ ಪುರದಲ್ಲಿ ಇರು, ನಿನ್ನ ಸೇವಕನ ಮುಖಾಂತರವಾಗಿ ನಿನಗೆ ಅನುಕೂಲವಾಗಿ, ಇಲ್ಲಿ ನಡೆಯುವದನ್ನೆಲ್ಲಾ, ಆಗಾಗ್ಗೆ ಹೇಳಿ ಕಳುಹಿಸುತ್ತಿರುವೆನು; ತಲೆಯನ್ನು ಬಾಗಿಸು, ನಿನಗೆ ಕ್ಷೇಮವಾಗಲಿ, ಹೊತ್ತಾಯಿತು ಹೋಗು.

ರಾ. ಕಂ ॥ ಗುರುವರ್ಯ ನಿಮ್ಮ ನುಳಿವಾಂ । ತ್ವರೆಗೊಳ್ಳುತೆ ಪೋಗೆ
ಮನವು ಬಾರದುಮೇಣಾ ॥ ತರುಣೀಮಣಿ ಯನುರಾಗಂ । ಬರಸೆ
ಳೆಯುತ್ತಿರುವದೆನ್ನನೀಗಳೆಬೇಗಂ ॥ ೨೩ ॥

(ಹೋಗುವನು).

ಚ ತು ರ್ಥ ಸ್ಥಾ ನ ೦—ಕಾಪಿಲನ ಮನೆಯಲ್ಲಿ ಒಂದು ಕೋಣೆ.

(ಕಾಪಿಲ, ಅವನ ಹೆಂಡತಿ, ಮತ್ತು ಪೇಶಲಾಂಗ, ಇವರು ಪ್ರವೇಶಿಸುವರು.)

ಕಾ. ಈಗ ನಡೆದ ಅನಾಹುತಗಳಿಂದ ನಮ್ಮ ಮಗಳನ್ನು ಕೇಳುವದಕ್ಕೆ ಆಗಲಿಲ್ಲ. ಕೇಳಯ್ಯ, ತ್ರಿವಿಕ್ರಮನನ್ನು ನನ್ನಂತೆ ಬಹಳವಾಗಿ ಪ್ರೀತಿಸುತ್ತಿದ್ದಳು; ಮಾಡತಕ್ಕದ್ದೇನು? ನಾವೆಲ್ಲರೂ ಒಂದುದಿನ ಸಾಯಲೇಬೇಕು; ಈಗ ಬಹಳಹೊತ್ತಾಯಿತು, ಆಕೆಯು ಇನ್ನು ಕೆಳಕ್ಕೆ ಬರುವದೆ

॥ ರಾಗ—ನಾದನಾಮಕ್ರಿಯ ॥ ಮಿಶ್ರಛಾಪು ॥ (ಹಾ ರಮಣಿ ಸೈರಿಸುವೆನೆಂ)

* ಮುದ್ರಿಕೆಯೆ । ಭದ್ರಾಂಕವಾಗಿರುವ ॥ ಪ ॥ ಪರಮಪಾತಕಿನಾನು । ವಿರಹಿತನಾದೆಂತೆ । ತರುಣೀ ಮಣಿಯ । ಬೆರಳನು ತೊರೆದ ॥ ೧ ॥ ಇಂದುಮುಖಿಯನಾ । ನಿಂದು ನೋಡಿದೊಲಾ । ನಂದ ವಿತ್ತ । ಸುಂದರಾಕಾರ ॥ ೨ ॥ ಮನದನ್ನೆಯಪಾಣಿ । ವನಜಾತದನುವಾಗ । ವನುಸೇ ರ್ದ್ದವರಿಂ । ಮಿನುಗುತ್ತಿರುವ ॥ ೩ ॥

ಇಲ್ಲ; ನೀನು ಬಾರದೇ ಇದ್ದರೆ ಇದುವರಿಗೆ ನಾನು ಮಲಗಿಕ್ಕೊಂಡು ಸ್ವಲ್ಪ ಹೊತ್ತಾಗುತ್ತಿತ್ತು.

ಪೇ. ಈ ವ್ಯಸನಕಾಲದಲ್ಲಿ ಆಕೆಯ ಮನೋಗತವನ್ನು ತಿಳಿಯುವದು ಹ್ಯಾಗೆ? ನಾನು ಹೋಗಿ ಬರುತ್ತೇನೆ, ತಾಯೇ ನಿಮ್ಮ ಮಗಳಿಗೆ ತಿಳುಹಿಸಿ.

ಲಲಿ. ಕಂ ‖ ಕೊನೆಗಾಣದಂತೆ ಲಭಿಸಿದ । ಘನತರ ಶೋಕಾಂಬುರಾ
ಶಿಯೊಳ್ಮುಳುಗಿರುವಾ ‖ ತನುಜೆಯೆಡಗೈದಿ ಪರಿಣಯ । ದನುವಂ
ಪೇಳುವದದೆಂತೊ ತಿಳಿಯದದೀಗಳ್ ‖ ೭೪ ‖

ಅವಳಿಷ್ಟವನ್ನು ಬೆಳಗ್ಗೆ ತಿಳಿಯುತ್ತೇನೆ.

ಕಾ. ಅಯ್ಯಾ ಪೇಶಲಾಂಗನೆ, ಕೇಳು, ನನ್ನ ಮಗಳ ಅನುರಾಗವಿಷಯದಲ್ಲಿ ಅಧೈರ್ಯ ಪಡಬೇಡ; ನಾನು ವಾಗ್ದಾನವನ್ನು ಮಾಡುತ್ತೇನೆ. ನಾನು ಹೇಳಿದಂತೆ ಸಮಸ್ತ ವಿಷಯಗಳಲ್ಲಿಯೂ ಕೇಳುವಳು; ನನಗೆ ಸಂದೇಹವೇ ಇಲ್ಲ. ಎಲೆ ಪ್ರಾಣಕಾಂತೆ, ನೀನು ಮಲಗುವದಕ್ಕೆ ಮೊದಲು, ಅವಳಬಳಿಗೆ ಹೋಗಿ ಪೇಶಲಾಂಗನ ಅಭಿಲಾಷೆಯನ್ನು ಲೀಲಾವತಿಗೆ ತಿಳಿಹಿಸು. ಬರುವ ಬುಧವಾರದ ದಿನವೆ ಆಕೆಯನ್ನು,—ತಾಳು ತಾಳು, ಈ ಹೊತ್ತು ಯಾವವಾರ?

ಪೇ. ಪೂಜ್ಯರೆ, ಸೋಮವಾರ.

ಕಾ. ಹಾ ಹಾ! ಸೋಮವಾರವೂ! ಆದರೆ, ಬುಧವಾರ ಬಹಳ ಸಮೀಪವಾಯಿತು, ಗುರುವಾರವಾಗಲಿ; ಗುರುವಾರವೆ ಮದುವೆ ಆಗುವದೆಂದು ಅವಳಿಗೆ ಹೇಳು; ಏನಯ್ಯಾ, ನಿನಗೆ ಅನುಕೂಲವೊ? ಈ ತ್ವರ್‍ಯವು ನಿನಗೆ ಇಷ್ಟವೊ? ಸಾಧಾರಣವಾಗಿ ನಮಗೆ ಬೇಕಾದ ಬಬ್ಬರಿಬ್ಬರನ್ನು ಕರೆದು, ವಿವಾಹವನ್ನು ಜರುಗಿಸೋಣ. ಇಲ್ಲದೆ ಕೇವಲೋತ್ಸಾಹದೊಡನೆ ಬೆಳೆಸಿದರೆ, ಈಗಲೇ ತ್ರೈವಿಕ್ರಮನು ಮೃತನಾಗಿರುವದ್ದರಿಂದ, ನಮಗೆ ಅವನಲ್ಲಿ ವಿಶ್ವಾಸವಿಲ್ಲವೆಂದು ಭಾವಿಸುವರು; ಆದ್ದರಿಂದ ಐದು ಆರು ಜನ ಸ್ನೇಹಿತರುಗಳನ್ನು ಕರೆದೇ, ಎಲ್ಲವನ್ನೂ ಮುಗಿಸಿಬಿಡೋಣ. ಗುರುವಾರವಾಗ ಬಹುದೋ?

ಪೇ. ಜೀಯ್ಯಾ, ಗುರುವಾರವು ನಾಳೆಯೇ ಆಗಿರಬಾರದೆ ಎಂದು ಅಪೇಕ್ಷಿಸುತ್ತೇನೆ.

ಕಾ. ಆದರೆ ನೀನು ದಯಮಾಡು ; ಗುರುವಾರವೆ ಆಗಲಿ. ಪತ್ನಿಯೆ, ನೀನು ಮಲಗುವದಕ್ಕೆ ಮುಂಚೆಯೇ, ಲೀಲಾವತಿಯ ಬಳಿಗೆ ಹೋಗಿ, ಈ ಮದುವೆಗೆ ಸಿದ್ಧಳಾಗೆಂದು ಹೇಳು. ನಿನಗೆ ಶುಭವಾಗಲಯ್ಯಾ ; ನನ್ನ ಕಿರುಮನೆಗೆ ಬಂದು ದೀಪವನ್ನು ತೆಗೆದುಕೊಂಡು ಬಾ ; ಎಷ್ಟು ಹೊತ್ತಾಯಿತು ? ಬೆಳಗಾಯಿತೆಂತಲೇ ಹೇಳಬಹುದು.

(ಹೋಗುವರು).

ಪಂಚಮಸ್ಥಾನಂ—ಶಯ್ಯಾಗೃಹ.

(ರಾಮವರ್ಮ ಲೀಲಾವತಿಯರು ಪ್ರವೇಶಿಸುವರು.)

ಲೀ. ಹೋಗುವೆಯೊ ? ಇನ್ನೂ ಬೆಳಗಾಗುವದಕ್ಕೆ ತುಂಬಾ ಹೊತ್ತಿರುವದು. ಈಗ ಕರ್ಣ ಕಠೋರವಾಗಿ ಕೇಳಿದ ಈ ಧ್ವನಿಯು ಪ್ರಿಯಗೀತಪಕ್ಷಿಯ ಧ್ವನಿಯಲ್ಲದೆ, ಭರದ್ವಾಜಪಕ್ಷಿಯ ಧ್ವನಿಯಲ್ಲ ; ಪ್ರತಿರಾತ್ರಿಯಲ್ಲಿಯೂ, ಪ್ರಿಯಗೀತಪಕ್ಷಿಯು ದೂರದಲ್ಲಿ ಕಾಣಿಸುವ ದಾಳಿಂಬದ ಗಿಡದ ಮೇಲೆ ಕುಳಿತು, ಗಾನ ಮಾಡುವದು ; ಪ್ರಿಯನೆ ನಂಬು, ಈ ಧ್ವನಿಯು ಪ್ರಿಯಗೀತಪಕ್ಷಿಯ ಧ್ವನಿಯೇ.

ರಾ. ಪ್ರಿಯೆ, ಇದು ಪ್ರಾತಃಕಾಲ ಸೂಚಕವಾದ, ಭಾರಧ್ವಾಜ ಪಕ್ಷಿಯ ಧ್ವನಿಯಲ್ಲದೆ, ಪ್ರಿಯಗೀತಧ್ವನಿಯಲ್ಲ ; ಪ್ರಿಯಳೆ, ನೋಡು, * ಹಗೆಯಾದ ಬೆಳಕು, ಪೂರ್ವದಿಕ್ಕಿನಲ್ಲಿ ಚಲಿಸುತ್ತಿರುವ ಮೇಘಗಳನ್ನು, ಬೆಳು

‖ ರಾಗ—ಯಮುನಾ ‖ ಆದಿತಾಳ ‖　　　　(ಸಖನೊಳಗಾಸೆ)

*ಮೂಡುವದಿತ್ತ । ನೋಡುತಿರುಗುತ್ತ ‖ ಪ ‖ ಮೂಡಲೊಳಾರಾಗ । ಗೂಡಿದಕಲೆಯು ‖ ಅ ‖ ಸ್ವಾರಾಜದಿಶೆಯೊಳು । ತೋರುತಲಿರುವಾ । ವಾರಿದಂಗಳಿಗಿತ್ತು । ಗಾರತೆಯನ್ನು ‖ ೧ ‖ ಕ್ಷಣದೆಯುಪೋಪುದು । ಮಣಿಸಾನುಕೂಟದೊಳ್ । ಅಣಿಯರದಿಂದಲಿ । ಹಣಿಕಿನೋಡುತ್ತ ‖ ೨ ‖

ಪಾಗಿ ಮಾಡುತ್ತಿರುವದು ; ರಾತ್ರಿಯು ತೀರುತ್ತಾ ಬಂದು, ಕಾಂತಿಮಯ ವಾದ ದಿನವು, ಮಂಜಿನಿಂದ ಕೂಡಿರುವ ಪರ್ವತಗಳಮೇಲೆ ಹಿಣಿಕಿ ನೋಡುತ್ತಿರುವದು. * ಎಲೆ ಪ್ರಾಣಪ್ರಿಯೆ, ನಾನು ಬದುಕಿರಬೇಕಾಗಿ ಇದ್ದರೆ ಈಗಲೇ ಇಲ್ಲಿಂದ ಹೋಗಬೇಕು ; ಇಲ್ಲವೆ ಇಲ್ಲಿಯೇ ನಿಂತಿದ್ದು ಸಾಯಬೇಕು.

ಲೀ. ಅಲ್ಲಿ ದೂರದಲ್ಲಿ ಕಾಣುವ ಬೆಳಕು ಅರುಣೋದಯವುದ್ದು ಅಲ್ಲ ನಾನು ಬಲ್ಲೆನು ; ನೀನು ಈ ರಾತ್ರೆ, ಇಲ್ಲಿಂದ ಮಾಹಿಷ್ಮತೀ ಪಟ್ಟಣಕ್ಕೆ ಹೋಗುವಾಗ್ಗೆ, ನಿನ್ನ ದಾರಿಯಲ್ಲಿ ಬೆಳಕು ಮಾಡುವದಕ್ಕಾಗಿ, ಸೂರ್ಯನು ಮುಂದಾಗಿ ಕಳುಹಿಸಿ ಇರುವ, ಧೂಮಕೇತುವಿನ ಬೆಳಕು. † ಆದ್ದರಿಂದ ಈಗಲೇ ಹೋಗತಕ್ಕದ್ದು ಅವಶ್ಯಕವಿಲ್ಲ, ಸ್ವಲ್ಪ ಹೊತ್ತು ಇರು. †

ರಾ. ಪ್ರಿಯೆ, ನಿನ್ನ ಇಷ್ಟಾನುಸಾರವಾಗಿ ಇಲ್ಲಯೇ ಇರುತ್ತೇನೆ ; ನನ್ನನ್ನು ಹಿಡಿದುಕೊಂಡು ಸಂಹರಿಸಲಿ ; ಅಲ್ಲಿ ಕಾಣಿಸುವದು ಬೆಳಕಲ್ಲವೆಂತಲೂ, ಆಧ್ವನಿಯು ಭರದ್ವಾಜ ಪಕ್ಷಿಯ ದಲ್ಲವೆಂತಲೂ, ಹೇಳುತ್ತೇನೆ. ಹೋಗುವದಕ್ಕಿಂತಲೂ ಇಲ್ಲಿ ಇರುವ ವಿಷಯದಲ್ಲಿ ನನಗೆ ಇಷ್ಟವೇಸರಿ ; ಲೀಲಾವತಿಯು ಆಜ್ಞೆಯನ್ನು ಕೊಡುವಳು ; ಮರಣವೆ ಬಾ, ಸಿದ್ಧನಾಗಿ ರುವೆನು. ಪ್ರಿಯಳೆ ಏನಪ್ಪಣೆ ? ಇನ್ನೂ ಬೆಳಗಾಗಲಿಲ್ಲ, ಬಾ, ಮಾತನಾಡೋಣ.

ಲೀ. ಹೌದು ! ಹೌದು ! ಬೇಗ ಹೋಗು ನಿಲ್ಲಬೇಡ ; ನನ್ನ ಕಿವಿಗೆ ಅತಿಕಠೋರವಾಗಿ ಕೇಳುವ ಧ್ವನಿಯು ಭರದ್ವಾಜದ್ದೇಸರಿ. ಕೆಲವರು

॥ ರಾಗ — ಕೇತಾರ ॥ ಚಾಪುತಾಳ ॥ (ಚಲಿನೇನೆಟ್ಲ ಸಹಿಂತುನೆ)

† ಈಗ । ಪೋಗುವದುಚಿತವೆ । ಎನ್ನ । ನೀಗುತ್ತ ಬೇಗದೊಳು ॥ ಪ ॥ ಕಡು । ಕೇಡಿಗಮೀನಾಂಕನ । ಶರ । ಕೀಡಾಗಿಬಾಡಿಕೈಯ । ಜೋಡಿಸುತ್ತ । ಪೇಡುವೆನು । ನೊಡದಿತ್ತ । ನೀನು ॥ ೧ ॥ ಪರಿ । ಭಾವಿಸು ಮಾನಸದಿ । ನಸು । ಸಾವಕಾಶವ ಮಾಡು । ಮುಂದೆ । ಕಾವರಾರು । ಜೀವಿತೇಶ । ಏವೆನಿನ್ನು । ನಾನು ॥ ೨ ॥ ಜಗ । ದಪ್ರತಿಮನೆ ನೀನು । ಬಹು । ಕ್ಷಿಪ್ರದಿಂದಲಿತೆರಳೆ । ಸು । ದೀಪ್ರಕಾಯ । ಹಾಪ್ರಿಯೇಶ । ವಿಪ್ರಯೋಗವ ॥ ಸೈವೆನೆ ॥ ೩ ॥

ಆ ಪಕ್ಷಿಯು ಬಹಳ ಮನೋಹರವಾಗಿ ಹಾಡುವದೆನ್ನುವರು ; ಇದು ಸುಳ್ಳು, ಯಾಕೆಂದರೆ, ಆ ಧ್ವನಿಯು ನಮ್ಮನ್ನು ಅಗಲಿಸಿ ನಿನ್ನನ್ನು ದೂರ ಹೋಗುವಂತೆ ಮಾಡಿತು ; ಬೇಗಹೋಗು, ಹೋಗು, ಬೆಳಕು ಹೆಚ್ಚಾಗುತ್ತಾ ಬಂತು.

ರಾ. ಬೆಳಕು ಹೆಚ್ಚು ಆದ ಹಾಗೆಲ್ಲಾ, ನಮ್ಮ ದುಃಖವು ಹೆಚ್ಚುವದು.

(ಧಾತ್ರಿಯು ಪ್ರವೇಶಿಸುವಳು.)

ಧಾ. ತಾಯೆ !

ಲೀ. ಧಾತ್ರಿ

ಧಾ. ಬೆಳಕು ಹರಿಯಿತು ; ನಿಮ್ಮ ತಾಯಿ ಇಲ್ಲಿಗೆ ಬರುವಳು, ಜಾಗರೂಕಳಾಗಿರು. (ಧಾತ್ರಿಯು ಹೋಗುತ್ತಾಳೆ.)

ಲೀ. ಆದರೆ ಗವಾಕ್ಷವೆ, ನನ್ನ ಪ್ರಾಣವನ್ನು ಹೊರಗೆ ತೆಗೆದುಕೊಂಡು, ಬೆಳಕನ್ನು ಒಳಗೆ ಬಿಡು.

ರಾ. ಒಂದು ಮುದ್ದು ಕೊಡು, ಬಳಿಕ ಇಳಿಯುವೆನು. ನಿನಗೆ ಶುಭವಾಗಲಿ, ಶುಭವಾಗಲಿ. (ಇಳಿಯುತ್ತಾನೆ.)

ಲೀ. *ಅಯ್ಯೋ ! ನನ್ನ ಪ್ರಿಯನೆ ! ರಾಜನೆ ! ಸಖನೆ ! ಹೀಗೆ ಹೋಗುವಿಯೋ ? ಪ್ರಿಯನೆ, ಪ್ರತಿದಿನ ಪ್ರತಿಕ್ಷಣದಲ್ಲಿಯೂ, ವರ್ತಮಾನವನ್ನು ನನಗೆ ತಿಳುಹಿಸಬೇಕು.* ಒಂದು ನಿಮಿಷದಲ್ಲಿ ಅನೇಕ ವರ್ಷಗಳು ಇರುವವು ; ರಾಮವರ್ಮನೆ ! ಆಹಾ, ಈ ಲೆಕ್ಕದಿಂದ, ನಾನು ಪುನಃ ನಿನ್ನನ್ನು ನೋಡುವಾಗ್ಗೆ ಬಹಳ ವಯಸ್ಸುಳ್ಳವಳು ಆಗಿರುವೆನು.

ರಾ. ಸುಖವಾಗಿರು, ಪ್ರಿಯಳೆ ! ಸಂದರ್ಭವಾದಾಗಲೆಲ್ಲಾ ಹೇಳಿಕಳುಹಿಸುವೆನು. ತಪ್ಪುವದಿಲ್ಲ.

॥ ರಾಗ—ಭೈರವಿ ॥ ಆದಿತಾಳ ॥　　(ಮಾಡಿದಪರಾಧವನು ನೊಡದಿರು)

* ತೋರದೆನ್ನ ಪೋವೆಯಾ । ತಿರುಗಿಬರುವೆಯಾ ॥ ಪ ॥ ವಿರಹದುರಿಯೊಳೀಗಾ । ನಿರಲಾರೆನಲ್ಲಾ ॥ ಅ ॥ ಅಲ್ಪಕಾಲವು । ಎನಗೆ । ಕಲ್ಪದೋಲಪ್ಪದು । ಕಲ್ಪಿತವಲ್ಲಿದು । ಜಲ್ಪಿಸದಿಂತು ॥ ೧ ॥ ಅಲಸನಾಗದೆ । ಪ್ರತಿ । ಗಳಿಗೆಗಳಲ್ಲಿಯೂ । ವಲಿದುದತಂವನೆನಗೆ । ತಿಳಿಹುತಲಿರುವೆಯೋ ॥ ೨ ॥ ಕ್ಷಣವನು ಯುಗದಂತೆ । ಗಣಿಸುತಕಳೆವೆನು । ಪ್ರಣಯಿನಿನ್ನಯ । ಸುಗುಣ । ಗಣಗಳ ಜಪಿಪೆನು ॥ ೩ ॥

ಲೀ. ಪುನಃ ನಾವುಗಳು ಸೇರುವೆವೆಂದು ಯೋಚಿಸುವೆಯೋ?

ರಾ. ಸಂದೇಹವೇ ಇಲ್ಲಾ; ಈ ಕಷ್ಟಗಳೆಲ್ಲಾ ನಮಗೆ ಮುಂದಕ್ಕೆ ಅತ್ಯಾನಂದಕರಗಳಾಗುವವು.

ಲೀ. ಅಯ್ಯೋ! ದೇವರೆ, ನನಗೆ ಹಾಗೆ ತೋರದೆ ಕೆಟ್ಟದ್ದಾಗಿಯೇ ತೋರುವದಲ್ಲಾ. ಪ್ರಿಯನೆ ಕೆಳಗೆ ನಿಂತಿರುವ,

ಕಂ ‖ ಸರಸನೆ ಸಮಾಧಿಕುಹರದೊ । ಳಿರಿಸಿದ ಶವದಂತೆ ನೀನು ಕಾಣು
ವೆಯುಕಟಾ ‖ ಪರಿಯಿದು ಮದಕ್ಷಿದೋಷವೊ । ನೆರೆನಿನ್ನಂಗವೆ
ವಿವರ್ಣ್ಣಮಾದುದೊ ಹಾ ಹಾ ‖ ೨೫ ‖

ರಾ. ನನಗೂ ನೀನು ಹಾಗೆ ಕಾಣಿಸುತ್ತಿರುವೆ; ಪಾಪಿಯಾದ ದುಃಖವು ರಕ್ತವನ್ನು ಹೀರುವದು. ಹೋಗಿ ಬರುತ್ತೇನೆ.

(ಹೋಗುತ್ತಾನೆ).

ಲೀ. ಹಾ ಅದೃಷ್ಟವೆ! ನಿನ್ನನ್ನು ಲೋಕದಲ್ಲಿ ಬಹಳ ಚಂಚಲವೆಂದು ಕರೆಯುವರು; ಚಂಚಲವಾದ ನೀನು, ಕೇವಲ ಸ್ಥಿರಚಿತ್ತನಾದ ಅವನನ್ನು, ಏನು ಮಾಡುವಿಯೋ? ಹ್ಯಾಗೆ ಕಾಪಾಡುವಿಯೋ? ಅದೃಷ್ಟವೇ! ಚಂಚಲವಾಗಿಯೇ ಇರು, ಏಕೆಂದರೆ, ಅವನನ್ನು ಬಹುಕಾಲದವರಿಗೂ ನಿನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳದೆ, ಬೇಗ ನನ್ನ ಸಮೀಪಕ್ಕೆ ಕಳುಹಿಸು.

ಲಲಿ. (ಒಳಗಿನಿಂದ) ಪುತ್ರಿಯೆ ಎದ್ದೆಯಾ?

ಲೀ. ಯಾರು ನನ್ನನ್ನು ಕರೆಯುವರು? ನನ್ನ ಮಾತೃವೊ? ಇದುವರಿಗೆ ಮಲಗಲೇ ಇಲ್ಲವೋ? ಅಥವಾ ಇಷ್ಟು ಬೇಗನೆ ಎದ್ದಳೋ? ಯಾವ ಅತಿಶಯವಾದ ಕಾರಣವು, ಇಲ್ಲಿ ಬರುವಂತೆ ಮಾಡಿರುವದು?

(ಲಲಿತಾಂಗಿ ಪ್ರವೇಶಿಸುವಳು.)

ಲಲಿ. ಲೀಲಾವತಿ ಇದೇನು?

ಲೀ. ಪೂಜ್ಯಳೆ, ನನಗೆ ಮೈಯಲ್ಲಿ ಸ್ವಾಸ್ಥ್ಯವಿಲ್ಲ.

ಲಲಿ. ಯಾವಾಗಲೂ ನಿನ್ನ ಸೋದರಮಾವನ ಮರಣವನ್ನು ಕುರಿತು ವ್ಯಾಕುಲ ಪಡುತ್ತಿರುವೆ. ನಿನ್ನ ನೇತ್ರೋದಕ ಪ್ರವಾಹದಿಂದ, ಅವನ

ದೇಹವು ಕೊಚ್ಚಿಹೋಗುವಂತೆ ಮಾಡುವೆಯೋ? ಹ್ಯಾಗಾದರು ಅವನು ಬದುಕಿ ಬರುವದಿಲ್ಲ. ಆದ್ದರಿಂದ ಸಾಕು ಬಿಡು, ಬಿಡು; ಸ್ವಲ್ಪದುಃಖವು ಪ್ರೀತಿಯನ್ನು ಸೂಚಿಸುವದು, ಅತಿದುಃಖವು ಅವಜ್ಞತೆಯನ್ನು ಪ್ರದರ್ಶಿಸುವದು.

ಲೀ. ಇಂಥಾ ನಷ್ಟಕ್ಕಾಗಿಯೇ ವ್ಯಸನಪಡುತ್ತಿರುವೆನು.

ಲ. ನಷ್ಟವನ್ನು ಕುರಿತು ವ್ಯಸನ ಪಡಬಹುದು, ಆದರೆ ಆತನು ಬದುಕಿ ಬರಲಾರನು.

ಲೀ. ನಷ್ಟವು ಬಹಳವಾಗಿರುವದ್ದರಿಂದ, ನಷ್ಟನಾದ ಸ್ನೇಹಿತನನ್ನು ಕುರಿತು ವ್ಯಸನಪಡದೇ ಇರಲಾರೆನು.

ಲ. ಎಲೆ ಮಗಳೇ, ನಾನು ಬಲ್ಲೆ, ಅವನು ಸತ್ತದ್ದಕ್ಕಿಂತಲೂ, ಅವನನ್ನು ಕೊಂದ ನೀಚನು ಜೀವಿತನಾಗಿರುವದಕ್ಕಾಗಿ, ಹೆಚ್ಚಾಗಿ ದುಃಖಪಡುತ್ತೀಯಲ್ಲವೆ?

ಲೀ. ನೀಚನು ಯಾರು?

ಲ. ಆ ನೀಚನೇ, ರಾಮವರ್ಮನು.

ಲೀ. ನೀಚತನಕ್ಕೂ ಅವನಿಗೂ ಬಹಳ ದೂರವಿರುವದು. ನಾನು ಕ್ಷಮಿಸುವಂತೆ ದೇವರು ಕ್ಷಮಿಸಲಿ. ಆದರೆ, ನಾನು ಪಡುವ ವ್ಯಸನವು ಅವನಿಗೋಸ್ಕರವೆ, ಮತ್ತೆಯಾರಿಗೂ ಅಲ್ಲ.

ಲ. ಘಾತುಕನಾದ ಆ ವಂಚಕನು ಜೀವಿತನಾಗಿ ಇರುವದಕ್ಕಾಗಿ?

ಲೀ. ಹಾ ಪೂಜ್ಯಳೆ! ನನ್ನ ಕೈಗೆ ನಿಲುಕದೆ (ಸಿಕ್ಕದೆ) ಇರುವದಕ್ಕಾಗಿ ದುಃಖ ಪಡುತ್ತೇನೆ. ನನ್ನ ಸೋದರಮಾವನ ಮರಣಕ್ಕಾಗಿ ನಾನಲ್ಲದೆ, ಮತ್ತ್ಯಾರು ಹಗೇ ತೀರಿಸ ಬಾರದೆಂದು ಅಪೇಕ್ಷಿಸುತ್ತೇನೆ.

ಲ. ಹಗೇ ತೀರಿಸಿಕೊಳ್ಳುತ್ತೇವೆ, ಹೆದರಬೇಡ; ಇನ್ನು ವ್ಯಸನ ಪಡದಿರು. ಪುರಭ್ರಷ್ಟನಾದ, ಆ ನೀಚನು ವಾಸವಾಗಿರುವ ಮಾಹಿಷ್ಮತೀ ಪಟ್ಟಣಕ್ಕೆ, ಒಂದು ಔಷಧವನ್ನು ಒಬ್ಬನ ಕೈಯಲ್ಲಿ ಕಳುಹಿಸಿ ಕೊಡುತ್ತೇನೆ; ಈ ಔಷಧಿಯು ಜಾಗ್ರತೆಯಲ್ಲಿಯೇ ಅವನನ್ನೂ ತ್ರಿವಿಕ್ರಮನ ಜತೆಯಲ್ಲಿರುವಂತೆ ಮಾಡುವದು.

ಲೀ. ಹಾಗೋ? ಅವನನ್ನು ನಾನು ನೋಡುವವರಿಗೂ ತೃಪ್ತಳಾಗುವದಿಲ್ಲ. ಪೂಜ್ಯಳೆ, ವಿಷವನ್ನು ತೆಗೆದುಕೊಂಡು ಹೋಗುವದಕ್ಕೆ ಒಬ್ಬ ಮನುಷ್ಯನನ್ನು ಸಿದ್ಧಪಡಿಸಿದರೆ, ಅದು ತೆಗೆದುಕೊಂಡ ಕೂಡಲೆ ಸುಖನಿದ್ರೆ ಉಂಟಾಗುವಂತೆ, ಒಂದು ಔಷಧವನ್ನು ನಾನು ಸೇರಿಸುತ್ತೇನೆ. ನನ್ನ ಸೋದರಮಾವನನ್ನು ಕೊಂದದ್ದಕ್ಕಾಗಿ, ಅನುರಾಗದ ಹಗೆಯನ್ನು ತೀರಿಸಿಕೊಳ್ಳುವದಕ್ಕೆ ನನ್ನ ಬಳಿಗೆ ಬರದೆ ಇರುವ ಅವನ ಹೆಸರನ್ನು ಮಾತ್ರ ಕೇಳಲು, ಅಸಹ್ಯಪಡುತ್ತೇನೆ.

ಲ. ಅಂಥಾ ಉಪಾಯವನ್ನು ಕಂಡು ಹಿಡಿ, ನಾನು ಮನುಷ್ಯನನ್ನು ಸಿದ್ಧ ಪಡಿಸುತ್ತೇನೆ. ಪುತ್ರಿಯೆ, ನಿನಗೊಂದು ಸಂತೋಷವಾದ ಸಮಾಚಾರವನ್ನು ಹೇಳುತ್ತೇನೆ.

ಲೀ. ಬಳ್ಳೇ ಸಮಯದಲ್ಲಿಯೇ ಸಂತೊಷ ಸಮಾಚಾರವು ಬಂದಿರುವದು! ಅದೇನು? ಅಪ್ಪಣೆ ಕೊಡಿಸಬೇಕು.

ಲ. ನಿನ್ನ ಯೋಗಕ್ಷೇಮದಲ್ಲಿಯೇ ಸದಾ ನಿರತನಾದ ನಿನ್ನ ತಂದೆಯು ನಿನ್ನ ಮನಸ್ಸು ವ್ಯಸನದಲ್ಲಿಯೇ ಇರದಂತೆ ಮಾಡುವದಕ್ಕೋಸ್ಕರ ನಾನು ನಿರೀಕ್ಷಿಸದೇ ಇದ್ದ, ನೀನು ಊಹಿಸದೇ ಇದ್ದ, ಒಂದು ಶುಭಕೆಲಸವನ್ನು ಗೊತ್ತುಮಾಡಿದಾನೆ.

ಲೀ. ಪೂಜ್ಯಳೆ, ಆ ಶುಭಕೆಲಸವು ಯಾವದು?

ಲ. ಬರುವ ಗುರುವಾರ ಪ್ರಾತಃಕಾಲದಲ್ಲಿ, ಧೈರ್ಯಶಾಲಿಯೂ, ಯೌವನಸ್ಥನೂ, ಕೇವಲ ಮರ್ಯಾದಾವಂತನೂ ಆದ ಪೇಶಲಾಂಗನೆಂಬಾತನು, ಆ ದೇವಾಲಯದಲ್ಲಿ ನಿನ್ನನ್ನು ಸುಖವುಳ್ಳ ಪತ್ನಿಯನ್ನಾಗಿ ಮಾಡಿಕೊಂಡು, ಸಂತೋಷವನ್ನುಂಟು ಮಾಡುವನು.

ಲೀ. ದೇವರ ಸತ್ಯವಾಗಿಯೂ, ಅವನು ನನ್ನನ್ನು ಸಂತೋಷವುಳ್ಳ ಪತ್ನಿಯನ್ನಾಗಿ ಮಾಡಿಕೊಳ್ಳಕೂಡದು. ಈ ತ್ವರ್‍ಯವು ಮತ್ತೂ ನನ್ನ ಗಂಡನಾಗತಕ್ಕವನು, ನನ್ನ ಅನುರಾಗಕ್ಕೆ ಪಾತ್ರನಾಗುವದಕ್ಕೆ ಮುಂಚೆಯೇ ನಾನು ಮದುವೇ ಮಾಡಿಕೊಳ್ಳಬೇಕೆನ್ನುವದು, ಬಹಳ ಆಶ್ಚರ್‍ಯವಾಗಿದೆ.

ಇನ್ನೂ ಕೆಲವು ದಿವಸಗಳವರಿಗೂ ನಾನು ಮದುವೆ ಮಾಡಿಕೊಳ್ಳುವದಿಲ್ಲ; ಹಾಗೆ ಮಾಡಿ ಕೊಳ್ಳುವಾಗ ನನಗೆ ದ್ವೇಷಿಯೆಂದು ನಿನಗೆ ತಿಳದಿರುವ, ರಾಮವರ್ಮನನ್ನು ಮದುವೆ ಮಾಡಿಕೊಳ್ಳುವೆನಲ್ಲದೆ, ಪೇಶಲಾಂಗನನ್ನು ಮದುವೆ ಮಾಡಿಕೊಳ್ಳುವದಿಲ್ಲ; ಇದನ್ನು ನನ್ನ ಮೇಲೆ ವಿಶ್ವಾಸವಿಟ್ಟು, ನನ್ನ ತಂದೆಗೆ ತಿಳಿಹಿಸು.

ಲ. ನಿನ್ನ ತಂದೆ ಇಲ್ಲಿಗೆ ಬರುತ್ತಿರುವನು, ನೀನೇ ಹೇಳು; ಎಷ್ಟು ಮಟ್ಟಿಗೆ ಸಂತೋಷಪಡುವನೋ ನೀನೇ ನೋಡು.

(ಕಾಪಿಲ ಮತ್ತು ಧಾತ್ರಿ ಪ್ರವೇಶಿಸುವರು.)

ಕಾ. ಸೂರ್ಯಾಸ್ತವಾದರೆ, ಮಂಜು ಸುರಿಯುವದು, ನಮ್ಮ ಅಣ್ಣನ ಮಗನು ಅಸ್ತಮಿಸಿದ್ದಕ್ಕಾಗಿ, ಮಳೆ ಸುರಿಯುತ್ತಿರುವದು. ಎಲೆ ಗಂಗಾ ಭವಾನಿಯೇ! ಏನು ಇನ್ನೂ ಅಳುತ್ತಿರುವೆಯೋ? ಕಣ್ಣೀರಿನ ಮಳೆಯನ್ನು ಸುರಿಯುತ್ತಿರುವೆಯೋ? ಈ ನಿನ್ನ ಕೋಮಲವಾದ ದೇಹದಲ್ಲಿ, ತೆಪ್ಪವನ್ನೂ, ಸಮುದ್ರವನ್ನೂ, ಘಾಳಿಯನ್ನೂ, ತೋರಿಸುತ್ತಿರುವೆ! ಯಾಕೆಂದರೇ! ಸಮುದ್ರವೆಂದು ನಾನು ಹೇಳಬಹುದಾದ, ನಿನ್ನ ಕಣ್ಣುಗಳಿಂದ ನೀರು ಉಕ್ಕುತ್ತಿರುವದು; ನಿನ್ನ ದೇಹವೇ ತೆಪ್ಪವಾಗಿ, ಈ ಕಣ್ಣು ನೀರಿನ ಪ್ರವಾಹದಲ್ಲಿ ತೇಲುತ್ತಿರುವದು; ನಿನ್ನ ದುಃಖಗಳೇ ಘಾಳಿಯು, ಪರಸ್ಪರ (ಅಂದರೆ, ಘಾಳಿಯಿಂದ ಪ್ರವಾಹವು, ಪ್ರವಾಹದಿಂದ ಘಾಳಿಯೂ,) ವೃದ್ಧಿಯಾಗುವದು. ಬೇಗ ಸಮಾಧಾನವಾಗದಿದ್ದರೆ, ಪ್ರವಾಹದಲ್ಲಿ ಸಿಕ್ಕಿ ಉಲ್ಲೋಲ ಕಲ್ಲೋಲವಾಗಿರುವ, ತೆಪ್ಪವಾದ ನಿನ್ನ ದೇಹವು, ತಲೆಕೆಳಗಾಗಿ ಮುಳುಗಿ ಹೋಗುವದು. ಎಲೆ ಪತ್ನಿಯೆ, ನನ್ನ ಆಜ್ಞೆಯನ್ನು ಇವಳಿಗೆ ತಿಳಿಹಿಸಿದೆಯೊ?

ಲ. ಆಹ ತಿಳಿಸಿದೆನು. ಆದರೆ ಒಪ್ಪುವದಿಲ್ಲ; ಹಾ ಇವಳು ಸಾಯಬಾರದಾಗಿತ್ತೆ!

ಕಾ. ತಾಳು ನನಗೆ ತಿಳಿಯುವಂತೆ ಹೇಳು, ಏನು ಒಪ್ಪುವದಿಲ್ಲವೆ? ನಮಗೆ ವಿಧೇಯಳಾಗಿಲ್ಲವೆ? ಸಂತೋಷಯುತೆಯಾಗಿಲ್ಲವೋ? ಅಯೋಗ್ಯ

ಳಾದ ತನ್ನಂಥಾವಳಿಗೆ, ಅನುರೂಪನಾದ ಇಂಥಾ ವರನನ್ನು ಸಂಪಾದಿಸಿದ್ದಕ್ಕೆ, ಪುಣ್ಯವಂತಳೆಂತ ಭಾವಿಸಳೋ ?

ಲೀ. ಸಂತೋಷವಿಲ್ಲ, ತಿಳಿಯಿರಿ, ಆದರೆ ಕೃತಜ್ಞಳಾಗಿದೇನೆ ; ನಾನು ದ್ವೇಷಿಸುವದನ್ನು ಹ್ಯಾಗೆ ಪ್ರೀತಿಸಲಿ ? ನನಗೆ ಹಿತಕರ ವಲ್ಲದಿದ್ದರೂ, ತಾವು ನನ್ನ ಮೇಲಿನ ವಿಶ್ವಾಸದಿಂದ ಮಾಡಿದ ಪ್ರಯತ್ನಕ್ಕಾಗಿ, ಕೃತಜ್ಞಳಾಗಿ ದೇನೆ.

ಕಾ. ನಿನ್ನ ತರ್ಕವು ಸಾಕು ; ಹೀಗೆ ವಾದಿಸುವವಕ್ಕೆ ನಿನಗೇನು ಸ್ವಾತಂತ್ರ್ಯವಿರುವದು ? ನಿನ್ನ ಸಂತೋಷಗಳು ಕೃತಜ್ಞತೆಗಳು, ನನಗೆ ಅವಶ್ಯಕವಿಲ್ಲ. ಪೇಶಲಾಂಗನೊಡನೆ, ದೇವಾಲಯಕ್ಕೆ ಹೋಗಲು ಗುರು ವಾರ ಸಿದ್ಧಳಾಗು : ಇಲ್ಲವಾದರೆ, ನಿನ್ನನ್ನು ಸೆಳೆದುಕೊಂಡು ಹೋಗು ವೆನು. ನೀಚಳೆ ! ಕೃತಘ್ನಳೆ ! ಮೂರ್ಖಳೆ ಸುಮ್ಮನಿರು.

ಲ. ನಿಮಗೇನು ಹುಚ್ಚೋ ?

ಲೀ. ತಂದೆಯೆ, ದಯಾಳುವೆ ! ನಿನ್ನ ಪಾದಗಳಮೇಲೆ ಬಿದ್ದು ಬೇಡಿ ಕೊಳ್ಳುವ ನನ್ನ ಒಂದು ಮಾತನ್ನು ಲಾಲಿಸು.

ಕಾ. ನೀನು ಕೆಟ್ಟೇ ! ಅಧಿಕಪ್ರಸಂಗಿ ! ಅವಿಧೇಯಳೆ ! ನಾನು ಹೇಳುವದನ್ನು ಕೇಳು, ಗುರುವಾರ ದೇವಾಲಯಕ್ಕೆ ಹೋಗಬೇಕು, ಇಲ್ಲವೇ ನಿನ್ನ ಮುಖಾವಲೋಕನವನ್ನು ಮಾಡುವದಿಲ್ಲ, ಮಾತನಾಡಬೇಡ, ಪ್ರತಿಯಾಗಿ ಹೇಳಬೇಡ ; ಪತ್ನಿಯೆ ! ದೇವರು ಈ ಒಬ್ಬಳನ್ನಾದರೂ ಉಳಿಸಿದ್ದಕ್ಕಾಗಿ, ಬಹಳ ಪುಣ್ಯವಂತರೆಂದು ತಿಳಿದು ಇದ್ದೆವು. ಆದರೆ, ಇವಳು ನಮಗೆ ಈಗ ಇಲ್ಲದಿದ್ದರೆ ಉತ್ತಮವಾಗಿತ್ತೆಂದು ತೋರುತ್ತೆ, ಕೆಟ್ಟಮೂರ್ಖಳೆ, ನಾಶವಾಗು.

ಧಾ. ದೇವರು ಆವಳಿಗೆ ಒಳ್ಳೇದು ಮಾಡಲಿ. ಈಕೆಯನ್ನು ಈ ರೀತಿ ದಂಡಿಸುವದು ಸಮನಲ್ಲ.

ಕಾ. ಬಹು ಬುದ್ಧಿಶಾಲಿನಿಯೆ ? ಯಾಕೆ ? ಮುಚ್ಚು ಬಾಯಿ ; ನಿನ್ನ ಉಪದೇಶವು ಸಾಕು, ಇನ್ನೆಲ್ಲಾದರೂ ಹೊಗಿ ಗೊಣಗು, ಹೋಗು.

ಧಾ. ನಾನು ಕೆಟ್ಟದ್ದೇನೂ ಹೇಳಲಿಲ್ಲ.

ಕಾ. ಅಯ್ಯೋ! ಏನು ಮಾಡಲಿ!

ಧಾ. ಮಾತನಾಡಲಾಗದೊ?

ಕಾ. ನೀನು ನಿನ್ನ ಜತೆಗಾರರೊಂದಿಗೆ ಹೊಗಳು; ಇಲ್ಲಿ ನಮಗೆ ನಿನ್ನಮಾತು ಅವಶ್ಯಕವಿಲ್ಲ.

ಲ. ಬಹಳ ಕೋಪಯುಕ್ತರಾಗಿರುವಿರಿ.

ಕಾ. ದೇವರೆ, ಹಗಲೂ, ಇರಳೂ, ಮನೆಯಲ್ಲಿ, ಹೊರಗೆ, ನಡೆಯುವಾಗ್ಗೆ, ನಿದ್ರೆಯಲ್ಲಿ, ಸದಾ ಇವಳಿಗೆ ಅನುರೂಪನಾದ ವರನನ್ನು ಸಂಪಾದಿಸುವ ಯೋಚನೆಯಲ್ಲಿಯೇ ಇದ್ದು, ಈಗ ಸದ್ವಂಶಸ್ಥನಾಗಿಯೂ, ಐಶ್ವರ್ಯವಂತನಾಗಿಯೂ, ಸುಶಿಕ್ಷಿತನಾಗಿಯೂ,ಸಮಸ್ತವಿದ್ಯಾ ಪಾರಂಗತನಾಗಿಯೂ ಇರುವನನ್ನು ಸಂಪಾದಿಸಿ,ಮದುವೆಯಾಗೆಂದರೆ ಹುಚ್ಚುಹುಡಗಿ,ನಾನುಬಲ್ಲೆ, ಮದುವೆ ಮಾಡಿಕೊಳ್ಳುವದಿಲ್ಲ, ಇನ್ನೂ ಚಿಕ್ಕವಳು, ಕ್ಷಮಿಸು, ಎಂದು ಹೇಳುವಳಲ್ಲಾ! ನನಗೆ ಹುಚ್ಚು ಹಿಡಿದಿರುವದು: ಬಳ್ಳೇದು ಕ್ಷಮಿಸಿರುವೆನು, ಎಲ್ಲಿ ಬೇಕೋ ಹೋಗು, ನನ್ನ ಮನೆಯಲ್ಲಿರಬೇಡ, ಇದು ಹಾಸ್ಯವೆಂದು ತಿಳಿಯದಿರು, ಚನ್ನಾಗಿ ಆಲೋಚನೆ ಮಾಡು, ಗುರುವಾರವು ಸಮೀಪವಾಗಿರುವದು, ಚೆನ್ನಾಗಿ ಆಲೋಚಿಸಿ ಹೇಳು. ನನ್ನ ಮಗಳೇ ಆಗಿದ್ದರೆ, ನಿನ್ನನ್ನು ನನ್ನ ಸಖನಿಗೆ ಕೊಡುವೆನು; ಹಾಗಲ್ಲವಾದರೆ, ಸಾಯಿ, ಬಿಕ್ಷ ಬೇಡು, ಬೀದಿಗಳಲ್ಲಿ ತಿರುಗಿ ಸಾಯಿ; ನನ್ನಾಣೆಗೂ ನಿನ್ನನ್ನು ನಾನು ಮಗಳೆನ್ನುವದಿಲ್ಲ; ನನ್ನಿಂದ ನಿನಗೆ ಏನೊಂದು ಸಹಾಯವು, ದೊರೆಯುವದಿಲ್ಲ. ನಂಬು, ಆಲೋಚಿಸು; ನಾನು ಹೇಳುವದು ಸತ್ಯ.

(ಹೋಗುತ್ತಾನೆ)

ಲೀ. ನನ್ನ ವ್ಯಸನಕಾರಣವನ್ನು ಚೆನ್ನಾಗಿ ತಿಳಿದು, ಪಶ್ಚಾತ್ತಾಪಪಡುವ ದೇವತೆಗಳು,ಕೂಡಾ ಇಲ್ಲವೆ? ದಯಾಳುವಾದ ಮಾತೆಯೆ,ನೀನೂ ನನ್ನನ್ನು ತ್ಯಜಿಸಿಬಿಡಬೇಡ; ಒಂದು ತಿಂಗಳು, ಅಥವಾ ಒಂದು ವಾರವಾದರೂ, ಈ ವಿವಾಹವನ್ನು ಆಲಸ್ಯಮಾಡು; ಹಾಗೆ ನೀನು ಮಾಡದೆ ಇರುವಪಕ್ಷಕ್ಕೆ, ಆ ತ್ರೈವಿಕ್ರಮನನ್ನು ಹೂಳಿರುವಲ್ಲಿಯೇ, ನನಗೆ ವಿವಾಹಸಾಮಗ್ರಿಗಳನ್ನು ಸಿದ್ಧಪಡಿಸು.

ಲ. *ನಾನು ಬಂದನ್ನೂ ಹೇಳುವದಿಲ್ಲ, ಆದ್ದರಿಂದ ನನ್ನೊಡನೆ ಮಾತನಾಡಬೇಡ; ನಿನಗೆ ಮನಸ್ಸು ಬಂದಂತೆಮಾಡು, ನಿನ್ನ ಜೋಲಿಗೆ ಬರುವದಿಲ್ಲ.* (ಹೋಗುತ್ತಾಳೆ.)

ಲೀ. ದೇವರೆ, ಧಾತ್ರಿ, ಈ ವಿವಾಹವನ್ನು ನಿಲ್ಲಿಸುವದುಹ್ಯಾಗೆ? ನಾನು ವಿವಾಹಕಾಲದಲ್ಲಿ ಮಾಡಿದ ಪ್ರತಿಜ್ಞೆಯು ಸ್ವರ್ಗದಲ್ಲಿರುವದು; ನಾನು ಲಗ್ನ ಮಾಡಿಕೊಂಡ ಪತಿಯು ಬದುಕಿರುವನು; ಅವನು ಈ ಲೋಕವನ್ನು ಬಿಟ್ಟು ಸ್ವರ್ಗಕ್ಕೆ, ಹೋಗಿ ನಾನು ಮಾಡಿದ ಪ್ರತಿಜ್ಞೆಯನ್ನು ಅಲ್ಲಿಂದ ನನಗೆ ಕಳುಹಿಸಿದ ಹೊರ್ತು ಆ ಪ್ರತಿಜ್ಞೆಯು ಪುನಃ ಬರುವದು ಹ್ಯಾಗೆ? ನನಗೆ ಸಮಾಧಾನೋಕ್ತಿಯನ್ನು ಹೇಳು. ಮತ್ತು ಬುದ್ಧಿಯನ್ನು ಕಲಿಸು. ಅದೃಷ್ಟವು, ಅಬಲೆಯಾದ ನನಗೆ ಮೋಸ ಮಾಡಿತಲ್ಲ, ಏನು ಮಾಡಲಿ? ನೀನು ಏನು ಹೇಳುವೆ? ಒಂದು ಸಂತೋಷವಾದ ಮಾತನ್ನಾದರೂ ಹೇಳುವದಿಲ್ಲವೆ? ಧಾತ್ರಿ, ನನಗೆ ಯಾವ ಸಮಾಧಾನೋಕ್ತಿಗಳನ್ನು ಹೇಳುವೆ?

ಧಾ. ಆಃ! ಹೇಳುವೆನು ಕೇಳು; ರಾಮವರ್ಮನು ಪುರಭ್ರಷ್ಟನಾದನು; ಆದ್ದರಿಂದ ಅವನು ಈ ಪ್ರಪಂಚಕ್ಕೇ ಇಲ್ಲದಂತಾಯಿತು; ಇಲ್ಲಿಗೆ ಬಂದು ನಿನ್ನನ್ನು ಯಾಕೆ ಹೀಗೆ ಮಾಡಿದೆಯೆಂದು ಕೇಳುವ ಧೈರ್ಯವು, ಅವನಿಗಿಲ್ಲ. ಒಂದುವೇಳೆ ಬಂದರೂ ಕಳ್ಳನ ಹಾಗೆಯೇ ಬರಬೇಕು. ಈಗಿನ ಇಂಥಾ ಸಂದರ್ಭಗಳಲ್ಲಿ, ಪೇಶಲಾಂಗನನ್ನು ವರಿಸುವದೇ ಉತ್ತಮವಾಗಿದೆ. ಅವನೂ ರೂಪವಂತನು, ಇವನನ್ನು ಹೋಲಿಸಿದರೆ, ರಾಮವರ್ಮನು ಕುರೂಪಿಯೆಂತಲೇ ಹೇಳಬೇಕು; ನಾನು ಸತ್ಯವಾಗಿ ಹೇಳುವೆನು, ನಿನ್ನ ಈ ಎರಡನೆಯ ಮದುವೆಯು, ಮೊದಲನೆಯದಕ್ಕಿಂತಲೂ ಉತ್ತಮವಾದ್ದು; ಹಾಗಿಲ್ಲದಿದ್ದರೂ, ನಿನ್ನ ಮೊದಲನೆಯ (ಅನುರಾಗವು) ಪ್ರೀಯನು ಸತ್ತು ಇರುವನು, ಯಾಕೆಂದರೆ, ಇದ್ದರೂ ನಿನಗೇನು ಅವನಿಂದಪ್ರಯೋಜನವಿಲ್ಲ.

॥ ರಾಗ—ಕಾಂಭೋಜಿ ॥ ಝಾಪುತಾಳ ॥ (ಸರಿಯೇನಿನಗೀರೀತಿ)

* ಸರಿಯೇ । ಈ ನುಡಿಗಳು ॥ ಪ ॥ ಬಾಲೆನಾನೊಂದನು । ಹೇಳುವದಿಲ್ಲಿನ್ನು । ಮೇಲೆನ್ನೊಡನೆನಿನ್ನೀ । ಯಾಲಾಪವು ಮಗಳೆ ॥ ೧ ॥ ನಂದನೆನೀಂಮನ । ವಂದಂತೆಮಾಡಮ್ಮ । ಮುಂದೆನಿನ್ನಯಮಾತಿ । ಗೆಂದಿಗೂಬರೆನಾನು ॥ ೨ ॥

ಲೀ. ಮನಃಪೂರ್ವಕವಾಗಿ ಮಾತನಾಡುವೆಯೋ ?

ಧಾ. ಹೌದು, ಇಲ್ಲದಿದ್ದರೆ ನನ್ನ ಮನಸ್ಸನ್ನು ಸುಡು.

ಲೀ. ತಥಾಸ್ತು.

ಧಾ. ಯಾತಕ್ಕೆ ?

ಲೀ. ನಿನ್ನ ಸಮಾಧಾನೋಕ್ತಿಗಳು ಸಾಕು ಸಾಕು, ಇನ್ನು ಸುಮ್ಮನೆ ಹೋಗು. ನನ್ನ ತಂದೆಯನ್ನು ಕೋಪ ಪಡಿಸಿದ ಅಪರಾಧವನ್ನು ಹೋಗಲಾಡಿಸಿ ಕೊಳ್ಳುವ ಉದ್ದಿಶ್ಯವಾಗಿ, ನಾನು ಗುರುಗಳಾದ ಪೂಜ್ಯಪಾದರ ಆಶ್ರಮಕ್ಕೆ ಹೋದೆನೆಂದು, ನನ್ನ ತಾಯಿಗೆ ತಿಳಿಹಿಸು.

ಧಾ. ಅಗತ್ಯವಾಗಿ ಹೇಳುವೆನು ; ಇದೀಗ ಬುದ್ಧಿವಂತಳ ಕೆಲಸ.

(ಹೋಗುತ್ತಾಳೆ.)

ಲೀ. *ವೃದ್ಧ ಪಾಪಿಯೆ, ಚಂಡಾಲಳೆ, ರಾಕ್ಷಸಿಯೆ, ಸುಳ್ಳಳಾಗೆಂದು ಹೇಳಿದ ಇವಳ ಪಾಪವು ಹೆಚ್ಚೋ ? ಅಥವಾ ಕೋಟ್ಯಾವರ್ತಿ ಯಾವನಾಲಿಗೆಯಿಂದ ನನ್ನ ಆರ್ಯಪುತ್ರನಗುಣಗಳನ್ನು ಹೊಗಳುತ್ತಿದ್ದಳೋ, ಅದೇ ನಾಲಿಗೆ ಯಿಂದ ಅವನನ್ನು ಈಗ ನಿಂದನೆ ಮಾಡುವ, ಅವಳಪಾಪವು ಹೆಚ್ಚೋ ? ಉಪದೇಶಿಕಳೆ ಹೋಗು, ನಿನಗೂ ನನ್ನಮನಸ್ಸಿಗೂ ಇನ್ನು ಮೇಲೆ ಬಹಳ ದೂರವಾಗಿರುವದು.

ಕಂ ॥ ಮುನಿವರನ ಬಳಿಗೆ ಪೋಗುವೆ । ನನುವನದೇನವರು ಪೇಳ್ವರದಕೇ
ಳುವೆನಾಂ ॥ ಅನುಕೂಲಿಸದಿರಲೆಲ್ಲಂ । ಕೊನೆಗಾಲಕೆ ಮರಣಮೆನ್ನ
ಧೀನವುದಲ್ತೆ ॥ ೨೬ ॥ (ಹೋಗುವಳು.)

॥ ರಾಗ—ಬೆಹಾಗು ॥ ಆದಿತಾಳ ॥ (ತ್ರಿಪುರಸುಂದರೀ)

* ದುರುಳೆ ದೂತಿಯೆ । ಪೋಪೋಗೀ । ಪರಿಯು ನೀತಿಯೆ ॥ ಪ ॥ ಖೂಳೆ ಪಾಪಿ ಜರಠೆಚಂ । ಡಾಲೆ ಘೋರರಾಕ್ಷಸಿಯೆ । ಕೇಳ ಲಾಗದಿರ್ಪಸುಳ್ಳೆ । ಹೇಳಬಹುದೇನಕಟಹಾಹಾ ॥ ೧ ॥ ಪಲತೆರದಿನದೇತರಿಂದ । ಲಲಿತನನ್ನು ಪೊಗಳಿದೆಯೊ । ಖಲೆಯೆನೀನಾನಾಲಿಗೆಯೊಳೇ । ಪಳಿವುದುಚಿತವೇನೆದೀನೆ ॥ ೨ ॥ ಎನ್ನ ನಿನ್ನ ಮಿತ್ರಭಾವ । ವಿನ್ನುಮೇಲೆ ಬಹಳದೂರ । ವನ್ನು ಸಾರಿ ಪೋದುದು ಸಂ । ಪನ್ನೆ ಸಾಕುನಿನ್ನ ಸಂಗ ॥ ೩ ॥

ಚತುರ್ಥಾಂಕಂ.

ಪ್ರಥಮಸ್ಥಾನಂ—ಪೂಜ್ಯಪಾದರಗುಹೆ.

(ಪೂಜ್ಯಪಾದ ಪೇಶಲಾಂಗರು ಪ್ರವೇಶಿಸುವರು).

ಪೂ. ಬರುವ ಗುರುವಾರವ್ರೊ? ಬಹಳ ಸಮೀಪವಾಯಿತು.

ಪೇ. ಪೂಜ್ಯನಾದ ಕಾಪಿಲನು ಹಾಗೆಯೇ ಇಚ್ಛೈಸಿರುವನು, ಅವನ ತ್ವರ್ಯಕ್ಕೆ ಸಾವಕಾಶವನ್ನು ಮಾಡಲು ನನಗೂ ಇಛೆಯಿಲ್ಲ.

ಪೂ. ಕಂ॥ ಆ ನಾರಿಯುಳನುರಾಗವ । ನೀನೇ ಗೊತ್ತಿಲ್ಲವೆಂದುಪೇಳ
ವೆಯುದರಿಂ ॥ ಧ್ಯಾನಿಸಲೀಪರಿಯುತ್ಯನು । ಮಾನವ ಪುಟ್ಟಿಪುದ
ಕಾರ್ಯಮಿದು ಸರಿಯಲ್ಲಂ ॥ ೧ ॥

ಪೇ. ತ್ರೈವಿಕ್ರಮನ ಮರಣಕ್ಕಾಗಿ ಅತಿ ದುಃಖಪಡುತ್ತಿರುವಳು ಆದ್ದರಿಂದ ನನ್ನ ಅನುರಾಗ ವಿಷಯವಾಗಿ ಆಕೆಯೊಡನೆ ಮಾತನಾಡಲು ಅವ ಕಾಶವಾಗಲಿಲ್ಲ; ಈ ರೀತಿಯಾಗಿ ಅವಳು ವ್ಯಸನಪಡುವದು ಆಕೆಗೆ ಕ್ಷೇಮ ಕರವಲ್ಲವೆಂದು, ಅವಳ ತಂದೆಯು ಭಾವಿಸಿ, ಕಣ್ಣೀರಿನ ಪ್ರಳಯವನ್ನು ನಿಲ್ಲಿಸುವದಕ್ಕಾಗಿ, ಈ ವಿವಾಹವನ್ನು ತ್ವರೆಪಡಿಸುತ್ತಿರುವನು. ಈಗ ತಮಗೆ ಈ ತ್ವರ್ಯದ ಕಾರಣವು ಗೊತ್ತಾಗಿರುವದು.

ಪೂ. (ಅತ್ಮಗತಂ) ಸಾವಕಾಶ ಪಡಿಸದೇ ಇರುವದಕ್ಕೆ ಕಾರಣವು ನನಗೆ ತಿಳಿಯದೇ ಇರಬಾರದಾಗಿತ್ತು. (ಪ್ರ) ಅದೋ ನೋಡು, ಇಲ್ಲಿಗ ಬರುತ್ತಿರುವಳು.

(ಲೀಲಾವತಿ ಪ್ರವೇಶಿಸುವಳು).

ಪೇ. ಸುಗುಣೆಯೆ, ಪತ್ನಿಯೆ, ನಿನ್ನನ್ನು ನೋಡಿದ್ದರಿಂದ ಬಹಳ ಸಂತೋಷವಾಯಿತು.

ಲೀ. ನಿಮ್ಮ ಪತ್ನಿ ಯಾದಮೇಲೆ ಹಾಗಾಗಬಹುದು.

ಪೇ. ಆದಮೆಲೆ ಎನ್ನುವದು, ಗುರುವಾರದ್ದಿನ ಆಗಲೇಬೇಕು.

ಲೀ. ಆಗತಕ್ಕದ್ದು ಆಗಿಯೇ ಆಗುವದು.

ಪೂ. ಇದೀಗ ನಿಜ.

ಪೇ. ಗುರುಗಳನ್ನು ಆರಾಧಿಸುವದಕ್ಕೆ ಬಂದೆಯೋ?

ಲೀ. ಇದನ್ನು ಹೇಳುವದರಿಂದ, ನನ್ನ ಅಂತರಂಗವನ್ನು ನಿನಗೆ ತಿಳುಹಿಸಿದಂತೆ ಆಗುವದು.

ಪೇ. ನೀನು ನನ್ನನ್ನು ಅನುರಾಗಿಸುವದಿಲ್ಲವೆಂದು ಇವರೊಡನೆ ಹೇಳದಿರು.

ಲೀ. ಅವರನ್ನು ಪ್ರೀತಿಸುತ್ತೇನೆಂದು ನಿನಗೆ ಖಂಡಿತವಾಗಿ ತಿಳಹಿಸುವೆನು.

ಪೇ. ಹಾಗೆಯೇ ನನ್ನನ್ನೂ ಪ್ರೀತಿಸುವೆ ಎಂದು, ದೃಢವಾಗಿ ನಂಬಿರುವೆನು.

ಲೀ. ಹಾಗಿದ್ದರೂ, ಆ ಮಾತುಗಳನ್ನು ನಿನ್ನ ಇದಿರಿನಲ್ಲಿ ಆಡುವದಕ್ಕಿಂತಲೂ, ನಿನ್ನ ಪರೋಕ್ಷದಲ್ಲಿ ಆಡುವದರಿಂದ, ಬಹುಪ್ರಯೋಜನವುಂಟು.

ಪೇ. ವ್ಯಸನದಿಂದ ನಿನ್ನ ಮುಖವು ಬಹಳ ಕುಂದಿರುವದು.

ಲೀ. ವ್ಯಸನದಿಂದ ಆದ ಪ್ರಯೋಜನವು ಅಷ್ಟರಲ್ಲಿಯೇ ಇದೆ; ನನ್ನ ಮುಖವು ಯಾವಾಗಲೂ ಇರುವದೇ ಹೀಗೆ.

ಪೇ. ಹಾಗೆ ಹೇಳುವದರಿಂದ ನಿನ್ನ ಮುಖವನ್ನು ಕಂಬನಿಗಳಗಿಂತಲೂ ಹೆಚ್ಚಾಗಿ ನಿಂದಿಸಿಕೊಳ್ಳುತ್ತಿರುವೆ!

ಲೀ. ಇದು ನಿಂದೆಯಲ್ಲ, ಯಾಕೆಂದರೆ, ಪ್ರತ್ಯಕ್ಷವಾಗಿ ಹೇಳಿರುವೆನು, ಆದ್ದರಿಂದ ನಿಜ.

ಪೇ. ನಿನ್ನ ಮುಖವೇ ನನ್ನ ಮುಖವೆಂದು ತಿಳಿದಿರುವೆನು, ಹೀಗಿರುವಲ್ಲಿ ಅದನ್ನು ದೂಷಿಸಬಹುದೊ?

ಲೀ. ಹಾಗಿರಬಹುದು ಯಾಕೆಂದರೆ, ಇದು ನನ್ನ ಮುಖವೇ ಅಲ್ಲ. ಗುರುಗಳೆ! ತಮಗೆ ಈಗ ವ್ಯವಧಾನವಿರುವದೊ? ಅಥವಾ ಸಂಧ್ಯಾಕಾಲಕ್ಕೆ ಪುನಃ ಬರಲೊ?

ಪೂ. ಎಲೌ ದುಃಖಿತಳೆ! ನನಗೆ ಈಗಲೇ ವ್ಯವಧಾನವಿರುವದು, ಅಯ್ಯಾ ನಮಗೆ ಸ್ವಲ್ಪ ಅವಕಾಶವನ್ನು ಕೊಡು.

ಪೇ. ಹಾಗಾದರೆ ನಾನು ಹೋಗುತ್ತೇನೆ, ತಮಗೆ ವಿಘ್ನವನ್ನು ಮಾಡು ವದಿಲ್ಲ; ಪ್ರಿಯೆ, ಲೀಲಾವತಿಯೆ, ಗುರುವಾರ ಪ್ರಾತಃಕಾಲಕ್ಕೆ ಬಂದು ನಿನಗೆ ಎಚ್ಚರಿಸುವೆನು; ಅದುವರಿಗೆ ನಿನಗೆ ಸ್ವಾಸ್ಥ್ಯವಿರಲಿ. (ಹೋಗುತ್ತಾನೆ.)

ಲೀ. ಬಾಗಿಲನ್ನು ಹಾಕಿಕೊಂಡು ಬಂದು ನನ್ನೊಡನೆ ವ್ಯಸನ ಪಡಿರಿ; ನನ್ನ ಚಿಂತಾವಸ್ಥೆಯು ಯಾವ ಉಪಾಯದಿಂದಲೂ ಪರಿಹರಿಸಲಶಕ್ಯವಾಗಿ ಇರುವದು.

ಫ್ರಾ. ಮಗಳೆ ನಿನ್ನ ದುಃಖಕಾರಣವು ಆಗಲೇ ತಿಳಿದುದು; ನನ್ನ ಬುದ್ಧಿಗೆ ಬಂದೂ ತೋರದೆ ಇರುವದು; ಗುರುವಾರವೇ ಮದುವೆ ಯಾಗ ಬೇಕೆಂತಲೂ, ಏನನ್ನು ಹೇಳಿದರೂ ಸಾವಕಾಶಕ್ಕೆ ಆಸ್ಪದವನ್ನು ಕೊಡು ವದಿಲ್ಲವೆಂತಲೂ, ನಾನು ಕೇಳಿರುವೆನು.

ಲೀ. ಆ ವಿವಾಹವನ್ನು ನಿಲ್ಲಿಸುವದಕ್ಕೆ ನನಗೆ ಬಂದು ಉಪಾಯವನ್ನು ಹೇಳಿದ ಹೊರತೂ, ಈ ವರ್ತಮಾನವನ್ನು ಕೇಳಿದೆನೆಂದು ಹೇಳ ಬೇಡಿರಿ; ತಮಗೆ ಯಾವ ಉಪಾಯವೂ ತೋರದ ಪಕ್ಷಕ್ಕೆ ನನಗೆ ಬಂದು ಉಪಾ ಯವು ತೋರಿರುವದು: ದಯವಿಟ್ಟು ತಾವು ಅದನ್ನು ಅಂಗೀಕರಿಸಿದರೆ, ಪ್ರಕೃತಕ್ಕೆ ನನಗೆ ಖಡ್ಗದ ಸಹಾಯವೇ ಅನುಕೂಲವಾದ್ದು. ದೇವರು ನನ್ನ ಮನಸ್ಸನ್ನು ರಾಮವರ್ಮನಲ್ಲಿ ಸೇರಿಸಿದನು, ನೀವು ನನ್ನ ಕೈಯನ್ನು ಅವನ ಕೈಯಲ್ಲಿ ಇಟ್ಟು ಸೇರಿಸಿದಿರಿ. ಶಾಸ್ತ್ರಾನುಸಾರವಾಗಿ ಆ ಪ್ರಾಣಕಾಂ ತನ ಪಾಣಿಗ್ರಹಣವನ್ನು ಮಾಡಿದ, ಈ ಕೈಯಿಂದ ಮತ್ತೊಬ್ಬನ ಕೈಯ್ಯ ನ್ನು ಹಿಡಿಯುವಂತೆ, ಈ ಕೆಟ್ಟ ಮನಸ್ಸೇನಾದರೂ ದುರಾಲೋಚನೆಯನ್ನು ಮಾಡೀತು, ಅದಕ್ಕೆ ಅವಕಾಶವನ್ನು ಕೊಡದಂತೆ, ಈ ಮನಸ್ಸನ್ನೂ ಈ ಕೈಯನ್ನೂ ಸಹ ಈ ಖಡ್ಗವು ಕತ್ತರಿಸಲಿ. * ಸಕಲಶಾಸ್ತ್ರಪಾರಂಗತರಾ ಗಿಯೂ, ಬುದ್ಧಿಶಾಲಿಗಳಾಗಿಯೂ, ಬಹು ಅನುಭವಶಾಲಿಗಳಾಗಿಯೂ, ಇರು ವ ತಾವು ನನಗೆ ಬಂದು ಉಪಾಯವನ್ನು ಅಪ್ಪಣೆ ಕೊಡಿಸಿ; ನನ್ನ ಪಾ ವ್ರತ್ಯ ಸಂರಕ್ಷಣೆಗಾಗಿ, ತಮ್ಮ ಅನುಭವಕ್ಕೂ, ಊಹೆಗೂ, ತಕ್ಕ ಉಪಾ ಯಾಂತರವೂ ತೋರದೆ ಇರುವಪಕ್ಷಕ್ಕೆ, ಅಪರಿಮಿತವಾದ, ನನ್ನ ದುಃಖ ಪರಿಹಾರಸಾಧನೆಯನ್ನು ಈ ಖಡ್ಗವೇ ತೋರಿಸುವದು; ಆದ್ದರಿಂದ ಸಾ

ಕಾಶವನ್ನು ಮಾಡಬೇಡಿ; ನನಗೆ ಉಪಾಯವನ್ನು ಹೇಳದೆಯೇ ಇದ್ದರೆ ಈಗಲೇ ಸಾಯುವದಕ್ಕೆ ಸಿದ್ಧಳಾಗಿ ಇರುವೆನು. *

ಪೂ. ಪುತ್ರಿಯೆ, ನಿಧಾನಿಸು; ಯಾವಕಾರ್ಯವನ್ನು ನಿರೋಧಿಸುವದು ಈಗ ಎಷ್ಟುಕಷ್ಟವಾಗಿರುವದೊ, ಅದಕ್ಕಿಂತಲೂ ಹೆಚ್ಚಾದ ಕಷ್ಟಾನುಭವ ದಿಂದ, ಆಕಾರ್ಯಕ್ಕೆ ಅಡ್ಡಿಯನ್ನು ಮಾಡಲು, ತಕ್ಕ ಒಂದು ಉಪಾಯವು ತೋರಿರುವದು. ಮಗಳೆ, ಆ ಪೇಶಲಾಂಗನ ಮದುವೆಯನ್ನು ಮಾಡಿ ಕೊಳ್ಳುವದಕ್ಕಿಂತಲೂ, ಪ್ರಾಣತ್ಯಾಗವನ್ನು ಮಾಡಿಕೊಳ್ಳುವದಕ್ಕೆ ನಿನಗೆ ಧೈರ್ಯವಿರುವಪಕ್ಷದಲ್ಲಿ, ಪ್ರಾಣತ್ಯಾಗಕ್ಕೆ ಸಮಾನವಾದ ಒಂದು ಕಾರ್ಯದಿಂದ ಆ ವಿವಾಹಕ್ಕೆ ಅಡ್ಡಿಯಾಗಬಹುದು; ನಿನಗೆ ಧೈರ್ಯವಿರುವಪಕ್ಷಕ್ಕೆ ಆ ಉಪಾಯವನ್ನು ಹೇಳುವೆನು.

ಲೀ. ವೃ ॥ ಗಿರಿಯಿಂ ಬೀಳೆನುತಾಜ್ಞೆ ಯಿತ್ತೊಡಮಹಿವ್ರಾತಂಗಳಂ
ಕೂಡಿ ನೀ । ನಿರಬೇಕೆಂದೊಡ ಮಾಶ್ಮಶಾನದೊಳೆ ನಿಚ್ಚಂವಾಸಮಾ
ಡೆಂದೊಡಂ ಕಿರಿಭಲ್ಲೂಕಮೃಗೇಂದ್ರಘೋರ ರವಭೀಷ್ಮಾನೇಕಕಾಂ
ತಾರದ । ಲ್ಲಿರಬೇಕೆಂದೊಡ ಮೆಲ್ಲನಂ ರಚಿಸುತಂ ಸಾಧ್ವೀತ್ವಮಂ
ಸಾಧಿಪೇಂ ॥ ೧ ॥

ಪೂ. ಮಗಳೆ ಹಾಗಾದರೆ ಕೇಳು,

ಕಂ ॥ ತನುಜಾತೆ ಪೋಗುತೀಗಳ್ । ಮನಮೆಚ್ಚುತೆ ಪೇಶಲಾಂಗನಂ ವರಿ
ಪೆನೆನು ॥ ತ್ತನುನಯದೆಪೇಳ್ದು ನಿನ್ನಯ । ಜನಕಂಗೆ ಸುಮಂದ
ಹಾಸ ಮುಖಿಯಾಗಿರುನೀಂ ॥ ೨ ॥

ನಾಳೆ ಬುಧವಾರ; ನಾಳನರಾತ್ರಿಯಲ್ಲಿ ನಿನ್ನ ಸಂಗಡ ಧಾತ್ರಿಯನ್ನು

॥ರಾಗ— ಕಾಂಭೋಜಿ ॥ ತ್ರಿಪುಟತಾಳ ॥　　(ಭೀತಿಯನೀಗಿಪತಿವ್ರತೆ)

* ತಡವಿದಿದೇಕೆ ! ನುಡಿನುಡಿ ಗುರುವೆ ॥ ಪ ॥ ತಡೆಯಲಾರೆನು ಹಾ । ಒಡಲಿನುಬ್ಬ ಸವ ॥ ಅ ॥ ಅನಘ ಸಕಲಶಾಸ್ತ್ರ । ದನುವನು ತಿಳಿದಾ । ಘನಮತಿಶಾಲಿ ಸ । ದನುಭವ ಯುತಗೆ ॥ ೧ ॥ ಒಡನೀನುಪಾಯವು । ಒಡಬಡದಿದ್ದರೀ । ಕಡುಗವೆ ಶೋಕವ । ತಡೆಗಡಿ ಯುವದು ॥ ೨ ॥ ಸೋತಿರುವೆನ್ನ । ಮಾತಿಗುತ್ತರವ । ಪ್ರೀತಿಯಿಂ ಪೇಳಲ । ದೇತಕೆ ತಡವು ॥ ೩ ॥

ಮಲಗಿಸಿಕೊಳ್ಳದೆ, ನಿನ್ನ ಕಿರುಮನೆಯಲ್ಲಿ ಒಬ್ಬಳೇ ಮಲಗು; ಈ ಬಟ್ಟಲನ್ನು ತೆಗೆದುಕೊ, ಹಾಸಿಗೆಯ ಮೇಲೆ ಮಲಗಿಕೊಂಡು, ಅದರಲ್ಲಿರತಕ್ಕ ದ್ರಾವಕವನ್ನು ಕುಡಿ; ಕೂಡಲೆ ನಿನ್ನ ಮೈಯಲ್ಲಿ ಶೈತ್ಯವು ವ್ಯಾಪಿಸಿ, ನಾಡಿಗಳು ತಮ್ಮ ಚಲನೆಗಳನ್ನು ತ್ಯಜಿಸಿ ನಿಲ್ಲುವವು; ಶಾಖವು ಮತ್ತು ಶ್ವಾಸವು ಇಲ್ಲದೆ ತುಟಿಯಲ್ಲಿ ಕಪೋಲಗಳಲ್ಲಿ ಕೆಂಪು ಹೋಗಿ ಧಾವಳ್ಯವು ತೋರುವದು! ಜೀವವು ಹೋದಂತೆ, ನಿನ್ನ ಕಣ್ಣುಗಳು ಮುಚ್ಚಿಹೋಗುವವು; ಅಂಗಾಂಗಂಗಳು ಶವದಂತೆ, ತಣ್ಣಗಾಗಿ ಮರಣವನ್ನು ತೋರಿಸುವವು, ಈರೀತಿಯಲ್ಲಿ ನಲವತ್ತೆರಡು ಘಂಟೆಗಳ ವರಿಗೂ ಇದ್ದು, ಬಳಿಕ ನಿದ್ರೆಯನ್ನು ಮಾಡಿ ಎದ್ದವರಂತೆ ಏಳುವೆ; ಪ್ರಾತಃಕಾಲದಲ್ಲಿ ನಿನ್ನನ್ನು ಎಬ್ಬಿಸಲು ಬಂದು ನೋಡಿದರೆ, ಮೃತಳಾಗಿರುವೆ; ಆಗ, ನಮ್ಮ ದೇಶಪದ್ಧತಿರೀತಿಯಾಗಿ ಬಿಳೀಬಟ್ಟೆಗಳನ್ನು ಉಡಿಸಿ, ನಿನ್ನ ವಂಶಸ್ಥರಿಗೆ ಸಮಾಧಿಯಾಗಿರುವ ನೆಲಮಾಳಿಗೆಯಲ್ಲಿ, ನಿನ್ನನ್ನು ಮಲಗಿಸುವರು. ನೀನು ಏಳುವದಕ್ಕೆ ಮುಂಚೆಯೇ, ನಾನು ವರ್ತಮಾನವನ್ನು ರಾಮವರ್ಮನಿಗೆ ಹೇಳಿಕಳುಹಿಸಿ, ಅವನನ್ನು ಇಲ್ಲಿಗೆ ಕರೆಯಿಸಿಕೊಂಡು, ಅತನೂ ನಾನೂ ನಿನ್ನ ಎಚ್ಚರಿಕೆಯನ್ನು ನಿರೀಕ್ಷಿಸುತ್ತಿದ್ದು, ನೀನು ಎದ್ದೊಡನೆಯೆ, ರಾಮವರ್ಮನು ನಿನ್ನನ್ನು ಕರೆದುಕೊಂಡು ಹೋಗುವನು. ಸ್ತ್ರೀಯರಿಗೆ ಸಹಜವಾದ ಭಯವು, ಚಂಚಲತ್ವವೂ, ನಿನಗೆ ಯಿಲ್ಲದೆ ಧೈರ್ಯದಿಂದ ಈ ಕಾರ್ಯವನ್ನು ಮಾಡಿದರೆ, ಆ ವಿವಾಹವು ತಪ್ಪುವದು.

ಲೀ. ಪೂಜ್ಯರೆ, ಮೊದಲು ಅದನ್ನು ಕೊಡಿ; ಭಯದ ಮಾತನ್ನು ಹೇಳಬೇಡಿ.

ಪೂ. ಹಿಡಿ, ಧೈರ್ಯದಿಂದಿದ್ದು ನೀನು ಅಂತ್ಯದಲ್ಲಿ ಸುಖವನ್ನು ಹೊಂದು; ನಾನು ಪತ್ರವನ್ನು ಬರೆದು ನಿನ್ನ ಕಾಂತನಬಳಿಗೆ ಕಳುಹಿಸುತ್ತೇನೆ.

ಲೀ. ಕಂ ॥ ಶೌರ್ಯೌದಾರ್ಯ ಗುಣಾಂಕಿತ । ವರ್ಯ ಶ್ರೀರಾಮವರ್ಮ
ನನುರಾಗವೆ ನೀಂ ॥ ಧೈರ್ಯದ ಶಕ್ತಿಯನಿತ್ತೀ । ಕಾರ್ಯವ ನೆರವೇರಿ
ಸೆಂದು ಬೇಡುವೆ ನೀಗಳ್ ॥ ೪ ॥

ಪೂಜ್ಯರಿಗೆ ವಂದಿಸುವೆನು. (ಹೋಗುತ್ತಾಳೆ.

ದ್ವಿ ತೀ ಯ್ಯ ಸ್ಥಾ ನ ೦—ಕಾಪಿಲನ ಮನೆಯಚಿರುಮನೆ.

(ಕಾಪಿಲ, ಲಲಿತಾಂಗಿ, ಧಾತ್ರಿ ಮತ್ತು ಸೇವಕರು ಪ್ರವೇಶಿಸುವರು.)

ಕಾ. ಇದರಲ್ಲಿ ಬರೆದಿರತಕ್ಕ ಎಲ್ಲರಿಗೂ ನಮ್ಮಮನೆಗೆ ಭೋಜನಕ್ಕೆ ಹೇಳಿ ಬಾ. (ಸೇವಕನು ಹೋಗತ್ತಾನೆ.)

ಬಳ್ಳೇ ಅಡಿಗೆಯವರು ಇಪ್ಪತ್ತು ಜನಗಳನ್ನು ಗೊತ್ತುಮಾಡಿ ಕರೆದುಕೊಂಡು ಬಾ.

೨ನೇ ಸೇ. ಬಹು ಬುದ್ಧಿಶಾಲಿಗಳಾದವರನ್ನೇ ಕರೆದುಕೊಂಡು ಬರುತ್ತೇನೆ.

ಕಾ. ಹಾಗೆ ಮಾಡು. (೨ನೇ ಸೇವಕನು ಹೋಗುವನು.)

ಇನ್ನೂ ಅನೇಕ ಸನ್ನಾಹಗಳು ಆಗಬೇಕು, ಸಾವಕಾಶವಿಲ್ಲ, ಸ್ವಲ್ಪ ಕಾಲವೇ ಉಳಿದಿರುವದು; ಏನು, ನಮ್ಮ ಮಗಳು ಗುರುಗಳ ಬಳಿಗೆ ಹೋಗಿರುವಳೋ?

ಧಾ. ಹೌದು ಹೋಗಿರುವಳು.

ಕಾ. ಅವರಾದರೂ, ಈ ಮೂರ್ಖಳಿಗೆ ಬುದ್ಧಿಯನ್ನು ಹೇಳುವರೊ ಏನೋ, ನೋಡೋಣ.

(ಲೀಲಾವತಿಯು ಪ್ರವೇಶಿಸುವಳು)

ಧಾ. ಗುರುಸೇವೆಯನ್ನು ಮಾಡಿಕೊಂಡು, ಹಸನ್ಮುಖಿಯಾಗಿ ಬರುತ್ತಿರುವ, ನಿನ್ನ ಮಗಳನ್ನು ನೋಡು.

ಕಾ. ಏನು, ಎಲ್ಲಿ ಅಲೆಯುತ್ತಿದ್ದೆ?

ಲೀ. ಕಂ॥ ತಾತನೆ ನಿನಗುಂ ನಿನ್ನಯ। ಮಾತಿಗು ಮಾಂ ಮೀರಿ ನಡೆವ
ರೀತಿಯದೆಲ್ಲಂ ॥ ಪಾತಕಮೆಂ ದರಿತೆನೆ ನಾ । ನಾತಾಣಕೆ ಪೊಗಿಬಂ
ದೆ ನಿಮನಿಜಮಾಗಳ್ ॥ ೫ ॥

ತಾತನೆ, ನನ್ನ ಅಪರಾಧಕ್ಕಾಗಿ ತಮ್ಮ ಕ್ಷಮಾಪಣೆಯನ್ನು ಕೇಳಿಕೊಳ್ಳುವಂತೆ ಗುರುಗಳಿಂದ ಆಜ್ಞಾಪ್ತಳಾಗಿ ಬಂದಿರುವ ನಾನು, ಸಾಷ್ಟಾಂಗ

ಪ್ರಣಾಮವನ್ನು ಮಾಡುವೆನು; ಕ್ಷಮಿಸು; ಇನ್ನುಮೇಲೆ ತಮ್ಮ ಇಷ್ಟಕ್ಕೆ ವಿರೋಧವಾಗಿ ನಡೆಯುವದಿಲ್ಲ.

ಕಾ. ಪೇಶಲಾಂಗನಿಗೆ ಹೇಳಿಕಳುಹಿಸಿರಿ; ಇದನ್ನು ಆತನಿಗೆ ತಿಳಿಹಿಸಿರಿ, ಈ ವಿವಾಹವನ್ನು ನಾಳಿನ ಪ್ರಾತಃಕಾಲವೇ ನೆರವೇರಿಸುವೆನು.

ಲೀ. ಆತನನ್ನು ನಾನು ಪೂಜ್ಯಪಾದರ ಆಶ್ರಮದಲ್ಲಿ ಕಂಡಿದ್ದೆನು, ಎಷ್ಟುಮಟ್ಟಿಗೆ ಅನುರಾಗವನ್ನು ಪ್ರದರ್ಶಿಸುವದು ಬಾಧಕವಿಲ್ಲವೊ, ಅಷ್ಟು ಉಚಿತವಾದ ಅನುರಾಗವನ್ನು ತೋರಿಸಿದೆನು.

ಕಾ. ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಏಳು, ಈಗ ನನ್ನ ವ್ಯಸನಪರಿಹಾರವಾಯಿತು. ಪೇಶಲಾಂಗನನ್ನು ನೋಡುತ್ತೇನೆ, ಅವನನ್ನು ಕರೆದುಕೊಂಡುಬನ್ನಿ; ಪೂಜ್ಯಪಾದರು ಮಾಡಿದ ಉಪಕಾರಕ್ಕೆ ನಾವೆಲ್ಲರೂ, ಎಷ್ಟು ಕೃತಜ್ಞರಾಗಿದ್ದರೂ ತೀರದು.

ಲೀ. ಧಾತ್ರಿ! ಈಗ ನನ್ನ ಶಯ್ಯಾಗೃಹಕ್ಕೆಬಾ, ನಾಳನದಿನ ನಾನು ಇಟ್ಟುಕೊಳ್ಳುವದಕ್ಕೆ ಉಪಯೋಗವಾಗಿರುವ ಆಭರಣಗಳನ್ನು ತೆಗೆಯುವದರಲ್ಲಿ, ಸಹಾಯವನ್ನು ಮಾಡುವೆಯೊ?

ಲಲಿ. ಈಗ ಏನು ಅವಸರ; ಗುರುವಾರದವರಿಗೂ ಸಾವಕಾಶವಿದೆ.

ಕಾ. ಅವಳೊಂದಿಗೆ ಹೋಗು ಧಾತ್ರಿ, ನಾಳೆಯೇ ವಿವಾಹವು ನಡೆಯಲಿ. (ಲೀಲಾವತಿ ಧಾತ್ರಿಯರು ಹೋಗುವರು.)

ಲ. ಈ ಒಂದು ರಾತ್ರಿಯಲ್ಲಿಯೇ ಸಕಲ ಸನ್ನಾಹವೂ ಸಿದ್ಧವಾಗಲಾರದು.

ಕಾ. ನಾನೇ ಎಲ್ಲವನ್ನೂ ಸಿದ್ಧಪಡಿಸುತ್ತೇನೆ, ನೀನು ಸುಮ್ಮನಿರು; ನೀನು ಲೀಲಾವತಿಯ ಬಳಿಗೆಹೋಗಿ, ಉಚಿತಾಭರಣಗಳಿಂದ ಅವಳನ್ನು ಅಲಂಕರಿಸು; ನಾನು ಮಲಗುವದಿಲ್ಲ, ಈಗ ನನ್ನೊಬ್ಬನನ್ನೇ ಬಿಟ್ಟು ಹೋಗು; ಯಾರು ಅಲ್ಲಿ? ಯಾರೂ ಇಲ್ಲವೊ? ನಾನೇ ಪೇಶಲಾಂಗನಬಳಿಗೆ ಹೋಗುತ್ತೇನೆ; ಆ ಮೂರ್ಖಬುದ್ಧಿಯುಳ್ಳ ಹುಡುಗಿಯರೀತಿಯು ಸರಿಯಾದಾರಭ್ಯ, ನನಗೆ ಬಹಳ ಸಂತೋಷವು ಉಂಟಾಗಿರುವದು. (ಹೋಗುತ್ತಾನೆ.)

ತೃತೀಯಸ್ಥಾನಂ—ಲೀಲಾವತಿಯ ಶಯ್ಯಾಗೃಹ.

(ಲೀಲಾವತಿಯು ಧಾತ್ರಿಯೊಡನೆ ಪ್ರವೇಶಿಸುವಳು.)

ಲೀ. *ಈವಸ್ತ್ರಗಳೇ ಸರಿಯಾಗಿವೆ; ಧಾತ್ರಿ, ಈದಿನರಾತ್ರಿ ನನ್ನನ್ನು ಒಬ್ಬಳನ್ನೇ ಬಿಟ್ಟುಹೋಗು, ನನ್ನ ಪಾಪಗಳನ್ನೆಲ್ಲಾ ಹೋಗಲಾಡಿಸಿ ನನ್ನಲ್ಲಿ ಅನುಗ್ರಹವನ್ನು ಮಾಡುವಂತೆ, ದೇವರನ್ನು ನಾನು ಪ್ರಾರ್ಥಿಸಬೇಕಾಗಿರುವದು.

(ಲಲಿತಾಂಗಿ ಪ್ರವೇಶಿಸುವಳು.)

ಲ. ಬಹಳ ಕೆಲಸವಾಗಿರುವೆಯೋ ? ನನ್ನ ಸಹಾಯ ವೇನಾದರೂ ಬೇಕೋ ?

ಲೀ. ಅವಶ್ಯವಿಲ್ಲ, ನಾಳೆಗೆ ಬೇಕಾದ ಎಲ್ಲವನ್ನೂ ಸಿದ್ಧಮಾಡಿಕೊಂಡು ಇರುತ್ತೇವೆ, ಈಗ ನನ್ನಮೇಲೆ ದಯದಿಂದ ಒಬ್ಬಳನ್ನೇ ಬಿಟ್ಟು, ಧಾತ್ರಿಯನ್ನು ನೀನುಸಂಗಡ ಕರೆದುಕೊಂಡುಹೋಗು ; ಬಹು ಕೆಲಸವಿರುವದ್ದರಿಂದ ಅವಳು ಸಹಾಯಕಳಾಗುತ್ತಾಳೆ.

ಲ. ನಿನಗೆ ಮಂಗಳವಾಗಲಿ ; ಸುಖನಿದ್ರೆಯನ್ನು ಹೊಂದು, ಬಹಳ ಬಳಲಿ ಇರುವೆ. (ಲಲಿತಾಂಗಿ ಧಾತ್ರಿಯರು ಹೋಗುವರು.)

ಲೀ. ದಯೆಮಾಡಿ, ಪುನಃ ನಮಗೆ ಪರಸ್ಪರ ಸಂದರ್ಶನವು ಯಾವಾಗ ಆಗುವದೊ? ಅದನ್ನು ದೇವರೇ ಬಲ್ಲನು.

ಕಂ ॥ ಧಿಗಿಲೆಂಬ ಶೈತ್ಯಮಂಗವ। ಪೊಗುತಂ ವ್ಯಾಪಿಸುತ ಲುಷ್ಣವಂಹೀ
ರುವಪ್ರೋಲ್ ॥ ಬಗೆಗಿಂದು ತೋರ್ಪುದದರಿಂ। ಬಗೆದು ಸಹಾಯಕ್ಕೆ
ದಾರ ನಾದೊಡು ಕರೆವೇಂ ॥ ೬ ॥

॥ರಾಗ— ಪೂರ್ವಿ ॥ ರೂಪಕತಾಳ ॥ (ನಾರಾಯಣ ನೀನಾವ)

* ದೂತಿಯೆ ನೀಂಪೋಗೀಗ। ಲೇತಕೆತಡವು ॥ ಪ ॥ ನೀತಿವಂತೆಯಾದನೀನು। ಪ್ರೀತಿಯನ್ನುತೋರಿಸಲು ॥ ಅ ॥ ಚಿತ್ರವಸನಗಳಿವೆಸಾಕು । ಮಿತ್ರಳೆನೀನೀ । ರಾತ್ರಿಯಲ್ಲೆನ್ನೊಬ್ಬಳನ್ನೇ। ಧಾತ್ರಿಬಿಟ್ಟುಪೇಗದಿಂದ ॥ ೧ ॥ ಇಂದುನಾನುಗೈದಪಾಪ। ವೃಂದವಕಳೆಯೆ। ಚಂದದಿಂದೆಸಾರಾಲಾಪೆ। ಇಂದಿರೇಶನನ್ನು ಭಜಿಪೆ ॥ ೨ ॥

ಧಾತ್ರಿ, ಧಾತ್ರಿ, ಹಾ ಹಾ! ಅವಳು ಬಂದು ಏನು ಮಾಡಬೇಕು; ಭಯಂಕರವಾದ ಕೆಲಸವನ್ನು ನಾನೊಬ್ಬಳೇ ಮಾಡಬೇಕಾಗಿ ಇರುವದು; ಬಟ್ಟಲೇ ಬಾ, ಈ ಔಷಧಿಯು ವ್ಯಾಪಿಸದಿದ್ದರೆ ಏನು ಮಾಡಬೇಕು? ಅಗ್ಗ ನಾನು ಪೇಶಲಾಂಗನನ್ನು ಮದುವೆಯಾಗಬೇಕೆ? ಎಂದಿಗೂ ಇಲ್ಲ; ಇದೇ ಅದಕ್ಕೆ ಪ್ರತೀಕಾರವು; ನೀನಿಲ್ಲಿ ಇರು. (ಕಠಾರಿಯನ್ನು ಇಡುತ್ತಾ.)

* ನನಗೂ ರಾಮವರ್ಮನಿಗೂ ತಾವೇ ವಿವಾಹವನ್ನು ಮಾಡಿ, ಈಗ ಪುನಃ ನನ್ನನ್ನು ಪೇಶಲಾಂಗನಿಗೆ ಮದುವೆಯನ್ನು ಮಾಡಿದರೆ, ತಮ್ಮ ತಪ್ಪು ಹೊರಪಟ್ಟೀತೆಂಬ ಭಯದಿಂದ, ಆ ಗುರುಗಳು ನಾನು ಸಾಯುವಂತೆ, ಈ ವಿಷವನ್ನು ಏಕೆ ಕೊಟ್ಟಿರಬಾರದು? ಹಾಗೆಯೇ ನನಗೆ ತೋರುವದು; ಛೀ ಛೀ, ಹಾಗೆ ಇರಲಾರದು, ಯಾಕೆಂದರೆ, ಆತನು ಕೇವಲ ಪ್ರಾಮಾಣಿಕನೆಂದು ಪರೀಕ್ಷಿತನಾದವನು; ಈತನ ವಿಷಯದಲ್ಲಿ ಇಂಥಾ ಕೆಟ್ಟ ಆಲೋಚನೆಯನ್ನು ನಾನು ಮಾಡಬಾರದು; *ನನ್ನನ್ನು ನೆಲಮಾಳಿಗೆಯಲ್ಲಿ ಮಲಗಿಸಿದ ಬಳಿಕ, ನನಗೆ ಎಚ್ಚರಿಕೆ ಯಾಗುವದಕ್ಕೆ ಪೂರ್ವವೆ, ನನ್ನನ್ನು ಕರೆದುಕೊಂಡು ಹೋಗಲು, ರಾಮವರ್ಮನು ಬಾರದಿದ್ದರೆ ಹ್ಯಾಗೆ? * ಇದು ನನಗೆ ಬಹು ಭಯವನ್ನು ಉಂಟುಮಾಡುವದು! ಹಾಗಾಗುವ ಪಕ್ಷಕ್ಕೆ, ರಾಮವರ್ಮನು ಬರುವದಕ್ಕೆ ಮೊದಲೇ, ಬಳ್ಳೀಘೊಳಬರಲು ಅವಕಾಶವಿಲ್ಲದ ಆಸ್ಥಳದ ಕೆಟ್ಟ ವಾಸನೆಯಿಂದ, ನಾನು ಸಾಯುವದಿಲ್ಲವೆ? ಬಂದು ವೇಳೆ ನಾನು ಬದುಕಿದರೂ, ಘೋರವಾದ ಮರಣದ ಯೋಚನೆಯೂ, ಈಗ್ಗೆ ನೂರಾರು ವರ್ಷಗಳಿಂದಲೂ ಅಲ್ಲಿ ಇಡಲ್ಪಟ್ಟಿರುವ ನಮ್ಮ

॥ ರಾಗ—ನೀಲಾಂಬರಿ ॥ ತ್ರಿಪುಟತಾಳ ॥ (ಏನಮಾಡಲಿ ಹಾ ಹಾ ವಿಧಿಯೆ)

* ಮಾಡಿದುದಿಂದಿಗದೆಲ್ಲಾ । ಕೇಡಾದುದಲ್ಲ ॥ ಪ ॥ ಆಡಿಕೊಂಬೆನದಾರೊಳಕಟಾ ಮಾಡಿಕೊಂಡುದು । ಕೂಡಿತೇನಹಹಾ । ಕಾಡಾದುದೇ ಹಾ ॥ ಅ ॥ ವರರಾಮ-ವರ್ಮನಿಗೆನ್ನ ಪರಿಣಯವಮುನ್ನ । ವಿರಚಿಸಿರುವೆನಿವಳೀಗ । ಪರರನ್ನು ಬೇಗ ॥ ವರಿಸೆತಪ್ಪದು ಹೊರಗೆಬಹುದೆಂ । ದರಿತು ಸಾಯಲು । ಗರಳವಿತ್ತಿಹನೋ । ತೆರನದಿನ್ನೇನೊ ॥ ೧ ॥ ನೆಲಮಾಳಿಗೆಯೊಳೆನ್ನ ನಿಟ್ಟು । ಬಲುದುಃಕ್ಕಪಟ್ಟು । ತೊಲಗಿದಬಳಿಕೆಚ್ಚರಿಕೆಯು । ತಲೆದೋರುವನಿತ ॥ ರೊಳಗೆಕಾಂತನು । ಬಳಿಗೆ ಬಾರದೆ । ತಳುವಿದರೆ ನನಗಂದುಗತಿಯೇನು । ನೆಲೆಯ ಕಾಣೆನು ॥ ೨ ॥

ಪೂರ್ವೀಕರ ಎಲುವುಗಳಿಂದ ತುಂಬಿರುವ ಆ ಸ್ಥಳದ ಘೋರವು, ಮೊನ್ನೆತಾನೆ ಸತ್ತಿರುವ ತ್ರೈವಿಕ್ರಮನ ಸಾಮೀಪ್ಯವೂ, ಅರ್ಧರಾತ್ರಿಯಕಾಲದಲ್ಲಿ ಆಗುವ ಕೆಟ್ಟ ರೋದನವೂ, ಕೆಟ್ಟವಾಸನೆಯೂ ಇವುಗಳೆಲ್ಲವೂ, ನನಗೆ ಮನೋವಿಕಾರವನ್ನು ಉಂಟುಮಾಡದೆ ಇರುವವೆ? ಹಾ ಹಾ! ಇದೊ ಆಗಲೇ ನನ್ನ ಸೋದರಮಾವನು ರಾಮವರ್ಮನನ್ನು ವಧಿಸುವದಕ್ಕೆ, ತನ್ನ ಖಡ್ಗವನ್ನು ಹಿಡಿದುಕೊಂಡು ನಿಂತಿರುವಂತೆ ಕಾಣುವದು!

ಕಂ ॥ ತ್ರೈವಿಕ್ರಮನೇ ತಡೆತಡೆ । ಜೀವಿತಪತಿ ರಾಮವರ್ಮನಂ ವಧಿಸದಿರೈ ॥ ಭಾವಜ್ಞ ರಾಮವರ್ಮನೆ । ಕೋವಿದನೇ ಬಂದೆಬಂದೆ ನಿದೊ ನಾಂ ಬಂದೇಂ ॥ ೭ ॥

॥ ರಾಗ—ಹಿಂ.-ಕಾಪಿ ॥ ಆದಿತಾಳ ॥ (ಪರಿಪಾಹಿನಂದಗೋಪಬಾಲ)

* ಪಾಪಾಲಿಸು ನೀನೇ ಮುರಾರಿ ॥ ಪ ॥ ಸುಪವಿತ್ರಮೂರ್ತಿಯೆ । ವಿಪುಲಾತ್ಮಕೀರ್ತಿಯೆ । ಅಪಾರ ಕೃಪಾಂಕ । ವಿಪಾಪನೃಪನುತ ॥ ೧ ॥ ಸದಮಲಮೋಕ್ಷ । ಪ್ರದಕಮಲಾಕ್ಷ ॥ ಉದಾರ ಮದಾರ । ವಿದಾರಪದಯುಗ ॥ ೨ ॥ ಸಿರಿಪತಿನಿನ್ನ । ಮೊರೆಹೊಕ್ಕೆನ್ನ । ಪುರಾರಿ ಧರಾರಿ । ಸುರಾದಿಪಾಲಕ ॥ ೩ ॥

ಇದೋ ನಿನಗೋಸ್ಕರ ಇದನ್ನು ಪಾನಮಾಡುತ್ತೇನೆ.

(ಹಾಸಿಗೆಯಮೇಲೆ ಬೀಳುವಳು.)

ಚತುರ್ಥ ಸ್ಥಾನಂ—ಕಾಪಿಲನ ಮನೆಯಹಜಾರ.

(ಲಲಿತಾಂಗಿ ಧಾತ್ರಿ ಇವರು ಪ್ರವೇಶಿಸುವರು.)

ಲ. ಧಾತ್ರಿ, ಈ ಬೀಗದ ಕೈಗಳನ್ನು ತೆಗೆದುಕೊ, ಇನ್ನು ಸ್ವಲ್ಪಹೆಚ್ಚಾಗಿ ಕಾಯಿ ಪತ್ರೆ ಗಳನ್ನು, ತೆಗೆದು ಕೊಂಡುಬಾ.

ಧಾ. ಸಕ್ಕರೆ ಬಾದಾಮಿ ಬೇಕೆಂದು ಭಕ್ಷ್ಯಮಾಡುವರು ಕೇಳುತ್ತಾರೆ.

(ಕಾಪಿಲನು ಪ್ರವೇಶಿಸುವನು.)

ಕಾ. ಬನ್ನಿ, ಏಳಿ, ಆಗಲೆ ಎರಡನೆಯ ಜಾವದ ಕೋಳಿ ಕೂಗಿತು, ಈಗ ಮೂರುಘಂಟೆ ಹೊಡಿಯಿತು; ಪ್ರಯವಾಗುತ್ತೆಂದು ನೋಡ ಬೇಡಿರಿ.

ಧಾ. ಹೋಗಿ, ಹೋಗಿ, ಹೆಂಗಿಸಿನಂತೆ ಈ ಕೆಲಸಕ್ಕೆ ಏಕೆಬಂದಿರಿ,

ಮಲಗಿಕೊಳ್ಳಿರಿ; ನಾಳೆ ಬಹಳ ಕೆಲಸ ವಿರುವದು, ನಿದ್ರೆಗೆಡುವದ್ದರಿಂದ ದೇಹಕ್ಕೆ ಆಯಾಸವಾದೀತು.

ಕಾ. ಇದೇನು, ಸ್ವಲ್ಪಮಾತ್ರಕ್ಕೆ ರಾತ್ರಿಯಲ್ಲಾ ನಿದ್ದೆ ಗೆಡುತ್ತಿದ್ದ ನನಗೆ ಏನೂ ಆಗಲಿಲ್ಲ, ಈಗ ಏನಾದೀತು?

ಲ. ತಮ್ಮ ಯೌವನದಲ್ಲಿ ರಾತ್ರಿ ಸಂಚಾರ ಬಹಳ ವಿರುಬಹುದು, ಈಗ ಅಂಥಾ ಸಂಚಾರಕ್ಕೆ ನಾನು ಅವಕಾಶವನ್ನು ಕೊಡಲಾರೆನು.

(ಲಲಿತಾಂಗಿ ಧಾತ್ರಿಯರು ಹೋಗುತ್ತಾರೆ.)

ಕಾ. ನನ್ನ ಹೆಂಡತಿ ಬಹಳ ಹೊಟ್ಟೆಗಿಚ್ಚುಳ್ಳವಳು (ಪರಸ್ತ್ರೀ ಶಂಕಿನಿ.) ಯಾರದು, ಏನುಬೇಕು.

(ಸೇವಕರು ತಟ್ಟೆ ಮುಂತಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಾರೆ.)

ಬೆಳಗಾಯಿತು, ಮದಮಣಿಗನು ಬರುವ ಹೊತ್ತಾಯಿತು; ಜಾಗ್ರತೆಯಲ್ಲಿ ಸಕಲ ಸನ್ನಾಹವೂ ಸಿದ್ಧವಾಗಲಿ. (ತೆರೆಯಲ್ಲಿ ವಾದ್ಯವಾಗುವದು.)

(ಧಾತ್ರಿಯು ಪ್ರವೇಶಿಸುವಳು.)

ಧಾತ್ರಿಯೆ, ಬೇಗನೆಹೋಗಿ ಲೀಲಾವತಿಯನ್ನು ಎಬ್ಬಿಸಿ, ಸಿದ್ಧಳಾಗಿ ಇರುವಂತೆ ಹೇಳು; ವರನು ಬಂದಿದ್ದಾನೆ. (ಎಲ್ಲರೂ ಹೋಗುವರು)

ಪಂಚಮಸ್ಥಾನಂ—ಶಯ್ಯಾಗೃಹ.

(ಲೀಲಾವತಿಯು ಶಯನದಮೇಲೆ ಮಲಗಿರುವಳು, ಧಾತ್ರಿ ಪ್ರವೇಶಿಸುವಳು).

ಧಾ. ಎಲಮ್ಮ! ಲೀಲಾವತಿ! ಇದೇನು ಇಷ್ಟು ನಿದ್ರೆ? ಇದು ಬಲು ಸೋಮಾರಿತನದ ಹುಡುಗಿ, ಎಲೆ ತರುಣಿ, ನನ್ನ ಅರಗಿಣಿ! ನಾರೀ ಶಿರೋಮಣಿ! ಮದಮಣಿಗಿತ್ತಿಯೆ! ಏಳು ಇದೇನು? ಯಾವದಕ್ಕೂ ಮಾತನಾಡುವದಿಲ್ಲವಲ್ಲ! ಮಗಳೆ, ಈ ರಾತ್ರೆ ಚೆನ್ನಾಗಿ ನಿದ್ರೆಯನ್ನು ಮಾಡಬಹುದ; ಈಗ ಏಳು. ದೇವರೆ ಇದೇ ನಿದು! ಇಷ್ಟು ಗಾಢ ನಿದ್ರೆಯೆ! ಎಬ್ಬಿಸಲೇ ಬೇಕಾಯಿತು, ತಾಯೆ ಏಳು, ಹಾಗಾದರೆ ನಿನ್ನ ಗಂಡನೆ ಬಂದು ಎಬ್ಬಿಸಲಿ; ಇದೇನು ಹೊಸಶೇರೆಯನ್ನು ಉಟ್ಟುಕೊಂಡು ಹಾಗೆಯೇ

ಮಲಗಿ ಕೊಂಡೆಯೋ? ಲೀಲಾವತಿ, ಲೀಲಾವತಿ, ಹಾ ಹಾ ಅಯ್ಯೋ! ಲೀಲಾವತಿ ಸತ್ತು ಇರುವಳು! ಮುಂದಿನ್ನೇನುಗತಿ! ಅಯ್ಯೋ ದುರ್ದಿನವೆ! ನನ್ನಬಾಳೆ! ಸ್ವಲ್ಪನೀರುಬೇಕು. ಯಜಮಾನನೆ! ಯಜಮಾನಿತಿಯೆ! ಬೇಗಬನ್ನಿ, ಬೇಗಬನ್ನಿ!

(ಲಲಿತಾಂಗಿ ಪ್ರವೇಶಿಸುವಳು).

ಲ. ಇದೇನು ಗದ್ದಲ?

ಧಾ. ಅಯ್ಯೋ ಕಷ್ಟವೆ!

ಲ. ಏನಾಯಿತು?

ಧಾ. ನೋಡು, ನೋಡು, ಕೆಟ್ಟದಿನವೆ!

ಲ. *ಅಯ್ಯೋ! ನನ್ನ ಮಗುವೆ! ನನ್ನ ಪ್ರಾಣವೆ! ಎದ್ದು ನನ್ನನ್ನನೋಡು, ಇಲ್ಲವಾದರೆ ನಾನೂ ನಿನ್ನೊಂದಿಗೆ ಸಾಯುತ್ತೇನೆ; ಹಾ ಹಾ ಯಾರನ್ನಾದರೂ ಕರೆ, ಕರೆ, ಮುಂದೇನು ಗತಿ! ಹಾ ಮಗುವೆ.*

(ಕಾಪಿಲನು ಪ್ರವೇಶಿಸುವನು.)

ಕಾ. ಚೆನ್ನಾಯಿತು! ಚೆನ್ನಾಯಿತು! ಲೀಲಾವತಿಯನ್ನು ಹೊರಗೆಕರೆದುಕೊಂಡು ಬಾ. ಅವಳ ಗಂಡನು ಬಂದು ಕಾದು ಇರುವನು.

ಧಾ. ಅವಳು ಸತ್ತಳು! ಪ್ರಯಾಣ ಮಾಡಿದಳು! ಅಯ್ಯೋ ಕಷ್ಟವೆ!

ಲ. ಹಾ ಸತ್ತಳು! ಮೃತಳಾಗಿರುವಳು!

ಕಾ. ಎಲ್ಲಿ ನಾನು ನೋಡುತ್ತೇನೆ! ಅಯ್ಯೋ ಮುಂದಿನ್ನೇನುಗತಿ! ಶೈತ್ಯವು ಸಕಲಾಂಗದಲ್ಲಿಯೂ ವ್ಯಾಪಿಸಿರುವದಲ್ಲ! ಪ್ರಾಣವು ಹೋಗಿರುವದಲ್ಲ! ಹಾ ಹಾ ದೈವವೆ! ಹಾ ಮಗಳೆ! ಹಾ ಮನ್ಮಾನಸಮರಾಳೆ! ಹಾ

॥ರಾಗ— ನಾದನಾಮಕ್ರಿಯೆ॥ ಆದಿತಾಳ॥ (ಕೋಮಲಾಂಗಿಯನ್ನು ಕಾಡೊಳ್.)

* ಹಾಸುತೆ ನಾನಿದ । ಸೈಸುವೆನೆಂತು ॥ ಪ ॥ ಆಸೆಗೊಳಿಸುತಿಂತು ॥ ವೇಸಪಗೆಲ್ವರೆ ॥ ಅ ॥ ನಂದನೆ ನೀಂಪ್ರಾಣ । ವೆಂದು ನಾಂ ತಿಳಿಯುತೆ । ಹಿಂದಿನಶೋಕ । ವೃಂದವ ಮರೆತಿರ್ದೆ ॥೧॥ ಬೇಡುವೆ ನೀನೆದ್ದು । ನೋಡುತೆನ್ನೊಡನೆ ಮಾ । ತಾಡು ಹಾಗಾಗದಿರೆ । ಕೂಡಲೆ ಬಹೆನಾನು ॥ ೨ ॥ ನಂದನೆ ಹಾ ಹೃದಯಾ । ನಂದನೆ ಚಂದನ । ಬಂದು ಮಾತನೀನಾಡು । ಮಂದಹಾಸವ ಕೂಡು ॥ ೩ ॥

ನನ್ನ ಕೋಗಿಲೆ! ನಿರ್ಭಾಗ್ಯನಾದ ನಾನು ಕೆಟ್ಟೆನೆ! ತಣ್ಣಗಿರುವಳು, ಕೈ ಕಾಲುಗಳು ಸೆಳೆಕೊಂಡಿವೆ, ಪ್ರಾಣವುಹೋಗಿ ಬಹಳ ಹೊತ್ತಾಗಿರುವದು!

ಕಂ ॥ ಸರಸೋ ಪವನಸ್ಥಿತ ಸುಂ। ದರಸುಮದೊಳ್ಮಂಜು ಬಿದ್ದು ಕೆಡಸಿ
ವ ತೆರದಿಂ ॥ ನಿರುಪಮ ತರುಣೀಮಣಿಯೊಳ್ ॥ ಮರಣಂ ಹಾ ಕುಳಿ
ತುರೂಪವಂ ಕೆಡಸಿತು ಹಾ ॥ ೮ ॥

ಹಾ, ದುರ್ದಿನವೆ!

ಧಾ. ಅಯ್ಯೋ, ಅಯ್ಯೋ!

ಲ. ಇಂಥಾ ಕಷ್ಟಬಂತಲ್ಲಾ!

ಕಾ. ಕಂ ॥ ಎನ್ನೀಪ್ರಾಣಪ್ರಿಯಸುತೆ। ಯೆನ್ನಿಲ್ಲಿಂ ಕೊಂಡುಪೋದ
ಮೃತ್ಯುವಿದೀಗಳ್ ॥ ಖಿನ್ನನ ಮಾಡುತಲೆನ್ನಂ। ಮುನ್ನಂ ಮಾತಾಡ
ದಂತೆ ಮಾಡಿಹುದಕಟಾ ॥ ೯ ॥

(ಪೂಜ್ಯಪಾದ, ಪೇಶಲಾಂಗ, ವಾದ್ಯಗಾರರೂ ಪ್ರವೇಶಿಸುವರು.)

ಪೂ. ಮದವಣಗಿತ್ತಿ ದೇವಾಲಯಕ್ಕೆ ಹೋಗಲು ಸಿದ್ಧಳಾಗಿರುವಳೊ?

ಕಾ. ಪುನಃ ಬಾರದಂತೆ ಹೋಗಲು ಸಿದ್ಧಳಾಗಿಧಾಳೆ; ನೀವು ವಿವಾಹ ವನ್ನು ಮಾಡುವದಕ್ಕಿಂತಲೂ ಮೊದಲೆ, ಅವಳನ್ನು ಮೃತ್ಯುವೇ ವಶಮಾಡಿ ಕ್ಕೊಂಡನು; ನೋಡಿ ಅಲ್ಲಿ ಮಲಗಿರುವಳು; ಕೋಮಲವಾದ ಪುಷ್ಪವು ಆ ಯಮನಿಂದ ನಾಶ ಮಾಡಲ್ಪಟ್ಟಿತು; ಮೃತ್ಯುವೇ ನನಗೆ ಅಳಿಯನು, ನನಗೆ ಸಂತತಿ ಇಲ್ಲದ್ದರಿಂದ ನನ್ನ ಸರ್ವಸ್ವಕ್ಕೂ ಮೃತ್ಯುವೆ ಬಾಧ್ಯನು. *ನನ್ನ ಪ್ರಾಣಪ್ರಿಯಳಾದ ಮಗಳೇ ಸತ್ತಮೇಲೆ ನನ್ನ ಭಾಗಕ್ಕೆ ಸಕಲವು ಸತ್ತಂತೆ ಆಯಿತು.*

ಪೇ. ಇಂಥಾ ನಿರ್ಭಾಗ್ಯದಿನ ಪ್ರಾಪ್ತಿಗೆಯೇ ನಾನು ಇಷ್ಟುಕಾದಿ ದ್ದದ್ದು! ಇದನ್ನು ನೋಡುವದು ನನ್ನ ಹಣೆಯಲ್ಲಿ ಬರೆದುದೆ?

॥ ರಾಗ—ತೋಡಿ ॥ ರೂಪಕತಾಳ ॥ (ಸರೊರುಹಾಕ್ಷನನ್ನುಬಿಟ್ಟು)

* ತನೂಜೆಯೆನ್ನತೊರೆದು ಕಾ। ನನಕೆ ಹೋದೆಯಾ। ಹಾಹಾ ಸುತೆ ॥ ಪ ॥ ಮನೋವಿನೋದವೆಲ್ಲನಿನ್ನೊ। ಡನೆಯೆತೊಲಗಿತೆ। ಅನಾಥನಾದೆನಕಟ ಮುಂದ ॥ ಕನು ವದೇನುಪೇಳ್। ಹಾಹಾ ಸುತೆ ॥ ೧ ॥ ಮದೀಯ ಜೀವನಾಡಿ ನೀನು। ಸದಯೆ ಯಲ್ಲವೆ। ಉದಾರವಾಸುದೇವ ಪದಾ। ಸ್ಪದಕೆ ಪೋದೆಯಾ। ಹಾಹಾ ಸುತೆ ॥ ೨ ॥

ಲ. ಅಯ್ಯೋ ಕೆಟ್ಟದಿನವೆ! ಸುಟ್ಟದಿನವೆ! ನನಗೆ ಇದ್ದ ಎಲ್ಲಾ ಮಕ್ಕಳನ್ನೂ ಕಳೆದುಕೊಂಡು ಇವಳ ಮೇಲೆಯೇ ನನ್ನ ಪ್ರಾಣವನ್ನು ಇಟ್ಟಿದ್ದೆನಲ್ಲಾ! ಅಂಥಾ ಒಬ್ಬ ಮಗಳನ್ನೂ ತೆಗೆದುಕೊಂಡು ಹೋದೆಯಾ! ಹಾ ಯಮನೆ! ನಿರ್ಘೃಣನೆ! ಕ್ರೂರನೆ!

ಧಾ. ಇಂಥಾ ಕಷ್ಟವನ್ನು ನೋಡುವದಕ್ಕೆ ಆಯಿತೆ ನಾನು ಬದುಕಿದ್ದು, ಅಯ್ಯಯ್ಯೋ! ಹಾ ಹಾ!

ಪೇ. ಕೆಟ್ಟ ಸಾವೆ! ನಿನ್ನಿಂದ ನನಗೆ ಮೋಸವಾಯಿತು, ನಿರ್ಭಾಗ್ಯ ನಾದೆನು! ಕ್ರೂರವಾದ ಸಾವೆ, ನಿನ್ನಿಂದ ನಾನು ಮೋಸಗೊಳಿಸಲ್ಪಟ್ಟೆನು; ಅಯ್ಯೋ ಅನುರಾಗವೆ, ಹಾ ಹಾ ನನ್ನ ಪ್ರಾಣವೆ—ಪ್ರಾಣವೆಲ್ಲಿರುವದು? ಅನುರಾಗವು ಸಾವಿನಲ್ಲಿರುವದು!

ಕಾ. ವಿಧಿಯೆ, ಕೆಟ್ಟವಿಧಿಯೆ! ಸ್ವಲ್ಪವೂ ಕರುಣ ವಿಲ್ಲವೆ? ನಮ್ಮ ಈ ಉತ್ಸವದ ದಿನವನ್ನು ದುರ್ದಿನವನ್ನು ಮಾಡುವದಕ್ಕೆ ಬಂದೆಯೊ! ಮಗಳೆ ಮಗಳೆ—ನನ್ನ ಮಗಳಲ್ಲ, ಪ್ರಾಣವು! ಮಗಳೇ ನೀನು ಮೃತಳಾದೆಯಾ? ಅಯ್ಯೋ ಏನುಮಾಡಲಿ? ಈ ಮಗಳೊಂದಿಗೆ ನನ್ನ ಸಂತೋಷಗಳೂ ಕೊನೆಗಂಡವು.

ಫ್ರಾ. ಎಲೈ ಈ ವಿಧವಾಗಿ ವ್ಯಸನ ಪಡುವದರಿಂದ ಪ್ರಯೋಜನ ವೇನು? ಈ ಸುಗುಣೆಯಲ್ಲಿ ದೇವರು, ನೀನೂ ಸಹ ಸಂಪೂರ್ಣಾಭಿಮಾನ ವನ್ನು ಇಟ್ಟಿದ್ದಿರಿ; ದೇವರಿಗೆ ಇವಳಲ್ಲಿ ಪರಮಾನುಗ್ರಹವು ಉಂಟಾದ್ದರಿಂದ ಇವಳನ್ನು ತನ್ನ ಪಾದಾರವಿಂದಕ್ಕೆ ಸೇರಿಸಿ ಕೊಂಡನು; ಇಲ್ಲಿರುವದಕ್ಕಿಂತಲೂ ದೇವರ ಸಮೀಪದಲ್ಲಿರುವದು ಉತ್ತಮವಲ್ಲವೆ? ಸರ್ವದಾ ಇವಳನ್ನು ಪಾಲಿಸಿಕೊಂಡಿರುವ ಶಕ್ತಿಯು ನಿನಗೆ ಇರಲಿಲ್ಲ, ಆದರೆ ದೇವರು ಶಾಶ್ವತ ಪದವಿಯನ್ನು ಕೊಟ್ಟು ಇರುವನು; ಆಕೆಗೆ ಒಳ್ಳೇದನ್ನೆ ಅಪೇಕ್ಷಿಸುತ್ತಿದ್ದೆ ಅಲ್ಲವೆ? ಈಗ ಅವಳು ಸಕಲಕಷ್ಟಗಳಿಂದಲೂ ಮುಕ್ತಳಾಗಿ, ನಿತ್ಯಾನಂದ ವನ್ನು ಪಡೆದು ಇರಲು, ವ್ಯಸನಪಡುವದು ಯೋಗ್ಯವೊ? ಇದೇನು ಹುಚ್ಚುತನ! ಬಹಳದಿನ ಬದುಕಿ ಇರುವವರಿಗೆ ಸುಖವು ಕಡಮೆ; ಮದುವೆಯಾದ ಸ್ವಲ್ಪಕಾಲದಲ್ಲಿಯೇ ಸಾಯುವದು ಉತ್ತಮ; ನಿನ್ನ ಕಣ್ಣೀ

ರುಗಳನ್ನು ವರಿಸಿ, ಇವಳ ಸದ್ಗತಿಗಾಗಿ ದೇವರನ್ನು ಪ್ರಾರ್ಥಿಸು; ನಮ್ಮ ದೇಶಾಚಾರ ರೀತ್ಯಾ ಇವಳನ್ನು ಶ್ಮಶಾನಕ್ಕೆ ಎತ್ತಿಕೊಂಡು ಹೋಗಿ. ಎಲೈ, "ಅತಿ ಸರ್ವತ್ರ ವರ್ಜಯೇತ್" ಎಂದಿರುವದು ನಿನಗೆ ಗೊತ್ತಿಲ್ಲವೊ?

ಕಂ ॥ ವಿಮಲಮತಿ ಕೇಳು ಜಗದೊಳ್ । ಮಮತೆಯು ಬಲು ಸೊಗ
ಮನೀವು ದಾದೊಡಮದತಾ ॥ ನಮಿತದಿ ನಿಡಲದೆ ಕೊನೆಯು । ಶ್ಲ
ಮವಮಾ ಬಹುಕಷ್ಟವಾಗಿ ಪರಿಣಮಿಸುವುದೈ ॥ ೧೦ ॥

ಕಾ. *ಉತ್ಸವಕ್ಕೆಂದು ಮಾಡಿದ ಸಕಲವೂ ಅಶುಭಕ್ಕಾಗಿ ಪರಿಣಮಿಸಿತು: ವಾದ್ಯಧ್ವನಿಗಳೆಲ್ಲಾ ರೋದನವಾಯಿತು; ವಿವಾಹಕ್ಕೆ ಸಿದ್ಧಪಡಿಸಿದ್ದು ಅಪರಕ್ರಿಯೆಗೆ ಉಪಯೋಗಿಸಿತು!*

ಕಂ ॥ ಪರಿಣಯದೊಳ್ವಧುವಿಗೆ ಸಿಂ । ಗರಿಸಲ್ ತರಿಸಿದ್ದ ಕುಸುಮ ವಸ
ನಾದಿಗಳೀ ॥ ಮರಣವ ಪೊಂದಿರುವೆನ್ನಯ । ತರಳೆಯ ಶವಕಕಟ
ಸಿಂಗರಿಸುವಂತಾಯ್ತೀ ॥ ೧೧ ॥

ಪೂ. ಅಯ್ಯಾ ನೀನು ಒಳಕ್ಕೆ ಹೋಗು, ಅಮ್ಮಾ ನೀವು ಒಳಕ್ಕೆ ಹೋಗಿ, ಪೇಶಲಾಂಗನೆ ನೀನೂ ಹೋಗು, ಎಲ್ಲರೂ ಈ ಗುಣಾಢ್ಯಳ ಶವದ ಹಿಂದೆ ಹೋಗಲು ಸಿದ್ಧರಾಗಿ; ನೀವಾಗಿಯೇ ಮಾಡಿಕೊಂಡ ಒಂದಾನೊಂದು ಅಪರಾಧದಿಂದ ನಿಮಗೆ ಇಂಥಾ ಕಷ್ಟವು ಪ್ರಾಪ್ತವಾಯಿತು,

ಕಂ ॥ ಬಿಡಿಬಿಡಿ ಹರಿಸಂಕಲ್ಪದೆ । ನಡೆವುದ ಕೀರೀತಿಯಾಗಿ ನೀವೆಲ್ಲರಿ
ದೇಂ ॥ ಕಡುಮೂರ್ಖರಾಗಿ ದುಃಖಂ । ಬಡುವರೆ ಸರಿಯಲ್ಲ
ಮೇಳರೇಳರಿ ಬೇಗಂ ॥ ೧೨ ॥ (ಎಲ್ಲರೂ ಹೋಗುವರು)

॥ರಾಗ—ನಾದನಾಮಕ್ರಿಯೆ ॥ ಆದಿತಾಳ ॥ (ಕಡಿವೆನೆಂತುಹಾ.)

*ಬಾಲೆಮಡಿದಳೀ । ಗೋಳ । ತಾಳಲಾರೆನು ॥ ಪ ॥ ಹೇಳಲೇನನು । ಹಾ ಹಾ! ಖೂಳನಾದೆನು ॥ ಅ ॥ ಸುಶುಭಕೆಸಗಿದು । ದೆಲ್ಲಾ । ಅಶುಭಕಾದುದೆ । ವಿಶದಪೀಠವು । ಹಾ ಹಾ! ಕುಶಗಳಾದವೆ ॥ ೧ ॥ ಮಸಣವಾದುದೆ । ನಿನಗೆ । ಹಸೆಯಜಗುಲಿಯು । ಕುಸುಮವಸನಗಳ್ । ಮುಡಿಸು । ಮುಸುಕಿಗಾದುವೆ ॥ ೨ ॥ ಬಲಿದವಾದ್ಯವು । ಮರಣದಬಲಿಗಳಾದುದು । ಮಲಗುಮನೆಯುಹಾ । ಮಸಣ । ನೆಲವೆಯಾದುದೆ ॥ ೩ ॥

ಪಂಚಮಾಂಕಂ.

ಪ್ರಥಮ ಸ್ಥಾನಂ—ಮಾಹಿಷ್ಮತೀಪುರದ ಬೀದಿ.

(ರಾಮವರ್ಮನು ಪ್ರವೇಶಿಸುವನು.)

ರಾ. ರಾತ್ರಿ ನಾನು ಸ್ವಪ್ನದಲ್ಲಿ ಕಂಡದ್ದೆಲ್ಲಾ ನಿಜವಾದ ಪಕ್ಷಕ್ಕೆ, ಏನೊ ಒಂದು ಶುಭ ವರ್ತಮಾನವು ಜಾಗ್ರತೆಯಲ್ಲಿ ಬರುವಂತೆ ಕಾಣುತ್ತೆ ; ಮನಸ್ಸಿನಲ್ಲಿ ವಿಚಿತ್ರವಾದ ಸಂತೋಷಭಾವವು ಉದಿಸಿರುವದು, ಎಂದಿಗೂ ನಾನು ಕಾಣದೇ ಇರುವ ಪರಮೋತ್ಸಾಹವು ಈ ದಿನ ನನಗೆ ಪ್ರಾಪ್ತವಾಗಿರುವದು. ನನ್ನ ಪ್ರಿಯೆಯು ಬಂದು, ನಾನು ಸತ್ತು ಇರುವದನ್ನು ಕಂಡು, ನನ್ನ ಮುಖದಮೇಲೆ ತನ್ನ ಮುಖವನ್ನು ಇಟ್ಟುಕೊಂಡು, ಹಿತಕರವಾಗಿ ಮುದ್ದಾಡಿ ತನ್ನ ಉಸುರನ್ನು ನನ್ನಲ್ಲಿ ತುಂಬಿದ್ದರಿಂದ, ನಾನು ಪುನಃ ಜೀವಿತನಾಗಿ ಚಕ್ರವರ್ತಿಯಾದಂತೆ ಸ್ವಪ್ನವಾಯಿತು. ಆಃ ! ಇದೇನು ಆಶ್ಚರ್ಯ.

ಕಂ ॥ ಕನಸಿನೊಳಾದನುರಾಗಮೆ । ಘನ ಸೌಖ್ಯಮನಿತ್ತುದೀಗಲದೆ ತಾಂನಿ
ಜಮಾ । ದನುರಾಗ ಮಾಗಲದರಿಂ ॥ ದನುಪಮಸುಖ ಮೆಂತುಟ
ಹುದೊ ನಾ ನರಿಯೆನದಂ ॥ ೧ ॥

(ಬಾಲಚಂದ್ರನು ಪ್ರವೇಶಿಸುವನು.)

ವಾರಣಾವತಿಯಿಂದ ವರ್ತಮಾನವು ಬಂದು ಇರುವದು ; ಬಾಲಚಂದ್ರನೆ, ಏನಯ್ಯಾ ! ಗುರುಗಳ ಕಾಗದವನ್ನು ತಂದು ಇರುವೆಯಲ್ಲವೆ ? ನನ್ನ ಪ್ರಾಣಕಾಂತೆಯು ಹ್ಯಾಗಿರುವಳು ? ನನ್ನ ತಂದೆ ಸೌಖ್ಯವಾಗಿರುವನೆ ? ನನ್ನ ಲೀಲಾವತಿ ಹ್ಯಾಗಿರುವಳು ? ಪುನಃ ಅದನ್ನೇ ಕೇಳುತ್ತೇನೆ, ಏಕೆಂದರೆ, ಆಕೆಯು ಕ್ಷೇಮವಾಗಿದ್ದರೆ ಸಕಲವೂ ಶುಭವಾಗಿರುವದು.

ಬಾ. ಹಾಗಾದರೆ ಆಕೆ ಸ್ವಸ್ಥಳಾಗಿರುವಳು, ಕೆಟ್ಟದ್ದೇನೂ ಇಲ್ಲ: ಆಕೆಯು ಶರೀರವು ಕಾಪಿಲನ ವಂಶೀಯರ ಶ್ಮಶಾನದಲ್ಲಿ ಮಲಗಿರುವದು, ಆಕೆಯು ಸುಗುಣ ಯುಕ್ತವಾದ ನಿತ್ಯಜೀವವು ದೇವಲೋಕದಲ್ಲಿ ದೇವತಾ

ಸ್ತ್ರೀಯರೊಡನೆ ಇರುವದು. ಆಕೆಯ ದೇಹವನ್ನು ಶ್ಮಶಾನಕ್ಕೆ ತೆಗೆದು ಕೊಂಡು ಹೋದಕೂಡಲೆ ನಿನಗೆ ವರ್ತಮಾನವನ್ನು ಹೇಳಲು ಬಂದುಬಿಟ್ಟೆನು ; ನಾನು ಹೇಳಿದ ಈ ಅಶುಭವರ್ತಮಾನಕ್ಕಾಗಿ ಕ್ಷಮಾಪಣೆಯನ್ನು ಬೇಡುವೆನು. ಯತ್ನವಿಲ್ಲ. ನೀನು ನನಗೆ ನೇಮಿಸಿದ್ದಕಾರಣ ಈ ಕೆಟ್ಟ ವರ್ತಮಾನವನ್ನು ಹೇಳಿ ಇರುತ್ತೇನೆ.

ರಾ. ಹಾಗೊ ? ಹಾ ಹಾ ! ಎಲೈ ಪಾಪಿಗಳಾದ ನವಗ್ರಹಗಳಿರಾ, ಎಲೆ ಹತವಿಧಿಯೇ, ನಿಮ್ಮನ್ನು ಮಂದಭಾಗ್ಯನಾದ ನಾನು ನಿರಾಕರಿಸುವೆನು! ನಾನು ವಾಸಮಾಡುವ ಸ್ಥಳವು ನಿನಗೆ ಗೊತ್ತಿಧೆಯಷ್ಟೆ ; ಲೇಖನಿಯನ್ನು ತೆಗೆದುಕೊಂಡುಬಾ, ಕುದುರೆಗಳ ಟಪ್ಪಾಲನ್ನು ಇಡಿಸು ; ಈ ರಾತ್ರಿಯೇ ಇಲ್ಲಿಂದ ಹೋಗುತ್ತೇನೆ.

ಬಾ. ಸೈರಿಸು, ಸೈರಿಸು, ನಾನು ಬೇಡುವೆನು. ನಿಧಾನವನ್ನು ತಾಳು, ನಿನ್ನ ದೃಷ್ಟಿಯೂ, ಮುಖಭಾವವೂ ಬಹಳ ಕ್ರೂರವಾಗಿ ಕಾಣುತ್ತಿದೆ, ಏನೋ ಒಂದು ವಿಪರೀತವನ್ನು ಸೂಚಿಸುತ್ತಿದೆ.

ರಾ. ಛೀ ! ಸುಮ್ಮನಿರು, ನೀನು ಮೋಸಹೋಗಿರುವೆ ; ನಾನು ಹೇಳಿದ್ದನ್ನು ಮಾಡು, ಇಲ್ಲಿಂದ ಹೋಗು, ಗುರುಗಳಿಂದ ನನಗೆ ಪತ್ರಿಕೆಯನ್ನು ತಂದಿಲ್ಲವೆ ?

ಬಾ. ಅಯ್ಯಾ, ಇಲ್ಲಾ.

ರಾ. ಚಿಂತೆಯಿಲ್ಲ ; ಹೋಗು ಕುದುರೆಗಳನ್ನು ಇಡಿಸು ; ನಾನು ನಿನ್ನ ಕೂಡಲೇ ಬರುತ್ತೇನೆ.

(ಬಾಲಚಂದ್ರನು ಹೋಗುತ್ತಾನೆ.)

॥ ರಾಗ—ಪೂರ್ವಿ ॥ ರೂಪಕತಾಳ ॥ (ಅಬ್ಬರಾಮಭಕ್ತಿಯೆಂತೊ)

ಏನಿದೇನಿದಾಹ ಸು । ಸ್ವಪ್ನದ ಕನಸು ॥ ಪ ॥ ರಜನಿಯಲ್ಲಿ ಕಂಡುದೆಲ್ಲ । ನಿಜವೆ ತಾನಾಗಿರಲ್ । ವಿಜಯ ಸುಖಗಳೀಗಲೆನ್ನ । ಭಜಿಸುವಂತೆ ತೋರುತಿಹುದು ॥ ೧ ॥ ಘೋರಚಿಂತೆಯಲ್ಲವ । ದೂರವನ್ನು ಮಾಡುತ । ಸಾರಮುದವನೆನ್ನ ಮನವು । ಸೇರುವಂತೆ ತೋರುತಿಹುದು ॥ ೨ ॥ ಕಂಪಮಡಗಿತಂಗದಲ್ಲಿ । ಪೊಂಪುಳಿತಾನೀಗಲಹುದು । ಸೊಂಪುಗೊಳಿಸುತೆನ್ನಬಗೆಗೆ । ಪೆಂಪ ಸೆಂತುಟೀಯುತಿಹುದೊ ॥ ೩ ॥

ಕಂ ॥ ಹೃದಯೇಶ್ವರಿ ಲೀಲಾವತಿ । ಮುದದಿಂದೀಯಿರುಳೆ ನಿನ್ನೊಡನೆ
ಮಲಗುವೆನಾಂ ॥ ಅದಕೇನುಪಾಯಮಿಂದ । ಭ್ಯುದಯಿಪುದೋ ಬ
ಗೆಯೊಳದನು ಪರಿಚಿಂತಿಪೆನಾಂ ॥ ೩ ॥

*ಆಃ ಕೆಡುಕೆ! ನಿರಾಶೆಯುಳ್ಳ ಮನುಷ್ಯರ ಆಲೋಚನೆಗೆ ಎಷ್ಟು ಬೇಗ ವಶವಾಗುತ್ತೀಯೆ! ನಾನು ಒಬ್ಬ ವೈದ್ಯನನ್ನು ಬಲ್ಲೆನು,—ಇಲ್ಲಿಯೇ ವಾಸವಾಗಿರುವನು,—ಇವನೊ ಚಿಂದಿಗಳನ್ನು ಹೊದ್ದುಕೊಂಡು, ಕ್ಷಾಮದಿಂದ ಪೀಡಿತನಾದವನಂತೆ, ಹೊಟ್ಟೆಗೆ ಇಲ್ಲದೆ ಕೃಶನಾಗಿ ಅಸ್ಥಿಚರ್ಮಮಾತ್ರವುಳ್ಳವನಾಗಿ ಜೀವಿಸುತ್ತಿರುವನು; ಅವನ ಅಂಗಡಿಯಲ್ಲಿ ಬರಿದಾದ ಮಾತ್ರೆಗಳ ಡಬ್ಬಿ, ಮೂಲಿಕೆಗಳು, ಚೂರ್ಣ ಮುಂತಾದ ಔಷಧಿಗಳನ್ನು ಹಾಕುವ ಒಡೆದ ಮಡಕೆಗಳು ತುಂಬಿ ಇರುವವು. ವಿಷವನ್ನು ಮಾರಿದವನಿಗೆ ಮರಣ ದಂಡನೆಯು, ಈ ರಾಜ್ಯದ ನಿಬಂಧನಾ ಶಾಸ್ತ್ರದಲ್ಲಿ ವಿಧಿಸಿ ಇದ್ದರೂ ಈ ನೀಚನು ಆಪನ್ನರಿಗೆ ವಿಷವನ್ನು ಮಾರಲು ಸಿದ್ಧನಾಗಿಯೇ ಇರುವನು, ಇದಕ್ಕೆ ಇವನ ಬಡತನವೇ ಕಾರಣವಾಗಿರುವದು. ಮೊದಲು ಇವನನ್ನು ನಾನು ನೋಡಿದಾಗಲೆ ಹೀಗೆ ಊಹಿಸಿದ್ದೆನು; ಆ ಊಹೆಯು ಈಗ ನನಗೆ ಅನುಕೂಲಿಸಿತು,—ನನಗೇ ವಿಷವನ್ನು ಅವನು ಮಾರುವಂತಾಯಿತು. ಅವನ ಮನೆ ಇದೆ, ಜ್ಞಾಪಕಕ್ಕೆ ಬಂತು; ಈದಿನ ಹಬ್ಬವಾದ್ದರಿಂದ ಅಂಗಡಿಯನ್ನು ಮುಚ್ಚಿರುವನು. ಎಲೋ ವೈದ್ಯನೆ!

(ವೈದ್ಯನು ಪ್ರವೇಶಿಸುವನು.)

ವೈ. ಯಾರು ಇಷ್ಟು ಗಟ್ಟಿಯಾಗಿ ಕೂಗುವರು?

ರಾ. ಬಾರೈಯ್ಯಾ ನೀನು ಅತಿ ಬಡವನೆಂದು ತೋರುತ್ತೆ; ಇಗೊ ಇದರಲ್ಲಿ ಐವತ್ತು ರೂಪಾಯಿಗಳು ಇರುವವು, ಇದನ್ನು ತೆಗೆದುಕೋ,

---

॥ ರಾಗ—ಹಿಂದುಸ್ಥಾನಿ ॥ ತೋಡಿ ॥ (ಇಷ್ಕಮೇತೆ)

*ಸೈಸಲಾರೆ ಬಾರೇನೀರೆ । ವಾಸಿಪಿಕೇ । ಮನಕೆ ಬಾಲಿಕೆ ॥ ಪ ॥ ನಿರುಪಮ ಪಾಪಾ । ಕರನಾದೆನ್ನ । ತೊರೆಯುತಲಿತೊಳಲಿ । ಬಳಲಿ । ಹರಣವನ್ನು । ತೊರೆದನುವೇನು ॥ ೧॥ ಆರೊಳುಹಾ । ದೂರುವೆನಾನೀಗ । ಮೀರಿದ ಮನದ ಖೇದ । ವಾರವನು ಇದನುನಾನು ॥ ೨ ॥ ಹಾ ಹಾ ಪ್ರಿಯೆ! ಹಾ ಹಾ ಜೀವಜಾಯೆ । ಮೋಹಿತನಾ । ದೆನ್ನಾ । ಮುನ್ನ । ಈಹಿಸಕ್ಕಿಂನ್ನೇವೆ । ಭಾವೆ ॥ ೩ ॥

ನನಗೆ ಬಂದು ಕಾಸಿನತೂಕ ವಿಷವನ್ನು ಕೊಡು, ಇದು ಹ್ಯಾಗಿರಬೇಕೆಂದರೆ, ತೆಗೆದುಕೊಂಡ ಕೂಡಲೆ ಮೈಯಲ್ಲೆಲ್ಲಾ ವ್ಯಾಪಿಸಿ ಈ ಪ್ರಪಂಚವು ಬೇಜಾರಾಗಿರುವವನ ಜೀವವು ಹೋಗುವಂತೆ ಮಾಡಬೇಕು;

ಕಂ ॥ ಕೆಂಗಿಡಿಸೋಂಕ ಲುಬೇಗಪಿ । ರಂಗಿಯೊಳಡಿಕಿಗ್ದ ಮದ್ದದೆಂತೋಡುವುದಾ ॥ ಪಾಂಗಿಂವಿಷಮಂ ಕುಡಿದೊಡ । ನಂಗವಬಿಡುತ ಸುವು ಪೋಗುವಂತಿರಬೇಕ್ಕೈ ॥ ೩ ॥

ಮೈ. ಅಂಥಾವಿಷವೇ ನನ್ನಲ್ಲಿರುವದು, ಆದರೆ ಈಪಟ್ಟಣದ ನಿಬಂಧನಾ ಶಾಸ್ತ್ರವು ಇದನ್ನು ಮಾರಿದವರಿಗೆ ಮರಣದಂಡನೆಯನ್ನು ವಿಧಿಸಿರುತ್ತೆ.

ರೋ. ನೀನು ಇಷ್ಟು ಬಡವನಾಗಿ, ನಿರ್ಭಾಗ್ಯನಾಗಿ ಇದ್ದಾಗ್ಯೂ, ಸಾಯುವದಕ್ಕೆ ಹೆದರುವೆಯೋ? ನಿನ್ನ ಕಪೋಲಗಳಲ್ಲಿ ಕ್ಷಾಮವು ನೆಲೆಗೊಂಡಿರುತ್ತೆ, ನಿನ್ನ ಕಣ್ಣುಗಳಲ್ಲಿ ಬಡತನವೂ ಕಷ್ಟವೂ ಮೂರ್ತಿಮತ್ತಾಗಿರುವದು, ಈ ಪ್ರಪಂಚವು ಮತ್ತೂ ಇದರ ನ್ಯಾಯವೂ ನಿನಗೆ ಸ್ನೇಹಿತರಲ್ಲ; ನಿಬಂಧನಾಶಾಸ್ತ್ರವು ನೀನು ಭಾಗ್ಯವಂತನಾಗುವದಕ್ಕೆ ಅವಕಾಶವನ್ನೇ ಕೊಟ್ಟಿಲ್ಲ; ಆದ್ದರಿಂದ ಬಡವನಾಗಿರದೆ ಆ ಶಾಸ್ತ್ರವನ್ನು ಉಲ್ಲಂಘಿಸಿ ಇದನ್ನು ಸ್ವೀಕರಿಸು.

ಮೈ. ನನ್ನದಾರಿದ್ರ್ಯವು ಕೊಡುವಂತೆ ಮಾಡುವದಲ್ಲದೆ ನಾನು ಮನಃ ಪೂರ್ವಕವಾಗಿ ಕೊಡಲಾರೆನು.

ರೋ. ನಿನ್ನ ದಾರಿದ್ರ್ಯಕ್ಕಾಗಿ ಕೊಡುತ್ತೇನೆ ಅಲ್ಲದೆ ನಿನ್ನ ಇಷ್ಟಕ್ಕೆ ಅಲ್ಲ.

ಮೈ. ಇದನ್ನು ನೀರಿನಲ್ಲಿಹಾಕಿ ಕುಡಿದುಬಿಡು; ನಿನಗೆ ಆನೆಗೆ ಇರು ವಷ್ಟು ಬಲವಿದ್ದರೂ ಕೂಡಲೆ ಯಮಲೋಕವನ್ನು ತೋರಿಸುವದು.

ರೋ. ದ್ರವ್ಯವನ್ನು ತೆಗೆದುಕೊ; ಈ ಹಣವಾದರೊ, ಜನಗಳಿಗೆ ಮಾ ರಕೂಡದೆಂದು ವಿಧಾಯಕವಾಗಿರುವ ಈ ಔಷಧಿಗಳಿಗಿಂತಲೂ, ಇದರ ದೆಸೆಯಿಂದ, ಈ ಕೆಟ್ಟಭೂಮಿಯಲ್ಲಿ ಅನೇಕ ಮರಣಗಳನ್ನು ಮಾಡುವದು. ನಾನು ನಿನಗೆ ವಿಷವನ್ನುಕೊಟ್ಟು ಇರುವೆನಲ್ಲದೆ ನೀನು ನನಗೆ ಕೊ ಲಿಲ್ಲ; ಇದರಿಂದ ಬೇಕಾದ್ದನ್ನು ತೆಗೆದುಕೊಂಡು, ಚೆನ್ನಾಗಿ ತಿಂದು ಗಾತ್ರ ನಾಗು.

ರಾ. ಕಂ ॥ ಬಾರೆನ್ನ ಭಾಗಕೆಸುಧಾ । ಸಾರೋಪಮಮಾದ ಮರ್ದೆ ನೀಂವಿಷಮಲ್ಲಂ ॥ ಆ ರಮಣಿಯ ಮಸಣದಬಳಿ । ಸೇರುತೆನಾನಲ್ಲಿ ನಿನ್ನನುಪಯೋಗಿಸುವೇಂ ॥ ೪ ॥

(ಹೋಗುತ್ತಾರೆ.)

ದ್ವಿತೀಯ ಸ್ಥಾನಂ—ಪೂಜ್ಯಪಾದನ ಗುಹೆ.

(ಅಗ್ನಿಮಿತ್ರನು ಪ್ರವೇಶಿಸುವನು.)

ಅಗ್ನಿ. ಪೂಜ್ಯರೆ! ಪೂಜ್ಯರೆ!

(ಪೂಜ್ಯಪಾದನು ಪ್ರವೇಶಿಸುವನು.)

ಪೂ. ಈ ಧ್ವನಿಯು ಅಗ್ನಿಮಿತ್ರನದಾಗಿರುತ್ತೆ. ಮಾಹಿಸ್ಮತಿಯಿಂದ ಶುಭಾಗಮನವೆ, ರಾಮವರ್ಮನು ಏನುಹೇಳಿದನು? ಅಥವಾ, ಅವನು ಕಾಗದವನ್ನು ಕೊಟ್ಟಿದ್ದರೆ, ನನಗೆಕೊಡು.

ಅ. ತಮ್ಮ ಶಿಷ್ಯರಲ್ಲಿ ಒಬ್ಬನನ್ನು ಸಹಾಯಾರ್ಥವಾಗಿ ಕರೆದುಕೊಂಡು ಮಾಹಿಸ್ಮತಿಗೆ ಹೋಗುವದಕ್ಕೆ ಹುಡುಕುತ್ತಿದ್ದೆನು; ಅವನು ರೋಗಿಷ್ಟರನ್ನನೋಡಿ ಉಪಚರಿಸುತ್ತಾ ಇದ್ದನು; ಮಾರಿ ಕೋಪವ್ರವವು ಬಹಳವಾಗಿ ಊರಲ್ಲೆಲ್ಲಾ ವ್ಯಾಪಿಸಿದ್ದುದರಿಂದ, ನಾವು ಹೊರಕ್ಕೆ ಬಂದ ಮನೆಯಲ್ಲಿಯೂ ಜಾಡ್ಯವಿರುವುದೆಂಬ ಸಂದೇಹದಿಂದ, ಅಧಿಕಾರಸ್ಥರು ನಮ್ಮಿಬ್ಬರನ್ನು ಬಿಡದೆ ನಿರ್ಬಂಧಿಸಿ ಇಟ್ಟಿದ್ದರು; ಅದ್ದರಿಂದ ಮಾಹಿಷ್ಮತಿಗೆ ಹೋಗಲಿಲ್ಲ.

ಪೂ. ಆದರೆ ನನ್ನ ಕಾಗದವನ್ನು ರಾಮವರ್ಮನಬಳಿಗೆ ತೆಗೆದುಕೊಂಡು ಹೋದವರು ಯಾರು?

ಅ. ಕಳುಹಿಸುವದಕ್ಕೆ ಆಗಲಿಲ್ಲ:—ತಾದು ಇರುವೆನು, ತೆಗೆದುಕೊಳ್ಳಿರಿ. ಇಲ್ಲಿಗೆ ಕಳುಹಿಸೋಣವೆಂದರೆ, ಜಾಡ್ಯದಿಂದ ಭೀತರಾಗಿ, ಯಾರೊಬ್ಬರೂ ಬಾರದೇಹೋದರು.

ಪೂ. ಹಾ ದುರದೃಷ್ಟವೇ! ಇದರಲ್ಲಿ ಬರೆದದ್ದು ಸಾಧಾರಣವಿಷಯ ನಲ್ಲ, ಬಹುಮುಖ್ಯವಾದದ್ದು; ಇದು ತಲಪದೇ ಇದ್ದದ್ದರಿಂದ ಬಹಳ ಕೇಡು

ಸಂಭವಿಸಬಹುದು. ಇಲ್ಲಿಂದ ಈಗಲೇ ಹೋಗಿ ಒಂದು ಹಾರೆಯನ್ನು ತಂದುಕೊಡು, ಗುಹೆಯ ಬಳಿಗೆ ಬೇಗ ಬಾ.

ಅ. ಹೋಗಿ, ತಂದು ಕೊಡುತ್ತೇನೆ.

ಪೂ. ನಾನೊಬ್ಬನೇ ಶ್ಮಶಾನಕ್ಕೆ ಹೋಗಬೇಕು; ಇನ್ನು ನಾಲ್ಕು ಗಳಿಗೆಯೊಳಗಾಗಿ ಲೀಲಾವತಿಗೆ ಎಚ್ಚರಿಕೆಯಾಗುವದು. ರಾಮವರ್ಮನಿಗೆ ಈ ಸಂಗತಿಯನ್ನು ತಿಳುಹಿಸದೆ ಇದ್ದದ್ದಕ್ಕಾಗಿ ನನ್ನನ್ನು ಬಹಳವಾಗಿ ದೂಷಿಸುವಳು; ನಾನು ಪುನಃ ಒಂದು ಕಾಗದವನ್ನು ಬರೆದು ಮಾಹಿಷ್ಮತಿಗೆ ಕಳುಹಿಸಿ, ರಾಮವರ್ಮನು ಇಲ್ಲಿಗೆ ಬರುವವರಿಗೂ, ಆ ಲೀಲಾವತಿಯನ್ನು ನನ್ನ ಆಶ್ರಮದಲ್ಲಿಯೇ ಇಟ್ಟುಕೊಂಡು ಇರುತ್ತೇನೆ; ಅಯ್ಯೋ ಪಾಪಿ, ಜೀವಿತಳಾಗಿಯೂ ಶ್ಮಶಾನದಲ್ಲಿ ಇರಬೇಕಾಯಿತಲ್ಲ! (ಹೋಗುತ್ತಾರೆ.)

ತೃತೀಯಸ್ಥಾನಂ—ಶ್ಮಶಾನ.

(ಅದರಲ್ಲಿ ಕಾಪಿಲನ ವಂಶಸ್ಥರ ನೆಲಮಾಳಿಗೆ.)

(ಪೇಶಲಾಂಗನು ತನ್ನ ಸೇವಕನ ಕೈಯಲ್ಲಿ ದೀವಟಿಗೆಯನ್ನು ಹೂವುಗಳನ್ನು ತೆಗೆಸಿಕೊಂಡು ಪ್ರವೇಶಿಸುವನು.)

ಪೇ. ಹುಡುಗನೆ, ದೀವಟಿಗೆಯನ್ನು ತಾ, ದೂರಕ್ಕೆ ಹೋಗಿ ನಿಂತುಕೋ, ದೀವಟಿಗೆಯನ್ನು ಆರಿಸಿಬಿಡು, ಇಲ್ಲದಿದ್ದರೆ ಬೆಳಕಿನಿಂದ ಎಲ್ಲರಿಗೂ ಗೊತ್ತಾಗುವದು. ಆ ಮರದ ಸಮೀಪದಲ್ಲಿ ನಿಂತಿದ್ದು ಕಿವಿಗೊಟ್ಟು ಕೇಳುತ್ತಲೇ ಇರು, ಯಾರದಾದರೂ ಹೆಜ್ಜೆಯ ಸದ್ದು ಕೇಳಿದಕೂಡಲೆ ನನಗೆ ಸಂಜ್ಞೆಯನ್ನು ಮಾಡು. ಆ ಪುಷ್ಪಗಳನ್ನು ಕೊಡು. ನಾನು ಹೇಳಿದಂತೆ ಮಾಡು, ಹೋಗು.

ಸೇ. (ಆತ್ಮಗತಂ) ಈ ಶ್ಮಶಾನದಲ್ಲಿ ಒಬ್ಬನೇ ನಿಂತಿರುವದಕ್ಕೆ ಬಹಳ ಭಯವಾಗುತ್ತೆ; ಆದರೂ ಧೈರ್ಯವನ್ನು ಮಾಡುವೆನು. (ಹೋಗುತ್ತಾನೆ.)

ಪೇ. ಕಂ ‖ ಅನಘಮನೋಹರೆ ಮತ್ಪ್ರಿಯೆ । ಘನಪರಿಮಳಭರಿತ ಕು
ಸುಮ ವಿಸರದಿನೀಗಳ್ ‖ ಮನದನ್ನೆ ನಿನ್ನ ಹಾಸಿಗೆ । ಯನುತುಂಬು
ವೆ ನಂಬುಜಾಯತೇಕ್ಷಣೆ ಸುಗುಣೆ ‖ ೫ ‖

ಅಯ್ಯೋ ದುಃಖವೆ, ಪ್ರಿಯೆ, ನಿನಗೆ ಆವರಣವು ಕಲ್ಲುಮಣ್ಣಾಗಿರುವದಲ್ಲಾ! ನಿನ್ನ ಉತ್ತರಕ್ರಿಯೆಗಳನ್ನು ನಾನು ಪ್ರತಿರಾತ್ರಿಯಲ್ಲಿಯೂ ಇದೇ ರೀತಿಯಾಗಿ ಹುವ್ವಿನಿಂದಲೂ ಕಣ್ಣೀರಿನಿಂದಲೂ ಮಾಡುತ್ತೇನೆ.

(ಸೇವಕನು ಸಂಜ್ಞೆ ಮಾಡುತ್ತಾನೆ.)

ನನ್ನ ಸೇವಕನು ಯಾರೋ ಬರುತ್ತಿರುವದನ್ನು ಸೂಚಿಸುತ್ತಾನೆ. ನಾನು ಮಾಡುತ್ತಿರುವ ಅನುರಾಗಯುಕ್ತವಾದ ಉತ್ತರಕ್ರಿಯೆಗಳಿಗೆ, ಭಂಗಪಡಿಸಿ, ಇಲ್ಲಿಗೆ ರಾತ್ರಿಯವೇಳೆಯಲ್ಲಿ ಬರತಕ್ಕವನು ಯಾರು? ಏನು! ದೀವಟಿಗೆ ತರುತ್ತಾನೆ! ರಾತ್ರಿಯೆ, ಸ್ವಲ್ಪಕಾಲ ನನ್ನನ್ನು ಮರೆಮಾಡು.

(ಮರೆಯಾಗುವನು.)

(ಬಾಲಚಂದ್ರನೊಡನೆ ರಾಮವರ್ಮನು ದೀವಟಿಗೆ ಮತ್ತು ಗುದ್ದಲಿ ಸಮೇತನಾಗಿ ಪ್ರವೇಶಿಸುವನು.)

ರಾ. ಆಯುಧಗಳನ್ನು ಕೊಡು, ಈ ಕಾಗದವನ್ನು ತೆಗೆದುಕೊ, ಪ್ರಾತಃಕಾಲವಾದ ಒಡನೆಯೇ ಇದನ್ನು ಪೂಜ್ಯನಾದ ನನ್ನತಂದೆಗೆಕೊಡು. ಬೆಳಕನ್ನುಕೊಡು; ನೀನು ಏನನ್ನು ಕೇಳಿದರೂ, ನೋಡಿದರೂ, ನನ್ನ ಕಾರ್ಯಕ್ಕೆ ಭಂಗಪಡಿಸದೆ ಸುಮ್ಮನೆ ದೂರಹೋಗಿರು, ನಾನು ನೆಲಮಾಳಗೆಯಲ್ಲಿ ನನ್ನ ಪ್ರಿಯಳ ಮುಖವನ್ನು ನೋಡುವದಕ್ಕೂ ಆಕೆಯ ಬೆಟ್ಟಿನಲ್ಲಿರುವ ನನಗೆ ಪ್ರಿಯವಾದ ಉಂಗುರವನ್ನು, ತೆಗೆದು ಕೊಳ್ಳುವದಕ್ಕೂ ಹೋಗುತ್ತೇನೆ; ಆದ್ದರಿಂದ, ನಾನು ಮಾಡುವವದನ್ನು ಹಿಣಿಕಿ ನೋಡದೆಯೇ ಹೊರಟುಹೋಗು, ಹಾಗೆಮಾಡದೆ ನಾನು ಏನುಮಾಡುತ್ತೇನೋ ಅದನ್ನು ನೋಡಲು ಏನಾದರೂ ಬಂದರೆ, ಕ್ರೂರಸ್ವಭಾವನಾದ ನಾನು, ನಿನ್ನನ್ನು ತುಂಡು ತುಂಡು ಮಾಡಿ, ಈ ಶ್ಮಶಾನದ ನೆಲವನ್ನೆಲ್ಲಾ ನಿನ್ನ ದೇಹದಿಂದ ತುಂಬಿಬಿಡುತ್ತೇನೆ.

॥ ರಾಗ—ಭೈರವಿ ॥ ಆದಿತಾಳ ॥ (ಮರುವಾದಗುಣ)

*ಮೃತಿಯಾಂತೆಯನೀಂ। ಹಾಹಾ। ಹಾಕಾಂತೆ ॥ ಪ ॥ ಕುತುಕವು ಹತಮಾದುದೇ ಹಾಕಾಂತೆ ॥ ಅ ॥ ವಲ್ಲಭೆಗಾವರಣ। ವಿಲ್ಲಿಬಿದ್ದಿಹಮಣ್ಣು। ಕಲ್ಲುಗಳಾದುವೆನಲ್ಗೆ। ಹಾಕಾಂತೆ ॥ ೧ ॥ ಸುರಿವಕಂಬನಿಯಿಂದುಂ। ಪರಿಮಳಸುಮದಿಂ। ವಿರಚಿಪೆನುತ್ತರಕಾರ್ಯವನ್ನೀಗ ॥ ೨ ॥

ಬಾ. ನಿನಗೆ ತೊಂದರೆ ಪಡಿಸುವದಿಲ್ಲ, ಹೋಗುತ್ತೇನೆ.

ರಾ. ಹಾಗೆ ಮಾಡುವದರಿಂದ ನನಗೆ ಪ್ರೀತಿಪಡಿಸಿದಂತಾಗುವದು. ಇದನ್ನು ತೆಗೆದುಕೊ, ಸುರಕ್ಷಿತನಾಗಿದ್ದು ಬಾಳು; ಈಗಹೋಗು.

ಬಾ. (ಆತ್ಮಗತಂ) ಇವನ ದೃಷ್ಟಿಯು ಬಹುಕ್ರೂರವಾಗಿರುವದ್ದರಿಂದ, ಇವನಿಗೆ ಗೋಚರನಾಗದಂತೆ ಸಮೀಪದಲ್ಲಿಯೇ ಇರುವೆನು. (ಹೋಗುತ್ತಾನೆ.)

ರಾ. ನೀಚವಾದ ಪೆಟ್ಟಿಗೆಯೆ, ಮರಣದ ಆಸ್ಥಾನವೆ, ನನಗೆ ಅತಿಪ್ರಿಯವಾದ ವಸ್ತುವನ್ನು ಅಪಹರಿಸಿ ಇಟ್ಟುಕೊಂಡು ಇರುವ, ನಿನ್ನ ಹಲ್ಲುಗಳನ್ನು ಮುರಿಯುವೆನು, (ನೆಲಮಾಳಿಗೆಯ ಬಾಗಿಲನ್ನು ಮುರಿಯುತ್ತಾ.)

ಎಲೆ ನೆಲಮಾಳಿಗೆಯೇ, ನಿನಗೆ ಇನ್ನೂ ಹೆಚ್ಚಾಗಿ ಆಹಾರವನ್ನು ಕೊಡುವೆನು.

ಪೇ. ಇವನು ನನ್ನ ಪ್ರಿಯಳ ಸೋದರಮಾವನನ್ನು ಕೊಂದ, ಆ ಧೂರ್ತನಾದ ಮಾಧುರನ ವಂಶೀಯನು ; ಆ ವ್ಯಸನದಿಂದಲೇ ಲೀಲಾವತಿಯು ಸತ್ತಳು ಎಂದು ಎಲ್ಲರೂ ಊಹಿಸುತ್ತಾರೆ ; ಶವಕ್ಕೆ ಅಪಮಾನಕರವಾದ ಕೆಟ್ಟ ಕೆಲಸವನ್ನು ಮಾಡುವದಕ್ಕೆ ಬಂದಿರಬಹುದು : ಅವನನ್ನು ಹಿಡಿಯುತ್ತೇನೆ : (ಮುಂದಕ್ಕೆ ಹೋಗಿ.)

ನೀಚನೆ, ನಿನ್ನ ದುಷ್ಕೃತ್ಯವನ್ನು ಬಿಡು ; ಸತ್ತಮೇಲೆಯೂ ಇಷ್ಟು ದ್ವೇಷವೂ ? ಪುರಭ್ರಷ್ಟನೆ, ನಿನ್ನನ್ನು ನಿರ್ಬಂಧಿಸುವೆನು :—ನನ್ನ ಸಂಗಡ ಮಹಾರಾಜನ ಬಳಿಗೆ ಬಾ ; ನೀನು ಬದುಕಿರುವದು ಸರಿಯಲ್ಲ.

ರಾ. ನಿಜ ; ಅದಕ್ಕಾಗಿಯೇ ನಾನು ಇಲ್ಲಿಗೆ ಬಂದು ಇರುವದು:—ಸುಕುಮಾರನೆ, ದೇಹಾಭಿಮಾನವನ್ನು ಬಿಟ್ಟ ಮನುಷ್ಯನನ್ನು ಆಗ್ರಹಪಡಿಸದೆ, ಇಲ್ಲಿಂದ ಓಡಿಹೋಗು : ಈ ಮಾತನ್ನು ಕೇಳು, ನನಗೆ ಕೋಪ ಬರುವಹಾಗೆ ಮಾಡಿ ನನಗೆ ಮತ್ತೊಂದು ಪಾಪಘಟನೆಯನ್ನು ಮಾಡಿಸಬೇಡ, ಓಡಿಹೋಗು. ನನಗೆ ಸ್ವಶರೀರದಮೇಲೆ ಇರುವ ಪ್ರೇಮಕ್ಕಿಂತಲೂ, ನಿನ್ನ ಮೇಲೆ ಅಧಿಕವಾದ ವಿಶ್ವಾಸವಿರುವದು ; ಸಾಯುವದಕ್ಕೇ ನಾನು ಇಲ್ಲಿಗೆ ಬಂದಿರುವದು ; ನಿಲ್ಲಬೇಡ, ಹುಚ್ಚನ ಕರುಣದಿಂದ ಬದುಕಿರುವೆನೆಂದು ಹೇಳಿಕೋ, ಹೋಗು.

ಪೇ. ನಿನ್ನ ಕುಯುಕ್ತಿಯ ಮಾತುಗಳನ್ನು ನಾನು ಕೇಳುವದಿಲ್ಲ, ಪುರಭ್ರಷ್ಟನಾದ ನಿನ್ನನ್ನು ಹಿಡಿದುಕೊಂಡು ಹೋಗುತ್ತೇನೆ.

ರಾ. ನನ್ನನ್ನು ರೇಗಿಸುವೆಯೋ ? ಆದರೆ, ಇದೋ ತೆಗೆದುಕೊ, ಮೂರ್ಖನೆ. (ಕಲಹಮಾಡುತ್ತಾರೆ.)

ಸೇ. ಅಯ್ಯೋ ದೇವರೆ ! ಕಲಹಾರಂಭವಾಯಿತಲ್ಲಾ :—ಕಾವಲುಗಾರರನ್ನು ಹೋಗಿ ಕರೆದುಕೊಂಡು ಬರುತ್ತೇನೆ. (ಸೇವಕನು ಹೋಗುತ್ತಾನೆ.)

ಪೇ. ಹಾ, ನಾನು ಹತನಾದೆನು ! [ಬೀಳುತ್ತಾನೆ] ನೀನು ಕರುಣಾಳುವಾದರೆ, ನೆಲಮಾಳಿಗೆಯನ್ನು ತೆಗೆದು, ನನ್ನ ದೇಹವನ್ನು ಲೀಲಾವತಿಯ ಸಮೀಪದಲ್ಲಿಡು. (ಸಾಯುವನು.)

ರಾ. ಸತ್ಯವಾಗಿಯೂ ಇಡುವೆನು:— ಇವನ್ಯಾರೋ ಮುಖವನ್ನು ನೋಡೋಣ; ಮದನನಸಂಬಂಧಿಯಾದ, ಐಶ್ವರ್ಯವಂತನಾದ ಪೇಶಲಾಂಗನೆ ! ನಾನು ಚಿಂತಾಕ್ರಾಂತನಾಗಿ ಬರುವಾಗ್ಗೆ, ದಾರಿಯಲ್ಲಿ ನನ್ನ ಸೇವಕನು ಹೇಳಿದ್ದಕ್ಕೆ ನಾನು ಕಿವಿಗೊಡಲಿಲ್ಲವಲ್ಲಾ ಅದೇನು ? ಈ ಪೇಶಲಾಂಗನು ಲೀಲಾವತಿಯನ್ನು ಮದುವೆಯಾಗುತ್ತಿದ್ದನೆಂದು ಹೇಳಿದನೆಂದು ತೋರುತ್ತೆ; ಹಾಗಲ್ಲವೆ ಹೇಳಿದ್ದು ? ಅಥವಾ ಹಾಗೆ ಸ್ವಪ್ನವನ್ನು ಕಂಡೆನೋ ? ಅಥವಾ ಲೀಲಾವತಿಯ ಹೆಸರು ಕೇಳಿದ್ದರಿಂದ ಭ್ರಾಂತನಾಗಿ ಹಾಗೇ ಊಹಿಸುವೆನೋ ? ಹಾ ಹಾ ! ದುರದೃಷ್ಟವೆಂಬ ಪುಸ್ತಕದಲ್ಲಿ ನಮ್ಮಿಬ್ಬರ ಪುಣ್ಯವು ಒಂದೇರೀತಿಯಾಗಿ ಬರೆದು ಇರುವದು ! ಆದ್ದರಿಂದ ನನ್ನಂತೆಯೇ ಈ ಜಯಶಾಲಿಯಾದ ಸಮಾಧಿಯಲ್ಲಿ ನಿನ್ನ ದೇಹವನ್ನು ಇಡುವೆನು ; ಸಮಾಧಿಯೆ—ಅಲ್ಲ, ಅಲ್ಲ, ಲೀಲಾವತಿಯು ಅಲ್ಲಿ ಇರುವಳು,

ಕಂ ॥ ನೆಲಮಾಳಿಗೆಯಿದು ಕಗ್ಗ । ತ್ತಲೆಯಿಂ ಮುಸುಕಿ ದೊರ್ಡಿಂತು ಲೀ
ಲಾವತಿಯಾ ॥ ಕಳಕಳಪರೂಪು ಬೆಳಕಿಂ । ತೊಳಗುವದಿದು ವಿಪ್ರು
ಲದೀಪಗಳ ನಿರಿಸಿದವೊಲ್ ॥ ೬ ॥

ಮೃತನೆ, ಮೃತನಾಗುವನಿಂದ ಸಮಾಧಿಸಲ್ಪಟ್ಟು ಅಲ್ಲಿರು.

(ನೆಲಮಾಳಿಗೆಯಲ್ಲಿ ಪೇಶಲಾಂಗನನ್ನು ಇಡುವನು)

ಮರಣಕಾಲಕ್ಕೆ ಸ್ವಲ್ಪ ಆದಿಭಾಗದಲ್ಲಿ, ವಿಜಾತೀಯವಾದ ಒಂದು ಆನಂದ ವುಂಟಾಗಿರುವದೆನ್ನುವದು, ಎಷ್ಟಾವರ್ತಿ? ಆದರೆ ಅದನ್ನು ನಾನು ಹ್ಯಾಗೆ ಆನಂದವೆಂತ ಹೇಳಲಿ? ಅಯ್ಯೋ ನನ್ನ ಪ್ರಿಯಳೆ!

ಕಂ॥ ವಲ್ಲಭೆ ನಿನ್ನಯಧರಣಗ। ಳೆಲ್ಲವ ಅಪಹರಿಸಿಪೋದ ಮೃತ್ಯುವು ನಿನ್ನೀ॥ ಸಲ್ಲಲಿತಸುಂದರತ್ವವು। ನಿಲ್ಲಿಯೇತಾಂಬಿಟ್ಟು ಪೋಗಿರುವ ದಾಶ್ಚರ್ಯಂ॥ ೭॥

ನೀನು ಆ ಕೆಟ್ಟ ಮೃತ್ಯುವಿನಿಂದ ಪರಾಜಿತಳಾಗಲಿಲ್ಲ; *ಸೌಂದರ್ಯ ಸೂಚಕವಾದ ಕೆಂಪುಬಣ್ಣವು ನಿನ್ನ ತುಟಿಗಳಲ್ಲಿಯೂ, ಕಪೋಲಗಳಲ್ಲಿಯೂ ಪ್ರಕಾಶಿಸುತ್ತಿರುವದು, ಮರಣಚಿನ್ಹವಾದ ಬಿಳುಪು ಅಲ್ಲಿ ಹುಟ್ಟಿಲ್ಲ. ತ್ರೈವಿಕ್ರಮನೆ, ನೀನು ಅಲ್ಲಿ ಮಲಗಿರುವೆಯೋ? ನಿನ್ನ ಯೌವನಾವಸ್ಥೆಯಲ್ಲಿ ನಿನ್ನನ್ನು ಸಂಹರಿಸಿದ ಈ ದುಷ್ಟವಾದ ಕೈಗಳಿಂದ ನಿನ್ನ ಶತ್ರುವನ್ನು ಸಂಹರಿಸುವದಕ್ಕಿಂತಲೂ, ಹೆಚ್ಚಾದ ಉಪಕಾರವನ್ನು ಏನು ಮಾಡಲಿ? ಬಂಧುವೆ, ನನ್ನ ಅಪರಾಧವನ್ನು ಕ್ಷಮಿಸು! ಲೀಲಾವತಿ, ನೀನು ಯಾಕೆ ಇನ್ನೂ ಇಷ್ಟು ಸೌಂದರ್ಯಶಾಲಿಯಾಗಿರುವೆ? ನಿಜವಲ್ಲದ ಮರಣವು ನಿನ್ನಲ್ಲಿ ಅನುರಾಗಿಸುತ್ತಿರುವದೆಂದು ನಂಬಲೆ;

ಕಂ॥ ತರುಣೀಮಣಿ ನಿನ್ನಯಸುಂ। ದರತೆಯನನುಭವಿಸೆ ಕೂರವಿತ್ತುವುನಿನ್ನಂ॥ ನೆರೆತಾಂ ಕಗ್ಗತ್ತಲೆಕವಿ। ದಿರುವೀಸ್ಥಳದಲ್ಲಿ ಮರೆಯೊಳಿಟ್ಟಿರುತಿಹುದೇಂ॥ ೮॥

ಈ ಭಯಕ್ಕಾಗಿ, ನಾನು ಈಕತ್ತಲೆಯ ಸ್ಥಳವನ್ನು ಬಿಟ್ಟುಹೋಗದೆ, ಇಲ್ಲಿಯೇ ಇರುವೆನು; ಮತ್ತು ಅತಿಸುಖಪ್ರದ ದೀರ್ಘ ನಿದ್ರೆಯನ್ನು ಮಾಡುತ್ತಾ, ನಿನ್ನೊಡನೆ ಇರುತ್ತೇನೆ. ಈ ನನ್ನ ದೇಹದಮೇಲೆ ನವಗ್ರಹಗಳಿಗೆ ಇರುವ ಅಧಿಕಾರವನ್ನು ತಿರಸ್ಕರಿಸುತ್ತೇನೆ.

ರಾಗ—ಮುಖಾರಿ॥ ಆದಿತಾಳ.॥ (ಸೈರಿಸಲಾರೇನೀ ದುಃಖವನು.)

*ಹಾಹಾ ಏಳರಸಿ। ಈಹೀತಸರಸಿ॥ ಪ॥ ಪೆಂಪಿನರೂಪದ। ಲಂಪಸೂಚಿಸುವ। ಕೆಂಪುವಾಸಿಲ್ಲಿ ಮೀ। ಯಿಂಪುತುಟಿಗಳೊಳ್॥ ೧॥ ಲೀಲಾವತಿಯೆಸುಕ। ಪೋಲಾಸುರಾಗವು। ನೀಲಾಯತೇಕ್ಷಣೆ। ಮೇಲಾಗಿಮೆರೆವುದು॥ ೨॥ ಆರಸಿಯುಮರಣದ। ಕುರುಪಸೂಚಿಸುವಾ। ಪರಿಬಿಳುಪಿನಿಸುಂ। ಜೆರೆದಿಲ್ಲವು ಹಾ॥ ೩॥

ಕಂ ‖ ಕಡೆನೋಟವ ನೋಡಾಲಿಯೆ । ಬಿಡದಂತ್ಯಾಶ್ಲೇಷವನ್ನು ಮಾಡೆಲೆ
ಕರವೆ ‖ ಕೊಡುತೆ ಕಡೆಮುತ್ತಗಳ ನೀಂ । ಕುಡಿ ತುಟಿಸೊದೆಯು
ನ್ನು ತುಟಿಯೆ ಮಡಿವುದು ಬಳಿಕಂ ‖ ೯ ‖

* ಕ್ರೂರವಾದ ಮಾರ್ಗದರ್ಶಿಯೆ ಬಾ ! ಈ ಸಂಸಾರ ಸಾಗರದ ಕಲ್ಲೋಲ ಮಾಲೆಯಲ್ಲಿಸಿಕ್ಕಿ ಪರ್ವತಕ್ಕೆ ಹೋಗಿ ತಗುಲಿ, ಚೂರುಚೂರು ಮಾಡುವ ಸಹಾಯಕನೆ ಬಾ !* ಇದು ನನ್ನ ಅನುರಾಗಕ್ಕೆ (ಕುಡಿಯುತ್ತಾನೆ) ವೈದ್ಯನೆ ನಿನ್ನ ಔಷಧಿಯು ಬಹಳ ತೀಕ್ಷ್ಣವಾದ್ದು:—ಹೀಗೆಯೇ ಪುನಃ ಮುದ್ದಾಡಿ ಸಾಯುವೆನು. (ಸಾಯುವನು.)

(ಪೂಜ್ಯಪಾದನು ಲಾಂದ್ರ, ಹಾರೆ, ಗುದ್ದಲಿ ಇವುಗಳನ್ನು ತೆಗೆದುಕೊಂಡು ಪ್ರವೇಶಿಸುವನು.)

ಪೂ. ವೃದ್ಧನಾದ ನಾನು ಈ ರಾತ್ರೆ ಅನೇಕಾವರ್ತಿ ಈ ಶ್ಮಶಾನದಲ್ಲಿ ಎಡವುತ್ತಿರುವೆನು. ಯಾರಲ್ಲಿ? ಶವಗಳ ಸಮೀಪದಲ್ಲಿ ಯಾರು ಈ ಕಾಲದಲ್ಲಿರುವರು ?

ಬಾ. ತಮಗೆ ತಿಳಿದ ತಮ್ಮ ಮುಖ್ಯ ಶಿಷ್ಯನಾಗಿರುವೆನು.

ಪೂ. ನಿನಗೆ ಕ್ಷೇಮವಾಗಲಿ! ಎಲೈ ಸುಶೀಲನೆ, ಈ ರಾತ್ರೆಯಲ್ಲಿ ಶ್ಮಶಾನವನ್ನು ನಿಷ್ಪ್ರಯೋಜನವಾಗಿ ಬೆಳಕು ಮಾಡುತ್ತಿರುವ ದೀವಟಿಗೆ ಯಾವದು? ಕಾಪಿಲವಂಶೀಯರ ನೆಲಮಾಳಿಗೆಯಲ್ಲಿ ಬೆಳಕಿರುವಂತೆ ನನಗೆ ತೋರುವದು.

ಬಾ. ಪೂಜ್ಯರೆ, ಹೌದು ; ತಮ್ಮ ಕೇವಲ ವಿಶ್ವಾಸಕ್ಕೆ ಪಾತ್ರನಾದ— ನನ್ನ ಯಜಮಾನನು, ಅಲ್ಲಿ ಇರುವನು.

ಪೂ. ಯಾರು ?

ಬಾ. ರಾಮವರ್ಮನು.

ಪೂ. ಅವನು ಬಂದು ಎಷ್ಟು ಹೊತ್ತಾಯಿತು ?

ರಾಗ—ತೋಡಿ ‖ ಝಂಪೆತಾಳ. ‖ (ಲಿಯಾನ್ವೋಮೆರೆ.)

*ಬಾಬಾ । ಮದೀಯೇಷ್ಟಸಂಜೀವವೆ । ತ್ವದಾಸಂಗದಿಂ ಕಾಂತೆಯುಂಸೇರುವೆ ‖ ಪ ‖ ಭವಾಂಭೋಧಿಯೊಳ್ಸಿಲ್ಕಿ ದಾಪ್ರಾಣಿಗೆ । ನವಾನಂದವಂ ತೋರ್ಪಸನ್ಮಿತ್ರನೆ । ೧ ‖ ಬಹು ಕ್ರೂರ ಪಂಥಾನವಂ ತೋರ್ಪನೆ । ಸಹವಾಸವಂಗೈಸುಮಕ್ಕಾಂತೆಯೊಳ್ ‖ ೨ ‖

ಬಾ. ಅರ್ಧ ಘಂಟೆಯು ಮೇಲೆಯೇ ಆಯಿತು.

ಪೂ. ನನ್ನೊಂದಿಗೆ ನೆಲಮಾಳಿಗೆಗೆ ಬಾ.

ಬಾ. ನಾನು ಬರುವದಕ್ಕಾಗದು: ನಾನು ಇಲ್ಲಿ ಸಿಲ್ಲದೆ ಹೊರಟು ಹೋಗಿರುವೆನೆಂದು ನನ್ನ ಯಜಮಾನನು ತಿಳಿದು ಇರುತ್ತಾನೆ; ತಾನು ಮಾಡುವದನ್ನು ನಾನು ಇಲ್ಲಿ ನಿಂತು ನೋಡುವಪಕ್ಷದಲ್ಲಿ, ನನ್ನನ್ನು ಕೊಂದು ಹಾಕುವೆನೆಂದು ಬಹು ಭಯಪಡಿಸಿರುತ್ತಾನೆ.

ಪೂ. ಆದರೆ ನೀನು ಇಲ್ಲಿಯೇ ಇರು, ನಾನೊಬ್ಬನೇ ಹೋಗುವೆನು; ನನಗೆ ಯಾಕೋ ಭಯವಾಗುತ್ತೆ; ಹಾ! ಏನೋ ಅನಾಹುತನಾಗಿ ಇರಬಹುದೆಂದು ತೋರುವದು.

ಬಾ. ಈ ಗಿಡದಕೆಳಗೆ ನಾನು ಮಲಗಿರುವಾಗ್ಗೆ, ನನ್ನ ಯಜಮಾನನೂ ಮತ್ತೊಬ್ಬನೂ ಕಲಹ ಮಾಡಿದಂತೆ, ಸ್ವಪ್ನವನ್ನು ಕಂಡೆನು.

ಪೂ. ರಾಮವರ್ಮನೆ! (ಮುಂದಕ್ಕೆ ಹೋಗಿ) ಈ ನೆಲಮಾಳಿಗೆಯ ದ್ವಾರದಲ್ಲಿ ಚಲ್ಲಿರುವ ರಕ್ತವು ಯಾರದು? ಅಯ್ಯೋ, ಅವಿರೋಧ ಸ್ಥಳವಾಗಿರುವ ಇಲ್ಲಿ (ನಿರುಪದ್ರವಸ್ತಳವಾದ ಇಲ್ಲಿ) ಅನಾಥಂಗಳಾಗಿ ರಕ್ತದಿಂದ ಸಿಕ್ತಂಗಳಾಗಿ ಬಿದ್ದಿರುವ ಕತ್ತಿಗಳ ಅರ್ಥವೇನು? (ನೆಲಮಾಳಿಗೆಯೊಳಗೆ ಹೋಗಿ) ರಾಮವರ್ಮನೆ! ಅಯ್ಯೋ, ಎಷ್ಟು ವಿವರ್ಣನಾಗಿರುವನು! ಇನ್ಯಾರಿರುವರು? ಏನು, ಕೋಶಲಾಂಗನೂ? ರಕ್ತಮಯನಾಗಿಯೂ ಬಿದ್ದಿರುವನು? ಅಯ್ಯೋ ಯಾವ ಕೆಟ್ಟ ಮುಹೂರ್ತದಲ್ಲಿ ಈ ವಿಪರೀತಗಳು ಸಂಭವಿಸಿತು! ಲೀಲಾವತಿ ಅಲ್ಲಾಡುತ್ತಾಳೆ.

(ಲೀಲಾವತಿ ಎಚ್ಚರವಾಗಿ ಅಲ್ಲಾಡುತ್ತಾಳೆ.)

ಲೀ. ದಯಾಶಾಲಿಗಳಾದ ಗುರುಗಳೇ! ನನ್ನ ಪ್ರಾಣಕಾಂತನು ಎಲ್ಲಿ? ಆಹಾ ಈಗ ಜ್ಞಾಪಕಕ್ಕೆ ಬಂತು, ನಾನು ಎಲ್ಲಿರಬೇಕೋ ಅಲ್ಲಿಯೇ ಇರುವೆನು: ನನ್ನ ರಾಮವರ್ಮನು ಎಲ್ಲಿ? (ಬಳಗೆ ಶಬ್ದವಾಗುತ್ತೆ.)

ಪೂ. ಏನೋ ಸದ್ದು ಕೇಳುವದು;—ಕೋಮಲೆಯೆ, ಮರಣ, ಶೋಕ, ಅಸಹಜವಾದ ನಿದ್ರೆ, ಇವುಗಳಗೆ ಮಾತೃಸ್ಥಾನವಾದ, ಈ ನೀಚಸ್ಥಳವನ್ನು

ಬಿಟ್ಟು ಹೊರಗೆ ಬಾ, ಯಾರ ಆಜ್ಞೆಯು ನಮ್ಮಿಂದ ಮೀರಲಸಾಧ್ಯವೋ, ಅಂಥಾ ನಮ್ಮ ಪ್ರಭುವು ನಮ್ಮ ಆಲೋಚನೆಗಳಿಗೆಲ್ಲಾ ಭಂಗಪಡಿಸಿರುವನು ಬಾ, ಬಾ; ನಿನ್ನ ಆರ್ಯಪುತ್ರನು ನಿನ್ನ ದೇಹದಮೇಲೆಯೇ ಸತ್ತು ಬಿದ್ದಿರುವನು, ಪೇಶಲಾಂಗನೂ ಸತ್ತಿರುವನು; ನಿನ್ನನ್ನು ಯೋಗಿನಿಯನ್ನಾಗಿ ಮಾಡಿ ಯೋಗಿನಿಯರ ಗುಂಪಿನಲ್ಲಿ ಬಿಡುವೆನು; ಪ್ರಶ್ನೆಗಳನ್ನು ಮಾಡುತ್ತಾ ನಿಲ್ಲಬೇಡ, ಕಾವಲುಗಾರರು ಬರುತ್ತಿರುವರು; ಸುಗುಣೆಯಾದ ಲೀಲಾವತಿ, ಬಾ, ಹೋಗೋಣ. (ಪುನಃ ಸದ್ದಾಗುವದು) ಇನ್ನು ನಾನು ನಿಲ್ಲುವದಕ್ಕೆ ಆಗುವದಿಲ್ಲ. (ಹೋಗುತ್ತಾನೆ.)

ಲೀ. ಹೋಗಿ, ಪೂಜ್ಯರೇ ಇಲ್ಲಿಂದ ಹೊರಟು ಹೋಗಿ, ನಾನು ಬರುವದಿಲ್ಲ. ಇಲ್ಲಿಯೇ ಇರುತ್ತೇನೆ. *ಇದೇನು ಇದು? ಸತ್ಯವಂತನಾದ ನನ್ನ ಪ್ರಿಯನ ಕೈಯಲ್ಲಿ ಬಟ್ಟಲಿರುವದು? ಪ್ರಾಣಕಾಂತನ ಅಕಾಲಮರಣಕ್ಕೆ ವಿಷವೇ ಕಾರಣವಾಗಿರುವದು, ತಿಳೀತು, ತಿಳೀತು;—ಹಾ! ಹಾ! ಪರಮಲೋಭಿ! ನನಗೆ ಸಹಾಯ ಮಾಡುವದಕ್ಕಾಗಿ ಬಂದು ತೊಟ್ಟನ್ನಾದರೂ ಇರಿಸದೆ, ಎಲ್ಲವನ್ನೂ ಕುಡಿದು ಬಿಡಬಹುದೆ? ನಿನ್ನ ತುಟಿಗಳನ್ನು ನಾನು ಮುದ್ದಿಟ್ಟುಕೊಳ್ಳುವೆನು; ಅಲ್ಲಿ ತಗುಲಿರುವ ವಿಷವು, ದೈವಾಧೀನದಿಂದ ನನಗೆ ಸಹಾಯವಾಗಿ ಸಾಯುವಂತೆ ಮಾಡಲಿ. (ಮುದ್ದಿಟ್ಟುಕೊಳ್ಳುತ್ತಾಳೆ.) ಪ್ರಿಯನೆ, ನಿನ್ನ ತುಟಿಗಳು ಇನ್ನೂ ಬಿಸಿಯಾಗಿರುವವು.

೧ನೇ ಕಾ. [ಒಳಗೆ] ಹುಡುಗನೆ ದಾರಿಯನ್ನು ತೋರಿಸು:— ಯಾವಮಾರ್ಗ?

ಲೀ. ಶಬ್ದವಾಗುವದು, ಇದೇನು? ಆದರೆ ಇನ್ನು ಸಾವಕಾಶವನ್ನು ಮಾಡುವದಿಲ್ಲ. ಬಾ ಸುಖಕಾರಿಯಾದ ಖಡ್ಗವೆ (ರಾಮವರ್ಮನ ಕಠಾರಿ

‖ ರಾಗ—ಪೀಲು ‖ ತಾಳ　　(ಧೀರಶೂರಾ)

*ಧೀರಶೂರ ಮಾರಾಕಾರಾ। ಪಾರಸಾರ ‖ ಪ ‖ ಇಂತಹಮತಿನಿನ। ಗೆಂತುಹಾ ಪುಟ್ಟಿತು। ಪಂತವಿದೇನಿದೆದೆ। ಕಾಂತ ಕಾಂತ ‖ ೧ ‖ ತಾವಕಕಾಂಕ್ಷೆಯಿಂ। ಜೀವವ ತಾಳಿದೆ ‖ ಈವಿಧವ ಮಾಡೆ। ಏವೆಮುಂದೆ ಹಾ ಹಾ ‖ ೨ ‖ ಒಡೆಯನೆ ನೀನಿಲ್ಲಿ। ಮಡಿದೆ ಯದೇತಕೆ ‖ ಕಡುಬೆಡಗಿನ್ನುಡಿ ಹಾ। ತಡವೇಕೀಗ ‖ ೩ ‖

ಯನ್ನು ಸೆಳೆದುಕೊಂಡು) ಇದೇ ನಿನಗೆ ಸರಿಯಾದಸ್ಥಳ; (ಎಂದು ತಿವಿದುಕೊಳ್ಳುತ್ತಾಳೆ.) ಅಲ್ಲಿಯೇ ಇರು, ನಾನು ಸಾಯುವೆನು.

(ರಾಮವರ್ಮನ ದೇಹದಮೇಲೆ ಬಿದ್ದು ಸಾಯುವಳು.)

(ಪೇಶಲಾಂಗನ ಸೇವಕನೂ ಮತ್ತು ಕಾವಲುಗಾರರು ಪ್ರವೇಶಿಸುವರು.)

ಸೇ. ಇದೇಸ್ಥಳ, ಅದೋ ಅಲ್ಲಿ ಪಂಜು ಉರಿಯುತ್ತಿರುವಲ್ಲಿಯೆ.

೧ನೇ ಕಾ. ನೆಲವೆಲ್ಲಾ ರಕ್ತಮಯವಾಗಿರುವದು; ನಿಮ್ಮಲ್ಲಿ ಕೆಲವರು ಹೋಗಿ ಶ್ಮಶಾನದಲ್ಲೆಲ್ಲಾ ಹುಡುಕಿ ಸಿಕ್ಕಿದವರನ್ನು ಹಿಡಿಯಿರಿ.

(ಕೆಲವರು ಹೋಗುತ್ತಾರೆ.)

ಹಾ! ಪಾಪದೃಷ್ಟಿಯೆ! ಪೇಶಲಾಂಗನು ಸತ್ತು ಬಿದ್ದಿರುವನು; ಲೀಲಾವತಿಯು ಮೈಯಿಂದ ರಕ್ತ ಸುರಿಯುತ್ತಿರುವದು; ಎರಡು ದಿವಸಗಳ ಕೆಳಗೆಯೇ ಸತ್ತು ಸಮಾಧಿಸ್ಥಳಾಗಿದ್ದ ಆ ಲೀಲಾವತಿಯ ಶರೀರವು ಇನ್ನೂ ಬಿಸಿಯಾಗಿರುವದಲ್ಲಾ. ಧೊರೆಗೆ ಹೋಗಿ ತಿಳಿಹಿಸಿ, ಕಾಪಿಲನಿಗೆ ಹೇಳಿ, ಮಾಧುರನನ್ನು ಎಬ್ಬಿಸಿ, ಇನ್ನೂ ಕೆಲವರು ಹುಡುಕಿರಿ;

(ಇತರರು ಕಾವಲುಗಾರರು ಹೋಗುತ್ತಾರೆ.)

ಹಾ ಹಾ ಇದೇನು! ಇಂಥಾ ಅನಾಹುತಗಳು ಈ ಸ್ಥಳದಲ್ಲಿ ನಡೆದಿರುವದಕ್ಕೆ ಕಾರಣವೇನು, ಈ ಸಂಕಟಕರವಾದ ಕೆಲಸಗಳು ಹ್ಯಾಗೆಸಂಭವಿಸಿತೊ, ಅದು ಇತರರ ಸಹಾಯವಿಲ್ಲದೆ ಗೊತ್ತಾಗುವದು ಅಸಾಧ್ಯವಾಗಿರುವದು.

(ಕೆಲವರು ಬಾಲಚಂದ್ರನೊಡನೆ ಪ್ರವೇಶಿಸುವರು.)

೨ನೇ ಕಾ. ರಾಮವರ್ಮನ ಸೇವಕನು ಬಂದಿರುವನು, ಇವನು ನಮಗೆ ಶ್ಮಶಾನದಲ್ಲಿಯೇ ಸಿಕ್ಕಿದನು.

೧ನೇ ಕಾ. ಮಹಾರಾಜನು ಇಲ್ಲಿಗೆ ಬರುವವರಿಗೂ, ಇವನನ್ನು ನಿರ್ಬಂಧಿಸಿ ಇಟ್ಟುಕೊಂಡಿರಿ.

(ಪೂಜ್ಯಪಾದ ಮತ್ತು ಕೆಲವರು ಕಾವಲಗಾರರು ಪ್ರವೇಶಿಸುವರು.)

೩ನೇ ಕಾ. ಈ ಪೂಜ್ಯನು ನಡುಗುತ್ತಲೂ, ದುಃಖಪಡುತ್ತಲೂ, ನಿಟ್ಟುಸುರನ್ನು ಬಿಡುತ್ತಲೂ, ಈ ಶ್ಮಶಾನದಿಂದ ಹೊರಗೆ ಹೋಗುತ್ತಿದ್ದನು; ಇವನ ಕೈಗಳಲ್ಲಿದ್ದ ಹಾರೆ ಮತ್ತು ಗುದ್ದಲಿಗಳನ್ನು ತೆಗೆದುಕೊಂಡೆವು.

೧ನೇ ಕಾ. ಬಹು ಅನುಮಾನಾ ಸ್ಪದವಾಗಿದೆ: ಇವರನ್ನು ನಿಲ್ಲಿಸಿ ಕೊಳ್ಳಿರಿ.

(ಧೊರೆಯು ಪರಿವಾರದೊಡನೆ ಪ್ರವೇಶಿಸುವನು.)

ಧೊರೆ. ನಮ್ಮ ಪ್ರಾತಃಕಾಲನಿದ್ರೆಗೆ ಭಂಗಪಡಿಸಿ, ಇಷ್ಟು ಜಾಗ್ರತೆಯಲ್ಲಿ ನಾವು ಇಲ್ಲಿಗೆ ಬರುವಂತೆ ಮಾಡಿದ ಅನಾಹುತಗಳು ಏನು ಸಂಭವಿಸಿ ಇರುವವು?

(ಕಾಪಿಲ, ಇವನಹೆಂಡತಿ ಲಲಿತಾಂಗಿ ಮತ್ತು ಇತರರು ಪ್ರವೇಶಿಸುವರು.)

ಕಾ. ಬೀದಿಯಲ್ಲಿ ಇಷ್ಟು ರೋದನವಾಗುವದಕ್ಕೆ ಕಾರಣವೇನು?

ಲ. ಬೀದಿಯಲ್ಲಿ ಕೆಲವರು ರಾಮವರ್ಮ, ಕೆಲವರು ಲೀಲಾವತಿ, ಇನ್ನೂ ಕೆಲವರು ಪೇಶಲಾಂಗ, ಎನ್ನುತ್ತಾ ಅಳುತ್ತಿರುವರು. ಎಲ್ಲರೂ ಹಾ ಹಾ ಕಾರಪೂರ್ವಕವಾಗಿ ಶ್ಮಶಾನದ ಕಡೆ ಓಡುತ್ತಿರುವರು. ಆರ್ಯಪುತ್ರನೆ ಇದೇನು?

ಧೊ. ಕೇಳಬರುವ ಭಯಂಕರವಾದ ರೋದನಕ್ಕೆ ಕಾರಣವೇನು?

೧ನೇ ಕಾ. ಮಹಾರಾಜನೆ, ಇಲ್ಲಿ ಪೇಶಲಾಂಗನು ಹತನಾಗಿ ಬಿದ್ದಿರುವನು; ರಾಮವರ್ಮನು ಸತ್ತಿರುವನು; ಮೊದಲೇ ಮೃತಳಾಗಿದ್ದ ಲೀಲಾವತಿ ಪುನಃ ಮೃತಳಾಗಿರುವಳು! ಇವಳ ಮೈಬಿಸಿಯು ಇನ್ನೂ ಆರಿಲ್ಲ.

ಧೊ. ಚೆನ್ನಾಗಿ ನೋಡಿ, ಹುಡುಕಿ, ಈ ಅಕೃತ್ಯವು ಹ್ಯಾಗೆ ನಡೆದುದೊ ಅದನ್ನು ಮೊದಲು ಗೊತ್ತು ಮಾಡಿರಿ.

೧ನೇ ಕಾ. ಇಲ್ಲಿ ಪೂಜ್ಯಪಾದರು, ಮತ್ತು ಸತ್ತಿರುವ ರಾಮವರ್ಮನ ಸೇವಕನೂ ಇರುವರು; ಇವರಕೈಯಲ್ಲಿ ನೆಲಮಾಳಗೆಯ ಬಾಗಿಲನ್ನು ಒಡೆಯುವದಕ್ಕೆ ತಕ್ಕ ಆಯುಧಗಳು ಇದ್ದವು.

ಕಾ. ಅಯ್ಯೋ ದೈವವೇ! ಎಲೆ ಪತ್ನಿಯೆ! ನಮ್ಮ ಪ್ರಾಣಪುತ್ರಿಯ ಅಂಗದಿಂದ ರಕ್ತ ಪ್ರವಾಹವು, ಹ್ಯಾಗೆ ಬರುತ್ತಿರುವದು, ನೋಡು! ಹಾ ಹಾ! ಈ ಕಠಾರಿಯು, ತನಗೆ ಆ ವಾಸಸ್ಥಾನವಾದ ರಾಮವರ್ಮನ ಬೆನ್ನನ್ನು ಬಿಟ್ಟು, ನಮ್ಮ ಮಗಳ ಹೃದಯದಲ್ಲಿ ನೆಟ್ಟು ವಾಸ ಮಾಡುತ್ತಿರುವದು.

ಲ. ಹಾ ಹಾ ದೈವವೆ! ಈ ಪಾಪಿಯಾದ ನಾನು ಕೆಟ್ಟೆನು. ನಮ್ಮ ಮಗಳಿಗೆ ಸಂಭವಿಸಿರುವ ಈ ದುರವಸ್ಥೆಯು ನೋಡುವಿಕೆಯು, ವೃದ್ಧಳಾದ ನನ್ನ ಮರಣವನ್ನು ವ್ಯಕ್ತವಾಗಿ ಸೂಚಿಸುವದು.

(ಮಾಧುರ ಮತ್ತು ಇತರರು ಪ್ರವೇಶಿಸುವರು.)

ಧೊ. ಮಾಧುರನೆ ಬಾ;

ಕಂ ‖ ಅತಿಸತ್ವರದಿನಕಾಲದೆ । ಮೃತಿಯಂ ಪೊಂದಿರ್ಪ ಸುಂದರಾಂಗಕ
ನಾದಾ ‖ ಸುತ ರಾಮವರ್ಮನಂ ನೋ । ಡುತೆ ಗೋಳಾಡಲ್ಕೆ ಬೇಗ
ನೀಂ ಬಂದಿಹೆಯೇಂ ‖ ೧೦ ‖

ಮಾ. ಸ್ವಾಮಿ ಪ್ರಭುವೆ, ನಿನ್ನಿನ ರಾತ್ರಿಯೇ ನನ್ನ ಹೆಂಡತಿ, ತನ್ನ ಏಕಪುತ್ರನು ಪುರಭ್ರಷ್ಟನಾದ ವ್ಯಸನದಿಂದಲೇ, ಸತ್ತು ಹೋದಳು. ನನ್ನ ವೃದ್ಧಾಪ್ಯದಲ್ಲಿ ಇನ್ನೇನನ್ನು ನೋಡಬೇಕಾಗಿದೆಯೋ ಕಾಣೆ?

ಧೊ. ನೋಡು ನಿನಗೇ ಗೊತ್ತಾಗುವದು.

ಮಾ. ಕಂ ‖ ಹಾ ಹಾ ಪುತ್ರನೆ ಜಗತೀ । ಮೋಹಕರಾಕಾರ ರಾ
ಮವರ್ಮನೆ ಹಾ ಹಾ ‖ ಹಾ ಹತನಾದೆನ್ನಿದಿರೊಳ್ । ದೇಹವನೀಂ
ನೀಗಿ ಪೋದುದುಚಿತವೆ ಹೇಳ್ಳೈ ‖ ೧೧ ‖

ಧೊ. ನಿಮ್ಮ ವ್ಯಸನಕ್ಕೂ, ಈಗ ನಡೆದಿರುವ ಅನಾಹುತಗಳಿಗೂ, ಕಾರಣವನ್ನು ವಿಚಾರಿಸಿ ತಿಳಿಯುವವರಿಗೂ, ನೀವುಗಳು ಸುಮ್ಮನಿರಬೇಕು. ಬಳಿಕ ನಿಮ್ಮೊಡನೆ ನಾನೂ ವ್ಯಸನಪಡುವೆನು; ಅಲ್ಲಿನವರಿಗೂ ನಿಮ್ಮ ದುಃಖವು ಸೈರಣೆಗೆ ಅಧೀನವಾಗಿರಲಿ; ಅನುಮಾನಗ್ರಸ್ತರಾದವರನ್ನು ಕರೆದುಕೊಂಡು ಬನ್ನಿ.

‖ ರಾಗ—ಜಂಜೋಟಿ ‖ ಹಿಂ ಆದಿತಾಳ ‖ (ಫಿರದುಬಾರ ಇಷ್ಕಕಾ)

* ನೋಡಿಸ್ಯೆಪೆನೆಂತುನೀನೀ । ಪಾಡಾದರೀತಿಯ ‖ ಪ ‖ ಮಾಡಿದೆನ್ನ ಪಾಪವು । ಕೂಡಿದುದೆ ಹಾ ಹಾ ‖ ಅ ‖ ಈ ವಿಧದೊಳು ನೀನು । ಸಾವನ್ನು ಸೇರೆ । ಜೀವಿಸಲಾರೆನಯ್ಯೊ । ಜೀವಿತಬಾಲೆಯೆ ‖ ೧ ‖ ಬಾಲೆಯು ಸಾವಿನ । ಗೋಳಿಂದಲೀಗಳೇ । ಸೀಳದೆ ದೇತಕೀ । ಖೂಳವಾದಂಗವು ‖ ೨ ‖ ಘೋರೆಯಾದೆನ್ನ ಸಂ । ಹಾರಕೆ ದೀಗಳೆ । ಕಾರಣ ಮಾದುದೆ । ಸೈರಿಸಲಾರೆ ‖ ೩ ‖

ಪೂ. ಕಾಲವು, ಅಸಂದರ್ಭಗಳು, ನನ್ನನ್ನು, ಈ ಅನಾಹುತಗಳಲ್ಲಿ, ಅತಿ ದೋಷಿಯೆಂದು ಸೂಚಿಸುತ್ತಿದ್ದರೂ, ಯತ್ನವಿಲ್ಲದೆ ಇರುತ್ತೇನೆ; ಇಲ್ಲಿ ನನ್ನ ದೋಷಗಳನ್ನು ಒಪ್ಪಿಕೊಂಡು, ಶಿಕ್ಷೆಗೆಗುರಿಯಾಗಿಯೂ ಇತರರ ದೋಷಗಳನ್ನು ವ್ಯಕ್ತಪಡಿಸಿ, ಕ್ಷಮಿಸಿಕೊಳ್ಳುವದಕ್ಕೂ ಸಿದ್ಧನಾಗಿರುವೆನು.

ಧೊ. ಆದರೆ ನಿಮಗೆ ಈ ವಿಷಯದಲ್ಲಿ ತಿಳಿದು ಇರುವದನ್ನೆಲ್ಲಾ ಹೇಳಿ.

ಪೂ. ನನ್ನ ಆಯುಃ ಪರಿಮಿತಿಯು ಸ್ವಲ್ಪವಾಗಿಯೇ ಇರುವದ್ದರಿಂದ, ಸಂಕ್ಷೇಪವಾಗಿಯೆ ಎಲ್ಲವನ್ನು ಹೇಳುವೆನು. ಅಲ್ಲಿ ಸತ್ತು ಬಿದ್ದಿರುವ ರಾಮವರ್ಮನು ಆ ಲೀಲಾವತಿಗೆ ಗಂಡನು; ಅಲ್ಲಿ ಮೃತಳಾಗಿ, ಬಿದ್ದು ಇರುವಳೇ, ರಾಮವರ್ಮನ ಧರ್ಮಪತ್ನಿಯು; ಅವರ ವಿವಾಹವನ್ನು ನಾನೇ ಮಾಡಿದೆನು; ಈ ಅಂತರಂಗವಾದ ವಿವಾಹದ ದಿನವೇ ತ್ರಿವಿಕ್ರಮನು ಸ್ವರ್ಗಸ್ಥನಾಗಿ, ಅವನ ಅಕಾಲಮೃತಿಯು, ನೂತನವಾಗಿ ಮದುವೆಯಾದ ರಾಮವರ್ಮನಿಗೆ ಪುರಭ್ರಷ್ಟತ್ವವನ್ನು ಮಾಡಿತು; ಇದಕ್ಕಾಗಿ ಅವಳು ಕೊರಗುತ್ತಿದ್ದಳಲ್ಲದೆ, ತ್ರಿವಿಕ್ರಮನ ಮರಣಕ್ಕೋಸ್ಕರವಲ್ಲಾ. ನೀನು ವ್ಯಸನ ಸಮುದ್ರದಿಂದ ಅವಳನ್ನು ಎತ್ತುವದಕ್ಕಾಗಿ—ಪೇಶಲಾಂಗನಿಗೆ ಮಾತು ಕೊಟ್ಟು ಅವನನ್ನು ಮದುವೆಯಾಗಬೇಕೆಂದು ಬಲಾತ್ಕಾರವನ್ನು ಮಾಡಿದೆ;—ಆಗ ಅವಳು ನನ್ನ ಬಳಿಗೆ ಬಂದು, ಈ ಎರಡನೇ ವಿವಾಹವನ್ನು ತಪ್ಪಿಸುವ ಉಪಾಯವೇನಾದರೂ ಹೇಳಬೇಕು, ಇಲ್ಲದಿದ್ದರೆ, ನಿಮ್ಮ ಆಶ್ರಮದಲ್ಲಿಯೇ ಪ್ರಾಣತ್ಯಾಗವನ್ನು ಮಾಡುವೆನೆಂದು ಹೇಳಿದಳು.

ಧೊ. ಆಮೇಲೆ.

ಪೂ. ಬಳಿಕ ನಾನು ತಿಳಿದಿದ್ದ, ನಿದ್ರೆಬರುವ ಒಂದು ಔಷಧಿಯನ್ನು ಕೊಟ್ಟೆನು; ನಾನು ಉದ್ದೇಶಿಸಿದ್ದಂತೆ ಆ ಔಷಧಿಯನ್ನು ತೆಗೆದುಕೊಂಡ ಕೂಡಲೇ ಮರಣವನ್ನುಸೂಚಿಸಿತು; ಅವಳಿಗೆ ಎಚ್ಚರಿಕೆ ಯಾಗುವ, ಈ ರಾತ್ರಿಯು ಒಳಗಾಗಿ ಇಲ್ಲಿಗೆ ಬಂದು, ಎಚ್ಚತ್ತ ಬಳಿಕ ಅವಳನ್ನು ಸಮಾಧಿಸ್ಥಾನದಿಂದ ಕರೆದು ಕೊಂಡು ಹೋಗುವಂತೆ, ರಾಮವರ್ಮನಿಗೆ ಕಾಗದವನ್ನು ಬರೆದಿದೆನು. ಆದರೆ ಆಕಾಗದವನ್ನು ತೆಗೆದುಕೊಂಡುಹೋದ ನನ್ನ ಶಿಷ್ಯನು,

ಆ ಕಾಗದವನ್ನು ಅವನಿಗೆ ತಲಪಿಸದೆ, ಅಕಸ್ಮಾತ ಸಂಭವಸಿದ ನಿರ್ಬಂಧ ದಿಂದ ಹಿಂತಿರಿಗಿಬಂದು, ನಿನ್ನಿನ ರಾತ್ರಿ ನನಗೆ ಕಾಗದವನ್ನು ಹಿಂತಿರುಗಿಸಿ ಕೊಟ್ಟನು.

ಧೊ. ಆಮೇಲಾಮೇಲೆ.

ಪೂ. ಲೀಲಾವತಿಯು ಎಚ್ಚರ ವಾಗುವ ಹೊತ್ತಿಗೆ ಸರಿಯಾಗಿ, ನಾನು ಒಬ್ಬನಾಗಿಯೆ, ಆ ರಾಮವರ್ಮನು ಬಂದು ಇವಳನ್ನು ಕರೆದುಕೊಂಡು ಹೋಗುವ ವರಿಗೂ, ನನ್ನ ಆಶ್ರಮದಲ್ಲಿಯೇ ಇರಿಸಿಕೊಂಡಿರಬೇಕೆಂದು, ಇಲ್ಲಿಗೆ ಬಂದೆನು ; ನಾನು ಇಲ್ಲಿಗೆ ಬರುವಷ್ಟರೊಳಗಾಗಿ, (ಲೀಲಾವತಿಯು ಏಳುವ ಕೆಲವು ನಿಮಿಷಗಳ ಪೂರ್ವವೆ) ಸತ್ಯವಂತನಾದ ರಾಮವರ್ಮನೂ, ಪೇಶಲಾಂಗನೂ ಸಹ, ಅಕಾಲಮರಣವನ್ನು ಹೊಂದಿದ್ದರು.

ಧೊ. ಆಮೇಲೆ.

ಪೂ. ಬಳಿಕ ಲೀಲಾವತಿಯು ಎಚ್ಚತ್ತಳು ; ದೈವಾಯತ್ತ ಕೃತ್ಯಕ್ಕೆ ಮಾಡತಕ್ಕದ್ದೇನು ? ದೇವರ ಆಜ್ಞೆಯನ್ನು ಸಹಿಸಬೇಕು, ಹೊರಗೆ ಬಾರೆಂದು ನಾನು ಬಹಳವಾಗಿ ಹೇಳಿದೆನು ; ಆಗ ಹೊರಗೆ ಸದ್ದಾದ್ದರಿಂದ ನಾನು ಹೆದರಿ ಹೊರಟು ಹೋದೆನು ; ಆಕೆಯು ಬಹಳ ವ್ಯಸನಪೀಡಿತ ಳಾಗಿ ಹೊರಗೆ ಬಾರದೆ ಹೋದಳು ; ಈಗ ಅವಳು ಸತ್ತಿರುವದನ್ನು ನೋಡಿದರೆ, ಆತ್ಮ ಘಾತವನ್ನು ಮಾಡಿಕೊಂಡಿರುವಂತೆ ಕಾಣುವದು ; ಇಷ್ಟೇನನಗೆ ತಿಳಿದು ಇರುವದು, ಆ ವಿವಾಹಕ್ಕೆ ಈ ಧಾತ್ರಿಯೂ ಒಳಗಾಗಿ ಇದ್ದಳು ; ಈರೀತಿಯಾಗಿ ಮಾಡಿದ ನನ್ನ ತಪ್ಪಿನಿಂದ ಏನಾದರೂ ಅನಾಹು ತಗಳು ಸಂಭವಿಸಿರುವ ಪಕ್ಷಕ್ಕೆ, ನನಗೆ ಉಳಿದಿರುವ ಸ್ವಲ್ಪ ಆಯುಸ್ಸು, ಈಗಲೇ ನ್ಯಾಯದ ಕಠಿನ ಶಿಕ್ಷೆಯಿಂದ, ಪೂರೈಸಲ್ಪಡಲಿ.

ಧೊ. ನಿಮ್ಮನ್ನು ಪೂಜ್ಯರೆಂತಲೂ, ಸತ್ಯವಂತರೆಂತಲೂ, ನಾನು ಚೆನ್ನಾಗಿ ಬಲ್ಲೆನು. ರಾಮವರ್ಮನ ಸೇವಕನು ಎಲ್ಲಿ ? ಇವನು ಏನು ಹೇಳುತ್ತಾನೆ ?

ಬಾ. ನನ್ನ ಯಜಮಾನನಿಗೆ ಲೀಲಾವತಿಯು ಸತ್ತ ವರ್ತಮಾನ ವನ್ನು ನಾನು ಹೋಗಿ ತಿಳಿಹಿಸಿದೆನು ; ಅತಿ ತ್ವರ್‍ಯದಲ್ಲಿ, ಮಾಹಿಷ್ಮತೀ

ಪಟ್ಟಣದಿಂದ ಈ ಸ್ಥಳಕ್ಕೇ ನೆಟ್ಟಗೆ ಬಂದನು. ಈ ಕಾಗದವನ್ನು ಪ್ರಾತಃ ಕಾಲದಲ್ಲಿಯೇ ತನ್ನ ತಂದೆಗೆ ಕೊಡೆಂದು ಹೇಳಿ ಕೊಟ್ಟನು ; ನಾನು ಇಲ್ಲಿದು ತಾನು ಮಾಡುವದನ್ನು ನೋಡಿದರೆ, ಸಂಹರಿಸುವೆನೆಂದು ಹೆದರಿಸಿದ್ದರಿಂದ, ನಾನು ಹೊರಕ್ಕೆ ಹೊರಟುಹೋದೆನು.

ಧೊ. ಎಲ್ಲಿ? ಆ ಕಾಗದವನ್ನು ಕೊಡು. ನಾವು ನೋಡುತ್ತೇವೆ. ಈ ವರ್ತಮಾನವನ್ನು ಮೊದಲು ತಿಳಿಹಿಸಿದ, ಪೇಶಲಾಂಗನ ಸೇವಕನೆಲ್ಲಿ? ನಿನ್ನ ಯಜಮಾನನು ಇಲ್ಲಿ ಏನು ಮಾಡಿದನು?

ಸೇ. ಲೀಲಾವತಿಯ ಸಮಾಧಿಯನ್ನು ಪುಷ್ಪಗಳಿಂದ ಅಲಂಕರಿಸುವೆನೆಂದು ಇಲ್ಲಿಗೆ ಬಂದನು ; ನನ್ನನ್ನು ದೂರದಲ್ಲಿ ಇರೆಂದು ಹೇಳಿದ್ದರಿಂದ, ನಾನು ಹೊರಟು ಹೋಗುವಷ್ಟರಲ್ಲಿಯೇ, ಪಂಜನ್ನು ತೆಗೆದುಕೊಂಡು ಮತ್ತೊಬ್ಬನು ನೆಲಮಾಳಿಗೆಯೊಳಕ್ಕೆ ಪ್ರವೇಶಿಸಿದನು ; ಬಳಿಕ ನನ್ನ ಯಜಮಾನನು ಅವನೂ ಕಲಹವನ್ನು ಮಾಡಿ ಹಾ ಹಾ ಎಂದು ಬಿದ್ದದ್ದನ್ನು ಕೇಳಿ, ಕಾವಲುಗಾರರಿಗೆ ತಿಳಿಹಿಸಲು, ನಾನು ಓಡಿಹೋದೆನು.

ಧೊ. ಈ ಕಾಗದದಲ್ಲಿ ಬರೆದಿರುವ ಅಭಿಪ್ರಾಯವೂ, ಈ ಪೂಜ್ಯರ ಹೇಳಿಕೆಯೂ ಸಹ, ಅವರ ಪರಸ್ಪರಾನುರಾಗವನ್ನು, ಲೀಲಾವತಿಯ ಮರಣದ ವರ್ತಮಾನವನ್ನೂ ದೃಢೀಕರಿಸುವವು ; ಅವರಲ್ಲಿ ಒಬ್ಬ ಬಡವೈದ್ಯನಿಂದ ಪಾಷಾಣವನ್ನು ಕೊಂಡುಕೊಂಡು, ಅದನ್ನು ತಿಂದು, ಲೀಲಾವತಿಯ ಜತೆಯಲ್ಲಿ ಮಲಗುವದಕ್ಕೆ ಬಂದಂತೆಯೂ ಬರೆದಿರುತ್ತಾನೆ. ಈ ಶತ್ರುಗಳೆಲ್ಲಿ? ಕಾಪಿಲನೆ! ಮಾಧುರನೆ! ನಿಮ್ಮ ಪರಸ್ಪರದ್ವೇಷವು ಏನು ವಿಪತ್ತನ್ನುಂಟುಮಾಡಿರುವದು? ನೋಡಿ, ನಿಮ್ಮಗಳ ಸಂತೋಷಗಳನ್ನು, ಅನುರಾಗ ಕಾರಣದಿಂದ ದೇವರು ಹೋಗಲಾಡಿಸಿರುವನು! ನಾನು ನಿಮ್ಮ ಕಲಹಗಳ ವಿಷಯದಲ್ಲಿ ಬಂಡುರೀತಿಯಾಗಿ ಸಹಾಯ ಮಾಡಿದ್ದಕ್ಕಾಗಿ, ಇಬ್ಬರು ನೆಂಟರನ್ನು ಕಳೆದುಕೊಂಡೆನು ; ಈ ರೀತಿಯಲ್ಲಿ ಎಲ್ಲರಿಗೂ ಶಿಕ್ಷೆ ಆಯಿತು.

"ಲೋಕದಲ್ಲಿ

ಕಂ ॥ ಘಾತಿಪುದಶೇಷಕುಲವಂ । ಜ್ಞಾತಿಜನಾನ್ಯೋನ್ಯ ಜಾತಕೋಪಾನ
ಲವಮಾ ॥ ವಾತಾಹತ ತರುಘರ್ಷಣ । ಜಾತಾಮಿತ ವೀತಿಹೋತ್ರನ
ಟವಿಯು ಸುಡುವ್ರೋಲ್ ॥ ೧೦ ॥"

ಕಾ. ಮಾಧುರನೆ, ಸಹೋದರನೆ, ನಿನ್ನ ಕೈಗಳನ್ನು ಕೊಡು. ಇದೇ ನನ್ನ ಮಗಳಿಗೆ ನಾನು ಕೊಡುವ ಸ್ತ್ರೀಧನವು.

ಮಾ. ನಾನು ಹೆಚ್ಚಾಗಿ ಕೊಡುತ್ತೇನೆ; ಆಕೆಯು ಆಕಾರವನ್ನು ಭಂಗಾರದಿಂದ ಮಾಡಿಸಿ ಇಲ್ಲಿ ಇರಿಸುವೆನು: ಈ ವಾರಣಾವತವೆಂಬ ಹೆಸರು ಇರುವವರಿಗೂ, ಅದು ಶಾಶ್ವತವಾಗಿದ್ದು ಲೀಲಾವತಿಗೆ ಸಮಾನಳಾದ ಪತಿವ್ರತಾ ಶಿರೋಮಣಿಯು ಯಾರೂ ಇಲ್ಲವೆಂದು ತಿಳಿಸಿಸಲಿ.

ಕಾ. ಅವಳ ಮಗ್ಗುಲಲ್ಲಿಯೇ ರಾಮವರ್ಮನ ಆಕಾರವನ್ನೂ ಮಾಡಿಸಿ ಇರಿಸುವೆನು; ಹಾ ಹಾ ನಮ್ಮ ದ್ವೇಷಕ್ಕೆ ಆದ ಬಲಿಗಳು ಇವರು!

ಧೊ. ಕಂ ॥ ಈದಿನ ಮತಿದುಃಖಾವಹ । ಮಾದ ಸಮಾಧಾನವನ್ನು
ನೋಡಿದುದೆಂಬಾ ॥ ಖೇದಾತಿಭಾರದಿಂ ಪರ । ಮೋದಯಮಂ ಪ್ರೊಂ
ದದಿರ್ಪನಕಟಾ ಸೂರ್ಯಂ ॥ ೧೩ ॥

ಇಲ್ಲಿಂದಾ ಹೋಗಿ, ಈ ವ್ಯಸನಕರವಾದ ಮಾತುಗಳನ್ನು ಆಡಿಕೊಳ್ಳುತ್ತಾ ಸಮಾಧಾನವನ್ನು ಹೊಂದಿರಿ; ಕೆಲವರನ್ನು ಶಿಕ್ಷಿಸುವೆನು, ಕೆಲವರ ವಿಷಯದಲ್ಲಿ ಕ್ಷಮಿಸುವೆನು, ಈ ರಾಮವರ್ಮ ಲೀಲಾವತಿಯರ ಚರಿತ್ರೆಗಿಂತಲೂ ವ್ಯಸನಕರವಾದ ಚರಿತ್ರೆಯು ಯಾವದೂ ಇಲ್ಲಾ.

(ಪೂ. ಮಹಾರಾಜನ ಇಷ್ಟುಮಾತ್ರವೇ ಅಲ್ಲ, ಈ ಲೀಲಾವತಿಯು, ನಿಜ ಪಾತಿವ್ರತ್ಯ ಪ್ರಭಾವದಿಂದ ಉಜ್ಜೀವಿತಳಾಗಿ ತನ್ನ ಪತಿಯನ್ನು ಭಗವದನುಗ್ರಹದಿಂದ ಬದುಕಿಸಿಕೊಂಡು ಆತನೊಡನೆ ಬಹುಕಾಲದವರಿಗೂ ಸುಖದಿಂದಿದ್ದಳೆಂಬ ಕೀರ್ತಿಯೂ ಲೋಕದಲ್ಲಿ ಇರಬೇಕು.

ಧೊ. ಹಾಗಾದರೆ ಈಗ ಅದಕ್ಕೆ ಏನು ಮಾಡಬೇಕು ?

ಪೂ. ನಾನು ಈ ದಂಪತಿಗಳ ಜೀವಿತಾರ್ಥವಾಗಿ ಭಗವಂತನನ್ನು ಧ್ಯಾನಿಸುವೆನು ? ನೀವೆಲ್ಲರೂ ಅಚಂಚಲಭಕ್ತಿಭಾವದಿಂದ ಕೈಗಳನ್ನು ಜೋಡಿಸಿಕೊಂಡು ಶ್ರೀ ನಾರಾಯಣನ ಧ್ಯಾನದಲ್ಲಿಯೇ ಆಸಕ್ತರಾಗಿರಬೇಕು.

ಧೊ. ಪೂಜ್ಯರೆ ತಮ್ಮ ಅಪ್ಪಣೆಯಾದಂತಾಗಲಿ.

(ಎಲ್ಲರೂ ಕೈಗಳನ್ನು ಜೋಡಿಸಿ ನಿಲ್ಲುವರು.)

ಪೂ. ‖ ರಾಗ— ಯಮುನಾಕಲ್ಯಾಣಿ ‖ ಆದಿತಾಳ ‖

ಪೊರೆ । ನೀರೇರುಹಲೋಚನಾ ‖ ಪ ‖ ಚರಣಸೇವಕ ಶೋಕಮೋಚನ ‖ ಅ ‖
ಆಸೆಗೊಂಡೀರ್ವರು । ಮೋಸದಿಂಮಡಿದರು । ಈ ಸತಿಪುರುಷರ । ವಾಸುದೇವನೆ ಪೊರೆ ‖೧‖
ಜೀವೇಶನುತ ರಾ । ಜೀವಾಂಘ್ರಿಭಕ್ತಸಂ । ಜೀವನೀನಿವರಿಗೆ । ಜೀವಿತವಿತ್ತು । ಪೊರೆ ‖೨‖
ಉನ್ನತಕಷ್ಟದಿಂ । ಬನ್ನಬಡುವರಿಗೆ । ನಿನ್ನಿದಿನ್ನಾರು । ಮನ್ನಿಸುವರು । ಪೊರೆ ‖೩‖

ಕಂ ‖ ಅಜರ ಪರಾತ್ಪರ ಭಕ್ತ । ವ್ರಜ ಸುರ ಭೂಜಾಜ ರಾಜಮೌಳೀಡಿತ
ನೀ ‖ ರಜಪದಪರಿಪಾಲಿತ ಸಾ । ಮಜನೇಪ್ರತ್ಯಕ್ಷ ನಾಗು ನಾರಾ
ಯಣನೇ ‖ ೧ ‖

(ಎಲ್ಲರೂ ನಮಸ್ಕರಿಸುವರು.)

(ನಾರಾಯಣನು ಪ್ರತ್ಯಕ್ಷನಾಗುವನು.)

ಪೂ. ಕಂ ‖ ಬಿಸುಲಿಂ ತಪಿಸಿದ ಚಾತಕ । ವಿಸರಕೆ ಘನಕಾಲಮೇ
ಘದಾಗಮವಂತಾ ‖ ನುಸುರುವ ಮಿಂಚಿನ ಪೊಂಗಿಂ । ದಸವಸದಿಂ ಭ
ಕ್ತಜೀವನಂ ಮೈದೋರ್ದಂ ‖ ೨ ‖

ಕಂ || ಜಯಜಯ ಜಗದುದಯಸ್ಥಿತಿ | ಲಯಕಾರಣ ಚರಣ ಶರಣರಕ್ಷಣ ಕರುಣಾ || ಶ್ರಿಯ ಜಯ ಸರಸಕುಶೇಶಯ | ನಯನ ಶ್ರೀದೇವ ಸರ್ವದೇವೋತ್ತಮನೇ || ೩ ||

ಶ್ರೀವಿಷ್ಣು. ಎಲೈ ಪೂಜ್ಯಪಾದನೆ ನಿನ್ನ ಭಕ್ತಿಗೆ ನಾನು ಸಂತುಷ್ಟನಾದೆನು ; ಕೇಳು.

ಕಂ || ಈ ವನಿತೆಯು ಸಾಧ್ವೀತ್ವದ | ಭಾವಕೆನಾಂ ಮೆಚ್ಚುತೀಗಲಿವಳಿಗು ಮಿವಳಾ || ಜೀವಿತಪತಿಗುಂ ಪುನರು | ಜ್ಜೀವನವಂ ಕರುಣಿಸಿರ್ಪೆನೇಳಿಸು ಬೇಗಂ || ೪ ||

ಪೂ. (ಲೀಲಾವತೀ ರಾಮವರ್ಮರನ್ನು ಎಬ್ಬಿಸುವನು.)

ಎಲ್ಲರೂ. || ರಾಗ — ಶಂಕರಾಭರಣ || ಆದಿತಾಳ ||

ಪಾ ಹಿ ಶ್ರೀ ನಾ ಥ | ಮ ಹಿ ತಾ ವ ಸ ಥ | ಮೋ ಹಾ ರಾ ತೇ |

ಗಾ ಗಾ ಗಾ ಗಾ ರಿ | ಗ ಪ ಮಾ ಮ ಧ ಪಾ | ಸಾ ಸಾ ರೀ ಗಾ |

ಮ ಹೀ ಜಾ ಪ ತೇ || ಪ ||

ಸಾ ಗ ರೀ ಸ ಸಾ || ಪ ||

ಧೀ ರಾ ಮ ರ | ವಾ ರಾ ರ್ಚಿ ತ | ನೀ ರ ಜ ಸ ಮ ಪಾ ದ ||

ನೀ ನೀ ನಿ ಸ | ರೀ ರೀ ರಿ ಸ | ಪಾ ಮ ಗ ಮ ಪ ಮಾ ಗ ||

ಗೌ ರಾಂ ಬ ರ | ನಾ ರಾ ಯ ಣ | ಸಾ ರ ಸು ಕ ರು ಣಾ || ೧ ||

ಪಾ ಪಾ ಪ ಮ | ಪಾ ಪಾ ಪ ಮ | ಪಾ ಪ ಮ ಪ ಧ ಪಾ || ೧ ||

ವೇದಾವಳಿ | ವೇದಿತನಿಜ | ಪಾದಸುಚರಿತ | ಶ್ರೀದಾರವಿ | ನೋದಾಸ್ಪದ | ಮೋದದ ಮಹಿತ || ೨ ||

ವಂದಾರುಸು | ಮಂದಾರಗೋ | ವಿಂದನೆ ಹರಿಯೇ | ಮಂದರಧರ | ನಂದಿತ ಮುನಿ | ವೃಂದನೆ ಧೊರೆಯೇ || ೩ ||

(ಎಲ್ಲರೂ ಹೋಗುವರು.)

ಸೂತ್ರಧಾರ. ಭ ರ ತ ವಾ ಕ್ಯ.

ವೃ ॥ ಇಳೆ ಸಂಪನ್ನ ಸಮಸ್ತ ಸಸ್ಯಭರೆ ತಾನಾಗಿರ್ಕೆ ಭೂಮೀಸುರ ।
ರ್ಕ್ನಲವಿಂಪೂರ್ಣ್ಣನಿಜೇಷ್ಟರಾಗೆಸೆಗೆ ಭೂಪರ್ಸ್ವಾಧುಗೋಬ್ರಾಂಹಣಾ ॥
ವಳಿಸುಕ್ಷೇಮಪರರ್ಕಳಾಗಿ ಧರೆಯಂ ಪಾಲಿಕ್ಕೆಸದ್ಧರ್ಮದಿಂ । ಗೆಲುವಂ
ಪೊಂದುಗೆ ಲೋಕವೊಲ್ದೆಸೆಗೆ ತಾಂ ಚಾಮೇಂದ್ರನಾತಾರಕಂ ॥ ೫ ॥

ಮ ಂ ಗ ಳ ಪ ದ ಂ.

॥ ರಾಗ—ಸುರಟಿ ॥ ಆದಿತಾಳ ॥

ಪುರಹರ । ಮಂಗಳ ಮಂಗಜ ತಾತ ॥ ಪ ॥ ಅಂಗಜತಾತ ಮ । ತಂಗಜ ಗೀತ ॥ ಅ ॥ ಸಾಂದ್ರಕರುಣಾ ವಿನ । ತೇಂದ್ರವದನಜಿತ । ಚಂದ್ರಸುಧೀಂದ್ರ ರಾಮ । ಚಂದ್ರವಿತಂದ್ರ ॥ ೧ ॥ ಭರ್ಗವಿನುತನ್ನೈ । ಸರ್ಗಮಹಿಮಸ । ನ್ಮಾರ್ಗಸಾಧಕನೇ । ಭಾರ್ಗವರಾಮ ॥ ೨ ॥ ಶ್ರೀಮದಾನಂದತೀರ್ಥ । ಸ್ವಾಮಿಯೆ ಶೌರಿಯೇ । ಚಾಮ ನೃಪಾಲಕ । ಕಾಮಿತದಾಯಕ ॥ ೩ ॥

॥ ಕಂದ ॥

ಆದರಿಸುತಿದಂ ಸುಜನಂ । ಮೋದದಿ ನವಲೋಕಿಪಂತೆ ದಯೆಯಿಂದೆ
ವಿರಂ ॥ ಟ್ಯ್ರೇದಯು ಹರಿಮಾಡುತೆ ವರ । ವೇದೇಡ್ಯಂ ಚಿತ್ರಚರಿತ
ನೋವುಗೆ ಸತತಂ ॥ ೧ ॥)

ಸಂಪೂರ್ಣಂ.

28-3-192